35ಮಿ.ಮೀ.ಚಲನಚಿತ್ರವನ್ನು ಪ್ರದರ್ಶಿಸಲು ಅನುಮತಿ ನೀಡಿರುವ ಬಗ್ಗೆ ದಿನಾಂಕ 5.4.95ರಂದು ಹೊರಡಿಸಲಾದ ಹೆಚ್.ಡಿ.91 ಸಿಎನ್ಎ 94ರ ಆದೇಶವನ್ನು ಮಂಡಿಸುತ್ತೇನೆ.

ಜೀವರಾಜ್ ಆಳ್ವ : ಮಾನ್ಯ ಅಧ್ಯಕ್ಷರೆ, ಸಭಾ ನಡವಳಿಕೆ ಬಗ್ಗೆ ಪತ್ರಿಕೆಗಳಲ್ಲಿ ವಿಶ್ಲೇಷಣೆ ನಡೆದರೆ ಅದು ಚೆನ್ನಾಗಿರುವುದಿಲ್ಲ, ಚೆನ್ನಾಗಿತ್ತು, ಕಾವೇರಿತ್ತು, ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಮೊನ್ನೆ ರೇಷ್ಮೆ ಇಲಾಖೆ ಮಾತನಾಡುತ್ತಿದ್ದಾಗ In my own sincere way, I was totally ignorant. ನನಗೆ ರೇಷ್ಮೆ ಇಲಾಖೆ ಬಗ್ಗೆ, ರೇಷ್ಮೆ ಗ್ರಾಹಕರ ಬಗ್ಗೆ ವಿಚಾರಗಳು ಗೊತ್ತಿಲ್ಲದಿದ್ದರೂ ಕೂಡ On the taxation system, Adam Smith ಕ್ವೋಟ್ ಮಾಡಿ The Architect of modern taxation - I quoted and I gave it a different plan altogether,. The taxation structure has to be imporved. ಎಂದು ಹೇಳುತ್ತಿದ್ದಂಥ ಪ್ರಸಂಗಧಲ್ಲಿ, ಮಾತುಕತೆ ಆಯಿತು, ಭೈರೇಗೌಡರು ಏನು ಹೇಳಿದರು? ತಾವು ಅದಕ್ಕೆ ಅವರ ಮಾತಿನ ಧಾಟಿ ಹಾಗೆ ಅದರಲ್ಲಿ ತಪ್ಪು ತಿಳಿದುಕೊಳ್ಳಬೇಡಿ ಎಂದು ಹೇಳಿದ ಮೇಲೆ ಅಲ್ಲಿಗೆ ನಾವು ಸಮಾಧಾನವಾಗಿ ಕುಳಿತೆವು. ಒಂದು ಪತ್ರಿಕೆಯಲ್ಲಿ ಈ ಬಗ್ಗೆ ಏನು ಬರೆದಿದೆ ಎಂದರೆ 'ವಿಚಾರ ಗೊತ್ತಿಲ್ಲದೆ ಮಾತನಾಡಿದರೆ ಈ ತರಹ ಅವಕಾಶಗಳಿಗೆ ಪ್ರಚೋದನೆಯಾಗುತ್ತದೆ, ವಿಧಾನ ಸಭೆಗೆ ತೊಂದರೆಯಾಗುತ್ತದೆ' ಎಂದು ಬಂದಿದೆ. It reflects; it has come in a special boxed item in one paper 'Samyuktha Karnataka' ಅದು 'ಸಂಯುಕ್ತ ಕರ್ನಾಟಕ' ಎಂದು ಹೇಳುತ್ತೇನೆ, ವಿಶ್ಲೇಷಣೆ ಮಾಡಿ ನಮ್ಮ ಚಹರೆಗಳನ್ನು ಹೇಳಲಿ. ಆದರೆ, This is the regular proceedings of the House. Whatever I said, it reflects on me. ಏನಾದರೂ ಹೇಳಿದರೆ, ಜೀವರಾಜ್ ಆಳ್ವಗೆ ಏನೂ ಗೊತ್ತಿಲ್ಲ ಅಂದರೆ, ನನಗೆ ಏನೂ ಗೊತ್ತಿಲ್ಲವೆಂದು ಹೇಳಿದೆ. I spoke on a different thing altogether on the entire taxation system. I gave a very very sincere suggestion to the Government, So that they could improve update It. The Sanctity should be maintained.

ಅಧ್ಯಕ್ಷರು : ತಮಗೆ ಇಷ್ಟು ಆಶ್ವಾಸನೆಯನ್ನು ಕೊಡುತ್ತೇನೆ, ಸಂಬಂಧಪಟ್ಟ ಪತ್ರಿಕೆಯವರನ್ನು ಕರೆಯಿಸಿ ವಿಚಾರಿಸಿಕೊಂಡು ಸೂಕ್ತವಾದ ತಿಳುವಳಿಕೆ ಕೊಟ್ಟು, ಹೀಗೆ ಆಗುವುದು ಬೇಡ, ಇದು ತಪ್ಪು ಅರ್ಥಕ್ಕ ಅವಕಾಶವಾಗುತ್ತದೆ, ಇದಕ್ಕೆ ತಿದ್ದುಪಡಿ ಬರೆಯಿಲಿಕ್ಕೆ ಅವರಿಗೆ ತಿಳಿಸುತ್ತೇನೆ.

ನಿಯಮ 159ರ ಮೇರೆಗೆ

ವಿಷಯ : ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ

* ಶ್ರೀ ಹೆಚ್. ಎನ್. ನಂಜೇಗೌಡ : (ಬಸವಗುಡಿ) : ಸನ್ಮಾನ್ಯ ಸಭಾಧ್ಯಕ್ಷರೆ, ನೀರಾವರಿ ಕುರಿತು ಚರ್ಚೆಯನ್ನು ಪ್ರಾರಂಭ ಮಾಡುವ ಮೊದಲ ಸರ್ಕಾರಕ್ಕೆ ನನ್ನ ಒಂದು ವಿನಂತಿ. ಈ ಕಡೆಯ, ಆ ಕಡೆಯ ಸಹ ಸದಸ್ಯರುಗಳು ಏನು ಹೇಳಿದರೆಂದರೆ, ಕಾವೇರಿ ನೀರಿನ ವಿಷಯದ ಬಗ್ಗೆ ಮಾತನಾಡಲು ಒಂದು ಸಭೆಯನ್ನು ಕರೆದಿದ್ದರು. ಆದರೆ ಅದು ರದ್ದಾಯಿತು. ಆ ವಿಷಯವನ್ನು ಈ ಸಭೆಯಲ್ಲೂ ಪ್ರಸ್ತಾಪ ಮಾಡುವ ಹಾಗಿಲ್ಲ, ಬೇರೆ ಒಂದು ಸಭೆಯನ್ನು ಕರೆಯುವ ಹಾಗಿಲ್ಲ ಎಂದರೆ ಹೇಗೆ? ಕೆಲವಾರು ವಿಚಾರಗಳಲ್ಲಿ ಸರ್ಕಾರಕ್ಕೆ ಇಕ್ಕಟ್ಟಾಗತಕ್ಕಂಥ ವಿಷಯಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲವಾದ್ದರಿಂದ ಬೇರೆ ಸಭೆಯನ್ನು ಕರೆಯಲಾಗಿತ್ತು, ಆದರೆ ಅದು ರದ್ದಾಯಿತು. ತಕ್ಷಣ ಈ ಸಭೆಯನ್ನು ಕರೆಯುತ್ತಾರೆ ಎನ್ನುವ ಭರವಸೆ ಮೇಲೆ ದಂಡಿಸಿ ಕ್ಷೇತ್ರದ ಮಾನ್ಯ ಸದಸ್ಯರಾದ ಶಿವರಾಂರವರು ಪ್ರಶ್ನೆಯನ್ನು ಕೇಳಿದ್ದರು. ಆದ್ದರಿಂದ ಆ ಸಭೆಯನ್ನು ತಕ್ಷಣ ಕರೆಯಬೇಕೆಂದು ನಾನೂ ಒತ್ತಾಯ ಮಾಡುತ್ತೇನೆ. ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾದ ತಕ್ಷಣ ರಾಜ್ಯದ ಕೃಷ್ಣ ಬಯಲಿನ ಹಾಗೂ ಕಾವೇರಿ ಬಯಲಿನ ಸಮಸ್ಯೆಗಳನ್ನು ಚರ್ಚೆ ಮಾಡಲಿಕ್ಕೆ ಕೆಲವು ಪಕ್ಷದ ಆಯ್ದ ಮುಖಂಡರುಗಳ ಸಭೆಯನ್ನು ಕರೆಯುತ್ತಾರೆಂದು ನಿರೀಕ್ಷೆ ಮಾಡಿದ್ದೆ. ಆದರೆ, ಅದೂ ಆಗಲಿಲ್ಲ. ಅದನ್ನು ಅವರು ಮಾಡಿದರೆ ಒಳ್ಳೆಯದೆಂದು ನನ್ನ ಅನಿಸಿಕೆ. ನಾನು 1977ರಲ್ಲಿ ಶಾಸಕನಾದ ಮೇಲೆ ಈ ನೀರಾವರಿ ಬಗ್ಗೆ ಮಾತನಾಡಿದ್ದೇನೆ. ಪುನಃ ಅದೇ ವಿಷಯ ರಿಪಿಟಿಷನ್ ಆಗಬಹುದು. ಇವತ್ತು ಈ ವಿಷಯದಲ್ಲಿ ಮಾನ್ಯ ಹೆಚ್.ಎಂ. ಚನ್ನಬಸಪ್ಪನವರನ್ನು ನೆನಸಿಕೊಳ್ಳಬೇಕಾಗುತ್ತದೆ. ಅವರು ಮುಂದಾಳತ್ವ ವಹಿಸಿಕೊಳ್ಳುವವರಿಗೆ ನಮ್ಮ ರಾಜ್ಯದ ಜನರಿಗೆ ನೀರಿನ ಬೆಲೆ ಗೊತ್ತಿಲ್ಲದೆ ಒಂದು ತರಹ ಅನಾಸಕ್ತಿ ಇತ್ತು. ಇದರ ಬಗ್ಗೆ ಸಾರ್ವಜನಿಕರಲ್ಲಿ ಪ್ರಚಾರ ಮಾಡಿ ಅವೇರ್‌ನೆಸ್ ಉಂಟು ಮಾಡಿರುವುದಕ್ಕಾಗಿ ನಾವು ಅವರನ್ನು ನೆನಸಿಕೊಳ್ಳಬೇಕು. ನನಗೆ ಅವರು ಗುರುಗಳಾಗಿದ್ದರು. ಮಾನ್ಯ ಮುಖ್ಯ ಮಂತ್ರಿಗಳಾದ ದೇವೇಗೌಡರಿಗೂ ಅವರು ಗುರುಗಳಾಗಿದ್ದರು. ಇದರಲ್ಲಿ ವಿಶೇಷವೇನೆಂದರೆ, ಈ ಸಭೆಯಲ್ಲಿ ಮೊದಲ ಬಾರಿಗೆ ಕಾವೇರಿ ವಿಚಾರದ ಬಗ್ಗೆ ಮಾನ್ಯ ದೇವೇಗೌಡರು ತಂದಿದ್ದ ಖಾಸಗೀ ನಿರ್ಣಯದ ಮೇಲೆ ಚರ್ಚೆ ಆಗಿತ್ತು. ಆ ಚರ್ಚೆಯನ್ನು ಮಾನ್ಯ ಚನ್ನಬಸಪ್ಪನವರ ಮಾರ್ಗದರ್ಶನದಲ್ಲೇ ದೇವೇಗೌಡರು ಆ ನಿರ್ಣಯವನ್ನು ತಂದು ಚರ್ಚೆ ಮಾಡಿದರೆಂದು ನಾನು ತಿಳಿದುಕೊಂಡಿದ್ದೇನೆ. ಆಮೇಲೆ ಕೃಷ್ಣಾ ಜಲಾನಯನದ ಬಗ್ಗೆ ಪಾಟೀಲ್ ಎನ್ನುವವರು ತಂದಿದ್ದ ಖಾಸಗಿ ನಿರ್ಣಯದ ಮೇಲೂ ಚರ್ಚೆ ಯಾಗಿದ್ದುದನ್ನು ನಾವು ನೆನಸಿಕೊಳ್ಳಬೇಕು. ಇದರ ಜೊತೆಗೆ ಇನ್ನೊಂದು ಹೆಸರನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ, ಅವರೇ ಶ್ರೀಮಾನ್ ಬಾಳೆಕುಂದ್ರಿಯವರು. ನಾನು ಮಂತ್ರಿಯಾಗಿದ್ದಂಥ ಕಾಲದಲ್ಲಿ ಅವರು ಚೀಫ್ ಇಂಜಿನೀಯರ್ ಆಗಿದ್ದರು. ಅವರು ಚೀಫ್ ಇಂಜಿನೀಯರ್ ಆಗಿದ್ದಾಗ ನಾನು ಮಂತ್ರಿಯಾಗಿದ್ದರೂ ಅವರನ್ನು ನಾನು ಗುರುವಿನ ಭಾವನೆಯಿಂದ ನೋಡಿಕೊಂಡು ಬಂದೆ ಹಾಗೂ ಅಧಿಕಾರ ಹೋದ ನಂತರವೂ ಅವರನ್ನು ಗುರುವಿನ ಭಾವನೆಯಿಂದ ನೋಡಿದ್ದೇನೆ. ಅವರು ಈ ರಾಜ್ಯಕ್ಕೆ ಒಂದು

ಆಸ್ತಿ ಇದ್ದ ಹಾಗೆ, ಆದರೆ ಅವರು ಇವತ್ತು ಇಲ್ಲ. ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಿಂದ ತೆಗೆದುಕೊಂಡರೆ, ಮಾನ್ಯ ಹೆಚ್. ಅನಂತಾಚಾರ್‌ರವರು, ತಿರುಮಲ ಅಯ್ಯಗಾರ್‌ರವರು, ಇವರೆಲ್ಲರೂ ಆ ದಿಕ್ಕಿನಲ್ಲಿ ಬರುತ್ತಾರೆ ಮೊದಲು ಈ ರಾಜ್ಯದಲ್ಲಿ ಲಿಫ್ಟ್ ಇರಿಗೇಷನ್ ಇರಲಿಲ್ಲ. ನಾನು ಶಾಸಕನಾದಂಥ ಮೊದಲ ಸಂದರ್ಭದಲ್ಲಿ ಸಹಕಾರ ಸಂಘದ ಮೂಲಕ 200 ಎಕರೆಗೆ ಕಾವೇರಿ ನದಿಯಿಂದ ಲಿಫ್ಟ್ ಇರಿಗೇಷನ್ ಮಾಡಲು ಇಂಜಿನೀಯರ್‌ಗಳಿಂದ ರೆಕಮೆಂಡ್ ಆಗಿ ಸರ್ಕಾರಕ್ಕೆ ಬಂದರೆ, ಇಲ್ಲಿನ ಅಧಿಕಾರಿಗಳು, ಅದು 1924ರ ಅಗ್ರಿಮೆಂಟ್‌ಗೆ ವಿರುದ್ಧವಾಗುವುದರಿಂದ ಅದಕ್ಕೆ ಪರ್ಮಿಷನ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರು. ಅದರ ಬಗ್ಗೆ ನನಗೆ ಹಠ ಇತ್ತು, ನಾನು ಮಂತ್ರಿಯಾದ ಮೇಲೆ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಆ ಸಂದರ್ಭದಲ್ಲಿ ಕೆ.ಹೆಚ್. ಪಾಟೀಲ್ ರವರು ನನಗೆ ಬಹಳ ಒತ್ತಾಸೆ ಕೊಟ್ಟು ನಮ್ಮ ರಾಜ್ಯದಲ್ಲಿ ಲಿಫ್ಟ್ ಇರಿಗೇಷನ್ ಆಗಬೇಕೆಂದು ಹೇಳಿದ್ದರು. ಈ ಲಿಫ್ಟ್ ರಾಜ್ಯದಲ್ಲಿ ಅಭಿವೃದ್ಧಿಯಾಗಬೇಕು ಎಂದು ಅದರ ಮೂಲ ತೆಗೆದುಕೊಂಡು ಮೊದಲನೇಯ ಸಾರಿ 1976ರಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಿದಂಥ ಕಾಲದಲ್ಲಿ ಅವರು ಪ್ರೋತ್ಸಾಹ ಕೊಟ್ಟರು. ಆಗ ಅರಸುರವರು ಮುಖ್ಯಮಂತ್ರಿಯವರಾಗಿದ್ದರು. ಕೆಲವು ಸಂಗತಿಗಳನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಶ್ರೀ ಎನ್.ಡಿ. ಗುಲಾಟಿಯವರು ಒಂದು ಮಾತನ್ನು ಹೇಳಿದ್ದಾರೆ.

" Irrigation in many countries is an old art, as old as civilization, but for the whole country it is a modern science, science of survival"

12.20. ಪಿ.ಎಂ.

ಈ ಮಾತಿನ ಮೂಲಕ ನೀರಾವರಿಯ ಪ್ರಾಮುಖ್ಯತೆಯನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಹಾಗೆಯೇ ನಮ್ಮ ರಾಷ್ಟ್ರದಲ್ಲಿ ನೀರಾವರಿಯ ಸ್ಥಿತಿಯು ಹೇಗಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನ್ಯಾಶನಲ್ ಅವರೇಜ್ ಶೇಕಡಾವಾರು 32.5 ನಮ್ಮ ಪಕ್ಕದ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ಅದು 35.4 ತಮಿಳುನಾಡಿನಲ್ಲಿ 43.8 ಕರ್ನಾಟಕ ರಾಜ್ಯದಲ್ಲಿ 18.7% ಅಂದರೆ ನಮ್ಮದ್ದು ತಮಿಳುನಾಡಿನ ಅರ್ಧಕ್ಕಿಂತ ಕಡಿಮೆ ಆಂಧ್ರಪ್ರದೇಶದ ಅರ್ಧದಷ್ಟು. ಶೇಕಡಾವಾರು ತೆಗೆದುಕೊಂಡರೆ ನಮ್ಮ ಸ್ಥಿತಿ ಇದು. ಇನ್ನೊಂದು ಪರಿಸ್ಥಿತಿ ಏನಾಗಿದೆ ಅಂದರೆ ಹಾಗೆಯೇ ರಾಷ್ಟ್ರದಲ್ಲಿ ರೀಜನಲ್ ಇಂಬ್ಯಾಲೆನ್ಸ್ ಇರತಕ್ಕಂಥ ಪರಿಸ್ಥಿತಿಯೂ ಇದೆ. ಕೆಲವು ರಾಜ್ಯಗಳು ಸಮೃದ್ಧವಾಗಿದೆ, ಕೆಲವು ರಾಜ್ಯಗಳಲ್ಲಿ ಕೆಲವು ಪ್ರದೇಶಗಳು ಸಮೃದ್ಧವಾಗಿವೆ. ಕೆಲವು ಪ್ರದೇಶಗಳು ಸಮೃದ್ಧವಾಗಿಲ್ಲ. ಉದಾಹರಣೆಗೆ ನಮ್ಮ ರಾಜ್ಯವನ್ನು ತೆಗೆದುಕೊಳ್ಳಬಹುದು. regional imbalance in the whole country as well as in the state itself. ಇದು ಬೇರೆ ಬೇರೆ

ಪ್ರದೇಶಗಳಲ್ಲಿ ಇರತಕ್ಕಂಥ ವಾತಾವರಣ. ನಾನು ನಿರೀಕ್ಷೆ ಮಾಡುತ್ತಿರುವುದು ಏನೆಂದರೆ ಅದು ಅದು ಕೇಂದ್ರ ಅಥವಾ ರಾಜ್ಯಸರಕಾರವೇ ಇರಲಿ, ಈ ಅಸಮತೋಲನ ಏನಿದೆ, ರಾಜ್ಯ ರಾಜ್ಯಗಳಲ್ಲಿ ಮತ್ತು ರಾಷ್ಟ್ರದಲ್ಲಿ, ಸಾಧ್ಯವಾದರೆ ತೆಗೆದು ಹಾಕಬೇಕು ಇಲ್ಲವೇ ಕಡಿಮೆಯಾದರೂ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ದಿಸೆಯಲ್ಲಿ ಪ್ರಯತ್ನ ಪಡಲಿ ಎಂದು ನಿರೀಕ್ಷೆ ಮಾಡುತ್ತೇನೆ. ಈಗ ನಮಗೆ ಬೇರೆ ರಾಜ್ಯಗಳನ್ನು ಹೋಲಿಸಿ ಕೊಳ್ಳೋಣ. ಆಂಧ್ರಕ್ಕೆ ಹೋಲಿಸಿದಾಗ ಅರ್ಧ ಇದ್ದೇವೆ, ತಮಿಳುನಾಡಿನ ಅರ್ಧದಷ್ಟೂ ಇಲ್ಲ, ಎಂಬುದನ್ನು ನೋಡಿದಾಗ ಏಕೆ ಹೀಗಾಯಿತು ಎಂಬ ಪ್ರಶ್ನೆ ಬರುತ್ತದೆ. ಅದೇ ರೀತಿಯಲ್ಲಿ ಬರಪ್ರದೇಶಗಳ ವಿಚಾರವನ್ನು ಕೂಡ ನಾವು ಗಣನೆಗೆ ತೆಗೆದುಕೊಳ್ಳಬೇಕು. ರಾಷ್ಟ್ರದಲ್ಲಿ ಒಟ್ಟು ಬರ ಪ್ರದೇಶ ಎಷ್ಟಿದೆ? ಒಟ್ಟು 4 ಕೋಟಿ 97 ಲಕ್ಷ ಹೆಕ್ಟೇರ್‌ಗಳು ಇವೆ. ಹೀಗೆ ಇಡೀ ರಾಷ್ಟ್ರದಲ್ಲಿ ಬರಪ್ರದೇಶವು 4 ಕೋಟಿ 97 ಲಕ್ಷ ಹೆಕ್ಟೇರ್ಸ್ ಆದರೆ, ಕರ್ನಾಟಕ ರಾಜ್ಯದಲ್ಲಿ 1 ಕೋಟಿ 3 ಲಕ್ಷ ಹೆಕ್ಟೇರ್ಸ್ ಇದೆ. ಅಂದರೆ 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೇರಿ 4 ಕೋಟಿ 97 ಲಕ್ಷ ಇದ್ದರೆ ಕರ್ನಾಟಕ ಬರಪ್ರದೇಶದ ವಿಸ್ತೀರ್ಣವು 1 ಕೋಟಿ 3 ಲಕ್ಷ ಹೆಕ್ಟೇರ್ಸ್ ಆಗುತ್ತದೆ. ಅಂದರೆ ರಾಷ್ಟ್ರದ ಒಟ್ಟು ಬರಪ್ರದೇಶದ ಶೇಕಡಾ 23ರಷ್ಟು ಭಾಗ ನಮ್ಮಲ್ಲಿದೆ. ಈ 23 ಪರ್‌ಸೆಂಟ್‌ನಲ್ಲಿ 18 ಪರ್‌ಸೆಂಟ್‌ನಷ್ಟು ಭಾಗ ಬಾಂಬೆ ಕರ್ನಾಟಕ ಪ್ರದೇಶದಲ್ಲಿದೆ. ಹಾಗೆಯೇ ರಾಷ್ಟ್ರದ ಬರಪ್ರದೇಶದಲ್ಲಿ ವಾಸ ಮಾಡತಕ್ಕಂಥ ಒಟ್ಟು ಜನಸಂಖ್ಯೆ, 4 ಕೋಟಿ 80 ಲಕ್ಷ ಜನರು. ಕರ್ನಾಟಕದಲ್ಲಿ ಬರಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರ ಸಂಖ್ಯೆ 1 ಕೋಟಿ 15 ಲಕ್ಷ. ಅಂದರೆ ರಾಷ್ಟ್ರದ ಬರಪ್ರದೇಶದಲ್ಲಿ ವಾಸ ಮಾಡತಕ್ಕಂಥ ಜನರ ಪೈಕಿ ಶೇಕಡಾ 26 ಜನರು ಕರ್ನಾಟಕದವರೇ ಆಗಿದ್ದಾರೆ. ಇದು ಇರತಕ್ಕಂಥ ಮಾಹಿತಿ This is the report of the Irrigation commission ಆಮೇಲೆ ನಾವು ಹಿಂದುಳಿದಿರಬೇಕಾದರೆ ಇರುವ ಕಾರಣಗಳೇನಾದರೂ ಏನು? ಈ ರಾಷ್ಟ್ರದಲ್ಲಿ ಮೊದಲಿನಿಂದಲೂ ಏನು ನಡೆದುಕೊಂಡು ಬಂದಿದೆ? ಮೆತ್ತಗೆ ಇರುವವರನ್ನು ಮೊಳಕೈಯಲ್ಲಿ ಗುದ್ದಿದರು ಎಂಬ ಗಾದೆಯ ಹಾಗೆ. ನಾವು ಕರ್ನಾಟಕದವರು ಬಹಳ ಮೆತ್ತಗಿರುವ ಜನರು. ಕನ್ನಡಿಗರು, ಕರ್ನಾಟಕದವರು ಅಂದರೆ ಏನರ್ಥ? ನಾವು ಭಾಷಾಂಧರಲ್ಲ. we are not partisan at all ಆದರೆ ನಮ್ಮ ಪಕ್ಕದವರು ಹಾಗಿಲ್ಲವಲ್ಲ? ಈಗ ವಾಟಾಳ್ ಪಕ್ಷದವರು ತಮಿಳುನಾಡಿಗೆ ಹೋಗಿ ಚುನಾವಣೆ ಗೆಲ್ಲಲು ಆಗುವುದಿಲ್ಲ. ಆದರೆ ಎ.ಐ.ಡಿ.ಎಂ.ಕೆ.ಯವರು ಕರ್ನಾಟಕದಲ್ಲಿ ಬಂದು ಎಲೆಕ್ಷನ್ ಗೆಲ್ಲಬಹುದು. ಎಂಇಎಸ್‌ನವರು ಕರ್ನಾಟಕದಲ್ಲಿ ಚುನಾವಣೆಯಲ್ಲಿ ಗೆಲ್ಲಬಹುದು. ಬಾಳಠಾಕ್ರೆಯ ಶಿಷ್ಯರು ಕರ್ನಾಟಕದಲ್ಲಿ ಇರಬಹುದು. ಕರ್ನಾಟಕದವರು ಮಹಾರಾಷ್ಟ್ರದಲ್ಲಿ, ಅಥವಾ ಬೇರೆ ಎಲ್ಲೇ ಈಗಲೀ ಕರ್ನಾಟಕದ ಹೆಸರಿನಲ್ಲಿ ಒಂದು ಸೀಟ್ ಕೂಡ ಗೆಲ್ಲಲು ಆಗುವುದಿಲ್ಲ. ಇದು ಸಧ್ಯಕ್ಕೆ ಇರತಕ್ಕಂಥ ಪರಿಸ್ಥಿತಿ. ನಮ್ಮ ಪಕ್ಕದ ತಮಿಳರು ಹೇಗಿದ್ದಾರೆ? ಅವರು ಮೊದಲು ತಮಿಳರು. ಆಮೇಲೆ ಉಳಿದ ವಿಚಾರಗಳು. ಅವರು ಭಾರತೀಯರಾಗಬೇಕೆ? ಅವರಿಗೆ ಮೊದಲು ಅನುಕೂಲವಾದರೆ ಮಾತ್ರ ಆಗುತ್ತಾರೆ. ಅನುಕೂಲವಾಗದಿದ್ದರೆ ಆಗುವುದಿಲ್ಲ. ನಾವು

ಕನ್ನಡಿಗರಾಗಿದ್ದು, ತುಂಬಾ ಒಳ್ಳೆಯರಾಗಿದ್ದುದು ನಾವು ಹಿಂದುಳಿದಿರಲು ಕಾರಣವಾಗಿದೆ. ನಮಗೆ ಚಾರಿತ್ರಿಕ ಹಿನ್ನೆಲೆ ಬೇರೆ ಇದೆ. ನಾನು ಕಂಡ ಹಾಗೆ ಒಂದೇ ಭಾಷೆಯಾಡತಕ್ಕಂಥ ಕನ್ನಡದ ಜನ ಹರಿದುಹಂಚಿ ಹೋಗಿ ಬೇರೆ ಭಾಷೆಯಾಡತಕ್ಕಂಥವರ ಕೈಕೆಳಗೆ, ಶತಮಾನಗಳ ಕಾಲ ಇದ್ದಂಥ ಉದಾಹರಣೆಗಳು ಈ ರಾಜ್ಯದಲ್ಲಿ ನಮಗೆ ಕಂಡುಬರುತ್ತದೆ. ಇದೊಂದು ವಿಚಿತ್ರ ಸನ್ನಿವೇಶ. ಕನ್ನಡಿಗರು ಅಂದರೆ ತಮಿಳರ ಕೈಕೆಳಗೆ, ಮರಾಠಿ, ತೆಲುಗು, ಹೀಗೆ ಮುಂಬೈ, ಹೈದ್ರಾಬಾದ್, ಮದ್ರಾಸ್, ಹೀಗೆ ಇವರ ಕೈಕೆಳಗೆ ನಮ್ಮ ಪ್ರದೇಶಗಳು ಇದ್ದುವು. ಇದು ಚಾರಿತ್ರಿಕ ಹಿನ್ನಲೆಯಾಯಿತು. ನಮ್ಮ ಕಾವೇರಿಯ ಕಥೆ ಏನಾಗಿದೆ? ಈ ವಿಚಾರದಲ್ಲಿ ಸರಕಾರಕ್ಕೆ ಎಂಬರಾಸ್ ಆಗುವ ಹಾಗೆ ನಾನು ಮಾತನಾಡಬಾರದು ಎಂಬ ಅರಿವು ನನಗಿದೆ. ಆದರೂ ಕರ್ನಾಟಕದ ಚರಿತ್ರೆ ಮತ್ತಿತರ ವಿಚಾರಗಳನ್ನು ಹೇಳಬೇಕಾಗುತ್ತದೆ. ಒಟ್ಟು ಕರ್ನಾಟಕದ ಉದ್ದಗಲ 1,90,641 ಚದುರ ಕಿಲೋ ಮೀಟರ್‌ಗಳು. ಇದರಲ್ಲಿ ಶೇಕಡಾ 20 ಭಾಗದಷ್ಟು ಕೃಷ್ಣಾ ಜಲಾನಯನ ಪ್ರದೇಶ. ಅಂದರೆ 1,12,600 ಚ.ಕಿ.ಮೀ. ಕಾವೇರಿ ಜಲಾನಯನ ಪ್ರದೇಶ ಶೇಕಡಾ 20 ಭಾಗ ಅಂದರೆ 34,273 ಚ.ಕಿ.ಮೀ.ಗಳು ಶೇಕಡಾ 80ರಷ್ಟು ಭಾಗ ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸೇರುತ್ತದೆ. ಕರ್ನಾಟಕದ ಚರಿತ್ರೆ ಅಂದರೆ ಕಾವೇರಿ ಕೃಷ್ಣೆಯರ ಚರಿತ್ರೆಯನ್ನು ಹೇಳಿ ಬಿಟ್ಟರೆ ಅದು ಸಾರ್ಥಕವಾಗುತ್ತದೆ ಎಂಬ ಒಂದು ಅನಿಸಿಕೆ ನನ್ನದು. ಈ ಕೃಷ್ಣಾ ಮತ್ತು ಕಾವೇರಿಯ ಕಣ್ಣೀರ ಕಥೆಯು ಯಾವಾಗ ಪ್ರಾರಂಭವಾಯಿತು? 1799 ರಿಂದ ಈ ಕಥೆ ಪ್ರಾರಂಭವಾಯಿತು. ಇದು ಟಿಪ್ಪುವಿನ ಅವನತಿಯ ಕಾಲ. ಬ್ರಿಟಿಷರ ಕೆಂಗಣ್ಣು ಆಗ ಇಲ್ಲಿ ಬಿತ್ತು, ನಾನು ನೀರಾವರಿಯ ವಿಚಾರ ಮಾತನಾಡುವಂಥ ಕಾಲ, ಇದು ರಂಜನೀಯವಾದ ವಿಚಾರವಲ್ಲ. ಇದು ಗಂಭೀರವಾದ ವಿಚಾರವಾಗುತ್ತದೆ. ಸ್ವಲ್ಪ ಸದಸ್ಯರು ಸಹನೆ ಇಟ್ಟು ಸಹಕರಿಸಬೇಕೆಂದು ಪ್ರಾರ್ಥನೆ. 1807ರಲ್ಲಿ ಕೋಲಾರ ಜಿಲ್ಲೆ, ಶಿಕಾರಿಪುರ, ಒಂದೆರಡು ಮೂರು ಕೆರೆ ಅಬಾದು ಮಾಡತಕ್ಕಂಥ ಕಾಲದಲ್ಲಿ ಮೊದಲನೇ ಅಬ್‌ಜಕ್ಷನ್ಸ್ ಶುರುವಾಯಿತು. ನಾನು ಈ ಎಲ್ಲಾ ಕಥೆಗಳನ್ನು ಹೇಳಲು ಹೋಗುವುದಿಲ್ಲ. ಕೆಲವು ಹೇಳಲು ಹೋಗುವುದಿಲ್ಲ. ಕೆಲವು ಡೇಟ್‌ಗಳನ್ನು ಹೇಳಿ ಕಣ್ಣೀರ ಕಥೆಯನ್ನು ವಿವರಿಸುತ್ತೇನೆ. ಇದು ಕೊನೆಗೆ ಎಲ್ಲಿಗೆ ತಲುಪಿತು ಅಂದರೆ 1876 ರಲ್ಲಿ, ಆದಾದ ಮೇಲೆ ಆಗ ಒಂದು ಸಾರಿ ಅಬ್‌ಜಕ್ಷನ್. ಕೊನೆಗೆ It culminated in the agreement of 1892. 1892 ಒಂದು ಅಗ್ರೀಮೆಂಟ್ ಆಗುತ್ತದೆ. ಈ ಡ್ಯಾಂ ಟೆಕ್ನಾಲಜಿ 19ನೇ ಶತಮಾನದ ಆದಿಯಲ್ಲಿ ಶುರುವಾಗುತ್ತದೆ. ಕೆ.ಆರ್.ಎಸ್. ಪ್ರಾರಂಭ ಮಾಡುವ ಯೋಚನೆ ಬರುತ್ತದೆ, ತಮಿಳುನಾಡು ಪುನಃ ತೊಂದರೆ ಕೊಡುತ್ತದೆ, ಸರ್ ಗ್ರಿಫಿನ್ ಎಂಬ ಆರ್ಬಿಟ್ರೇಟರನ್ನು ನೇಮಿಸುತ್ತಾರೆ 1910ರಲ್ಲಿ, 1914ರಲ್ಲಿ ಅವರು ತಮ್ಮ ಅರ್ಬಿಟ್ರೇಶನ್ ಅವಾರ್ಡ್ ಕೊಡುತ್ತಾರೆ ಅಂದಿನ ಕಾನೂನು ಪ್ರಕಾರ ಅದನ್ನು ಮದ್ರಾಸ್‌ನವರು ಒಪ್ಪುವುದಿಲ್ಲ. ಆಗ ಕೇಂದ್ರ ಸರ್ಕಾರಕ್ಕೆ ಹೋಗುತ್ತಾರೆ ಅವರು ಗ್ರಿಫಿನ್ ಕೊಟ್ಟಿರುವುದು ಸರಿ ಅನ್ನುತ್ತಾರೆ ಅದಕ್ಕೆ ಇವರಿಗೆ ಸಂತೋಷವಾಗಲಿಲ್ಲ ಪುನಃ ಕೌನ್ಸಿಲ್‌ಗೆ ಹೋಗುತ್ತಾರೆ. ಕೌನ್ಸಿಲ್‌ನಲ್ಲಿ ಗ್ರಿಫಿನ್ ಅವಾರ್ಡ್ ಬೇಡ ನೀವು ಬೇರೆ ಕುಳಿತು ಮಾತನಾಡಿಕೊಳಿ. ಅಂತ ಮೈಸೂರಿಗೆ ಒತ್ತಾಯ.

ಮಾತುಕತೆ ಆಯಿತು, ಸರ್.ಎಂ. ವಿಶ್ವೇಶ್ವರಯ್ಯನವರು ಏನು ಹೇಳಿದರು ಆ ಸಂದರ್ಭದಲ್ಲಿ ಅದೆಲ್ಲ ಬೇಡ, ಭಾರಿ ಮನನೊಂದು ಹೇಳುತ್ತಾರೆ ಕೊನೆಗೆ 1924ನೇ ಅಗ್ರಿಮೆಂಟ್ ಆಗುತ್ತದೆ. ಆವತ್ತು ಈ ಅಗ್ರಿಮೆಂಟ್ ಆಗಬೇಕಾದರೆ ತಮಿಳುನಾಡಿನಲ್ಲಿ ಅಷ್ಟುಹೊತ್ತಿಗೆ ಅವರು ಗ್ರಾಂಡ್ ಅಣೆಕಟ್ಟು ಕಟ್ಟಿಕೊಂಡಿದ್ದರು. ಅಪ್ಪರ್, ಲೋಯರ್ ಅಣೆಕಟ್ಟುಗಳನ್ನು ಕಟ್ಟಿಕೊಂಡಿದ್ದರು ಆಮೇಲೆ ಕಾವೇರಿ ಡ್ಯಾಂ ಕಟ್ಟಿಕೊಂಡಿದ್ದರು ಅಷ್ಟೂ ಆದಮೇಲೆ ಇದಾಯಿತು. ಅವರಿಗೆ ನೀರಿಗೆ ನಾವು ಭರವಸೆ ಕೊಡಬೇಕು, ಪ್ರತಿ ತಿಂಗಳು ಇಷ್ಟಿಷ್ಟು ಬಿಡಬೇಕು, ಅಲ್ಲಿ ಅಪರ್ ಅಣೆಕಟ್ಟು ಮೇಲೆ limited flow ಅಂತ, ಜೂನ್‌ನಲ್ಲಿ 6 ಅಡಿ ಅದರ ಮೇಲೆ ಹರಿಯಬೇಕು ಜುಲೈನಲ್ಲಿ ಆರೂವರೆ ಅಡಿ ಆಗಸ್ಟ್‌ನಲ್ಲಿ 7 ಅಡಿ ಪುನಃ ಸೆಪ್ಟೆಂಬರ್‌ನಲ್ಲಿ ಆರೂವರೆ ಅಡಿ ಆಗಸ್ಟ್‌ನಲ್ಲಿ 7 ಅಡಿ ಪುನಃ ಸೆಪ್ಟೆಂಬರ್‌ನಲ್ಲಿ ಆರೂವರೆ ಅಡಿ ಹೀಗೆ, ಇರಲಿ ಅದಾದಮೇಲೆ ಏನಾಗಿತ್ತು? ಮೆಟ್ಟೂರು ಡ್ಯಾಂ ಆಯಿತು 1934ರಲ್ಲಿ ಇದೆಲ್ಲ ಸ್ವಾತಂತ್ರ್ಯಪೂರ್ವದಲ್ಲಿ ಆಗಿಬಿಟ್ಟಿತ್ತು, ಸ್ವಾತಂತ್ರ್ಯ ಬಂದ ಮೇಲೆನಾದರೂ ಬದಲಾವಣೆ ಆಯಿತೇ? ಆಗಲಿಲ್ಲ. The obstructionist attitude of Tamil Nadu continued with the connivance of the Government of India. That was the problem after independence. With the conivance of Government of India, Tamil Nadu continued to obstruct our projects. ಈ ಮಧ್ಯೆ ಕೇಂದ್ರ ಸರ್ಕಾರದವರು ಮಾಡಿಕೊಂಡರು ಈಗ ತಮಿಳುನಾಡು ಪ್ರಾಜೆಕ್ಟ್, ನಮಗೇನೂ ಕೇಳಲೇ ಇಲ್ಲ. ಸ್ವತಂತ್ರ ಬಂದ ಮೇಲೆ, ಭವಾನಿ 1965 ಮಾಡಿಕೊಂಡರು, ಅಮರಾವತಿ 1958, ಕಟಿಲ 1960, ಪುಲ್ಲಂಬಾಡಿ ಕ್ಯಾನಲ್ 1959-60, ಮೆಟ್ಟೂರು high level 1956-61, ನಾವು ಅಂದರೆ ಅಂದಿನ ಮೈಸೂರು ಅದಕ್ಕೆ ಅಬ್ಜೆಕ್ಷನ್ ಹಾಕಿದೆವು. ಆಗೇನಾಯಿತೆಂದರೆ ಆದರೂ ಕ್ಲಿಯರ್ ಮಾಡಿದರು, ಹಾಗೆ ಮಾಡಲು ಕಾರಣ ಕೊಟ್ಟರು. ಎರಡು ಮಾಹಿತಿ ಓದಿಬಿಡುತ್ತೇನೆ ಅಧ್ಯಕ್ಷರೇ, ಇದು ಏಪ್ರಿಲ್ 8, 1959 ರಲ್ಲಿ ಲೋಕಸಭೆಯಲ್ಲಾದದ್ದು. ಒಂದು ಪ್ರಶ್ನೆ, ಶಿವನಂಜಪ್ಪನವರು ಮಂಡ್ಯ ಸಂಸತ್ ಸದಸ್ಯರು ಕೇಳುತ್ತಾರೆ ಅದಕ್ಕೆ ಅವರು ಉತ್ತರ ಹೇಳುವುದು, ಮಿಸ್ಟರ್ Haati ಎಂದು ಮಂತ್ರಿಗಳು ಏನು ಹೇಳುತ್ತಾರೆಂದರೆ Mettur High level Canal was part of the Plan ಪ್ಲಾನ್‌ನಲ್ಲಿ ಮಂಜೂರು ಮಾಡಿದೆವು ಎಂದು ಹೇಳುತ್ತಾರೆ When that was sanctioned, the Planning Commission took an assurance from the Madras Government that they will only use the surplus water. · ಇನ್ನೂ ಕ್ಲಿಯರಾಗಿ ಹೇಳಬೇಕೆಂದರೆ ಇದನ್ನೆಲ್ಲಾ ಪರಿಶೀಲಿಸಿದ ಕಾಲದಲ್ಲಿ ಇರಿಗೇಷನ್ ಕಮಿಶನ್ ಬರೆಯುತ್ತದೆ ವಾಲ್ಯೂಂ 3 pages 325 to 326- Part II : " It may be stated here that the Mysore Government had objected to the construction of the last three projects namely Katila High level canal, Pullambadi Canal and Mettur Canal on the ground that they have

violated the agreement. The schemes however, were approved by the Planning Commission on the Tamil Nadu Government assurance that they will utilise only surplus water of Cauvery without prejudicing the distribution of such water between the two States. That in the event of defeciencies, ಇದು ಭಾರಿ ಮುಖ್ಯವಾದದ್ದು. That is in the event of defeciencies, these area would be fed by improving the duty and effecting economies in the existing canal system. ಇದು ಅವರು ಕೊಟ್ಟ ಭರವಸೆ, ಆದರೆ ಅದು ಆಗಲಿಲ್ಲ. ಜೊತೆಗೆ ಏನಾಯಿತು? ನಮ್ಮ ಯೋಜನೆಗಳಿಗೆ ಮದ್ರಾಸ್‌ನವರು ತಕರಾರು ಹಾಕಿದರು ಎಂದು ಕೇಂದ್ರಸರ್ಕಾರ ಕ್ಲಿಯರೆನ್ಸ್ ಕೊಡಲಿಲ್ಲ. These projects became a burden on the State Exchequer. ಇವತ್ತು ದೊಡ್ಡವು ಮಧ್ಯಮಾವಧಿ ಸೇರಿ 12 ಪ್ರಮುಖ ಯೋಜನೆಗಳಿಗೆ ಈ ದಿನದವರೆಗೆ ಇಲ್ಲಿಯವರೆಗೆ ಕ್ಲಿಯರೆನ್ಸ್ ಕೇಂದ್ರಸರ್ಕಾರ ಕೊಟ್ಟಿಲ್ಲ. ಮಲತಾಯಿ ಧೋರಣೆ. ಕೊನೆಗೆ ಏನಾಯಿತು, ಹೀಗೆ ನಡೆದುಕೊಂಡು ಹೋಯಿತು, ಬಿಗಡಾಯಿಸಿಕೊಂಡು, ನಾವು ಹೇಳುವುದು ಅವರು ಹೇಳುವುದು ಈ ಮಧ್ಯೆ National Water Policy ಮಾಡಿದೆವು ಎಂದು ಶುರು ಮಾಡಿದೆವು, ಅದಿರಲಿ, ರಾಜ್ಯಪಾಲರ ಆಡಳಿತ ಬಂತು. ಧರ್ಮವೀರ ಅವರು ರಾಜ್ಯಪಾಲರಾಗಿದ್ದರು, ಕೆಎಲ್ ರಾವ್ ಕೇಂದ್ರದ ಮಂತ್ರಿಗಳಾಗಿದ್ದರು, ತಮಿಳುನಾಡಿನವರು ಏನಾಯಿತು, ಕಟ್ಟೆ ಕಟ್ಟಿಬಿಟ್ಟರು ಕರ್ನಾಟಕವರು, ಅವರಿಗೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಆಗಬೇಕೆಂದು ಆಸೆ, ಇದಕ್ಕೆ ಕೆಎಲ್ ರಾಯರ ಆಶೀರ್ವಾದ. ಹೇಮಾವತಿ ಕಟ್ಟೆ ಕಟ್ಟುತ್ತಿದ್ದರಲ್ಲ ಅಧ್ಯಕ್ಷರೇ 19 ಟಿಎಂಸಿಎಫ್‌ಟಿ ಆದರ ಕ್ಯಾಪಾಸಿಟಿ 34ಕ್ಕೆ ಏರಿಸಿ ಅಂತ ಕೆಎಲ್ ರಾಯರು. ಏರಿಸುವುದ್ಯಾಕೆ ? 34 ಟಿಎಂಸಿಎಫ್‌ಟಿಗೆ ಏರಿಸಿದ್ದರೆ, ಅದು ವರ್ಜಿನ್‌ರಿವರ್, ಆದರೆ ಆ ಪ್ರದೇಶದಲ್ಲಿ ಬೀಳುವ ಮಳೆ ವಾತಾವರಣ ಎಲ್ಲ ನೋಡಿಕೊಂಡರೆ ಅದರ ಮೂರು ಪಟ್ಟು ಅಂದರೆ 102 ಟಿಎಂಸಿಎಫ್‌ಟಿ ಉಪಯೋಗಿಸಬಹುದು, ಅವರು ಹಾಗೆ ಹೇಳಲಿಲ್ಲ, ನೀವು 34 ಟಿಎಂಸಿಎಫ್‌ಟಿ ಕಟ್ಟೆ ಕಟ್ಟಿ, 21 ಟಿಎಂಸಿಎಫ್‌ಟಿ ಉಪಯೋಗಿಸಿ, ಮತ್ತೆ ದೊಡ್ಡ ಕಟ್ಟೆ ಏಕೆ ಬೇಕು ? ತಮಿಳನಾಡಿಗೆ ನೀರು ಬಿಡಬೇಕಲ್ಲ. ಆಗೇನಾಯಿತು, ಧರ್ಮವೀರ ಒಂದು ಮಾತು ಹೇಳಿದರು ಅವರು ಬಂದ ಮೇಲೆ ತಮಿಳುನಾಡಿನವರು ಗಲಾಟೆ ಮಾಡಿದರು, ಬಹುಶಃ ತಮಿಳುನಾಡಿನವರ ಅನಿಸಿಕೆ ಏನಿತ್ತು ಅದರ ಒಟ್ಟರ್ಥ ಹಠಮಾರಿತನ ಅವರ ಸ್ವಾರ್ಥ ಅದನ್ನು ಧರ್ಮವೀರ ಅವರು ಅವತ್ತು ಅಸೆಂಬ್ಲಿ ಇರುವುದಿಲ್ಲ ಬರೀ ವಿಧಾನಪರಿಷತ್ ಸದಸ್ಯರನ್ನು ಅವರು ಅಡ್ರೆಸ್ ಮಾಡುತ್ತಾರೆ ಆ ಕಾಲದಲ್ಲಿ ಅವರು ಏನು ಹೇಳುತ್ತಾರೆ ಕಾವೇರಿ ಬಗ್ಗೆ ತಮಿಳುನಾಡಿನ ಸಿದ್ಧಾಂತ ವಿಶ್ವದ ಇತಿಹಾಸದಲ್ಲೇ ಪ್ರಥಮ, ನಾನಿಲ್ಲ ಹೇಳಿದ್ದುದು ಧರ್ಮವೀರ ಅವರು ಹೇಳಿದ್ದು 19-7-71ರಲ್ಲಿ ಇದೇ ವಿಧಾನಸೌಧದಲ್ಲಿ ಪರಿಷತ್ತಿನ ಸದಸ್ಯರನ್ನು ಕುರಿತು ಮಾತನಾಡುವ ಕಾಲದಲ್ಲಿ ಅವರು ಎಲ್ಲ ಹೇಳಿಕೊಂಡು ಬಂದಿದ್ದಾರೆ, ಇದೊಂದು ಹೊಸ ಸಿದ್ಧಾಂತ,

ತಮಿಳುನಾಡಿನವರು ಹೇಳುವುದು ವಿಶ್ವದಲ್ಲೇ ಪ್ರಥಮ ಎಂದು ವಿವರವಾಗಿ ಹೇಳಿದ್ದಾರೆ, ಅದನ್ನು ಅಷ್ಟಕ್ಕೆ ನಿಲ್ಲಿಸುತ್ತೇನೆ. ಹೇಮಾವತಿ ಹೇಳಿದ್ದೆನಲ್ಲ, ಅದಕ್ಕೆ ಕೆ.ಎಲ್. ರಾಯರಿಗೆ ನಾನೊಂದು ಲೆಟರ್ ಬರೆದೆ, ಅವರೊಂದು ಉತ್ತರ ಬರೆದರು, ಜುಲೈ 23,71, ನೀವು ತಮಿಳುನಾಡು ಪರ ಇದ್ದೀರಿ, ಏಕೆ ಈ ತರಹ ಮಾಡುತ್ತೀರಿ ಎಂದು ಬರೆದಾಗ ಅವರು ಏನೇನೋ ಬರೆದುಕೊಂಡು ಬಂದಿದ್ದಾರೆ ಅದನ್ನೆಲ್ಲ ಓದುವುದಕ್ಕೆ ಹೋಗುವುದಿಲ್ಲ, ಇಷ್ಟಂತೂ ಹೇಳಿದರು, 'You may kindly rest assured that the Government of India have not been towards any one of the States or the other. Their aim has always been to get a mutual aceptable settlement in an atmosphere of goodwill. ಉಳಿದದ್ದು ಭಾರಿ ದೊಡ್ಡದಿದೆ ಅದು ಹೇಳುವುದಕ್ಕೆ ಹೊಗುವುದಿಲ್ಲ. ಆಮೇಲೆನಾಯಿತು, 72ರಲ್ಲಿ ಜನಪ್ರಿಯ ಸರ್ಕಾರ ಬಂತು, ಬಹುಶಃ ತಾವೂ ಪತ್ರಿಕೆಯಲ್ಲಿ ಓದಿದ್ದೀರಿ, ತಮಿಳುನಾಡಿನವರ ಒಬ್ಬರು ಟ್ರಿಬ್ಯೂನಲ್ ಮುಂದೆ ಹೇಳಿಕೆ ಕೊಡುವ ಕಾಲದಲ್ಲಿ ಹೇಳುತ್ತಾರೆ, 72ರವರೆಗೆ ರೂಲ್ಸ್‌ರೆಗ್ಯುಲೇಶನ್ಸ್ ಪ್ರಕಾರವೇ ಕರ್ನಾಟಕದವರು ನೀರು ಬಿಟ್ಟುಕೊಂಡು ಬಂದರು ಅದಾದಮೇಲೆ ಬಿಡಲಿಲ್ಲ. ದೇವರಾಜ ಅರಸರು ಮುಖ್ಯಮಂತ್ರಿಯಾದರು, ಈ ರೂಲ್ಸ್ ರೆಗ್ಯುಲೇಶನ್ ಅರ್ಥವಿಲ್ಲದ್ದೂ ಏಕೆ ಅಂದರೆ ಲಿಮಿಟ್ ಫ್ಲೋ, ಮೊದಲು ಕಾವೇರಿ ವರ್ಜಿನ್‌ರಿವರ್ ಆಗಿತ್ತಲ್ಲ, ಅಲ್ಲಿ ಡ್ಯಾಂ ಟೆಕ್ನಾಲಜಿನೆ ಇರಲಿಲ್ಲ. ಅಲ್ಲಿರುವ ಡೆಲ್ಟಾ ಇರಿಗೇಶನ್‌ಗೆ ಅಶೂರ್ಡ್ ವಾಟರ್‌ಸಪ್ಲೈ ಬೇಕು ಆದ್ದರಿಂದ ಇಷ್ಟಿಷ್ಟು ಅಡಿ ಬಿಡಿ ಅಪರ್ ಅಣೆ ಮೇಲೆ ಇಷ್ಟು ನದಿ ನೀರು ಕೊಡುವಷ್ಟನ್ನು ಇಷ್ಟು ಕ್ಯುಸೆಕ್ಸ್ ಬಿಡಿ ಅಂತ, ಅದಾಯ್ತಲ್ಲ ನಾವು ಹೇಗೆ ತಡೆದೆವು ? ಅಮರಾವತಿ ಕಟ್ಟಿದರು ಭವಾನಿ ಕಟ್ಟಿದರು, ಕಪಿಲ್ ಕಟ್ಟಿದರು, ಪುಲ್ಲಂಬಾಡಿ ಕೆಲಸವೆಲ್ಲ ಆದವು, ಅಂದರೆ ಹೋಗತಕ್ಕಂತಹ ಫ್ಲೋ ಏನಿತ್ತು ಅಪರ್ ಅಣೆಕಟ್ಟಿಗೆ ತಮಿಳನಾಡಿನವರೇ ತಪ್ಪಿಸಿದರು ನಮಗಿಂತ ಹೆಚ್ಚಿಗೆ, ನಾವು ಹೇಗೆ ಬಿಡುವುದಕ್ಕಾಗುತ್ತದೆ ? ಅಲ್ಲೆ ಕೆ.ಆರ್.ಎಸ್‌ನಲ್ಲಿ ನೋಡಿಕೊಳ್ಳುವುದಕ್ಕೆ ಯಾರೋ ಒಬ್ಬ ಇಂಜಿನಿಯರಿದ್ದರು. ಇರಬೇಡಪ್ಪ ದಯಮಾಡಿ ನೀನು ಹೋಗು ಅಂತ 72ರಲ್ಲಿ ಅವರನ್ನು ಕಳಿಸಿದ್ದಾಯಿತು, ಅದಾದಮೇಲೆ, 72 ಮೇ 29ರಂದು ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಆಯಿತು. ನಾನೂ ಇದನ್ನು ಏಕೆ ಹೇಳುತ್ತೇನೆ ಎಂದರೆ .... ಆ ಅಗ್ರಿಮೆಂಟ್ ಆದಮೇಲೆ ಏನೇನು ಆಯಿತು, ಸದನದಲ್ಲಿ ಬಂತು, ನಮ್ಮ ಜಿಯಾಗ್ರಫಿಕಲ್ ಏರಿಯಾ ವ್ಯತ್ಯಾಸವಾಯಿತು. ಆಮೇಲೆ instruments of accession ಆಯಿತು. ಸ್ಟೇಟ್ ರೀ ಆರ್ಗನೈಜೇಷನ್ ಆ್ಯಕ್ಟ್ ಆಯಿತು. ಎಲ್ಲಿಯೂ saving clause ಇಲ್ಲ. ಯಾವುವು ಉಳಿದುಕೊಂಡಿಲ್ಲ. ಮೆರಿಟ್ ಮೇಲೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವು ಸತ್ತವು ಎನ್ನುವ ತೀರ್ಮಾನ. 72ರಲ್ಲಿ ಏನಾಯಿತು, ಈ ತೀರ್ಮಾನವನ್ನು ನಾವು ಮಾಡಲಿಲ್ಲ ಸಭೆಯಾಯಿತು. ಸಭೆಯಾದಂಥ ಕಾಲದಲ್ಲಿ ಮೂರು ರಾಜ್ಯದ ಮುಖ್ಯಮಂತ್ರಿಗಳು ಒಂದು ಅಂಡರ್‌ಸ್ಟಾಂಡಿಂಗ್ ರೀಚ್ ಆದರು. ಇದೇನೆಂದರೆ ನಾನು ಎಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಇದು ಕಾನ್‌ಫಿಡೆನ್ಸಿಯಲ್ ಎಂದು ಇದೆ ಇರಲಿ,

ತಮಿಳುನಾಡು ಕರುಣಾನಿಧಿಯವರು ಇದ್ದರು. ನಮ್ಮಲ್ಲಿ ದೇವರಾಜ ಅರಸ್‌ರವರು ಇದ್ದರು. ಇದು ಹೆಲ್ಪ್ ಆಗುವುದಿಲ್ಲ. ಅದು ಪ್ರಶ್ನೆ ಬೇರೆ. ಅದನ್ನು ಏತಕ್ಕೆ ಹೇಳುತ್ತಿದ್ದೇನೆಂದು ನಿಮಗೆ ಹೇಳುತ್ತೇನೆ. ಅದೇನಾಯಿತು: It was aimed to arrive at an Interim Agreement to be valid till 1974 ಅದು ಆಯಿತಲ್ಲ. When the earlier agreement of 1924 would have come up for review after 50 years as provided in that agreement. Now as 1974 is near, this attempt has been given up in favour of finding an overall approach to solve the problem. ಓವರ್ ಆಲ್ ಅಪ್ರೋಚ್ ಎಂದರೆ ಈ ಲೆಟರ್ ಡ್ರಾಫ್ಟ್ ಮಾಡುವಾಗ ನಾನಿದ್ದೆ. ಈ ವರ್ಡ್ಸ್ ಹಾಕಬೇಕಾದರೆ ಒಂದು ದಿನ ತೆಗೆದುಕೊಂಡಿದ್ದೇವೆ ಕೆ.ಎಲ್.ರಾಯರ ಹತ್ತಿರ. ಇದು de novo consideration - ಎನ್ನುವುದಕ್ಕೆ ನಾನು ಹೇಳುವುದು. ಇದಕ್ಕೆ ಅವತ್ತು ಮೂರು ಜನರೂ ಸಹಿ ಹಾಕಿದ್ದಾರೆ. ದೇವರಾಜ ಅರಸ್‌ರವರು ಹಾಕಿದ್ದರು. ಕರುಣಾನಿಧಿ ಹಾಕಿದ್ದರು. ಅಚ್ಯುತಮೆನನ್ ಹಾಕಿದ್ದರು. ಇದನ್ನು ಇಷ್ಟಕ್ಕೆ ಬಿಡುತ್ತೇನೆ. ಆದರೆ ಅವರು ಅದಕ್ಕೆ ಬಿಟ್ಟುಕೊಂಡರೋ ಇಲ್ಲ. ಆಮೇಲೆ ಏನಾಯಿತು fact finding committee ಮಾಡಿದರು. ಇನ್ನು ಅನೇಕ ಸಭೆಗಳಾದವು. ಇದನ್ನೆಲ್ಲಾ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಕೊನೆಗೆ ಏನು ಮಾಡಿದರು. ಯಾವಾಗ ತಮ್ಮ ಮೂಗಿನ ನೇರಕ್ಕೆ ಆಗುವುದಿಲ್ಲ ಎಂದು ಗೊತ್ತಾಯಿತು, ಕೇಂದ್ರಸರ್ಕಾರಕ್ಕೆ ಒಂದು ಲೆಟರ್‌ನ್ನು ಬರೆದರು. ಯಾವಾಗ ಎಂದರೆ 6ನೇ ಜುಲೈ 86. ಅದೇನು ? ಈ ಅಗ್ರಿಮೆಂಟನ್ನು ವಯಲೇಟ್ ಮಾಡಿದ್ದಾರೆ. de novo consideration, overall solution - ಎಲ್ಲಾ ಮರೆತರು. ಏಕೆಂದರೆ ಅವರ ಮೂಗಿನ ನೇರಕ್ಕೆ ಆಗುವ ಹಾಗೆ ಕಾಣಲಿಲ್ಲವಲ್ಲ. ಬರೆದರು. ಅದರಿಂದ ಒಂದು ಟ್ರಿಬ್ಯೂನಲ್ಲನ್ನೇ ನೇಮಕ ಮಾಡಿ, ಇದೊಂದು ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದರು. 6ನೇ ಜುಲೈ 1986. ಇದು ಕೋಲ್ಡ್‌ಸ್ಟೋರೇಜ್‌ನಲ್ಲಿ ಇತ್ತು. ಎಲ್ಲಿಯವರೆಗೆ 1990ನೇ ಇಸವಿಯವರೆಗೆ ಈ ಕಾಗದ ಅಲ್ಲಿಯೇ ಇತ್ತು. ಏತಕ್ಕೆ. ಈ ಮಾತನ್ನು ಹೇಳುತ್ತೇನೆ ಎಂದರೆ ಇದು ನಮಗೆ ಏನಾಗಿದೆ ಎಂದರೆ ಈ ತಮಿಳುನಾಡಿಗೆ ಸುಪ್ರೀಂಕೋರ್ಟ್ ಎಂದರೆ ತವರುಮನೆ. ನಾನು ಕೋರ್ಟ್‌ಮೇಲೆ aspersions ಹೇಳುತ್ತಿಲ್ಲ. ಸುಪ್ರೀಂಕೋರ್ಟ್ ಎಂದರೆ ಇಡೀ ರಾಷ್ಟ್ರದ ಜನರಿಗೆ ತವರು ಮನೆಯಾಗಬೇಕು. ಅವರಿಗೆ ಅದೇನೂ ತಮಿಳುನಾಡಿಗೆ ತವರು ಮನೆಯಾಗಿ ಬಿಟ್ಟಿತು. ಕೇಂದ್ರಸರ್ಕಾರ ಏನಾಯಿತು ಎಂದು ನಾನು ಹೇಳುದಿಲ್ಲ. ಏಕೆ ಹೇಳುವುದಿಲ್ಲ ಎಂದರೆ ಕೇಂದ್ರ ಸರ್ಕಾರ ಹಾಗಾದರೆ ಮಾವನ ಮನೆಯೇ ಎಂದು ಯಾರೋ ಕೇಳಿದರು. ನಾನು ಅದರ ಬಗ್ಗೆ ಒಪೀನಿಯನ್ ಹೇಳುವುದಕ್ಕೆ ಮೊದಲೊಂದು ಒಪೀನಿಯನನ್ನು ಹೇಳಿ ಬಿಟ್ಟೆ. ಕೇಂದ್ರಸರ್ಕಾರ ಏನು ಮಾಡಿಕೊಂಡಿದೆ ಎಂದು. ಮಾನ್ಯ ನಾಗೇಗೌಡರು ಇಲ್ಲೇ ಕುಳಿತಿದ್ದಾರೆ. ಈ ಕರ್ನಾಟಕ ಎಂದರೆ ಕಟ್ಟಿಕೊಂಡವಳು ಇದ್ದ ಹಾಗೆ ಕೇಂದ್ರ ಸರ್ಕಾರಕ್ಕೆ. ತಮಿಳುನಾಡು ಎಂದರೆ ಇಟ್ಟುಕೊಂಡವಳು ಇದ್ದಹಾಗೆ. ಕಟ್ಟಿಕೊಂಡವಳು ಎಂದರೆ ಏನಾಗುತ್ತದೆ ಎಂದರೆ ಸೀರೆ ಬೇಕು ಎಂದರೆ ಯುಗಾದಿಯಲ್ಲಿ ಕೇಳಿದರೆ ನವರಾತ್ರಿಯಲ್ಲಿ ತರುತ್ತೇನೆ, ನವರಾತ್ರಿಯಲ್ಲಿ ಕೇಳಿದರೆ ದೀಪಾವಳಿಯಲ್ಲಿ ತರುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಇದು ಅನುಭವದ ಮಾತೇ ?

ಶ್ರೀ ಹೆಚ್.ಎನ್. ನಂಜೇಗೌಡ : ಇಟ್ಟುಕೊಂಡವಳು ಸುಮ್ಮನೆ ಆಗುವುದಿಲ್ಲವಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಟ್ಟಿಕೊಂಡವಳು, ಇಟ್ಟುಕೊಂಡವಳ ಬಗ್ಗೆ ಮಾತನಾಡುವಾಗ ನಾಗೇಗೌಡರ ವಿಚಾರ ಏತಕ್ಕೆ ತೆಗೆದಿರಿ ಎಂದು.

ಅಧ್ಯಕ್ಷರು : ಮಾನ್ಯ ವಾಟಾಳರ ಆಕ್ಷೇಪಣೆ ಗೊತ್ತಾಯಿತಲ್ಲ. ನಾನು ಇಲ್ಲಿ ಇರುವಾಗ ನಾಗೇಗೌಡರನ್ನು ನೀವು ಕೇಳುವುದೇ ? ನೀವು ಇಷ್ಟು ಆತ್ಮೀಯರಾಗಿ ಅವರನ್ನು ಇಂಥ ವಿಚಾರದಲ್ಲಿ ಅಲಕ್ಷ್ಯ ಮಾಡಬಹುದೇ ?

ಶ್ರೀ ವಾಟಾಳ್ ನಾಗರಾಜ್ : ನಂಜೇಗೌಡರೇ ಆ ಬಗ್ಗೆ ಮಾತನಾಡಲೀ ಬೇರೆ ಯಾರ ಹೆಸರು ಹೇಳುವುದು ಬೇಡ ಎನ್ನುವುದು ನನ್ನ ವಾದ.

ಶ್ರೀ ಹೆಚ್.ಎನ್. ನಂಜೇಗೌಡ : ಇದು ಕೋಲ್ಡ್ ಸ್ಟೋರೇಜ್‌ನಲ್ಲಿತ್ತು. ಸುಪ್ರೀಂ ಕೋರ್ಟಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಕರ್ನಾಟಕದವರು ಕನ್ನಡಿಗರು ಪರಕೀಯರೇ ಆಗಿಹೋದೆವು ಎಲ್ಲಾ ವಿಚಾರದಲ್ಲೂ ಪರಕೀಯರೇ ಆಗಿಹೋದೆವು. ಇರಲಿ. ನವೆಂಬರ್ 83ನೇ ಇಸವಿಯಲ್ಲಿ ''ತಮಿಳುನಾಡು ಕಾವೇರಿ ನೀರ ಪ್ರಶ್ನೆ ವಿಲ್ಲೈ ಪೋರ್ವುಳ್‌ಗಳ್ ವ್ಯವಸಾಯಗಳ್, ನಾಲಾ ಉರುಮೈ ದುಪ್ಪು ಸಂಗಂ ಇವರು ಸುಪ್ರೀಂ ಕೋರ್ಟಿಗೆ ಒಂದು ಅರ್ಜಿಯನ್ನು ಹಾಕಿದರು. ಯಾವಾಗ ನವೆಂಬರ್ 83ರಲ್ಲಿ ರಿಟ್ ಪಿಟಿಷನ್. ಗೊತ್ತಾಯಿತೇ ? Restore supply of water to Tamilnadu as envisaged in 1924 agreement.

ಇದು ಅವರ ಕೋರಿಕೆ. 83ರಲ್ಲಿ 87ರಲ್ಲಿ ಏನಾಯಿತು, ಅವರು ಆರ್ಗನೈಜ್ ಮಾಡಿಕೊಂಡರು ಎಂ.ಪಿ.ಗಳೆಲ್ಲಾ ಒಂದು ಮೆಮೊರಾಂಡಂನ್ನು ಕೊಟ್ಟರು. ಆ ಕಾಲದಲ್ಲಿ ಅಂದಿನ ಮುಖ್ಯಮಂತ್ರಿಗಳಾದಂಥ ರಾಮಕೃಷ್ಣ ಹೆಗಡೆಯವರು ನಮಗೆಲ್ಲ ಪತ್ರವನ್ನು ಬರೆದರು. ಟ್ರಿಬ್ಯೂಲ್ಸ್‌ಗೆ ಹಾಕುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ, ನೀವೇನಾದರೂ ಮಾಡಿ ಇದನ್ನು ತಪ್ಪಿಸಬೇಕು ಎಂದು ಹೇಳಿ ಇರಲಿ. ತಮಿಳುನಾಡು ಸರ್ಕಾರ ಏನು ಮಾಡಿತು ? ಮೇ 1987ರಲ್ಲಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಒಂದು ಅಫಿಡವಿಟ್ಟನ್ನು ಹಾಕಿಬಿಟ್ಟರು. ಈ ರೈತ ಸಂಘದವರು ಏನೇನು ಹೇಳಿದ್ದಾರೊ ಅದನ್ನು ನಾವು ಸಂಪೂರ್ಣವಾಗಿ ಪುಷ್ಟೀಕರಿಸುತ್ತೇವೆ ಎಂದರು. by an affidavit ಇವರೇ implead ಆಗಿ ಅಫಿಡೆವಿಟ್ ಹಾರಿ ಇಂಪ್ಲೀಟ್ ಆಗಿ ಏನು ಮಾಡಿದರು ಎಂದರೆ we support the contention of these farmers association in toto ಆಮೇಲೆ ಏನಾಯಿತು, ಆರ್ಗ್ಯುಮೆಂಟೆಲ್ಲಾ ನಡೆಯಿತು. ಅಷ್ಟೋತ್ತಿಗೆ ನಮ್ಮ ಜಾಲಪ್ಪನವರು ಗುರುಗಳು ಪ್ರೈಮ್ ಮಿನಿಸ್ಟರ್ ಆಗಿದ್ದರು ವಿ.ಪಿ.ಸಿಂಗರು. ಅವರೇನು ಹೇಳಿದರು, ನಾವು ಬಿಟ್ಟುಬಿಟ್ಟಿದ್ದೇವೆ, ಕೈಬಿಟ್ಟಿದ್ದೇವೆ. ನೀವೇ ಕೋರ್ಟ್‌ನವರು ಏನು ಮಾಡಬೇಕೋ ಅದನ್ನು ಆರ್ಡರ್ ಮಾಡಿ ಎಂದು ಹೇಳಿದರು. ಸುಪ್ರೀಂ ಕೋರ್ಟ್ ಏನು ಮಾಡಿತು, 4ನೇ, ಮೇ, ಟ್ರಿಬ್ಯೂನಲ್ ಕಾನ್‌ಸ್ಟಿಟ್ಯೂಟ್ ಮಾಡಿ ಒಂದು ತಿಂಗಳೊಳಗೆ ಎಂದು ಹೇಳಿ ಆರ್ಡರ್ ಮಾಡುತ್ತದೆ.

ಫ್ಯಾಕ್ಟ್ಸು ಹೇಳತಕ್ಕಂಥದ್ದು. ಆಮೇಲೆ ಏನಾಯಿತು, 5-1-91 ಬಂದು ಇಂಟಿರಮ್ ಆರ್ಡರ್ ಕೊಡಿ ಎಂದು ಟ್ರಿಬ್ಯೂನಲ್ ಮುಂದೆ ತಮಿಳುನಾಡಿನವರು ನಾವು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ರಿಜೆಕ್ಟ್ ಮಾಡುತ್ತಾರೆ. ಇವರು ಪುನಃ ತವರುಮನೆಗೆ ಓಡಿದರು ಸುಪ್ರೀಕೋರ್ಟಿಗೆ. ಯಾರು ಎಂದರೆ ತಮಿಳುನಾಡಿನವರು. ಸುಪ್ರೀಂಕೋರ್ಟ್ ಏನು ಮಾಡಿತು, 26-4-91 ಟ್ರಿಬ್ಯೂನಲ್‌ಗೆ ಡೈರೆಕ್ಷನ್ಸ್ ಕೊಡುತ್ತದೆ. ನೀವು ಇಂಟಿರಮ್ ಆರ್ಡರನ್ನು ಮಾಡಲೇಬೇಕು. Consider the case on merits. ಎಂದು ಅದರಲ್ಲಿ ನಮ್ಮ ತಪ್ಪು ಏನೇ ಇರಲಿ. ನಮ್ಮ ಸರ್ಕಾರದ ತಪ್ಪು ನಾವೇನು ಮಾಡಿದೆವು. ಒಬ್ಬ ಜಡ್ಜ ಡಿಸೆಂಟ್ ಬರೆಯುತ್ತಾರೆ. ಅದೆಲ್ಲಾ ಈಗ ಹೇಳುವುದಕ್ಕೆ ಆಗುವುದಿಲ್ಲ. ಕೋರ್ಟ್ ವಿಚಾರಕ್ಕೆ ಅಷ್ಟೇ ನಾನು ಸೀಮಿತವಾಗುತ್ತೇನೆ. ಆ ರೀತಿ ಕೊಟ್ಟಿತು. ಈಗ ನಮ್ಮಲ್ಲಿ 25-7-91 ರಲ್ಲಿ ಶ್ರೀಮಾನ್ ಬಂಗಾರಪ್ಪನವರು ಬಂದು ಸುಗ್ರೀವಾಜ್ಞೆಯನ್ನು ತಂದರು. ನಮ್ಮ ನೀರಾವರಿ ಬಗ್ಗೆ ರಕ್ಷಣೆ ಈಗ ಅವರು ಸುಗ್ರೀವಾಜ್ಞೆ ತಂದಿದ್ದು ಸುಪ್ರೀಂ ಕೋರ್ಟ್ ಏನಾದರೂ ಹೇಳಲಿ, ರಾಜ್ಯಂಗದತ್ತವಾಗಿ ನಮಗೆ ಇರುವ ಹಕ್ಕನ್ನು ಚಲಾಯಿಸಿ ನಾವು ತಂದಿದ್ದೇವೆ ಎಂದು ಇವತ್ತು ಅದೇ ನನ್ನ ವಾದ. ಏಕೆಂದರೆ ಸುಪ್ರೀಂ ಕೋರ್ಟು ಕನ್‌ವೀನಿಯೆಂಟ್ ಆಗಿ ತೀರ್ಮಾನಗಳನ್ನು ಕೊಡುತ್ತಿದೆ ಎಂದು ನಮಗೆ ಅರಿವಾಗಿರುವುದರಿಂದ ಅವರು ಕೊಟ್ಟಿರುವುದು ಕರೆಕ್ಟ್ ಎನ್ನುವ ತೀರ್ಮಾನಕ್ಕೆ ನಾವು ಬರುವುದಕ್ಕೇ ಆಗುವುದಿಲ್ಲ. ನಮಗೆ ನಮ್ಮ ಮಿತಿಯೊಳಗೆ ರಾಜ್ಯಂಗದತ್ತವಾಗಿ ಇರುವ ಅಧಿಕಾರವನ್ನು ಉಪಯೋಗಿಸಿ ಆ ಸುಗ್ರೀವಾಜ್ಞೆಯನ್ನು ಅವತ್ತು ತರಲಾಯಿತು. ಪ್ರೆಸಿಡೆಂಟ್ ಏನು ಮಾಡಿದರು ? ಬಾರಿ ಆತುರ ಕೇಂದ್ರಸರ್ಕಾರಕ್ಕೆ. ಎಲ್ಲಿ ತಮಿಳುನಾಡಿನವರು ಬೇಜಾರು ಮಾಡಿಕೊಳ್ಳುತ್ತಾರೋ ? ಆತುರಾತುರವಾಗಿ ಕಾಯುತ್ತಿರುತ್ತಾರೆ ಅವರಿಗೆ ಸಹಾಯ ಮಾಡುವುದಕ್ಕೆ. ಏನು ಮಾಡಿದರು ಪ್ರೆಸಿಡೆಂಟರು. 27-7-91 ಅಡ್ವೈಸ್ ಕೇಳುತ್ತಾರೆ ಸುಪ್ರೀಂಕೋರ್ಟ್‌ಗೆ. ಏನು ಅಡ್ವೈಸ್ ಕೇಳುವುದು ಅವರು ಎಂದರೆ : Legality of the Tribunal's Interim Order ನಮ್ಮ ಹಳ್ಳಿ ಕಡೆ ಒಂದು ಗಾದೆ ಹೇಳುತ್ತಾರೆ. ''ಕಳ್ಳರಮ್ಮನ ಖಣಿ ಕೇಳಿದರೆ ಹಳ್ಳಗುಂಟ ದಾರಿ.'' ಎಂದು ಹೇಳಿದಳಂತೆ ಅವಳು. ಏಕೆಂದರೆ ಮಗನೇ ಕಳ್ಳತನ ಮಾಡಿರುವಾಗ ಮಗ ಹೋದ ದಾರಿಯನ್ನು ಹೇಳುತ್ತಾಳೆಯೇ ? ಮಗನೇ ಕಳ್ಳ. ಅವನನ್ನು ಒಳಗೆ ಕೂರಿಸಿಕೊಂಡು ಆ ಕಡೆಗೆ ಹೋದ ಎಂದು ಹಳ್ಳವನ್ನು ತೋರಿಸುವುದು. ಸುಪ್ರೀಂ ಕೋರ್ಟ್‌ನವರು ಇಂಟಿರಮ್ ಆರ್ಡರನ್ನು ಕೊಡಿ ಎಂದು ಹೇಳಿ ಆರ್ಡರ್ ಮಾಡಿದ ಮೇಲೆ ಅವರನ್ನೇ ಒಪೀನಿಯನ್ ಕೇಳುತ್ತಾರೆ ಪ್ರೆಸಿಡೆಂಟರು. ಇನ್ನೊಂದು Legality of the Karnataka Ordinance. Whether the Interim Order could be notified by the Government of Karnataka ? ಇದು 27-7-91 ಕ್ಕೆ ಕೊಟ್ಟರೆ ಎಷ್ಟು ಚುರುಕಾಗಿ ಕೆಲಸ ಮಾಡುತ್ತರೆ ಸುಪ್ರೀಂ ಕೋರ್ಟ್‌ನವರು. ನನಗೆ ಬಹಳ ಸಂತೋಷ, ಎಲ್ಲಾ ಕೇಸುಗಳಲ್ಲಿ ಈ ರೀತಿ ಕೆಲಸಮಾಡಿದರೆ ಇನ್ನೂ ಸಂತೋಷಪಡುವೆ.

12.50 ಪಿ.ಎಂ.

ಮೂರು ತಿಂಗಳಿಗೆ ಇನ್ನೂ ಐದು ದಿನ ಇತ್ತು. ಅಂದರೆ 22.11.91ರಂದು ಅವರು ಏನು ಹೇಳುತ್ತಾರೆ ಟ್ರಿಬ್ಯೂನಲ್ ಇಂಟೀರಮ್ ಆರ್ಡರ್ ಮಾಡಿರುವುದು ಸರಿ. ಇಂಟಿರಿಮ್ ಅರ್ಡ್‌ರ್ ನೀವು ನೋಟಿಫೈ ಮಾಡಿರತಕ್ಕದ್ದು, ಕರ್ನಾಟಕದಲ್ಲಿ ಅರ್ಡಿನೆನ್ಸ್ ಮಾಡಿರತಕ್ಕದ್ದು ಸರಿಯಿಲ್ಲ. ಅವರಿಗೆ ಹಕ್ಕೇ ಇಲ್ಲ ಮಾಡುವುದಕ್ಕೆ. It is not within their competence. ಎಂದು ಹೇಳಿ ಹೇಳಿದರು. ಈಗ It is unconstitutional ಎಂದು ಹೇಳಿದರು ಇರಲಿ. ಕರ್ನಾಟಕದ ಕೇಸ್‌ಗಳ ಬಗ್ಗೆ ಸುಪ್ರೀಂಕೋರ್ಟಿಗೆ ಏನು ಕಳಕಳಿ ಇದೆ ಎಂದು ನಾವು ಹೇಳಬೇಕಲ್ಲ. ನೋಡಿ ಬಚಾವತ್ ಟ್ರಿಬ್ಯೂನಲ್ ಆರ್ಡರ್‌ನ್ನು 1973ನೆಯ ಇಸವಿಯ ಕೊನೆಯ ಭಾಗದಲ್ಲಿ ಕೊಟ್ಟರು. 1974ರಲ್ಲಿ ನಾವು ಅದನ್ನು ಪ್ರಶ್ನೆ ಮಾಡಿ ಸುಪ್ರೀಂ ಕೋರ್ಟಿಗೆ ಅಪ್ಲಿಕೇಶನ್ ಹಾಕಿದೆವು. ಅವರೇನು ಮಾಡಿದರು ಎಂದರೆ ಆರಗ್ಯುಮೆಂಟ್ ಕೇಳಲಿಲ್ಲ. ನಮಗೆ ಜುರಿಸ್‌ಡಿಕ್ಷನ್ ಇಲ್ಲ. "There is bar of jurisdiction as per the Inter-state River Dispute Act. We cannot entertain any application about the dispute pertaining to the water. ನೀವು ವಾಪಸ್ ತೆಗೆದುಕೊಳ್ಳದೇ ಹೋದರೆ ಡಿಸ್‌ಮಿಸ್ ಮಾಡುತ್ತೇವೆಂದು ಹೇಳಿದರು; 1983ರಲ್ಲಿ ಆಯಿತು, ನಾವು ವಾಪಸ್ ತೆಗೆದುಕೊಂಡೆವು. ಆಮೇಲೆ ಈಗ ಏನಾಯಿತು? 29.7.91, 27.7.91ಕ್ಕೆ ಪ್ರೆಸಿಡೆಂಟರು ರೆಫರ್ ಮಾಡುತ್ತಾರೆ. ಕರ್ನಾಟಕ ಸರ್ಕಾರ ಏನು ಮಾಡಿತು ಒಂದು ಒರಿಜಿನಲ್ ಸೂಟನ್ನು ಸುಪ್ರೀಂ ಕೋರ್ಟಿನಲ್ಲಿ ಅಂದರೆ ಆರ್ಟಿಕಲ್ 131 ಪ್ರಕಾರ 29.7.91ರಲ್ಲಿ ಹಾಕಿತು. ಬಂಗಾರಪ್ಪನವರು ಮರೆತರೋ ನೆನಪಿಸಿಕೊಳ್ಳುವರೋ ಗೊತ್ತಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಅವರನ್ನು ನೆನಪು ಮಾಡಿಕೊಳ್ಳುವುದಕ್ಕೆ ಬಿಡುತ್ತಿಲ್ಲ. ಇರಲಿ, ಆಮೇಲೆ ಡಿ.ಬಿ. ಚಂದ್ರೇಗೌಡರು, ನಾಣಯ್ಯನವರು ಎಲ್ಲಿ ಹೋದರು ಗೊತ್ತಾಗಲಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರುಗಳು ಸೇರಿ ಒಂದು ಸ್ಪೆಷಲ್ ಲೀವ್ ಪಿಟಿಷನ್ ಅನ್ನು ಸುಪ್ರೀಂ ಕೋರ್ಟಿನಲ್ಲಿ ಹಾಕಿದ್ದಾರೆ. ಇದೇ ವಿಚಾರಕ್ಕೆ ಸ್ಪೆಷಲ್ ಲೀವ್ ಪಿಟಿಷನ್ ಅದೂ 1991ರಲ್ಲಿ ನಾನು ಹೈಕೋರ್ಟಿನಲ್ಲಿ ಡಿಸೆಂಬರ್ 1991ರಲ್ಲಿ ಒಂದು ಕೇಸ್ ಹಾಕಿದ್ದೇನೆ. ಅದನ್ನೂ ಟ್ರಾನ್ಸ್‌ಫರ್ ತೆಗೆದುಕೊಂಡರು. ಆಮೇಲೆ ಇನ್ನೂ ಕೆಲವರು ಮೂರು ನಾಲ್ಕು ಕೇಸು ಹಾಕಿದರು ಇವೆಲ್ಲವನ್ನೂ ಸುಪ್ರೀಂ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡರು. ನಾವೇನು ಇದರಲ್ಲಿ ಕೇಳಿದ್ದೇವೆಂದು ಗೊತ್ತಾಗಬೇಕಲ್ಲ. ಈ ಅರ್ಜಿಗಳಲ್ಲಿ ಕರ್ನಾಟಕ ಸರ್ಕಾರದ್ದು ಇರಬಹುದು, ಖಾಸಗಿಯವರ ಅರ್ಜಿ ಇರಬಹುದು. ಡಿ.ಬಿ ಚಂದ್ರೇಗೌಡರು ಇರಬಹುದು, ನಾಣಯ್ಯನವರು ಇರಬಹುದು, ವಾಟಾಳ್ ನಾಗರಾಜ್ ಅವರು ಇರಬಹುದು, ನಂಜೇಗೌಡರು ಇರಬಹುದು. ಸನ್ಮಾನ್ಯ ದೇವೇಗೌಡರು ಕೆಲವು ಅರ್ಜಿ ಹಾಕಿದ್ದರೆಂದು ಕಾಣುತ್ತದೆ ಇರಲಿ. ಅವರೂ ಕೇಸ್ ಹಾಕಿಸಿದ್ದರು. ನಾವು ಏನು ಕೇಳಿದ್ದುದು ಇಷ್ಟು. Interim order dtd. 25.6.91 is without jurisdiction. Hence it is null and void.

ಕರ್ನಾಟಕ ಗವರ್ನಮೆಂಟ್ ಕೇಳಿರುವುದು. Tribunal had no power to order for release of water from reservoir, limiting irrigation to 11.20 lakh acres. Hence set aside the order. ಡಿ.ಬಿ. ಚಂದ್ರೇಗೌಡರು ಎಲ್ಲರೂ ಕೇಳಿದ್ದುದು : To quash the interim order, to declare the agreements of 1892 and 1924 as lapsed by an Act of the State, to declcare that sections 5,6 and 11 of the Inter-state water dispute Act, 1956 are null and void as they confer unfettered, unbriddled, unguided arbitrary powers on the Tribunal. Interim prayer to stay the operation of the Tribunal order ಅದೂ ಆಗಲಿಲ್ಲ. ಇನ್ನೂ ಕೂಡ ಕೊಡುವುದು ಹೋಗಲಿ ಇನ್ನೂ ಹಿಯರಿಂಗ್‌ಗೇ ಬಂದಿಲ್ಲ. 1991ರ ಕೇಸು. ನಾವು 1995ನೆಯ ಇಸವಿಯಲ್ಲಿದ್ದೇವೆ. ಅಂದರೆ ಸುಪ್ರೀಂ ಕೋರ್ಟ್ ನಮ್ಮ ಬಗ್ಗೆ ಏನು ಕಳಕಳಿ ಇಟ್ಟಿದೆ, ತಮಿಳುನಾಡು ರಾಜ್ಯದ ಬಗ್ಗೆ ಎಷ್ಟು ಕಳಕಳಿ ಇಟ್ಟಿದೆ ಎನ್ನತಕ್ಕದ್ದು ಇದರಿಂದ ಅರ್ಥ ಆಗುತ್ತದೆ. The facts will speak. I need not tell. The facts will themselves speak. ಇರಲಿ. ಈ ಟ್ರಿಬ್ಯೂನಲ್ ಆರ್ಡ್‌ರ್ 25.6.1991 ರ ಬಗ್ಗೆ ಸ್ವಲ್ಪ ಮಾತನಾಡಬೇಕಲ್ಲ. ಈಗ ಸುಪ್ರೀಂಕೋರ್ಟಿನವರು ಇನ್ನೊಂದು ಮಾತು ಹೇಳಿದರು. ನಾವು Question of law, ಇಂಟರ್‌ಪ್ರಿಟೇಷನ್ ಇದರ ಬಗ್ಗೆ ಮಾತ್ರ ? ನಾವು ವ್ಯವಹಾರ ಮಾಡುತ್ತೇವೆ ಎಂದು ಹೇಳಿ. ಮೊದಲು ತಮಿಳುನಾಡು ಹಾಕಿದಂತಹ ಅರ್ಜಿಗಳಲ್ಲಿ ಯಾವ ಕ್ವೆಶ್ಚನ್ ಅಫ್ ಲಾ ಇತ್ತೋ ಗೊತ್ತಿಲ್ಲ. ಈಗ ನಾವು ಕೊಟ್ಟಿದ್ದರಲ್ಲಿ ನಾವೇನು ಕೇಳಿದ್ದೇವೆ ? Is it not, in the nature of injunction or prohibitory order ? To attract such an order, what are the provisions of the Constitution or law passed by the Parliament which were violated by Karnataka ? ಯಾವುದಾದರೂ ವಯಲೇಟ್ ಮಾಡಿರಬೇಕಲ್ಲ. Does it help to maintain status quo ? Does the Tribunal have the veto power over the functions of the established Government ? ಇದಕ್ಕೆ ನಾನು ದೊಡ್ಡದಾಗಿ ಹೇಳಬೇಕಾಗುತ್ತದೆ, ನಾನು ಹೇಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ಅದು ಅಪ್ಲಿಕೇಶನ್‌ನಲ್ಲಿ ಇದೆ. Will it not defeat the just expectation of the people of the upper riparian states ? Did the Tribunal consider the extension of irrigation by Tamil Nadu with the connivance and aid of Govenment of India ? ನಾವು ಎತ್ತಿರುವ ಪ್ರಶ್ನೆಗಳು. Did it not commit a fundamental error of ignoring the natural upper riparian right of the people in the

basin ? Did it not violate the fundamental right of the people of the upper riparian states which are enshrined under Article 14 and Article 20 ? Whether in such matters like river disputes ... ನಾನು ಕೇಳುತ್ತೇನೆ. ಇದೆಲ್ಲಾ ಕೇಳಿದೆ. Whether legal interpretation should be tampered with human consideration or not ? Legal interpretations in such matters like river waters where certain areas are not fed by water, where certain areas are fed luxuriously by water ? Should not the legal interpretation to tampered with human considerations ? ಇದು ಇರತಕ್ಕದ್ದು. ಸುಪ್ರೀಂ ಕೋರ್ಟ್ ಸ್ಟಾಂಡ್ ಆಯಿತಲ್ಲ. ನಾವು ರೈಸ್ ಮಾಡಿರತಕ್ಕ ಇಶ್ಯೂಸ್ ಏನು? ಇದಕ್ಕೆ ಕಾನ್‌ಸ್ಟಿಯ್ಯೂಷನಲ್ ಅಂಡ್ ಲೀಗಲ್ ಇಂಪಾರ್ಟೆನ್ಸ್ ಇಲ್ಲವೋ? ಸುಮ್ಮನೆ ಇದ್ದಾರೆ. ನಾಲ್ಕು ವರ್ಷದ ಮೇಲೆ ಆಯಿತು ಸುಪ್ರೀಂ ಕೋರ್ಟ್‌ಗೆ ಹೋಗಿ. ನಮ್ಮ ರಾಜ್ಯ ಸರ್ಕಾರ ಹೋಗಿದೆ. ಹೋಗಲಿ ಎಂದರೆ ನಮ್ಮ ಕೇಸು ಗತಿ ಏನು? ಹಿಯರಿಂಗ್‌ಗೆ ಬಂದಿಲ್ಲ. ರಾಜ್ಯ ಸರ್ಕಾರದ ಕೇಸ್ ಏನಾಯಿತು ಗೊತ್ತಿಲ್ಲ. ಅದನ್ನು ಹೇಳುತ್ತಾರೆ ಇವರು ಎಂದು ನಾನು ನಿರೀಕ್ಷೆ ಮಾಡುತ್ತೇನೆ. ಆಮೇಲೆ ಈ ಟ್ರಿಬ್ಯೂನಲ್ ವಿಚಾರ. ನಾನೂ ಟ್ರಿಬ್ಯೂನಲ್ ಮುಂದೆ ಹೋದೆ. ಈಗ ಅವರು ಒಂದು ಕ್ಲಾರಿಫಿಕೇಟರಿ ಆರ್ಡರ್ ಕೊಟ್ಟರು. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಗವರ್ನಮೆಂಟ್ ಆಫ್ ಇಂಡಿಯಾ 1935ರ ಆ್ಯಕ್ಟ್. ಅದರಲ್ಲಿ ಏನು ಇತ್ತು ಎಂದರೆ, ಆ್ಯಕ್ಟ್‌ನಲ್ಲಿ ಸೆಕ್ಷನ್ 130, ಅದರಲ್ಲಿ ಸಬ್ ಸೆಕ್ಷನ್ ಎರಡು ಇದ್ದಾವೆ. ಸೆಕ್ಷನ್ 131 ಅದರಲ್ಲಿ ಒಂಭತ್ತು ಸಬ್‌ಸೆಕ್ಷನ್ ಇದ್ದಾವೆ. ಸೆಕ್ಷನ್ 132, 133, 1334 ಅಂದರೆ ಸ್ವಲ್ಪ ವ್ಯಾಪಕವಾಗಿಯೇ ಇದೆ. ಒಂದನ್ನು ಮಾತ್ರ ಇಲ್ಲಿ ಹೇಳಬೇಕಾಗುತ್ತದೆ. ಡಿಸ್‌ಪ್ಯೂಟ್ ಬಂದರೆ 'Appoint a Commissions'. ರೆಲವೆಂಟ್ ಮಾತ್ರ ಓದುತ್ತೇನೆ ಕಮೀಷನ್‌ನಲ್ಲಿ ಎಂತಹವರನ್ನು ಮಾಡಬೇಕು ಎಂದು. 'Consisting of such persons having special knowledge and experinece in irrigation, engineering, administration, finance or law.'

ಈಗ ಇದು ವ್ಯಾಪಕವಾಗಿದೆ. ಕಾನ್‌ಸ್ಟಿಟುಯೆಂಟ್ ಅಸೆಂಬ್ಲಿಯಲ್ಲಿ ತಮಿಳುನಾಡಿನವರು ಕೆಲವರು ಇದ್ದರು. ಅಲ್ಲಾಡಿ ಕೃಷ್ಣಸ್ವಾಮಿ ಎಂದು ಬಹಳ ಪ್ರಮುಖರು ಡ್ರಾಫ್ಟಿಂಗ್ ಕಮಿಟಿಯಲ್ಲಿ ನಾಲ್ಕು ಜನ ಇದ್ದರಂತೆ ಅದರಲ್ಲಿ ತಮಿಳುನಾಡಿನ ಅಲ್ಲಾಡಿ ಕೃಷ್ಣಸ್ವಾಮಿಯವರು ಬಹಳ ಪ್ರಮುಖರು ಡಾ: ಬಿ.ಆರ್. ಅಂಬೇಡ್ಕರ್ ಅವರು ಅಧ್ಯಕ್ಷರು. ಇವರೇನು ಮಾಡಿದರು ಅಂದರೆ ಇದನ್ನೆಲ್ಲಾ ಶೂರ್ಪಣಕಿ ಕಥೆ ಮಾಡಿದರು. ಈಗ ಕಾನ್‌ಸ್ಟಿಟ್ಯೂಷನ್ ಬೇಸ್ ಮಾಡಿರುವುದೇ ಗವರ್ನಮೆಂಟ್ ಆಫ್ ಇಂಡಿಯಾ ಆ್ಯಕ್ಟ್ 1935 ಅನ್ನು ಬೇಸ್ ಆಗಿ ಇಟ್ಟುಕೊಂಡು ಅದರ ಮೇಲೆ ಫ್ರೇಂ ಮಾಡಿಕೊಂಡು ಬಂದಿದ್ದಾರೆ. ಈ ವಾಟರ್ ಡಿಸ್‌ಪ್ಯೂಟ್

ಬಂದಾಗ ಏನಾಯಿತು? ಅಂದರೆ ಇವರೆಲ್ಲ ಬೇರೆ ಬೇರೆ ಸ್ಟೇಟ್‌ನವರು, ಡೆಲ್ಟಾ ಸ್ಟೇಟ್‌ನವರು. ಅದು ಎಷ್ಟು ಕಡಿಮೆ ಮಾಡಬೇಕು ಮಾಡಿ ಇವನ್ನೆಲ್ಲಾ ತೆಗೆದು ಇವತ್ತು ಇಂಟರ್‌ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್ ಏನು ಇದೆ ಎಂದರೆ , ಆಕ್ಟ್ ಬಗ್ಗೆ ಆಮೇಲೆ ನಾನು ಬರುತ್ತೇನೆ; ಏಕೆಂದರೆ ಈ ಆ್ಯಕ್ಟ್‌ಗೆ ಬರುವುದಕ್ಕೆ ಮುಂದೆ ಈ ಕ್ಲಾರಿಫಿಕೇಟರಿ ಆರ್ಡರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಆ ಕ್ಲಾರಿಫಿಕೇಟರಿ ಆರ್ಡರ್ ಬಗ್ಗೆ ಕೊಟ್ಟ ಮೇಲೆ ಅವರಿಗೆ ಒಂದು ಅರ್ಜಿ ಕಳಿಸಿದೆ. ನನ್ನನ್ನೂ ಕರೆದರು. ಏನು ಅರ್ಜಿ ಅಂದರೆ ಅರ್ತ್‌ಮೆಟಿಕಲ್ ಎರರ್ಸ್. ಈಗ ಏನಾಯಿತು ಬಿಳಗುಂಡಲು ಮೇಲೆ ಇದೆ. ಬಿಳಗುಂಡಲಿಂದ ಮೆಟ್ಟೂರ್‌ಗೆ ಹೋಗುತ್ತದೆ. 25 ಟಿಎಂಸಿಎಫ್‌ಟಿ ಅಡ್ ಆಗುತ್ತದೆ; ಎಂದರು, ಫ್ಯಾಕ್ಟ್ಸ್. ಅದನ್ನು ಅವರೂ ಒಪ್ಪಿಕೊಳ್ಳುತ್ತಾರೆ, ಅದರೆ ಅವರು ಅಡಾಪ್ಟ್ ಮಾಡಿದಂತಹ ಫಿಗರ್ಸ್ ಹೇಗೆ ಇವೆ ಎಂದರೆ ಸುಮ್ಮನೇ ಹೇಳುತ್ತೇನೆ, ಇವೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಅಂದರೆ ಬಿಳಗುಂಡಲಿಗಿಂತ ಮೆಟ್ಟೂರಿನಲ್ಲಿ ಜಾಸ್ತಿ ಯೀಲ್ಡ್ ಇರಬೇಕು. ಹತ್ತು ವರ್ಷದ ಲೆಕ್ಕ ತೆಗೆದುಕೊಂಡರೆ ; ನೋಡಿ 1980-81. ಬಿಳಗುಂಡಲು 443, ಮಟ್ಟೂರು-394, ಮುಂದಿನ ವರ್ಷ ಬಿಳಗುಂಡಲು 417-403 ಬಿಳಗುಂಡಲು 214, 173, 255 ಬಿಳಗುಂಡಲು, 235 ಮೆಟ್ಟೂರು. ಬಿಡಗೊಂಡ್ಲು 320, ಮೆಟ್ಟೂರು 284, ಹೀಗೆ ಹೋಗುತ್ತದೆ. ಅಂದರೆ, ಸರಾಸರಿ ಹತ್ತು ವರ್ಷಗಳಲ್ಲಿ ಬಿಳಿಗೊಂಡ್ಲು 227, ಮೆಟ್ಟೂರು 205. ಮೆಟ್ಟೂರಿಗೆ ಎಷ್ಟು ಆಗಬೇಕಾಗಿತ್ತೆಂದರೆ, 25ನ್ನು ಸೇರಿಸಿದರೆ 252 ಆಗಬೇಕಾಗಿತ್ತು. ಅದನ್ನು ಬೇಸ್ ಆಗ ಇಟ್ಟುಕೊಂಡು, ಅವರು ಅರ್ಥಮಿಕಲ್ ಎರರ್ಸ್ ಮಾಡಿ ಏನು ಹೇಳುತ್ತಾರೆಂದರೆ, ನಾವು 205 ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಿದ್ದೇವೆ, ಆದರೆ, ವಾಸ್ತವಿಕವಾಗಿ 252 ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಬೇಕಾಗಿತ್ತು ಎಂದರು. ಏಕೆಂದರೆ, ಬಿಳಿಗೊಂಡ್ಲುವನ್ನು ಬೇಸ್ ಮಾಡಿ, ಗ್ರಾಸ್ ಯೀಲ್ಡ್‌ಗೆ ಮೆಟ್ಟೂರನ್ನು ತೆಗೆದುಕೊಂಡು ಇದಕ್ಕೆ 500 ಎಂದು ಇಟ್ಟುಕೊಂಡರು. ಅವರು ಗ್ರಾಸ್ ಯೀಲ್ಡ್‌ಗೆ ಬಿಳಿಗೊಂಡ್ಲುವನ್ನು ಬೇಸ್ ಮಾಡಿದ್ದರೆ, 547 ಆಗುತ್ತಿತ್ತು ನೆಟ್ ಈಲ್ಡ್‌ಗೆ 205 ಆಗುತ್ತಿತ್ತು. ಆಗ ನಾವು ಉಪಯೋಗಿಸುವುದು ಇನ್ನೂ ಜಾಸ್ತಿ ಎಂದು ಬರುವುದು ಅಂದರೆ ಅರ್ಥಮಿಟಿಕಲ್ ಎರರ್ಸ್ ಕಮಿಟ್ ಮಾಡಿದ್ದಾರೆ. ಅದಕ್ಕೇನಾಯಿತು? ನಾನೂ ಸಹ ಟ್ರಿಬ್ಯೂನಲ್ ಮುಂದೆ ಹೋಗಿದ್ದೆ. ನಾವು ಬಹಿಷ್ಕರಿಸಬೇಕೆಂದಿದ್ದರೂ ಅರ್ಥಮಿಟಿಕಲ್ ಎರರ್ಸ್ ಮಾಡಿದ್ದರಲ್ಲ, ಅವರ ಯೋಗ್ಯತೆ ಏನೆಂದು ನೋಡುವುದಕ್ಕೆ ಹೇಗಿದ್ದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ , ಸನ್ಮಾನ್ಯ ಸದಸ್ಯರಾದ ನಂಜೇಗೌಡರು ಬಹಳ ಅಧ್ಯಯನ ಮಾಡಿ, ನಮ್ಮ ಮುಂದೆ ಅನೇಕ ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ. ಆದರೆ, ಈಗಾಗಲೇ ಟ್ರಿಬ್ಯೂನಲ್ ಮುಂದೆ ಈ ಕೇಸ್ ಇದೆ. ಏಕೆಂದರೆ, ಬಾಕಿ ವಿಚಾರ ಅಲ್ಲ, ಕೆಲವು ವಿಚಾರಗಳು ಬಂದಾಗ ನನಗನ್ನಿಸುತ್ತದೆ. ಸ್ವಲ್ಪ ಸಂಯಮ ಉಪಯೋಗಿಸಿಕೊಳ್ಳುವುದು ಒಳ್ಳೆಯದು. ಟ್ರಿಬ್ಯೂನಲ್ ಸದಸ್ಯರಿಗೆ, Tribunal members may continue to be members even to-day. I must tell you that we have been

handling the case very well before the Tribunal. ತಮಗೆ ಗೊತ್ತಿರುವಂತೆ ಒಂದು ಕಾಲವಿತ್ತು. ಆಗ ಟ್ರಿಬ್ಯೂನಲ್ ಮುಂದೆ ಹೋದಾಗ ನಮಗೆ ಭಯ, ಶಂಕೆ ಇತ್ತು, ಈಗ ಆ ಭಯ, ಶಂಕೆ ಹೋಗಿ, we are, I think in a better pedestal than Tamil Nadu. ಆದುದರಿಂದ, ಈ ದೃಷ್ಟಿಯಲ್ಲಿ ಟ್ರಿಬ್ಯುನಲ್ ಸದಸ್ಯರ ಬಗ್ಗೆ ಅಥವಾ ಅವರು ಮಾಡಿದ ವ್ಯಾಖ್ಯಾನದ ಬಗ್ಗೆ ನಾವು ಸಂಯಮ ಉಳಿಸಿಕೊಳ್ಳುವುದೊಳ್ಳೆಯದು. ಏಕೆಂದರೆ, ತಮಗೆ ಗೊತ್ತಿದೆ. After all we are dealing with men. We may be judges. We may be legislators. All said and done, sometimes, we atttack on the sentiments or a person. It may not be that precisely good. ಆದ್ದರಿಂದ ಕಾವೇರಿ ಬಗ್ಗೆ ಇಲ್ಲಿ ವಿಷಯ ಪ್ರಸ್ತಾಪವಾದಾಗ ಅದರ ಬಗ್ಗೆ ಚರ್ಚೆ ಮಾಡುವುದನ್ನು ಒಂದು ಸೀಮಿತವಾದ ಗಡಿಯಲ್ಲೇ ನಿಲ್ಲಿಸುತ್ತೇವೆ. ಈ ಕುರಿತು ಚರ್ಚಿಸಲು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ನಾವು ಯಾವಾಗಲೂ ಕೂಡ ವಿವರವಾದ ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ಇದರ ಬಗ್ಗೆ ತಾವು ಸ್ವಲ್ಪ, you are trying to encroach upon certain areas which may affect our case and try to interfere. That is all.

ಶ್ರೀ ಎಚ್.ಎನ್. ನಂಜೇಗೌಡ : ನಾನು ಏಕೆ ಈ ವಿಷಯ ತೆಗೆದುಕೊಂಡೆನೆಂದರೆ, ವೀರಪ್ಪ ಮೊಯಿಲಿಯವರು ಹೇಳಿದ್ದುದು ಒಳ್ಳೆಯದಾಯಿತು, ನನಗೂ ಗೊತ್ತಿದ. ಇದನ್ನು ಹೇಳಲು ಕಾರಣವಿದೆ. ಇದನ್ನು ನಾನು ಅವರಿಗೂ ಕಳುಹಿಸಿದೆ. ಇದೊಂದು ಪಬ್ಲಿಕ್ ಡಾಕ್ಯುಮೆಂಟ್ ಆಗಿದ್ದು, ಅವರಿಗೆ ಕೊಟ್ಟಿದ್ದಲ್ಲದೆ, ಪತ್ರಿಕೆಗಳಿಗೂ ಬಿಡುಗಡೆ ಮಾಡಿದೆ. ಈ ವಿಷಯವಾಗಿ ನಾನು ಎಲ್ಲಿಯವರೆಗೆ ಹೋದೆನೆಂದರೆ, ಅವರು ಬರೆದಿರುವ ಒಂದು ವಾಕ್ಯವನ್ನು ಹೇಳಬೇಕೆಂದು ಅನ್ನಿಸುತ್ತಿದೆ. ಅವರು ಏನು ಹೇಳುತ್ತಾರೆಂದರೆ, 252 ಟಿಎಂಸಿಯಷ್ಟು ನೀರನ್ನು ಬಿಡಿ ಎಂದು ನಾವು ಹೇಳಬೇಕಾಗಿತ್ತು. ಅದನ್ನು ನಾವು ಹೇಳಿಲ್ಲ. ಏನೋ ರಿಯಾಯಿತಿ ಕೊಟ್ಟಂತೆ 205 ಟಿಎಂಸಿ ನೀರನ್ನು ಬಿಡಿ ಎಂದು ಹೇಳಿದ್ದೇನೆ, ಅಂದರೆ, ಆಗಲೇ ಅವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದಕ್ಕೋಸ್ಕರ ನಾನು ನೀವು ಕ್ಲೋಸ್ ಮೈಂಡ್ ಅಪ್ರೋಚ್ ಇಟ್ಟುಕೊಳ್ಳದೆ, ಓಪನ್ ಮೈಂಡ್ ಇಟ್ಟುಕೊಂಡಿದ್ದೀರಿ ಎಂದು ಬರೆದೆ. ಇಲ್ಲದಿದ್ದರೆ, ನಾವು ಕ್ಲೋಸ್ ಮೈಂಡ್ ಅಪ್ರೋಚ್ ಇಟ್ಟುಕೊಂಡು ತೀರ್ಮಾನ ಮಾಡಿದ್ದೇವೆ, ನಮ್ಮ ಮುಂದೆ ಬನ್ನಿ ಎಂದರೆ ಹಾಗೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ನಾನು ಹೋದಾಗ ಹೇಳಿದೆ. ಬೋನ್‌ಫೈಡ್ಸ್ ಮತ್ತು ಲೋಕಸ್ಟಾಂಡಿ ಬಗ್ಗೆ ನಾನು ಹೇಳಿದೆ. If you wanted to know my locus standi, I think Tribunal hand no business to summon me up to this point. ಆವೊತ್ತು ಕೋ. ಚನ್ನಬಸಪ್ಪ, ಪ್ರೊ: ಬಿ.ಕೆ. ಚಂದ್ರಶೇಖರ ಮತ್ತು ಸುಬ್ಬಾರೆಡ್ಡಿಯವರಿದ್ದರು. ಆ ದಿವಸ ಮಾತುಕತೆ ಸ್ವಲ್ಪ ಬಿರುಸಾಗಿಯೇ ನಡೆಯಿತು. ಅನಂತರ, ನಾನು ಹೇಳಿದೆ: 'Don't feel it is heroic on you part to prepetuate the

arithmetical errors you have committed.' ಆವೊತ್ತು ಈ ಪದ ಉಪಯೋಗಿಸಿದೆ. You please rectify your arithmetical errors. I am here to point out the Arithmetical errors.' ಕೊನೆಗೆ, ಸುಮಾರು ಹೊತ್ತಿನ ತನಕ ವಾದ-ವಿವಾದವೆಲ್ಲಾ ನಡೆಯಿತು. They said Mr. Gowda, we are not questioning your facts.

Mr. Speaker : I am not interrupting you It is very educative. I fully Endorse the Expressions. . . .

ಶ್ರೀ ಎಚ್.ಎನ್.ನಂಜೇಗೌಡ : ನಾನು ಏಕೆ ಹೇಳಿದೆನೆಂದರೆ, ಇದು ನಡೆದದ್ದು ಆಗ ನಮ್ಮ ಅಡ್ವೊಕೇಟ್ ಜನರಲ್‌ರವರೂ ಸಹ ಇದ್ದರು. I know. I am stopping with this one sentence, because I am coming to the government. ಅವರು ಏನು ಹೇಳಿದರು ಎಂದರೆ Mr. Gowda we are not questioning your facts. Let the same facts placed before your Government ಸಾವಿರಾರು ಜನರು ಇಂಡಿವಿಜುಯಲ್ಸ್ ಬಂದರೆ ಅವರು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. That is also their problmes. I can understand their problem. In the very presence of the engineers and the Advocate-General, they told this : "Let your Government place the same facts before us'.ಈ ಅರ್ಥಮೀಟರ್ ಎರರ್ಸ್ ತಿದ್ದುವುದಕ್ಕೆ ಇಲ್ಲಿಯವರೆಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಎಂದು ಗೊತ್ತಾಗಿಲ್ಲ. ಇಷ್ಟನ್ನು ಹೇಳುವುದಕ್ಕೋಸ್ಕರ, ಇದನ್ನು ಹೇಳಿದೆ ಅಷ್ಟೆ. ಈ ವಿಷಯವನ್ನು ಅಲ್ಲಿಗೇ ನಿಲ್ಲಿಸುತ್ತೇನೆ ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಇನ್ನೊಂದು ವಿಷಯವನ್ನು ನಾನು ಹೇಳಲೇಬೇಕು. In the absence of guidelines, ಟ್ರಿಬ್ಯುನಲ್ ತೀರ್ಮಾನ ಹೇಗಾಗಬಹುದೆಂಬುದನ್ನು ಹೇಳುತ್ತಿದ್ದೇನೆ. ಈ ಟ್ರಿಬ್ಯೂನಲ್ ಬಗ್ಗೆ ನಾನು ಹೇಳುತ್ತಿಲ್ಲ. ಇದು ಹೇಗಿದೆಯೆಂದರೆ, ಕುರುಡನ ಕೈಗೆ ದೊಣ್ಣೆ ಕೊಟ್ಟಂತೆ ಆತನಿಗೆ ಕಣ್ಣು ಕಾಣುವುದಿಲ್ಲ. ಈಗ ನ್ಯಾಯಾಧೀಶರಿಗೆ ಕಣ್ಣು ಯಾವುದು? For a Tribunal or a Court, it is guiding them to adjudicate matters. ಉದಾಹರಣೆ, ಈಗ ಸೆಕ್ಷನ್ ಕೋರ್ಟ್ ಇದೆ. To constitute a Sessions Court, it is different. But the factors guiding the Sessions Courts are different. ಕೋರ್ಟ್ ಕಾನ್ಸ್‌ಟಿಟ್ಯೂಟ್ ಮಾಡುವುದು ಬೇರೆ. ಈಗ ಖೂನಿಯಾದರೆ, ರಾಬರಿ ಆದರೆ ಯಾವ ರೀತಿ ಟ್ರೈ ಮಾಡಬೇಕು? ಎಂಬುದಕ್ಕೆ ಪೀಪಲ್ ಕೋಡ್, ಕ್ರಿಮಿನಲ್ ಪ್ರೊಸಿಜರ್ ಕೋಡ್ ಇದೆ. The Sessions Court may try in any case. But it has got guidelines, set of guidelines in the form of Indian Penal Code, Criminal Procedure Code. What is the law guiding this Tribunal? ಅದಕ್ಕೋಸ್ಕರ, ನಾನು ಕುರುಡನ ಕೈಗೆ

ದೊಣ್ಣೆ ಕೊಟ್ಟ ಹಾಗೆ ಎಂದು ಹೇಳಿದ್ದುದು. ಈಗ Inter-state river water dispiutes Act - That is the law providing for the establishment of a Tribunal. There are no guidelines. ಏನಾಗಿದೆ? ಯಾವುದೇ ಗೈಡ್‌ಲೈನ್ಸ್ ಇಲ್ಲ. ಗೈಡ್‌ಲೈನ್ಸ್ ಎಂದರೆ ಏನು? ನ್ಯಾಶನಲ್ ವಾಟರ್ ಪಾಲಿಸಿ ಇದರ ಬಗ್ಗೆ ಮುಂದೆ ಹೇಳುತ್ತೇನೆ. ಕಾವೇರಿ ಟ್ರಿಬ್ಯೂನಲ್ ಮಾಡಿದಾಗ ನಾವು ಹೊಸದಾಗಿ ಇದರ ಬಗ್ಗೆ ಹೇಳಿತ್ತಿದ್ದೇವೋ ಗುಲಾಟಿ ಕಮೀಷನ್ ರಚನೆಯಾದಾಗ 28ನೇ ಜುಲೈ 1961ರಲ್ಲಿ ಆ ಕಮೀಷನ್ ಮುಂದ ಮೆಮೊರ್ಯಾಂಡಮ್ ಕೊಟ್ಟಂಥ ಕಾಲದಲ್ಲಿ ಅಂದಿನ ಪಿಡಬ್ಲ್ಯೂಡಿ ಸಚಿವರಾಗಿದ್ದ ಹೆಚ್.ಕೆ. ವೀರಣ್ಣಗೌಡರು ಬರೆಯುತ್ತಾರೆ ಏನೆಂದರೆ,. . . ಆ ಪತ್ರ ದೊಡ್ಡದಾಗಿರುವುದರಿಂದ ನಾನು ಎಲ್ಲವನ್ನೂ ಹೇಳುವುದಿಲ್ಲ. ಅವರು ಔಟ್‌ಸೈಡ್ ಬೇಸಿನ್ ತೆಗೆದುಕೊಂಡು ಹೋಗಲು ಬರೆದಿದ್ದಾರೆ, ವಿಚಾರಗಳು ಬಹಳ ಚೆನ್ನಾಗಿದೆ, ಇದಕ್ಕೆ ಸಂಬಂಧಪಟ್ಟಂತೆ. ಮಾತ್ರ ಹೇಳುತ್ತೇನೆ.

It is essential that a National Water Policy is evolved without loss of time. A National water Policy which spells out an equitable and fair distribution of river water among the States assuring prosperirty for as large a number of people as possible and removing or atleast minimising the regional imbalances. . . . . . ನಾನು ಪ್ರಾರಂಭದಲ್ಲೇ ಹೇಳಿದೆ. ಈ ರೀತಿಯಾಗಿ ಬರೆದುಕೊಂಡು ಹೋಗಿದ್ದಾರೆ. ಎಲ್ಲವನ್ನು ಓದುವುದಕ್ಕೆ ಹೋಗುವುದಿಲ್ಲ. ಅಂದರೆ 1961ನೇ ಇಸವಿಯಲ್ಲೇ ಅಧಿಕೃತವಾಗಿ ನ್ಯಾಶನಲ್ ವಾಟರ್ ಪಾಲಿಸಿ ಮಾಡಿ ಎಂದು ಹೇಳುವುದಕ್ಕೆ ನಾವು ಪ್ರಾರಂಭ ಮಾಡಿದ್ದೇವೆ, ಇನ್ನೂ ಮಾಡಲಿಲ್ಲ. ಕೊನೆಗೆ ನಾವು 62 ಜನ ಲೋಕಸಭಾ ಸದಸ್ಯರುಗಳು ಕೂಡಿಕೊಂಡು ಒಂದು ಮೆಮೊರ್ಯಾಂಡಮ್ ಕೊಟ್ಟು, 1987ರಲ್ಲಿ ಲೋಕಸಭೆಯಲ್ಲಿ ನ್ಯಾಶನಲ್ ವಾಟರ್ ಪಾಲಿಸಿ ಪೇಪರ್‌ವೊಂದನ್ನು ಇಡಲಾಯಿತು. ಇದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಗೈಡ್‌ಲೈನ್ಸ್ ಎಂದು ಹೇಳುವುದಕ್ಕೆ ಏನೇನು ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಇಲ್ಲಿ 15 ಪೇಜ್‌ಗಳಿದ್ದು ಅದರಲ್ಲಿ ಅವರು ಒಂದೇ ಹೇಳಿರುವುದು. ಮಾನ್ಯ ನಾಗೇಗೌಡರ ಹತ್ತಿರ ಇದರ ಪ್ರತಿ ಇದ್ದರೆ ನೋಡಬಹುದು. ಇದರ ಪೇಜ್ ನಂಬರ್ 9ರಲ್ಲಿ ಏನಿದೆ ಎಂದರೆ ಪ್ರಿಯಾರಿಟಿ ಫ್ಯಾರ್ ವಾಟರ್ ಆಲೋಕೇಷನ್ ಬಗ್ಗೆ ಮಾತ್ರ ಹೇಳಿದ್ದಾರೆ. ಅದೇನೆಂದರೆ ಕುಡಿಯುವ ನೀರಿಗೆ ಮೊದಲ ಆದ್ಯತೆ, ಅನಂತರ ನೀರಾವರಿ, ಹೈಡ್ರೋ ಪವರ್‌ಗೆ, ನ್ಯಾವಿಗೇಷನ್‌ಗೆ ಕೊನೆಯಲ್ಲಿ ಕೈಗಾರಿಕೆಗೆ ಎಂದು ಮಾತ್ರ ಹೇಳಿದ್ದಾರೆ. ಅದರಲ್ಲಿ ಇದಷ್ಟನ್ನು ಬಿಟ್ಟರೆ ಇನ್ನೇನೂ ಮಾರ್ಗ ಸೂಚಿಗಳಿಲ್ಲ. ಜುಲೈ 13, 1992ರಂದು ವಿ.ಸಿ.ಶುಕ್ಲದವರು ಒಂದು ಪತ್ರವನ್ನು ಬರೆದರು. ಅವರು ಏನು ಬರೆಯುತ್ತಾರೆಂದರೆ, ಕೇಂದ್ರದವರು ಒಂದು ಪೆಸೆನ್‌ಸುಲ ಸ್ಕಿಮ್‌ನ್ನು ಮಾಡಿ ಸರ್‌ಪ್ಲಸ್ ಬೇಸಿಸ್‌ನಿಂದ ನೀರನ್ನು ತರಬೇಕು. ಮಹಾನದಿಯಿಂದ ಮುನ್ನೂರು ಟಿಎಂಸಿ, ಗೋದಾವರಿಯಿಂದ ಮುನ್ನೂರು ಟಿಎಂಸಿ ಎಂದರೆ 600 ಟಿಎಂಸಿ ನೀರನ್ನು ಕೃಷ್ಣಾ ಅನ್ ಟೂ ಕಾವೇರಿ ತರಬೇಕೆಂದು. ಅದನ್ನು

ಒಪ್ಪಲು ಆಗುವುದಿಲ್ಲವೆಂದು ಒರಿಸ್ಸಾ ಮತ್ತು ಆಂಧ್ರದ ಮುಖ್ಯಮಂತ್ರಿಗಳು ಹೇಳಲು ಪ್ರಾರಂಭಿಸಿದರು, ಆ ರೀತಿ ಅವರುಗಳು ಹೇಳಿದಂಥ ಕಾಲದಲ್ಲಿ ನೀವು ರಾಷ್ಟ್ರೀಯ ನೀರಿನ ಪಾಲಿಸಿಯನ್ನು ಮಾಡಲಿಲ್ಲ, ಈ ಕಾರಣಕ್ಕಾಗಿ ಇವರು ಇದಕ್ಕೆ ತಡೆಯನ್ನುಂಟು ಮಾಡುತ್ತಿದ್ದಾರೆ What happened to peninsula. Are you going to divert from Mahanadhi and Godavari to Krishna and Cauvery. Let us know our fate. ಇದಕ್ಕೆ ಅವರು ಏನೇನು ಬರೆದಿದ್ದಾರೆ. ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಆಗಿಂದಾಗ್ಗೆ ನಾವು ಮಾಡುತ್ತಿದ್ದೇವೆ ಆದರೂ ಸಹ ಇದನ್ನು ಮಾಡುವುದಕ್ಕಾಗಿಲ್ಲ. ರಾಷ್ಟ್ರೀಯ ನೀರಿನ ಪಾಲಿಸಿಯಲ್ಲಿ ಏನು ಇರಬೇಕು ಎಂಬ ಬಗ್ಗೆ ಹೇಳುತ್ತಿದ್ದೇನೆ. ನನ್ನ ಅನಿಸಿಕೆಯ ಪ್ರಕಾರ ಇದರಲ್ಲಿ 14 ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ. ಇದನ್ನೇ ನಾವು ಮೊದಲಿನಿಂದಲೂ, ಪದೇ ಪದೇ ಕೇಳುತ್ತಿದ್ದೇವೆ, ಮತ್ತೊಮ್ಮೆ ಈ ಸಭೆಯ ಮೂಲಕ ಹೇಳಬಯಸುತ್ತೇನೆ. ಇದನ್ನು ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮಾತಿಗೆ ಹೇಳಬೇಕಾಗುತ್ತದೆ. ನೀವು ರಾಷ್ಟ್ರೀಯ ನೀರಿನ ಪಾಲಿಸಿಯನ್ನು ಮಾಡಿ, rewrite law accordingly, set out guidelines for the Tribunal then we participate. ಎನ್ನುವ ಮಾತನ್ನು ರಾಜ್ಯ ಸರ್ಕಾರ ಕೇಂದ್ರಕ್ಕೆ ಹೇಳಬೇಕಾಗುತ್ತದೆ. ಈ ರಾಷ್ಟ್ರೀಯ ಪಾಲಿಸಿಯಲ್ಲಿ ಏನಿರಬೇಕೆಂದರೆ, ಮೊದಲನೆಯದಾಗಿ ಡಿಪೆಂಡಬಲಿಟಿ. ಹಾಗೆಂದರೆ ಏನು? ಡಿಪೆಂಡಬಲಿಟಿ ಎಂದರೆ ಏನು? ಈಗ ಟ್ರಿಬ್ಯೂನಲ್ ಇರುತ್ತದೆ, ಅವರು ನೀರನ್ನು ಹಂಚಬೇಕಾಗುತ್ತದೆ, ಆದರೆ ಎಷ್ಟು ನೀರನ್ನು ಹಂಚಬೇಕು ಎನ್ನತಕ್ಕದ್ದು ಬರುತ್ತದೆ, ಇದರ ಬಗ್ಗೆ ಗೈಡ್‌ಲೈನ್ ಎಲ್ಲಿದೆ? 50 ಪರ್‌ಸೆಂಟ್ ಎಂದರೆ ಒಂದು ಆಗುತ್ತದೆ 75 ಪರ್‌ಸೆಂಟ್ ಡಿಪೆಂಡಬಲಿಟಿ ಎಂದರೆ ಮತ್ತೊಂದು ಆಗುತ್ತದೆ 80 ಪರ್‌ಸೆಂಟ್ ಡಿಪೆಂಡಬಲಿಟಿ ಎಂದರೆ ಇನ್ನೊಂದು ಆಗುತ್ತದೆ, ಎಷ್ಟು ನೀರಿದೆ ಎಂಬುದು ಗೊತ್ತಾಗಬೇಕಾಗುತ್ತದೆ, ಎಷ್ಟು ನೀರಿದೆ ಎಂಬುದು ಗೊತ್ತಾಗಬೇಕಾದರೆ ಡಿಪೆಂಡಬಲಿಟಿ ಏನು? ಇದರ ಬಗ್ಗೆ ಮಾರ್ಗಸೂಚಿ ಇಲ್ಲ, ಇದರ ಬಗ್ಗೆ ಕೇಂದ್ರಸರ್ಕಾರ ತೀರ್ಮಾನ ಮಾಡಿಲ್ಲ, ಆದ್ದರಿಂದ ನಾನು ಹೇಳಿದ್ದು ಟ್ರಿಬ್ಯುನಲ್‌ಗೆ ಕುರುಡನ ಕೈಯಲ್ಲಿ ದೊಣ್ಣೆಯನ್ನು ಕೊಟ್ಟಂತಾಗಿದೆ. ಮಾರ್ಗಸೂಚಿ ಇಲ್ಲ, ಅವರು ಕಾವೇರಿಯಲ್ಲಿ 740 ಟಿಎಂಸಿ ನೀರನ್ನು ಕೊಡಬೇಕೋ ಅಥವಾ ಇನ್ನೂ ಜಾಸ್ತಿ ಹಂಚಬೇಕೋ, ಇನ್ನೂ ಕಡಿಮೆ ಹಂಚಬೇಕೋ What is the quantity, how they are going to arrive at a decision about quantity there are no guidelines. . Secondcaly, Priority of the land for irrigation with the basin and outside basin ಮನೆಯಲ್ಲಿಯೇ ಊಟ ಮಾಡದೆ ಜನರು ಸಾಯುತ್ತಿರುವಾಗ ಹೊರಗಡೆಯವರಿಗೆ ದಾನವನ್ನು ಮಾಡುವುದು ಹೇಗೆ? ಬೇಸಿನ್ ಲ್ಯಾಂಡ್ಸ್‌ಗೇ ನೀರು ಇಲ್ಲದಿರತಕ್ಕ ಸಮಯದಲ್ಲಿ ಹೊರಗಡೆ ಬೇಸಿನ್ ನೀರನ್ನು ಕೊಡುವುದೆ? can we allow outside basin areas to have water when the basin areas are suffering for want of water? ಯಾವ ಸಂದರ್ಭದಲ್ಲಿ ಬೇರೆಯವರಿಗೆ

ನೀರನ್ನು ಕೊಡಬೇಕೇ ಬೇಡವೆ ಎನ್ನುವ ಬಗ್ಗೆ ಮಾರ್ಗಸೂಚಿ ಇಲ್ಲ When there are drought prone areas inside basin. ಅದಕ್ಕೆ ನೀರನ್ನು ಕೊಡದೆ ಬರವಿಲ್ಲದಿರುವ ಕಡೆಗೆ ನೀರನ್ನು ಕೊಡುವುದೇ? ಅದಕ್ಕೆ ಪ್ರಯಾರಿಟಿ ನಿಗದಿಯಾಗಬೇಕಲ್ಲವೆ? ಅದೂ ಇಲ್ಲ. ನಾಲ್ಕನೆಯ ಅಂತ, ಡ್ಯೂಟಿ, ಹೇಗೆಂದರೆ ಎಷ್ಟು ನೀರು ಬೇಕು ಎಂದು. ಉದಾಹರಣೆ ಮನುಷ್ಯ ಎಷ್ಟು ಊಟವನ್ನು ಮಾಡಬೇಕು, ಬಂಗಾರಪ್ಪನವರ ಮನೆಯಲ್ಲಿ ಒಂದು ಕೆಜಿ ಅಕ್ಕಿಯನ್ನು ಊಟ ಮಾಡುತ್ತೇವೆ. ಡ್ಯೂಟಿ ಎಂದರೆ ಒಂದು ಟಿಎಂಸಿ ನೀರಿನಲ್ಲಿ ಎಷ್ಟು ಎಕರೆ ನೀರಾವರಿಯಾಗಬೇಕು? ನಮ್ಮ ಹೇಮಾವತಿಯಲ್ಲಿ ಒಂದು ಟಿಎಂಸಿ ನೀರಿಗೆ 10-11 ಸಾವಿರ ಎಕರೆ ನೀರಾವರಿಯಾಗಬೇಕೆಂದು ಯೋಜನೆ ಮಾಡಿದ್ದೇವೆ. 6 ಲಕ್ಷದ 80 ಸಾವಿರ ಎಕರೆಗೆ ನೀರಾವರಿ ಮಾಡಬೇಕಾದರೆ ಆ ರೀತಿ ಲೆಕ್ಕ ಮಾಡಿದ್ದೇವೆ. ಮಂಡ್ಯದಲ್ಲಿ ಒಂದು ಟಿಎಂಸಿ ಗೆ 6 ಸಾವಿರ ಎಕರೆ ಸಹ ಬೆಳೆಯುವುದಿಲ್ಲ, ದುಂದು ಮಾಡುತ್ತಾರೆ. ಒಂದು ಟಿಎಂಸಿ ನೀರು ಬರ ಪ್ರದೇಶದಲ್ಲಿ ಎಷ್ಟು ಎಕರೆಗೆ ಆಗುತ್ತದೆ ಪ್ಲೈನ್ ಲ್ಯಾಂಡ್‌ನಲ್ಲಿ ಎಷ್ಟು ಎಕರೆಯಾಗುತ್ತದೆ, ಬೆಟ್ಟ ಪ್ರದೇಶದಲ್ಲಿ ಎಷ್ಟು ಎಕರೆಗೆ ಆಗುತ್ತದೆ, ಮಳೆ ಜಾಸ್ತಿಯಾಗುವ ಕಡೆಗಳಲ್ಲಿ ಎಷ್ಟು ಎಕರೆಗೆ ಆಗುತ್ತದೆ ಎಂಬುದಕ್ಕೆ ಡ್ಯೂಟಿ ಎಂದು ಕರೆಯುತ್ತೇವೆ. ಈಗ ಟ್ರಿಬ್ಯುನಲ್‌ನವರು ಎಷ್ಟು ನೀರನ್ನು ಕೊಡುವ ಬಗ್ಗೆ ಅಳತೆ ಮಾಡಬೇಕಾಗುತ್ತದೆ, ಅವರು ಯಾವ ಅಳತೆಯ ಆಧಾರದ ಮೇಲೆ ಮಾಡುತ್ತಾರೆ? ತಮಿಳುನಾಡಿನವರು ನಮ್ಮ ಬರಗಾಲಪೀಡಿತ ಪ್ರದೇಶ 28 ಲಕ್ಷದ 80 ಸಾವಿರ ಎಕರೆ ಎಂದು ಹೇಳಿದ್ದಾರೆ, ಇಷ್ಟು ಎಕರೆಗೆ ಎಷ್ಟು ನೀರನ್ನು ಕೊಡಬೇಕು ಎಂಬ ಬಗ್ಗೆ ಅಳತೆ ಗೊತ್ತಾಗಬೇಕಲ್ಲವೆ? ಪುನಃ ಇದು ಪಾಲಿಸಿ ಮ್ಯಾಟರ್‌ನ ಪ್ರಶ್ನೆಗೆ ಒಳಪಡುತ್ತದೆ. ಇದರ ಬಗ್ಗೆ ಗೈಡ್‌ಲೈನ್ ಇಲ್ಲ, ಇದನ್ನು ಮಾಡಬೇಕು. ಇದನ್ನೂ ಸಹ ಕೇಂದ್ರ ಸರ್ಕಾರದವರು ಮಾಡಬೇಕಾಗುತ್ತದೆ. ಅನಂತರ ಸರ್‌ಪ್ಲಸ್ ಬೇಸಿನ್ ಯಾವುದು, ಡೆಫಿಟ್ ಬೇಸಿನ್ ಯಾವುದು ಎಂಬ ಬಗ್ಗೆ ವಿಭಾಗ ಮಾಡುವವರಾರು? ಇದನ್ನು ಡಿಕ್ಲೇರ್ ಮಾಡುವವರು ಯಾರು? ಅನಂತರ Whether weightage to be give for equatable distribution or prior apporopriation, ಏಕೆಂದರೆ Prior approriation means perpatuating and exploting ಈಗ ತುಂಗಭದ್ರಾ ಬಗ್ಗೆ ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಇದರ ಬಗ್ಗೆ ಅವರಿಗೇನು ತೊಂದರೆಯಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ಏನು ಪರಿಹಾರವನ್ನು ಒದಗಿಸುತ್ತಾರೆ ಎಂಬುದನ್ನು ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇನ್ನು ಪ್ರಿಯರ್ ಅಪ್ರೋಪ್ರಿಯೇಷನ್ ಬಗ್ಗೆ, ಇದರಲ್ಲಿ ಇಕ್ವಿಟಬಲ್ ಡಿಸ್ಟ್ರಿಬ್ಯೂಷನ್ ಅಥವಾ ಪ್ರಿಯರ್ ಅಪ್ರೋಪ್ರಿಯೇಷನ್ ಯಾವುದಕ್ಕೆ ಪ್ರಿಯಾರಿಟಿ ಕೊಡಬೇಕು, ಏಕೆಂದರೆ ಇಂಟರ್‌ನ್ಯಾಷನಲ್ ಲಾ ಅಸೋಸಿಯೇಷನ್‌ನವರು ಆರು ಕಾನ್‌ಫರೆನ್ಸ್‌ಗಳನ್ನು ಮಾಡಿದ್ದಾರೆ. ಅವರು ಇಕ್ವಿಟಬಲ್ ಡಿಸ್ಟ್ರಿಬ್ಯೂಷನ್‌ಗೇ ಅವಕಾಶ ಕೊಡಬೇಕೆಂದು ತೀರ್ಮಾನಕ್ಕೆ ಬಂದುಬಿಟ್ಟಿದ್ದಾರೆ. ಆದರೆ ನಮ್ಮಲ್ಲಿ ಆದರ ಬಗ್ಗೆ ಯಾವ ಪಾಲಿಸಿಯೂ ಸಹ ಆಗಿಲ್ಲ,

ಇದರ ಬಗ್ಗೆ ಕೇಂದ್ರ ಸರ್ಕಾರ ಏನನ್ನು ಹೇಳಿಲ್ಲ. ಈ ಕೋರ್ಟ್‌ಗಳನ್ನು ನಾನು ಪರಿಗಣಿಸಬೇಕೆಂದು ಹೇಳಿಲ್ಲ, ಏಕೆಂದರೆ ಕೃಷ್ಣದಲ್ಲಿ ನಾವು ಟ್ರಿಬ್ಯುನಲ್ ಕೆಲಸ ನೋಡಿದ್ದೇವೆ. ಪ್ರಿಯರ್ ಅಪ್ರೋಸಿಯೇಷನ್ ಎಂದು ಹೇಳಿ they are perpetuating and exploiting ಶೋಷಣೆ ಮಾಡಿದ್ದಾರೆ. ಇದು ಯಾವ ರೀತಿ ಎಂದರೆ, ಮೈನರ್ ಮಕ್ಕಳಿದ್ದರು, ಆಸ್ತಿಯನ್ನು ನೋಡಿಕೊಳ್ಳಲು ನಾನಿದ್ದೆ, ಕೇಳುವವರ್ಯಾರು ಇರಲಿಲ್ಲ ಲೂಟಿ ಮಾಡುತ್ತಿದ್ದೆ ಈಗ ಅವರು ಮೆಜಾರಿಟಿಗೆ ಬಂದಿದ್ದರೂ ಸಹ ಈಗಲೂ ಮಾಡುತ್ತೇನೆಂದ್ಧಾಗಿದೆ. ಆದ್ದರಿಂದ ಅದರ ಬಗ್ಗೆ ಪಾಲಿಸಿ ಮ್ಯಾಟರ್ ಆಗಬೇಕಾಗುತ್ತದೆ.. ಅನಂತರ Priority whether for irrigation or diversion for power generation ಈಗ ಕೊಯ್ನದ ನೀರು ಬಿಜಾಪುರಕ್ಕೆ ಬರುವುದು ಪವರ್ ಉತ್ಪಾದನೆಗೋಸ್ಕರ ಡೈವರ್ಟ್ ಮಾಡಿದ್ದರಿಂದ ಸಮುದ್ರಕ್ಕೆ ಹೋಯಿತು. ಕೇರಳಾದವರು ಪವರ್ ಜನರೇಷನ್‌ಗೆ ನೀರನ್ನು ಡೈವರ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅದಕ್ಕೊಂದು ಪಾಲಿಸಿ ಮ್ಯಾಟರ್ ಆಗಬೇಕಾಗುತ್ತದೆ. ಅನಂತರ ಐತಿಹಾಸಿಕ ಕಾರಣಗಳು, ಕೆಲವು ಜನರು ನೂರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಕೃಷ್ಣಾದ ಬೇಸಿನ್‌ನ ಬಗ್ಗೆಯೇ ತೆಗೆದುಕೊಳ್ಳುವುದಾದರೆ, ಅಲ್ಲಿರುವ ಜನರು ಸರ್ಕಾರಕ್ಕೆ ಕಂದಾಯವನ್ನು ಕೊಡುವುದಿಲ್ಲವೆ? ಕೊಟ್ಟಿದ್ದಾರೆ. ನಮಗೆ ಇಂಟಿಗ್ರೇಷನ್ ಆಗುವವರೆಗೆ ಬೊಂಬಾಯಿ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ, ಮೈನರ್ ಇರಿಗೇಷನ್ ಬಿಟ್ಟರೆ 18 ಟಿಎಂಸಿ ನೀರು ಉಪಯೋಗವಾಗುತ್ತಿತ್ತು. ಅವರು ಅಲ್ಲಿ ವಾಸ ಮಾಡಿದ್ದೇ ತಪ್ಪೇ? ಅವರೇನು ಅಪರಾಧ ಮಾಡಿದ್ದಾರೆ? They were subjected to humilation, they were exploited, they were neglected. ಅದನ್ನು ಗಣನೆಗೆ ತೆಗೆದುಕೊಳ್ಳಬೇಕೋ ಬೇಡವೋ? ಇದರ ಬಗ್ಗೆ ಸಹ ಪಾಲಿಸಿ ಮ್ಯಾಟರ್ ಆಗಬೇಕಲ್ಲವೆ? ನಾನು ಮೊದಲೆ ಹೇಳಿದ್ದೇನೆ ಕನ್ನಡ ನಾಡು ಹರಿದು ಹಂಚಿಕೊಂಡಂತೆ ಯಾವ ನಾಡು ಸಹ ಹರಿದು ಹಂಚಿಹೋಗಿಲ್ಲ ಇನ್ನು 9ನೇ ಅಂಶವೇನೆಂದರೆ, ರಾಜ್ಯದಲ್ಲಿಯೇ ನೀರಾವರಿಯಾಗುವುದಿದೆ, ಉದಾಹರಣೆಗೆ ಬೆಳಗಾಂ ಜಿಲ್ಲೆ ಮಲಪ್ರಭಾ ಪ್ರದೇಶಕ್ಕೆ ಬರುತ್ತದೆ. ಮಳೆ ಜಾಸ್ತಿಯಾಗುತ್ತದೆ.

1.20 ಪಿಎಂ

ಕೆಲವು ಕಡೆ ಬರುತ್ತಾ, ಬರುತ್ತಾ ಗುಲ್ಬರ್ಗಾ, ರಾಯಚೂರು ಬಂದರೆ ಬರ ಹೆಚ್ಚಾಗುತ್ತದೆ. ಬರ ಪ್ರದೇಶಗಳಿಗೆ ಆದ್ಯತೆ ಕೊಡಬೇಕೋ ಬೇಡವೋ in a given valley itself, in a given State itself ಇದು ಒಂದು ತೀರ್ಮಾನ ಆಗಬೇಕಲ್ಲ. ಗೈಡ್‌ಲೈನ್ಸ್ ಬೇಕು ಏಕೆಂದರೆ ಅವರು ಪ್ರಾಜೆಕ್ಟ್ ವೈಸ್ ವಾಟರ್ ಅಲೋಕೇಟ್ ಮಾಡುತ್ತಾನೆ. ಟ್ರಿಬ್ಯುನಲ್‌ನವರು ಅಂತ ಬೇರೆ ಬೇರೆ ರಾಜ್ಯಕ್ಕೆ ಏನು ಮಾಡುವುದಿಲ್ಲ. ರಾಜ್ಯದಲ್ಲಿರತಕ್ಕಂತಹ ಪ್ರಾಜೆಕ್ಟ್‌ಗೆ ಅಲೋಕೇಟ್ ಮಾಡುತ್ತಾರೆ. ಇದು ಒಂದು ಪಾಲಿಸಿ ಮ್ಯಾಟರ್ ಅದು ತೀರ್ಮಾನ ಆಗಬೇಕು. ಆಮೇಲೆ ಬರ ಪೀಡಿತ ಪ್ರದೇಶಗಳಿಗೆ Whether Government of India should fully

fund or partially fund. . ಸುಮ್ಮನೆ ಕ್ಲಿಯರೆನ್ಸ್ ಕೊಟ್ಟು ಮನೆಯಲ್ಲಿ ಕುಳಿತುಕೊಳ್ಳುವುದು. ಕೇಂದ್ರ ಸರ್ಕಾರ ಏನು ಮಾಡಬೇಕು ಎಂದು ಗೊತ್ತಾಗಬೇಕು. ಅದು ಒಂದು ಇದೆ. ಡಿಮಾಂಡ್ ಭಾರಿ ದಿನಗಳಿಂದ ಇದೆ. Government of India should fully fund the project which are located in the drought prone areas. . ಇದು ಇದೆ ಇದು ಆಗಬೇಕು. ಅವರು ಹೇಳಬೇಕು. ಕೇಂದ್ರ ಸರ್ಕಾರದ ಕರ್ತವ್ಯಗಳು ಏನು ಜವಾಬ್ದಾರಿಗಳು ಏನು ಎನ್ನತಕ್ಕಂಥಾದ್ದನ್ನು ಅದು ಈಗ ಈ ನ್ಯಾಷನಲ್ ವಾಟರ್ ಪಾಲಿಸಿಯಲ್ಲಿ ಆಗಬೇಕಾಗುತ್ತದೆ. ಒಂದು ಬೇಸಿನ್‌ನಿಂದ ಇನ್ನೊಂದು ಬೇಸಿನ್‌ಗೆ ನೀರು ತರತಕ್ಕಂತಹ ಕಾಲದಲ್ಲಿ ಕೇಂದ್ರ ಸರ್ಕಾರದ ಕರ್ತವ್ಯ ಏನು? Transmission of water from surplus basin to deficit basin. We are having two deficit basins, one is Krishna another is Cauvery. . ಅದು ತೀರ್ಮಾನ ಆಗಬೇಕು. ಅದು ಭಾರೀ ನಮಗೆ ಅಗತ್ಯ They are the guiding factors for any Tribunal. . ಇದಾದ ಮೇಲೆ ನಮಗೆ ಒಂದೇ ಬೆಳೆಗೆ ನೀರಿಲ್ಲ. ಬೇಕೆ ರಾಜ್ಯದಲ್ಲಿ ಅಥವಾ ಒಂದೇ ರಾಜ್ಯದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಒಂದೇ ಬೆಳೆಗೆ ನೀರಿಲ್ಲದೆ ಇರತಕ್ಕಂತಹ ಕಾಲದಲ್ಲಿ ಕೆಲವು ಕಡೆ ಎರಡು ಬೆಳೆಗೆ ನೀರು ಕೊಡುವುದು, ತಮಿಳುನಾಡಿನಲ್ಲಿ ಇದೆ ಬೆಳೆ ಬೆಳೆಯುತ್ತಾರೆ. ಅವರು ಉದ್ದಕ್ಕೂ ಕೊಡತಕ್ಕಂಥದ್ದು ಕ್ರಾಪ್ಸ್ ಏರಿಯಾ ಎಂದು ಕೊಡುತ್ತಾರೆ ಹೊರತು, ಸೋನ್ ಏರಿಯಾ ಎಷ್ಟು ಎಂದು ಹೇಳುವುದಿಲ್ಲ Actually achkat may be 15 lakhs area. . ಕ್ರಾಪ್ಸ್ ಏರಿಯಾ, ಕ್ರಾಪ್ಸ್ ಏರಿಯಾ ಅಂತ ಹೇಳಿ ಎರಡು ಬೆಳೆ ಸೇರಿಸಿಕೊಂಡು ಕ್ರಾಪ್ಸ್ ಏರಿಯಾ ಎಂದು ಹೇಳುತ್ತಿರುತ್ತಾರೆ. When water is not available for single crop in Karnataka should we allow double crop, Trible crops in other state? ಎರಡು ಬೆಳೆಗೆ ಮೂರು ಬೆಳೆಗೆ ನೀರು ಕೊಡುವುದು ಕೂಡ ರೆಕಗನೈಸ್ ಮಾಡಬೇಕೇ ಬೇಡವೇ? ಜನರಲ್ ಪಾಲಿಸಿ ಆಗಬೇಕು. ಇದು ಕೂಡ ಪಾಲಿಸಿ ಮ್ಯಾಟರ್ ಆಗುತ್ತದೆ. While computing water for allocation should ground water be taken into account or not. . ನಮ್ಮಲ್ಲಿ ಗ್ರೌಂಡ್ ವಾಟರ್ ಇಲ್ಲದೆ ಇರಬಹುದು. Another Cauvery is flowing in Tamilnadu ಗ್ರೌಂಡ್ ವಾಟರ್ ಕಂಪ್ಯೂಟ್ ಮಾಡಬೇಕೋ ಬೇಡವೋ ಮಾಡಿದರೆ ಎಷ್ಟು ಪರ್ಸೆಂಟ್ ಮಾಡಬೇಕು, ಯಾವ ರೀತಿ ಮಾಡಬೇಕು, ಇವೆಲ್ಲ ಪಾಲಿಸಿ ಮ್ಯಾಟರ್‌ಗಳು ಇದನ್ನು ತೀರ್ಮಾನ ಮಾಡಬೇಕು. ಏಕೆಂದರೆ ಅವರು ಅಲೋಕೇಟ್ ಮಾಡುವಾಗ ಇವೆಲ್ಲಾ ಸಹಾಯವಾಗುತ್ತದೆ ಕ್ರಾಪಿಂಗ್ ಪ್ಯಾಟ್ರನ್ ಇದು ಬಹುಶಃ ಮುಂದುವರೆದ ರಾಷ್ಟ್ರಗಳಲ್ಲಿ ಕ್ರಾಪಿಂಗ್ ಪ್ಯಾಟ್ರನ್ ಬಹಳ ಸ್ಟ್ರಿಕ್ಟಾಗಿ ಎನ್‌ಫೋರ್ಸ್ ಮಾಡುತ್ತಾರೆ. ಕ್ರಾಪಿಂಗ್ ಪ್ಯಾಟ್ರನ್ ಯಾವ ರೀತಿ ಆಗಬೇಕು ಇದು ಒಂದು ನ್ಯಾಷನಲ್ ಪಾಲಿಸಿ ಆಗಬೇಕು. ಇಷ್ಟನ್ನು ಮಾಡಬೇಕಾಗುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡತಕ್ಕಂಥಾದ್ದು ಈಗ ಟ್ರಿಬ್ಯುನಲ್ ಕಂಡರೆ ನನಗೆ ಅಗೌರವ ಇದೆ ಎಂದು ಅಲ್ಲ

ಟ್ರಿಬ್ಯುನಲ್ ಒಂದು ಪಕ್ಷ ಅನುಕೂಲ ಆಗುವ ತೀರ್ಮಾನ ಅಂತ ಕೊಟ್ಟರು ಅಂತ ನಾವು ಇಟ್ಟುಕೊಳ್ಳೋಣ. ಕೊಟ್ಟರು ಅವರು ತವರು ಮನೆಯಾದ ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆ. ಅದರಲ್ಲಿ ಏನೂ ಅನುಮಾನ ಇಲ್ಲ. ನಾನು ಇದು ನಿಮಗೆ ಅನುಕೂಲ ಆಗತಕ್ಕಂತಹ ಪರಿಸ್ಥಿತಿ ಬರುವುದಿಲ್ಲ. ನಾನು ಹೇಳತಕ್ಕಂಥದ್ದು, let them understand the feelings of the people. I am expressing the feelings of the people ನನ್ನ ಅನಿಸಿಕೆ ಸರ್ಕಾರ ಒಪ್ಪುತ್ತದೆಯೋ, ಬಿಡುತ್ತದೆಯೋ ಅದು ಜನರಿಗೆ ಬಿಟ್ಟಿದ್ದುದು ನಾನು ಏನು ಹೇಳುತ್ತೇನೆ They should ask the Government of India to defer the proceedings of the Tribunal till they communicate the National Water Policy. . . ನಾನು ಹೇಳಿದಂತಹ ಪಾಯಿಂಟ್ಸ್ ಎಲ್ಲಾ ಹಾಕಿ and they should rewrite the law relating to the water dispute. ಅಮೆಂಡ್ ಆದರೂ ಮಾಡಲಿ, ಆರ್ಡರ್ ಆದರೂ ಮಾಡಲಿ, ಫ್ರೆಶ್ ಲಾ ಆದರೂ ಮಾಡಲಿ, ಇಂಟರೆಸ್ಟ್ ಇರುವಾಗ ಡಿಸ್‌ಪ್ಯೂಟ್ ಆಗುತ್ತದೆ. only for the constitution of the Tribunal without guidelines for the deliberations of the tribunal Proceedings they should re-write, ಅಲ್ಲಿಯವರೆಗೆ ನೀವು ದಯಮಾಡಿ ರೆಫರ್ ಮಾಡಿ, ಇಲ್ಲದೆ ಹೋದರೆ ಬಾಯ್‌ಕಟ್ ಮಾಡಬೇಕಾಗುತ್ತದೆ ಎನ್ನತಕ್ಕ ಎಚ್ಚರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಏಕೆ ಹೇಳುತ್ತೇನೆ ಅಂದರೆ ಇನ್ನು ಒಂದು ಇಲ್ಲಿ fate of the tribunal's decision ಏನಾಗಿದೆ ಎನ್ನತಕ್ಕಂಥಾದ್ದು ಇರಿಗೇಷನ್ ಕಮಿಷನ್‌ನಲ್ಲಿ ಇನ್ನು ಒಂದು ಮಾತು ಇದೆ, ವಾಲ್ಯೂಮ್ ಒಂದು ಪೇಜ್ 347 ಪುಟ 15 ಉಪ ಪುಟ 29 ಅವರು ಏನು ಹೇಳುತ್ತಾರೆ ಅಂದರೆ, Judical decision in the case of Inter-state disputes tend to become starting point for fresh litigations.. ಈಗ ಅದೇ ಆಗಿರುವುದು. ಇಂಡಸ್ ವ್ಯಾಲೀ ಕಮಿಷನ್‌ಗೆ ಏನು ಬಿ.ಎನ್, ರಾಯ್ ಅವರ ಅಧ್ಯಕ್ಷತೆಯಲ್ಲಿ 41ನೇ ಇಸವಿಯಲ್ಲಿ ಮಾಡಿದರು, ಕೊನೆಗೆ ಅವರು ಡೆಲಿಬರೇಟ್ ಮಾಡಿ, ಮಾಡಿ ನೆಹರೂವರು ಪ್ರಧಾನ ಮಂತ್ರಿಯಾಗುವವರೆಗೆ ಬಂತು. ಕೊನೆಗೆ ರಾಜಿ ಆಗಬೇಕಾಯಿತು. ಪ್ರಪಂಚ ಬ್ಯಾಂಕ್‌ನವರು ಸಹಾಯ ಮಾಡಿ, ಅವರ ಮಧ್ಯಸ್ತಿಕೆಯಲ್ಲಿ ಇದು ಒಂದು ರಾಜಿ ಆಯಿತು. It was not a order or a decision of the tribunal. ರವಿಬಿಯಾಸ್; ನರ್ಮದಾ. ನರ್ಮದಾ ಬಗ್ಗೆ ಕೂಡ ಶ್ರೀಮತಿ ಗಾಂಧಿಯವರ ಮೀಡಿಯೇಟರ್ ಆಗಿ ಅವರು ಏನು ಒಪ್ಪಿಕೊಂಡರು ಇಲ್ಲಿ ಅದನ್ನು ಕೊಟ್ಟು ಅದನ್ನು ಟ್ರಿಬ್ಯುನಲ್ ಕೈಯಲ್ಲಿ ಹೇಳಿಸಬೇಕಾಯಿತು. ಈಗ because there are no laws to guide the proceedings of the tribunal. ಈಗ ಬಚಾವತ್ ಟ್ರಿಬ್ಯುನಲ್, ಗೈಡ್‌ಲೈನ್ಸ್ ಇಲ್ಲದೆ ಹೋದರೆ ಏನಾಗುತ್ತದೆ ಎಂದರೆ ಅವರೇ ಒಂದು ತೀರ್ಮಾನ ಕೊಟ್ಟುಬಿಟ್ಟರು. I don't want this Government to perpetuate myth. ಎರಡು ಸಾವಿರ ಇಸವಿಯೊಳಗೆ ಮುಗಿಸುತ್ತೇವೆ. It

is myth. Let us not live in fool's paradise. Let us face facts. ರಿಯಾಲಿಟಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇನ್ನು ರವೀಬಿಯಾಸ್ ಯಾವುವು ಎಲ್ಲಿ ಪಾರ್ಟಿಗಳು ಒಪ್ಪಲಿಲ್ಲ ಅನೇಕ ಉದಾಹರಣೆಗಳು ಕೊಡಬಹುದು. ಅಟ್ರಿಬ್ಯುನಲ್ ರಿಸಿಕ್ಷನ್ ತರುವುದು ಕೂಡ ಅನುಷ್ಠಾನಕ್ಕೆ ಎಲ್ಲೂ ಬಂದಿಲ್ಲ. ಇಲ್ಲಿವರೆಗೆ ಬಂದಿರತಕ್ಕಂತಹ ಉದಾಹರಣೆಗಳು ಇಲ್ಲ. ಇಲ್ಲಿಯಾಗಲಿ, ಅಮೇರಿಕಾದಲ್ಲಾಗಲಿ ಬೇರೆ ಕಡೆಯಾಗಲಿ Where parties have agreed as conciliation and compromise, ಒಪ್ಪಿಕೊಂಡಿದ್ದನ್ನು ಏನು ತೀರ್ಮಾನ ಕೊಟ್ಟಿದ್ದರೋ, ಅವು ಮಾತ್ರ ಇಡೀ ಪ್ರಪಂಚದಲ್ಲಿ ಅನುಷ್ಠಾನದಲ್ಲಿದೆ ಹೊರತು ಪಾರ್ಟಿಗಳು ಒಪ್ಪಿಗೆ ಇಲ್ಲದೆ ಕೊಟ್ಟಂತಹ ತೀರ್ಮಾನ ಒಂದೂ ಕೂಡ ಅನುಷ್ಠಾನಕ್ಕೆ ಬಂದಿಲ್ಲ. It is a futile exercise on the part of the tribunal to deliberate and give decision in the absence of any guidelines. ಅದು ಯಾವುವುನ್ನೂ ಯಾರೂ ಅನುಷ್ಠಾನಕ್ಕೆ ತರುತ್ತಿಲ್ಲ. ಪಂಜಾಬ್‌ನವರು, ಹರಿಯಾಣ ಪಂಜಾಬ್ ಜಗಳ ಆದಾಗಲೆಲ್ಲಾ ಆಗಿಂದಾಗ್ಗೆ ಅಗ್ರೀಮೆಂಟ್ ಆಗುತ್ತಿದೆ. ಜಾಸ್ತಿ ಕೊಡುತ್ತಲೇ ಇರುತ್ತಾರೆ. ಅವರು ಬಲಿಷ್ಠರು, ಅವರು ಹೊತ್ತಿಕೊಂಡು ಹೋಗುತ್ತಾ ಇರುತ್ತಾರೆ. ಇದೆಲ್ಲಾ ಆಗುತ್ತಿದೆ. ಟ್ರಿಬ್ಯುನಲ್‌ಗಳು ಏನಾಗಿದೆ ಏಕೆ ಹೇಳಿದೆ ಅಂದರೆ This shows failure of the tribunal system about Inter-state River Water Dispute. ನರ್ಮದಾ ಇರಲಿ, ರಬಿಯಾಸ್ ಇರಲಿ, ಮತ್ತೊಂದು ಇರಲಿ, better system would be ನನ್ನ ಲೆಕ್ಕದಲ್ಲಿ ಕನ್‌ಸಿಲಿಯೇಶನ್ ಆರ್ಬಿಟ್ರೇಷನ್ . . . .

ಅಧ್ಯಕ್ಷರು : ಬಂಗಾರಪ್ಪನವರು ಏನು ಹೇಳುತ್ತಾರೆ ಅಂದರೆ ಬೆಟರ್ ಸಿಸ್ಟಮ್ can be taken up after lunch .

ಶ್ರೀ ಹೆಚ್.ಎನ್.ನಂಜೇಗೌಡ : ಅಧ್ಯಕ್ಷರೆ ಒಂದು ಅಂತೂ ನನಗೆ, I am convinced that there is sufficient water to meet the reasonable requirement of the farmers in the entire basin whether it is Tamil Nadu or Karnataka or Kerala it should be reasonble requirement, not unreasonable requirement.. ಅಷ್ಟಕ್ಕೂ ಅಂತೂ ನೀರು ಇದೆ. ಅದು ಏನು ಮಾಡಬೇಕು ರೀಸನಬಲ್ ರಿಕ್ವೈರ್‌ಮೆಂಟ್ ಸಾಟಿಸ್‌ಫೈ ಮಾಡಬೇಕಾದರೆ? ನೋಡಿ, ಈ ಮಧ್ಯಂತರ ಆಜ್ಞೆ ಬಂದಮೇಲೆ ಮದ್ರಾಸಿನಲ್ಲಿ ಕೆಲವರು ಪ್ರಮುಖರು ಸೇರಿಕೊಂಡು ಯಾವ ರೀತಿ ಮಾಡಿದರು. ಇದು ಎಲ್ಲರಿಗೂ I think if not for the Governments which are run by political parties, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಪಕ್ಷದವರು ಈ ಸಮಸ್ಯೆ ವಿಚಾರದಲ್ಲಿ ಒಮ್ಮತವಾಗಿರತಕ್ಕಂಥಾದ್ದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಆದರೆ ತಮಿಳುನಾಡಿನಲ್ಲಿ ಅದು ಆಗುವುದೇ ಇಲ್ಲ. ಪೊಲಿಟಿಕಲ್‌ಲೈನ್ ಮಾಡಿಯೇ ಮಾಡುತ್ತಾರೆ. If not for people who

are running the Government, the ordinary farmers and the people experts, they are for negotiated and permanent solution in the form of negotiations. ಈಗ ಏನು ಮಾಡಬೇಕು, ಇದು ಎಷ್ಟು ಆಗಬೇಕು ಎಂದು ಕಾಣುತ್ತದೆ. ಈ ನೀರು ಈಗ ವೇಸ್ಟ್ ಆಗುತ್ತದೆ. ನಾನು ಈಗ ಇಲ್ಲಿ ಎರಡು ಮೂರು ಪಾಯಿಂಟ್‌ಗಳನ್ನು ಹೇಳಬೇಕಾಗುತ್ತದೆ. ಈಗ ನಮ್ಮಲ್ಲಿ ರಿಸರ್ವಾಯರ್ ಆಗಿವೆ. ಈಗ ಕೆಳಗಡೆ ಕೆ.ಆರ್.ಎಸ್ ಬಿಟ್ಟರೆ ಮೆಟ್ಟೂರು, ಮೆಟ್ಟೂರು ಬಿಟ್ಟರೆ ಯಾವುದೂ ಇಲ್ಲ. ಸಮುದ್ರಕ್ಕೆ ಇಎನ್‌ಡಿಪಿ ವರದಿ ಹೇಳುತ್ತದೆ. ವರ್ಷ ಪ್ರತಿ ಅವರ ಕಾವೇರಿದು 36 ಬ್ರಾಂಚ್‌ಸ್ ಇದೆ. ಅದರಲ್ಲಿ 28 ಬ್ರಾಂಚ್ ಮೇಲೆ ಗೇಜಿಂಗ್ ಇಟ್ಟಿದ್ದಾರೆ. ಈ 28 ಬ್ರಾಂಚ್ ಮೇಲೆ ಹೋಗತಕ್ಕಂಥಾದ್ದು ಇಎನ್‌ಡಿಪಿ ರಿಪೋರ್ಟ್ ಪ್ರಕಾರ, ಹತ್ತಿರ ಹತ್ತಿರ 172 ಟಿಎಂಸಿಎಫ್‌ಟಿ ಎಷ್ಟು ನೀರು ಸಮುದ್ರಕ್ಕೆ ಹೋಗುತ್ತದೆ. ಉಳಿದಿದ್ದೆಲ್ಲಾ ಸೇರಿಕೊಂಡರೆ ಅದು 200 ಟಿಎಂಸಿಎಫ್‌ಟಿ, ಏಕೆ ಈ ವೇಸ್ಟೇಜ್ ತಪ್ಪಿಸುವುದಕ್ಕೆ ಆಗುವುದಿಲ್ಲವೇ? ಅದಕ್ಕೆ ಏನು ಆಗಬೇಕು, ಮೆಟ್ಟೂರು ಮೇಲೆ ಕೆಆರ್‌ಎಸ್ ಕೆಳಗೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡಬೇಕಾಗುತ್ತದೆ. ಇದನ್ನು ಎಕ್ಸ್‌ಪರ್ಟ್ಸ್ ತಮಿಳುನಾಡಿಲ್ಲಿ those who are involved in the Government they willl agree ಇದು ಅವಶ್ಯಕತೆ ಇದೆ ಎಂದು. ಸರ್‌ಪ್ಲಸ್ ವಾಟರನ್ನು ಸ್ಟೋರೇಜ್ ಮಾಡಿಕೊಂಡು ಡಿಫಿಸಿಟ್ ಇದ್ದಾಗ ಬಿಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆಗ ನಾವು ರೂಲ್ಸ್ ಅಂಡ್ ರೆಗ್ಯುಲೇಷನ್ ಪ್ರಕಾರ ಕೊಡಬೇಕಾದದ್ದು ಇಲ್ಲ. ನಂತರ ಮೆಟ್ಟೂರಿನಲ್ಲಿ ಗ್ರಾಂಡ್ ಅಣೆಕಟ್ಟು ಮೆಟ್ಟೂರಿನಿಂದ 180 ಅಥವಾ 220 ಕಿಲೋಮೀಟರ್ ಆಗುತ್ತದೆ ಎಂದು ಹೇಳುತ್ತಾರೆ. ಅವರು ಫೋನ್ ಮಾಡಿದರೆ ಇಲ್ಲಿ ನೀರು ಬಿಡುತ್ತಾರೆ, ಆ ನೀರು ಹೋಗುವುದಕ್ಕೆ ಎರಡು ದಿನ ಹಿಡಿಯುತ್ತದೆ. ಅಷ್ಟರೊಳಗೆ ಮಳೆಯಾಯಿತು ಎಂದರೆ ನೀರು ಹೆಚ್ಚಾಯಿತು ಎಂದು ಸಮುದ್ರಕ್ಕೆ ಬಿಡುತ್ತಾರೆ. ಅಲ್ಲಿ ಕನ್ಸರ್‌ವೆನ್ಸಿ ರಿಸರ್ವಾಯರ್ ಸರಿಯಿಲ್ಲ. ಅಪ್‌ಸ್ಟ್ರೀಮ್ ಆಫ್ ಅಪ್ಪರ್ ಅಣೆಕಟ್ಟು ಆದು ಮುಳುಗಡೆಯಾಗುತ್ತದೆ. ಪ್ಲೈನ್ ಲ್ಯಾಂಡ್‌ನ್ನು ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲವೇ? ಎರಡು ಟಿಎಂಸಿಎಫ್‌ಟಿ, ಮೂರು ಟಿಎಂಸಿಎಫ್‌ಟಿ, ಕೆಪಾಸಿಟಿಯದ್ದು ಕನ್ಸ್‌ರ್‌ವೆನ್ಸಿ ರಿಸರ್ವಾಯರ್ ಎಂದು ಮಾಡಬೇಕಾಗುತ್ತದೆ. ನಂತರ ಅಮರಾವತಿ, ಭವಾನಿ ಕಟ್ಟಲಾಗಿದೆ. Before the confluence of these rivers, small conservancy reserviors, ಅಲ್ಲೂ ಸಹ ಚಿಕ್ಕ ಕನ್ಸರ್‌ವೆನ್ಸಿ ರಿಸರ್ವಾಯರ್ ಮಾಡಬೇಕಾಗುತ್ತದೆ. ಇಷ್ಟು ಮಾಡಿದರೆ ಈ ನೀರನ್ನು ಉಳಿಸಿಕೊಳುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ವಿಚಾರವಂತರು ಒಪ್ಪಿಕೊಳ್ಳುತ್ತಾರೆ. ಹಾಗೂ ಎಲ್ಲರೂ ಒಪ್ಪಿಕೊಳ್ಳುವಂತಹ ವಿಚಾರ. ನಾನು ಈ ವಿಚಾರದಲ್ಲಿ ಇಷ್ಟನ್ನು ಹೇಳಿ, ಕೇಂದ್ರ ಸರ್ಕಾರವನ್ನು ಈಗಲಾದರೂ ಒವರ್ ಡ್ಯೂ ಆಗಿರುವ ನ್ಯಾಷನಲ್ ವಾಟರ್ ಪಾಲಿಸಿ ಆಗಬೇಕು ಎಂದು ವಿನಂತಿಸುತ್ತೇನೆ. The National water policy is over due and the law should be rewritten, untill then the Government of Karnataka should force the Government of India to refer the proceedings of the present Tribinal.

ಅಧ್ಯಕ್ಷರು : ಈಗ ಸದನವನ್ನು ಒಂದು ಗಂಡೆ ಕಾಲ ಮುಂದೂಡಲಾಗಿದೆ.

(ಸದನವು 1 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಒಂದು ಗಂಟೆಯ ನಂತರ ಸೇರಲು ನಿಶ್ಚಯಿಸಿತು)

(ಸಭೆ ಮತ್ತೆ ಮಧ್ಯಾಹ್ನ 2-50 ಗಂಟೆಗೆ ಸೇರಿತು.)

(ಉಪಾಧ್ಯಕ್ಷರಾದ ಶ್ರೀ ಎಂ.ಎಸ್.ಪಾಟೀಲರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್ಎನ್.ನಂಜೇಗೌಡ : ಸನ್ಮಾನ್ಯ ಉಪಾಧ್ಯಕ್ಷರೆ, ಈ ಕಾವೇರಿ ಬಗ್ಗೆ ಮಾತನಾಡತಕ್ಕಂತಹ ಕಾಲದಲ್ಲಿ ಒಂದೆರಡು ವಾಕ್ಯವನ್ನು ನಾನು ಉಪಯೋಗಿಸಿದೆ. ನಮ್ಮ ಹಿರಿಯ ನಾಯಕರಾದಂತಹ ಶ್ರೀ ವೈ.ರಾಮಕೃಷ್ಣ ಅವರು ನನಗಿಂತ ಜಾಸ್ತಿ ಅನುಭವ ಉಳ್ಳವರು, ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದವರು. ರಾಜ್ಯಾಂಗದ ವಿಚಾರಗಳನ್ನು ಹೆಚ್ಚಾಗಿ ಅಧ್ಯಯನ ಮಾಡಿರತಕ್ಕಂಥವರು, ಅವರು ಎರಡು ಸೆಂಟೆನ್ಸ್ ಬಗ್ಗೆ ನನ್ನ ಕಿವಿಯಲ್ಲಿ ಹೇಳಿದರು. ನಾನು ಉಪಯೋಗಿಸಿದಂಥದ್ದು ಒಂದು ಕುರುಡರ ಕೈಯಲ್ಲಿ ದೊಣ್ಣೆ ಕೊಟ್ಟ ಹಾಗೆ ಆಗಿದೆ. ಅದು ನಮ್ಮ ನಾಣ್ಣುಡಿ, ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ ಟ್ರಿಬ್ಯುನಲ್ ಜಡ್ಜಸ್ ಏನು ಇದ್ದಾರೆ ವೈಯಕ್ತಿಕವಾಗಿ ಅವರ ಬಗ್ಗೆ ನನಗೆ ತುಂಬಾ ಗೌರವ ಇದೆ. ಅದರಲ್ಲಿ ಏನು ಅನುಮಾನ ಇಲ್ಲ . ತುಂಬ ಗೌರವವಿದೆ ಇದು ಏನೆಂದರೆ the tribunal suffers from a deficiency by way of guidelines. ಅದು ಇಲ್ಲದೆ ಇರುವುದರಿಂದ ಅವರಿಗೆ ಮಾರ್ಗಸೂಚಿ ಇಲ್ಲವಲ್ಲ ಎಲ್ಲಿ ತಪ್ಪು ಮಾಡಿಯಾರೋ ಎನ್ನತಕ್ಕಂಥ ಒಂದು ಭಾವನೆ, ಆ ದೃಷ್ಟಿಯಲ್ಲಿ ಉಪಯೋಗಿಸಿದೆ. ಅದು ನಿಮಗೆ ಸರಿಯಲ್ಲ ಅಂದರೆ ಸರಿಯಿಲ್ಲ. ಏಕೆಂದರೆ ನಮ್ಮ ಹಿರಿಯರು ಹೇಳಿದ್ದಾರೆ ಅದನ್ನು ಏಕೆಂದರೆ ಈ ಹಂತದ ವ್ಯಕ್ತಿಗಳಿಗೆ ಉಪಯೋಗಿಸಬಾರದು ಎನ್ನತಕ್ಕಂತಹ ಒಂದು ಭಾವ. ಅದನ್ನು ಕೈಬಿಟ್ಟರೂ ಆಗುತ್ತದೆ ಆ ಸೈಂಟೆನ್ಸ್ ಕೈಬಿಡಬಹುದೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇನ್ನು ಬಾಯ್‌ಕಾಟ್, ಬಗ್ಗೆ ಒಂದು ಮಾತು ಹೇಳಿದೆ. ಅದು ಏಕೆ ಹೇಳಿದೆ ಎಂದರೆ ಆಮೇಲೆ ಯೋಚನೆ ಮಾಡಿದೆ ಟ್ರಿಬ್ಯೂಲ್‌ನಲ್ಲಿ ಇಶ್ಯೂಸ್‌ಫ್ರೇಂ ಮಾಡಿದ್ದಾರೆ. ಇದು ನನ್ನ ಕೈಯಲ್ಲಿ ಇರಲಿಲ್ಲ. ಈಗ ನಮ್ಮ ವೈ. ರಾಮಕೃಷ್ಣರವರು ತರಿಸಿಕೊಟ್ಟರು. ಇದು ನೋಡುತ್ತಿದ್ದೆ, 49 ಇಶ್ಯೂಸ್‌ಫ್ರೇಂ ಮಾಡಿದ್ದಾರೆ. ಜೊತೆಗೆ in recent times there is a tendency on the part of the judiciary to legislate, whether it is Supreme Court or High Court or may be some tribunals. I think, tribunals are also in line with this tendency. ಈ ಮೂರನ್ನು ನಾನು ನೋಡಿದೆ. Issue No. 47, on what basis should the available waters be determined?

48) How and on what basis equitable apportionment should made.

49) What directions, if any, should be given for the equitable apportionment for the beneficial use of water of river Cauvery and its tributories'' ಇದು ನಾನು ಏನು ಮಾರ್ಗಸೂಚಿಗಳನ್ನು ರಾಷ್ಟ್ರೀಯ ಜಲ ನೀತಿಗೆ ಮಾಡಬೇಕು ಎಂದು ಇಲ್ಲಿ 15 ಅಂಕಿಗಳನ್ನು ಹೇಳಿದೆ, ಅದನ್ನು ಒಳಗೊಳ್ಳುವಂಥ ಪ್ರಮೇಯ ಇದೆ. ನಾನಾದರೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಾನು ಬೈಕಾಟ್ ಮಾಡಿ ಎಂದರೆ ಅವರು ಮಾಡುವುದಕ್ಕೆ ಬರುವುದಿಲ್ಲ. ಅವರ ಅಭಿಪ್ರಾಯ ಅವರಿಗೆ ಇರುತ್ತದೆ. ಬಹುಶಃ ನಾನು ಅಂದುಕೊಂಡರೆ, ನಾನೇ ಒಂದು ಸ್ವಲ್ಪ ಅಮೆಂಡ್‌ಮೆಂಟ್ ಮಾಡಿಕೊಳ್ಳಬೇಕು ಎಂದು ಅಮೆಂಡ್‌ಮೆಂಟ್ ಏನೆಂದರೆ ಸರ್ಕಾರದವರು ಹೇಗಿದ್ದರೂ ಭಾಗವಹಿಸುತ್ತಾರೆ. ಈ ರಾಷ್ಟ್ರಿಯ ಜಲ ನೀತಿ ಬಗ್ಗೆ ಕೆಲವು ಅಂಶಗಳನ್ನು ಏನೇನು ಒಳಗೊಳ್ಳಬೇಕು ಎಂದು ಹೇಳಿದ್ದೇನೆ. ಅವುಗಳನ್ನು ಅವರೆ ಹೇಳಿದರೆ ಸರಿಯಾಗುತ್ತದೆ. In a way they are trying to legislate. I call this, that they are trying to legislate because there is a tendency on the part of the judiciary and elsewhere also in this country.

ಶ್ರೀ ಹೆಚ್.ಡಿ ದೇವೇಗೌಡ (ಮುಖ್ಯಮಂತ್ರಿಗಳು) : ತಾವು ಕೆಲವು ಪಾಯಿಂಟ್ಸ್ ಏನು ಹೇಳಿದ್ದೀರಿ that can also be taken not of by the Tribinal. There is no question of boycotting the Tribunal.

ಶ್ರೀ ಹೆಚ್.ಎನ್.ನಂಜೇಗೌಡ : ತಾವು ಇರಲಿಲ್ಲ. ನಾನು ಅದನ್ನು ಆಗಲೇ ಹೇಳಿದ್ದೆ. ಆದ್ದರಿಂದ ಸರ್ಕಾರದವರು ನಾನು ಹೇಳಿದಂಥ ಅಂಕಿ ಅಂಶಗಳನ್ನು ಟ್ರಿಬ್ಯುನಲ್ ಗಮನಕ್ಕೆ ತಂದು ಒಂದು ರೀತಿಯಲ್ಲಿ ಅವರೇ ರಾಷ್ಟ್ರೀಯ ಜಲ ನೀತಿಯನ್ನು ಮಾಡಿಕೊಳ್ಳಲಿ, ಬೇರೆ ಹೆಸರಿನಲ್ಲಿ ಕರೆದುಕೊಳ್ಳಬಹುದು if they are incorporating all these thing before they adjudicate on this issue, I think ಅದನ್ನು ಸರ್ಕಾರ ಮಾಡಬೇಕು ಅಂತ ನನ್ನ ಅನಿಸಿಕೆ. ಕಾವೇರಿ ವಿಷಯವನ್ನು ಅಷ್ಟಕ್ಕೆ ನಿಲ್ಲಿಸುತ್ತೇನೆ. ಅಧ್ಯಕ್ಷರೇ, ಇನ್ನು ಕೃಷ್ಣಾ ಜಲಾನಯನ ಪ್ರದೇಶದ ವಿಚಾರಕ್ಕೆ ಬರೋಣ. ಕಾವೇರಿಯದು • ಈ ತರಹದ ಕಥೆಯಾದರೆ ಅದಕ್ಕಿಂತ ದಾರುಣವಾದ ಕಥೆ, ಕೃಷ್ಣಾ ಬಯಲಿನಲ್ಲಿರತಕ್ಕಂಥ ಜನರ ವಿಚಾರಗಳು. ಲೋಕ ಸಭೆಯಲ್ಲಿ ಒಂದು ಸಾರಿ ಏನಾಯಿತು ಎಂದರೆ ಅಯ್ಯಪ್ಪ ರೆಡ್ಡಿ ಎಂದು ತೆಲುಗುದೇಶಂ ನಾಯಕರಿದ್ದರು. ಒಂದು ಸ್ಪೆಷಲ್ ಮೋಷನ್‌ನಲ್ಲಿ ಅದು ಚರ್ಚೆಗೆ ಬಂದಿತ್ತು. ಕರ್ನಾಟಕದವರು ತಾವೂ ನೀರು ಉಪಯೋಗಿಸುವುದಿಲ್ಲ, ನಾವೂ ಉಪಯೋಗಿಸುವುದಕ್ಕೆ ಬಿಡುವುದಿಲ್ಲ ಇದು ಆಂಧ್ರದವರ ಅನಿಸಿಕೆ. ನೀರನ್ನು ಉಪಯೋಗಿಸುವುದು ಎಂದರೆ, ನಾವು ಒಂದೇ ದಿನದಲ್ಲಿ ಮಾಯಮಂತ್ರ ಮಾಡಿ ನೀರನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ನೀರನ್ನು ಉಪಯೋಗಿಸಬೇಕಾದರೆ ಕಟ್ಟೆ ಕಟ್ಟಬೇಕು, ನಾಲೆ ತೆಗೆಯಬೇಕು. ಇದು ಅರ್ಥ ಆಗಬೇಕಾದರೆ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಹೆಚ್ಚು ಸೂಕ್ತ

ಎಂದು ನನಗನ್ನಿಸುತ್ತದೆ. ಸ್ವಾತಂತ್ರ್ಯ ಬಂದ ಮೇಲೆ, 1951ನೇ ಇಸವಿಯಲ್ಲಿ ಈ ವಾಟರ್ ಅಲೋಕೇಷನ್, ಪ್ರಾಜೆಕ್ಟ್ ಕ್ಲಿಯರೆನ್ಸ್ ಇವೆಲ್ಲವನ್ನೂ ಪ್ಲಾನಿಂಗ್ ಕಮೀಷನ್‌ನವರೇ ಮಾಡುತ್ತಿದ್ದರು. 1951ನೇ ಇಸವಿಯಲ್ಲಿ ಒಂದು ಅಲೋಕೇಷನ್ ಅಂತ ಮಾಡಿದರು. ಆಗ ರಾಜ್ಯವಿನ್ನೂ ವಿಸ್ತಾರ ಆಗಿರಲಿಲ್ಲ. 1951ನೇ ಇಸವಿಯಲ್ಲಿ 28-7-51 ರಂದು ನಮ್ಮ ರಾಜ್ಯದಿಂದ ಒಂದು ಸಭೆ ಆಯಿತು. ಶ್ರೀ ವಿ.ಟಿ. ಕೃಷ್ಣಮಾಚಾರಿಯವರು ಇದ್ದರು. ಅಕಸ್ಮಾತ್ತಾಗಿ ಅವರೂ ಕೂಡ ತಮಿಳುನಾಡಿನವರೇ ಎನ್ನುವುದನ್ನು ನಾವು ಮರೆಯುವ ಹಾಗಿಲ್ಲ. ಅಂದರೆ ಡೆಲ್ಟಾ ಸ್ಟೇಟ್ ಅಂತ ಮುಖಜ ಭೂಮಿ, ಸಮುದ್ರದ ದಂಡೆಯಲ್ಲಿರತಕ್ಕಂಥ ರಾಜ್ಯಕ್ಕೆ ಸೇರಿದವರು ಅವರು. ನಮ್ಮ ರಾಜ್ಯದಿಂದ ಆಗಿನ ಮುಖ್ಯಮಂತ್ರಿಗಳಾದಂಥ ಕೆ.ಸಿ. ರೆಡ್ಡಿಯವರು ಒಬ್ಬರೇ ಹಾಜರಿದ್ದರು. ಇವರು ಏನು ಹೇಳುತ್ತಾರೆಂದರೆ '"Hon'ble Sir K.C. Reddy, Chief Minister of Mysore stated that so far as Krishna river basin was concerned, Mysore has certain agreement with Madras and Hyderabad and the new agreement that may be arrived at should taken note of the existing, agreement''. ಇಷ್ಟು ಹೇಳಿದರು, ಹೊರಟು ಹೋದರು. ಬೇರೆ ರಾಜ್ಯದ ಮುಖ್ಯಮಂತ್ರಿಗಳು, ಅವರ ಅಧಿಕಾರಿಗಳು, ಬೇರೆ ಮಂತ್ರಿಗಳು ಎಲ್ಲರೂ ಆ ಮೂರುದಿನದ ಸಭೆಯಲ್ಲಿದ್ದರು. ಇವರು ಇಲ್ಲದೇ ಇದ್ದಂಥ ಕಾಲದಲ್ಲಿ ಅಂದರೆ ಆಗಿನ ಹಳೆಯ ಮೈಸೂರಿನಲ್ಲಿ ಕೃಷ್ಣಾ ಬಯಲಿನಲ್ಲಿ ಭದ್ರಾ ಇತ್ತು, ಹಿರಿಯೂರು ಹತ್ತಿರ ಇರತಕ್ಕಂಥ ವಾಣಿವಿಲಾಸ ಸಾಗರ ಇತ್ತು ಮತ್ತು ತುಂಗಾ ಅಣೆಕಟ್ಟು ಒಂದು ಇತ್ತು. ಅದಕ್ಕೆ ಒಟ್ಟು 98.5 ಟಿಎಂಸಿಎಫ್‌ಟಿ ಯಷ್ಟು ನೀರನ್ನು ನಾವು ಉಪಯೋಗಿಸುವುದು ಅಂತ ಆಗಿತ್ತು. ಅದಾದಮೇಲೆ ಅಲ್ಲಿ ಅಲೋಕೇಟ್ ಮಾಡುತ್ತಾರೆ, ಈ ಅಲೋಕೇಟ್ ಮಾಡಿದಂಥ ವಿಚಾರವನ್ನು ಮಾತನಾಡುವಾಗ ಹೈದರಾಬಾದ್, ಮದ್ರಾಸು ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕು. ಏಕೆಂದರೆ ಆಗ ಇವತ್ತು ಇರುವ ಕನ್ನಡ ಪ್ರದೇಶಗಳು ಅವರ ಜೊತೆಯಲ್ಲಿದ್ದವು. ಅವರಿಗೆ ಎಗ್ಸಿಸ್‌ಟಿಂಗ್ 470 ಟಿ.ಎಂ.ಸಿ.ಯಷ್ಟು ಇದ್ದು, ಅದು ಡೆವಲಪ್ ಆದದ್ದು, ಹೈದರಾಬಾದ್-ಮದ್ರಾಸ್ ಎಂದರೆ ಇವತ್ತಿನ ಆಂಧ್ರಪದೇಶ ಹೈದರಾಬಾದ್, ಮದ್ರಾಸ್ 1991ರಲ್ಲಿ ಅವರು 470 ಟಿ.ಎಂ.ಸಿ.ಎಫ್.ಟಿ ನೀರು ಉಪಯೋಗಿಸುತ್ತಿದ್ದರು. ಬೊಂಬಾಯಿಯವರು 176 ಟಿ.ಎಂ.ಸಿ. ನೀರು ಉಪಯೋಗಿಸುತ್ತಿದ್ದರು ಹಳೆ ಮೈಸೂರಿನವರು 98 ಟಿ.ಎಂ.ಸಿ ನೀರು ಉಪಯೋಗಿಸುತ್ತಿದು. ಒಟ್ಟು 744 ಟಿ.ಎಂ.ಟಿ.ಯಷ್ಟು ನೀರು ಉಪಯೋಗವಾಗಿತ್ತು. 1951ರಲ್ಲಿ ಏನು ಮಾಡಿದರು ಎಂದರೆ, ಹೈದರಾಬಾದ್ ಮದ್ರಾಸ್ ಎರಡನ್ನೂ ಸೇರಿಸಿ ನಾವು ಮಾತನಾಡಬೇಕು, ಏಕೆಂದರೆ ಇವತ್ತು ಆಂಧ್ರಪ್ರದೇಶ, ಕರ್ನಾಟಕ ಇವೆರಡೂ ಸೇರಿ ಆಗುತ್ತದೆ, ಇವೆರಡೂ ಸೇರಿ ಒಟ್ಟು 750 ಟಿ.ಎಂ.ಸಿ.ಫ್.ಟಿ ನೀರು ಅಲಾಟ್ ಮಾಡಿಕೊಂಡರು. ಬೊಂಬಾಯಿಗೆ 240 ಟಿ.ಎಂ.ಸಿ. ಮಾಡಿದರು, ಮೈಸೂರಿಗೆ ಒಂದು ಟಿ.ಎಂ.ಸಿ.ಎಫ್.ಸಿ. ಮಾಡಿದರು. ಇದು 1951ರಲ್ಲಿ ಆದ ಒಪ್ಪಂದ. ಅಲ್ಲಿಗೆ ನಮ್ಮ ಜನಗಳೇ

ಹೋಗಿಲ್ಲ. ಮುಖ್ಯಮಂತ್ರಿಯವರು ಹೋಗುತ್ತಾರೆ, ಒಂದು ವಾಕ್ಯ ಹೇಳಿಬಿಟ್ಟು ಮೀಟಿಂಗ್‌ನಿಂದ ಹೊರಟು ಹೋಗುತ್ತಾರೆ. ಸಭೆಯಲ್ಲಿ ಈ ರಾಜ್ಯದ ಅಧಿಕಾರಿಗಳು ಯಾರೂ ಭಾಗವಹಿಸಲಿಲ್ಲ. ಅದನ್ನು ರ್‍ಯಾಟಿಫೈ ಮಾಡಿ ಎಂದು ನಮಗೆ ಕಾಗದಗಳು ಬರುತ್ತಿದ್ದವು. ನಮ್ಮವರು ರ್‍ಯಾಟಿಫೈ ಮಾಡಲಿಲ್ಲ. ಇಲ್ಲಿ ಇದನ್ನು ಪ್ರಸ್ತುತ ಹೇಳಬೇಕಾಗುತ್ತದೆ. ಅಷ್ಟು ಹೊತ್ತಿಗೆ ಹನುಮಂತಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ. ಅವರಿಗೆ ವಿ.ಟಿ.ಕೃಷ್ಣಮಾಚಾರಿಯವರು ನೀರಿನ ವಿಷಯವನ್ನು ರ್‍ಯಾಟಿಫೈ ಮಾಡಿ ಎಂದು ಹೇಳಿ ಮೂರು ಕಾಗದಗಳನ್ನು ಬರೆಯುತ್ತಾರೆ. ಕೊನೆಗೆ ಶ್ರೀಮಾನ್ ಹನುಮಂತಯ್ಯನವರು 5-1-1953 ರಂದು ಒಂದು ಪತ್ರವನ್ನು ಬರೆಯುತ್ತಾರೆ. ಅದು ಬಹಳ ದೊಡ್ಡ ಪತ್ರ. ಎಲ್ಲವನ್ನೂ ಓದುವುದಕ್ಕಾಗುವುದಿಲ್ಲ, ಒಂದು ಪ್ಯಾರಾ ಮಾತ್ರ ಓದುತ್ತೇನೆ. ಅವರು ಏನು ಬರೆಯುತ್ತಾರೆ ಎಂದರೆ. . "It has to be stated that the proposals regarding the allocations for the existing utilisation and allotments of the surplus water of Krishna river were reached at a conference of the engineers who were present at Delhi at the time of the Conference. But, there was no engineer from the Mysore State present at this discussions. Even at the main conference when the proportions of the distribution of the Krishna surplus waters among the different states were discussed on the 29th July 1951 the Mysore representative was not present. The basis for the allocation of the surplus flows after allowing for the existing utilisation of the water of this State were taken by engineers of the other states present subject to further verification" ಅಂದರೆ ಅಲ್ಲಿ ಕರ್ನಾಟಕದವರು ಅಂದರೆ ಹಳೆಯ ಮೈಸೂರಿನವರು ಯಾರೂ ಇರಲಿಲ್ಲ. ಯಾರೋ ಮಾಡಿದರು. ಅದನ್ನೆಲ್ಲ 1951 ಒಪ್ಪಂದ ಅಂತ ಮಾಡಿ ಅದನ್ನು ರ್‍ಯಾಟಿಫೈ ಮಾಡಿ ಎಂದು, ಹೀಗೆ ನಡೆದುಕೊಂಡು ಹೋಗುತ್ತಿದೆ. ಇದು ಪ್ರಮುಖವಾದುದು ಎಂದು ಹೇಳಿದೆ. ಆಮೇಲೆ 1956ರಲ್ಲಿ ರಾಜ್ಯ ಪುನರ್ ವಿಂಗಡನೆ ಆಯಿತು. ಪುನರ್ ವಿಂಗಡನೆಯಾದ ಮೇಲೆ ನಮ್ಮ ಕೃಷ್ಣಾ ಬೇಸಿನ್ ಪ್ರದೇಶ 11,400 ಚದುರ ಮೈಲಿ ಇದ್ದದ್ದು 43,734 ಚದುರ ಮೈಲಿ ಜಾಸ್ತಿಯಾಗುತ್ತದೆ. ನಮ್ಮ ಪ್ರಾಜೆಕ್ಟ್ ಕ್ಲಿಯರ್ ಮಾಡಿ, ನಾವು ನೀರಾವರಿ ಮಾಡಬೇಕು ಎಂದು ಹೇಳಿ. ಪುನಃ 1959 ಇಸವಿಯಲ್ಲಿ ಇದರ ಗಲಾಟೆ ಹತ್ತಿಕೊಳ್ಳುತ್ತದೆ. 1959ನೇ ಇಸವಿಯಲ್ಲಿ ಸೆಂಟರ್ ವಾಟರ್ ಅಂಡ್ ಪವರ್ ಕಮೀಷನ್‌ನವರು ಒಂದು ಅಲೋಕೇಷನ್ ಮಾಡುತ್ತಾರೆ. ರಾಜ್ಯ ಪುನರ್ ವಿಂಗಡನೆ ಆದಮೇಲೆ ಆಂಧ್ರಕ್ಕೆ 983 ಟಿ.ಎಂ.ಸಿ.ಎಫ್.ಟಿ. ಬೊಂಬಾಯಿಗೆ 462 ಟಿ.ಎಂ.ಸಿಎಫ್.ಟಿ. ಇದಕ್ಕೆ ಮೊದಲು ಏನು ಮಾಡಿದ್ದರು ಎಂದರೆ 1951ರಲ್ಲಿ 410 ಟಿಎಂಸಿಎಫ್‌ಟಿ

ಎಂದು ಮಾಡಿದ್ದರು. ಇದು ಇನ್‌ಕ್ಲೂಸಿವ್ ಆಫ್ ಕೋಯ್ನಾ ಅಂದರೆ ಇನ್‌ಕ್ಲೂಸಿವ್ ಆಫ್ ಬಿಜಾಪುರ್ ಬಿಜಾಪುರವನ್ನೂ ಸೇರಿಸಿ 410 ಟಿಎಂಸಿಎಫ್‌ಟಿ ಮಾಡುತ್ತಾರೆ. ಈಗ ಕೊಯ್ನಾ ಬಿಜಾಪುರ ಏರಿಯಾ ಬಿಟ್ಟು 460 ಟಿಎಂಸಿಎಫ್‌ಟಿ ಮಾಡುತ್ತಾರೆ. ಈ ಮಲತಾಯಿ ಧೋರಣೆ ಹೇಗೆ ಮೊದಲಿನಂದಲೂ ನಡೆದುಕೊಂಡು ಬರುತ್ತಿದೆ ಎಂಬುದಕ್ಕೆ ಹೇಳುತ್ತಿದ್ದೇನೆ. ಕೊಯ್ನಾ ಸೇರಿದಾಗ 1951ರಲ್ಲಿ ಮಾಡಿದ್ದು 410, ಕೊಯ್ನಾ ಬಿಟ್ಟು ಮಾಡಿದ್ದು 1959ರಲ್ಲಿ 462. ಅಷ್ಟು ಹೊತ್ತಿದ್ದ ಮಾನ್ಯ ಕೆ.ಎಲ್.ರಾಯರು ಬಹಳ ಪ್ರಮುಖವಾಗಿದ್ದರು, ಅವರು ರಾಜಕೀಯವನ್ನು ಮಾಡಿಕೊಂಡು ಹೋದರು. ಮೈಸೂರಿಗೆ ಹೀಗೆ ಇದ್ದಂಥ 99 ಟಿಎಂಸಿಎಫ್‌ಟಿ ಏನಿತ್ತು ಅಂದರೆ ಭದ್ರಾ ನದಿ ತುಂಗಾ , ವಾಣಿವಿಲಾಸ ಎಲ್ಲಾ ಸೇರಿಕೊಂಡು 476 ಇದು ಹೋದರೆ, ಉಳಿದುದಕ್ಕೆ 377 ಟಿ.ಎಂ.ಸಿ.ಎಫ್‌ಟಿ. ಕೇಂದ್ರದಿಂದ ನಮ್ಮ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಬರಲೇ ಇಲ್ಲ. ನಾವು ಕೇಳುತ್ತಲೇ ಹೋದೆವು, ಗಲಾಟೆ ಮಾಡುತ್ತಲೇ ಹೋದೆವು. ಅನಂತರ ಈ ಅಲೋಕೇಷನ್ಸ್ ಏನಿತ್ತು ಅದೂ ಕೂಡ ಸರಿಯಿಲ್ಲವೆಂದು ನಾವು ಹೇಳಿದೆವು. ಈ ನೀರಾವರಿಯ ಬಗ್ಗೆ ತುಂಬಾ ನಿಕೃಷ್ಟ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೇವೆ. ನಮ್ಮ ರಾಜ್ಯ ವಿಸ್ತಾರವಾಯಿತು. ಆಗ ಮಾನ್ಯ ಜತ್ತಿಯವರು ಮುಖ್ಯಮಂತ್ರಿಯಾದರು. ಆಗ ನಮ್ಮ ಪ್ರದೇಶಕ್ಕೆ ಕೊಯ್ನಾ ಪ್ರಾಜೆಕ್ಟ್‌ನಿಂದ ನೀರನ್ನು ಕೊಡುವುದಕ್ಕೆ ಏನು ಮಾಡುತ್ತೀರಿ ಎಂದು ಬೊಂಬಾಯಿ ಸರ್ಕಾರವನ್ನು ಕೇಳಬೇಕಾಗಿತ್ತು. ಆಗ ನಾವು ಕೇಳಲಿಲ್ಲ. ಅನಂತರ ಅವರೇ ನಮಗೆ ಒಂದು ಪತ್ರವನ್ನು ಬರೆದರು. ಈ ಕೊಯ್ನಾ ಪ್ರಾಜೆಕ್ಟ್ ಕೆಳಗಡೆ ನಿಮ್ಮ ಪ್ರದೇಶ ನೀರಾವರಿಗೆ ಒಳಪಡುತ್ತದೆ, ನೀವು ನಾಲೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಅಣೆಕಟ್ಟೆಯನ್ನು ಕಟ್ಟಿಕೊಳ್ಳುವುದಕ್ಕೆ ನಿಮ್ಮ ಭಾಗದ ವಂತಿಗೆಯನ್ನು ನೀವು ಕೊಡಬೇಕಾಗುತ್ತದೆಂದು ತಿಳಿಸಿದರು. ಆಗ ಸುಮಾರು 2-3 ಕೋಟಿ ರೂ. ಆಗುತ್ತಿತ್ತು ಎಂದು ಕಾಣಿಸುತ್ತದೆ. ನಮ್ಮದು ಆಗತಾನೇ ಇನ್ನೂ ಹೊಸ ಗಾಯ. ಅಂದರೆ ಹೊಸ ಮೈಸೂರು ಹಳೇ ಮೈಸೂರು ಎಂದು. ಕೆಲವರು ಈ ರಾಜ್ಯ ದೊಡ್ಡದಾಗಬೇಕು ಎಂದು ಹೇಳಿದರೆ ಇನ್ನು ಕೆಲವರು ಇದು ಬೇಡ ಎಂದು ಹೇಳುತ್ತಿದ್ದರು. ಆಗ ಇವರು ಏನು ಬರೆದರು ಎಂದರೆ ಇವತ್ತಿನ ಪರಿಸ್ಥಿತಿಯಲ್ಲಿ ನಮಗೆ ಇದರ ಬಗ್ಗೆ ಆಸಕ್ತಿ ಇಲ್ಲ ಎಂದು. ಇವತ್ತು ಬಿಜಾಪುರ ಅತ್ಯಂತ ಬರಗಾಲದ ಪ್ರದೇಶವಾಗಿದೆ. ಈ ವಿಚಾರವನ್ನು ನಾವು ಬಹಳ ಲಘುವಾಗಿ ತೆಗೆದುಕೊಂಡಿದ್ದೇವೆ. ಇದು ನಮ್ಮೆಲ್ಲರ ಮನಸ್ಸಿಗೆ ತುಂಬಾ ನೋವಾಗತಕ್ಕ ಪ್ರಸಂಗಗಳು. ನಾನು 1972ನೇ ಇಸವಿಯಲ್ಲಿ ಮಾನ್ಯ ದೇವರಾಜ ಅರಸ್‌ರವರನ್ನು ಪ್ರಾರ್ಥನೆ ಮಾಡಿಕೊಂಡೆ. ಇವತ್ತು ಅವರು ನಾಯಕ ಎನ್ನುವವರಿಗೆ ಒಂದು ಪತ್ರವನ್ನು ಬರೆದು ಬಿಜಾಪುರಕ್ಕೆ ಬಹಳ ತೊಂದರೆ, ಇದೆ, ಹಿಂದೆ ಕೊಯ್ನ ಪ್ರಾಜೆಕ್ಟ್ ನಮಗೆ ಸೇರಿತ್ತು, ಈಗ ತಾವು ಇದನ್ನು ಪುನರ್ ಪರಿಶೀಲಿಸುವುದಾದರೆ ನಾವು ಒಟ್ಟಿಗೇ ಕುಳಿತು ಮಾತನಾಡೋಣ, ನಮ್ಮ ವಂತಿಗೆಯನ್ನು ಏನು ಕೊಡಬೇಕೋ ಅದಕ್ಕೆ ನಾವು ತಯಾರಿದ್ದೇವೆ ಎಂದು ತಿಳಿಸಿದರು. ಆದರೆ ಅವರು ಏನು ಬರೆದರು ಈ ವಿಷಯ ಸಂಪೂರ್ಣವಾಗಿ ಮುಗಿದುಹೋಗಿದೆ, ಈಗ ಇದನ್ನು ಮತ್ತೆ ಪುನರ್ ಪರಿಶೀಲಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಇದನ್ನು ನಾವು ನಮ್ಮ ತಪ್ಪಿನಿಂದಾಗಿ

ಕಳೆದುಕೊಂಡಿದ್ದೇವೆ. ಯಾರನ್ನೂ ನಾವು ದೂರಬೇಕಾಗಿಲ್ಲ. ಇದಾದಮೇಲೆ, ಪ್ಲಾನಿಂಗ್ ಕಮಿಷನ್‌ನ ಸೆಕ್ರೆಟರಿ ನಾಗರ್ಾಜುನ ಸಾಗರ ಮೊದಲನೇ ಹಂತಕ್ಕೆ ಅನುಮೋದನೆ ಮಾಡಿಕೊಟ್ಟರು. ಇದರ ಬಗ್ಗೆ ವ್ಯವಹಾರ ಇನ್ನೂ ನಡೆಯುತ್ತಲೇ ಇದೆ, ನಾವು ನಮ್ಮ ತಕರಾರುಗಳನ್ನು ಸಲ್ಲಿಸುತ್ತಲೇ ಇದ್ದೇವೆ, ನೀರಿನ ಹಂಚಿಕೆ ಮಾಡಿರುವುದು ಸರಿಯಾಗಿಲ್ಲವೆಂದು ನಾವು ಹೇಳುತ್ತಲೇ ಇದ್ದೇವೆ, ಆದರೂ ಆ ಸೆಕ್ರೆಟರಿ ನಾಗಾರ್ಜುನ ಸಾಗರದ ಮೊದಲನೇ ಹಂತಕ್ಕೆ ಕ್ಲಿಯರ್‌ನ್ಸ್ ಕೊಟ್ಟರು. ಇದೆಲ್ಲಾ ಆದ ಮೇಲೆ ಮತ್ತೆ ರಿ ಅಲೋಕೇಷನ್ ಆಗಲೇಬೇಕೆಂದು ನಾವು ಹೇಳಿದಾಗ ಒಂದು ಕಾನ್‌ಫರೆನ್ಸ್ 1960ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ನಡೆಯಿತು, ಈ ಕಾನ್‌ಫರೆನ್ಸ್‌ನಲ್ಲಿ ತೆಗೆದುಕೊಂಡ ತೀರ್ಮಾನ ಪ್ರಕಾರ 1961ರ ಮೇ ತಿಂಗಳಲ್ಲಿ ಗುಲಾಟಿಯವರ ನೇತೃತ್ವದಲ್ಲಿ ಒಂದು ಕಮೀಷನ್‌ನ್ನು ನೇಮಕ ಮಾಡಿದರು. ಇದು ಏತಕ್ಕೆ? ಕೃಷಾ-ಗೋದಾವರಿ ಕಮಿಷನ್ ಎಂತಲೇ ಇದಕ್ಕೆ ಹೆಸರು. ಕೃಷ್ಣಾ ರಿವರ್, ಗೋದಾವರಿ ರಿವರ್ ಎಂದು ಬೇರೆ ಬೇರೆ ಆಗಲೇ ಇಲ್ಲ. ಕೃಷ್ಣಾ ಗೋದಾವರಿ ಕಮಿಷನ್ ಎಂತಲೇ ಮಾಡಿದರು. ಅಲ್ಲಿ ನಾಗಾರ್ಜುನ ಸಾಗರ ಅಣೆಕಟ್ಟಿನ ಕೆಲಸ ಭರದಿಂದ ನಡೆಯುತಿತ್ತು. ಶ್ರೀಶೈಲ ಅಣೆಕಟ್ಟಿನ ಕೆಲಸವೂ ನಡೆಯುತ್ತಿತ್ತು. ಯಾವ ಸರ್ಕಾರದ ಪ್ರತಿಭಟನೆಯನ್ನೂ ಅವರು ಕೇಳಲಿಲ್ಲ. 1962ರಲ್ಲಿ ರಾಷ್ಟ್ರೀಯ ಜಲ ನೀತಿ ರೂಪಿತವಾಗಬೇಕೆಂದು ನಾವು ಕೇಳಿದ್ದೆವು. ಅನಂತರ ಕೃಷ್ಣಾ ಗೋದಾವರಿಗೆ ಒಂದು ಟ್ರಿಬ್ಯುಬಲ್‌ನ್ನೂ ನೇಮಕ ಮಾಡಿದರು. ಕೃಷ್ಣಾ ಗೋದಾವರಿ ನದಿ ನೀರಿನ ಸಮಸ್ಯೆ ಬಗ್ಗೆ ವ್ಯವಹರಿಸುವುದಕ್ಕೆ ಟ್ರಿಬ್ಯುನಲ್ ನೇಮಕ ಮಾಡಬೇಕೆಂದು ಆಯಿತು. ಅದನ್ನು ನಾವು ಕೇಳುತ್ತಲೇ ಬಂದೆವು. ಅನಂತರ ಗುಲಾಟಿಯವರು ಜನವರಿ 62ರಲ್ಲಿ ಒಂದು ವರದಿಯನ್ನು ಕೊಟ್ಟರು. ಆ ವರದಿಯಲ್ಲಿ ಒಂದು ವಿಚಾರವನ್ನು ಹೀಗೆ ಬರೆಯುತ್ತಾರೆ. 11ನೇ ಪುಟ, ಪ್ಯಾರಾ 61ರಲ್ಲಿ ಹೀಗೆ ಇದೆ :

" The large part of the regulated flow available in the river Godavary from the four projects referred to above which would amount to much more than 10 MAF (approximately one million acre i.e., 440 TMC ft. of water would be surplus to the requirements of the projects of the Godavari and can be diverted to the Krishna Basin to the extent these supplies can be utilised in that Basin by the following two links.

a) A link canal from the Godavari at Palavaram to Vijayavada at a cost of about Rs. 40 crores-this can transfer usefully about 211 TMC ft. (4.8 million acres feet of water to the Krishna)

b) A link canal from the Godavari near Albacov or Singardi to Pulichinthala on the Krishna at a cost of

about Rs. 40 crores. This link canal can transfer usefully about 95 TMC ft. of water to the Krishna

ಟರ್ಮ್ಸ್ ಆಫ್ ರೆಫರೆನ್ಸ್ ಗೋದವರಿ ಆದಾಗ ನಾವು ಕೇಳಿದ್ದೆವು. ಅನಂತರ ಪಾರ್ಲಿಮೆಂಟ್‌ನಲ್ಲಿ 23-3-63ರಲ್ಲಿ ಹಫೀಸ್ ಮಹಮದ್ ಇಬ್ರಾಹಿಂರವರು ಮಂತ್ರಿಯಾಗಿದ್ದರು ಅವರು ಎರಡು ಪ್ರಮುಖವಾದ ಸ್ಟೇಮೆಂಟ್‌ಗಳನ್ನು ಮಾಡಿದರು. ಮೊದಲನೆಯದು ಎಂದರೆ ಅಡ್‌ಹಾಕ್ ಆಗಿ ನೀರನ್ನು ಹೆಚ್ಚಿಗೆ ಮಾಡಿದರು, ಆಂದ್ರಕ್ಕೆ ಕೊಟ್ಟಿದ್ದ 983 ಹೋಯಿತು. 23-3-73ರಲ್ಲಿ ಲೋಕಸಭೆಯಲ್ಲಿ ಅವರು ಅನೋನ್ಸ್ ಮಾಡಿದ್ದು ಪ್ರಮುಖವಾಗಿ ಎಂದರೆ, ಮಹಾರಾಷ್ಟ್ರಕ್ಕೆ 400, ಮೈಸೂರಿಗೆ 600 ಮತ್ತು ಆಂದ್ರಪ್ರದೇಶಕ್ಕೆ 800 ಟಿಎಂಸಿಎಫ್‌ಟಿ ಕೊಟ್ಟರು. ಲೋಕಸಭೆಯಲ್ಲಿ ಇನ್ನೊಂದು ಪ್ರಮುಖ ಭರವಸೆ ಕೊಟಿದ್ದು ಏನೆಂದರೆ, ನಾಗಾರ್ಜುನ ಸಾಗರ 2ನೇ ಹಂತವನ್ನು ಕ್ಲಿಯರ್ ಮಾಡಬೇಕಾದರೆ ಗೋದಾವರಿ ಡ್ರೆವರ್ಷನ್ ಕೃಷ್ಣಾಕ್ಕೆ ಮಾಡಿದ ನಂತರ ಕ್ಲಿಯರ್ ಮಾಡಿಸುತ್ತೇವೆ ಎಂದು ಖಚಿತವಾದ ಭರವಸೆಯನ್ನು ಕೊಟ್ಟರು. ಹೀಗೆ ಇನ್ನೂ ಬಹಳಷ್ಟು ಇದೆ. ಅದನ್ನೆಲ್ಲಾ ಇಲ್ಲಿ ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅನಂತರ ನಾಗಾರ್ಜುನ ಸಾಗರ ಕ್ರೆಸ್ಟ್ ಗೇಟನ್ನು 1966-67ರಲ್ಲಿ ಪ್ರಾರಂಭ ಮಾಡಿದರು. ಆಗ ಕರ್ನಾಟಕ ಗಲಾಟೆ ಮಾಡಿತು. ಅದನ್ನೂ ಅವರು ಕೇರ್ ಮಾಡಲಿಲ್ಲ. ಸೆಕೆಂಡ್ ಸ್ಟೇಜ್‌ಗೆ ಕ್ಲಿಯರ್‌ನ್ಸನ್ನೂ ಕೊಟ್ಟರು, ಕ್ರೆಸ್ಟ್ ಗೇಟನ್ನು ಹಾಕಿಯೂ ಆಯಿತು, ಅನಂತರ 69ನೇ ಇಸವಿಯಲ್ಲಿ ಕೃಷ್ಣಾ ಗೊದಾವರಿ ಟ್ರಿಬ್ಯುನಲ್ ಎಂದು ಇದ್ದುದನ್ನು ಕೃಷ್ಣಾ ಟ್ರಿಬ್ಯುನಲ್‌ನ ಎಂದು ಮಾಡಿದರು. ಅಂದರೆ ಕೃಷ್ಣಾ ಗೋದಾವರಿ ಕಮಿಷನ್ ಪ್ರಕಾರ ನಮಗೆ ಏನು ನೀರು ಬರುತ್ತದೆಂದು ನಿರೀಕ್ಷೆ ಮಾಡಿದ್ದೆವೋ ಅದರಲ್ಲಿ ನನ್ನ ಮಾಹಿತಿಯ ಪ್ರಕಾರ ಸುಮಾರು 150 ಟಿಎಂಸಿಎಫ್‌ಟಿ ನೀರು ಕಡಿಮೆಯಾಯಿತು. ಕಾರಣ ಕೃಷ್ಣಾ ಮತ್ತು ಗೋದಾವರಿಯನ್ನು ಬೈಫರ್‌ಕೇಟ್ ಮಾಡಿದ್ದರಿಂದ ಇದೆಲ್ಲಾ ಆದಮೇಲೆ 20-2-72ರಿಂದ 19-4-71ವರೆಗೆ ನಮಗೆ ಏನಾಯಿತು ಎಂಬುದನ್ನು ಹೇಳುತ್ತೇವೆ. ಅವೆಲ್ಲಾ ಚರಿತ್ರಾರ್ಹ ವಿಚಾರಗಳು. ರಾಜ್ಯಪಾಲರ ಆಡಳಿತ ಬಂತು. ಟ್ರಿಬ್ಯುನಲ್ ಮುಂದೆ ನಮ್ಮ ಕೇಸು ಇದೆ. ರಾಜ್ಯಪಾಲರ ಆಡಳಿತ ಅವದಿಯಲ್ಲಿ ಏನಾಯಿತು ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರ ಕಾಲದಲ್ಲಿ 9 ಅಗ್ರಿಮೆಂಟ್ ಆಗಿವೆ. ಬಚಾವತ್ ಟ್ರಿಬ್ಯುನಲ್ ಮುಂದೆ ರಾಜಿ ಮಾಡಿಕೊಂಡು 9 ಅರ್ಜಿಗಳನ್ನು ಕೊಟ್ಟಿದ್ದೇವೆ. ಅನಂತರ ಟ್ರಿಬ್ಯುನಲ್ ಒಂದು ತೀರ್ಮಾನವನ್ನು ಕೊಟ್ಟಿತು. ಅನಂತರ ನಾವು ಕೋರ್ಟಿಗೆ ಹೋದೆವು. ಅಲ್ಲಿ ಅವರು ಮಾಡಲಿಲ್ಲ. ಟ್ರಿಬ್ಯುನಲ್ ತೀರ್ಮಾನ ಪ್ರಕಾರ ಸ್ಕೀಂ (ಎ) ಪ್ರಕಾರ ಕೇಂದ್ರಸರ್ಕಾರ ನೋಟಿಫೈ ಮಾಡಿದೆ. ಸ್ಕೀಂ (ಎ) ಪ್ರಕಾರ 700 ಟಿಎಂಸಿಎಫ್‌ಟಿ ರೀ ಜನರೇಷನ್ 34, ಸ್ಕೀಂ(ಬಿ) ಪ್ರಕಾರ 166 ರೀ ಜನರೇಷನ್ 17. . . .

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಆಗಿದ್ದ ರಾಜ್ಯಪಾಲರು ಯಾರು?

3.20 ಪಿ.ಎಂ.

ಶ್ರೀ ಹೆಚ್.ಎನ್.ನಂಜೇಗೌಡ : ಧರ್ಮವೀರ ಅವರು. ಇನ್ನು ಗೋದಾವರಿ ಡೈವರ್ಷನ್ 21, ಅದಕ್ಕೆ ರೀ ಜನರೇಷನ್ 2, ಅಂದರೆ ಒಟ್ಟು 941 ಟಿಎಂಸಿ ಎಫ್‌ಟಿ, ನೀರು ನಮಗೆ ಕರಾರುವಾಕ್ಕಾಗಿ ಸಿಕ್ಕಬೇಕು. ಈಗ ಏನಾಗಿದೆ ಅಧ್ಯಕ್ಷರೆ, ಟ್ರಿಬ್ಯುನಲ್‌ನಲ್ಲಿ ಒಂದು ತೀರ್ಮಾನ ಕೊಟ್ಟರು. ನಾನು ಲೋಕಸಭೆಯಲ್ಲಿ ಹೇಳಿದ್ದೇನೆ ಮತ್ತು ಬೇರೆ ಕಡೆಯೂ ಇದನ್ನು ಹೇಳಿದ್ದೇನೆ; ಇವತ್ತು .ರೀಪಿಟ್ ಮಾಡುತ್ತೇನೆ. It is the fundamental principle of legal jurisprudence. A court cannot pass a decree which cannot be executed. Similarly a Tribunal cannot pass an order which cannot be implemented. ಅಲ್ಲವೇ ಮೊಯಿಲಿಯವರೆ, ನೀವು ಪ್ರಾಕ್ಟೀಸ್ ಮಾಡಿದ್ದೀರಿ. A court cannot pass a decree which cannot be executed Similarly a Tribunal cannot pass an order which cannot be implemented. Here is a case where a Tribunal has passed an order which cannot be implemented. ಯಾವುದು ಅದು? ಎರಡು ಸಾವಿರ ಇಸವಿಯೊಳಗೆ ನೀವು 734 ಟಿ.ಎಂ.ಸಿ. ನೀರನ್ನು ಉಪಯೋಗಿಸಿ. even the new Government, present day Government is trying to perpetuate this myth of completing the projects to use 734 of TMC within 2000 AD. ಇದನ್ನು ರಿಯಲಿಸ್ಟಿಕ್ ಆಗಿ ನಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, let us not live in fools pradise ನಾವು ಆಗುತ್ತದೆ ಎಂದು ಎರಡು ಸಾವಿರ ಇಸವಿಯಲ್ಲಿ ಕುಳಿತು ಯೋಚನೆ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನಾವು ತಿಳಿದುಕೊಳ್ಳಬೇಕು, ಎರಡು ಸಾವಿರ ಇಸವಿಯೊಳಗೆ ನಾವು ಏನಾದರೂ ಅದನ್ನು ಮುಗಿಸುವುದಕ್ಕೆ ಆಗುವುದಿಲ್ಲವೆಂದು ರಿಯಲಿಸ್ಟಿಕ್ ಆಗಿ ಅರ್ಥ ಮಾಡಿಕೊಂಡರೆ if you do not try to perpetuate this myth. ಆಗ ಸಲ್ಯೂಷನ್ ಕಂಡುಕೊಳ್ಳುವುದಕ್ಕೆ ಏನಾದರೂ ಯೋಚನೆ ಮಾಡುತ್ತೇವೆ, ಏನು ಮಾಡಬೇಕು? ನಾನು ಹೇಳುತ್ತೇನೆ, ಶಂಕರಾನಂದ ಅವರಿಗೆ ಪ್ರಶ್ನೆ ಕೇಳಿದ್ದುದು, ನಮ್ಮ ಗ್ರಹಚಾರ ಏನೆಂದರೆ ನಮ್ಮ ಕರ್ನಾಟಕದವರೇ ಮಂತ್ರಿಯಾಗಿದ್ದಾಗಲೂ ಕೇಂದ್ರದಲ್ಲಿ ಒಳ್ಳೆಯದಾಗುವುದಿಲ್ಲ. ಇದು ನಮಗೆ ಬಂದಿರತಕ್ಕ ಗ್ರಹಚಾರ. ನ್ಯಾಷನಲ್ ವಾಟರ್ ಪಾಲಿಸಿ ಆಗಿದ್ದಾಗ ಶಂಕರಾನಂದ ಅವರು ಇದ್ದರು. ನೋಟಿಫೈ ಮಾಡಿ ಎಂದು ಅವರು ಇದ್ದಾಗ ಲೋಕಸಭೆಯಲ್ಲಿ ಗಲಾಟೆಯಾಯಿತು. ಅಲ್ಲಿ ತಿರುಗಿಸಿ ಮುರುಗಿಸಿ ಉತ್ತರ ಹೇಳುತ್ತಿದ್ದರೇ ಹೊರತು there is no positive answer ಕೇಂದ್ರ ಸರ್ಕಾರ ಸ್ಕೀಂ ನೋಟಿಫೈ ಮಾಡಲಿಲ್ಲ. ಆಮೇಲೆ ನೋಟಿಫೈ ಮಾಡಿದರು. ಇತ್ತೀಚೆಗೆ ಏನಾಯಿತು? ನೋಡಿ ಅಧ್ಯಕ್ಷರೆ, ಇದನೆಲ್ಲಾ ಓದುತ್ತಿದ್ದರೆ ತಲೆ ಗಿರ್ ಅನ್ನುತ್ತದೆ. A.P., Karnataka to take up Jurala project ಇಲ್ಲಿ ಜಿ.ಹೆಚ್.ಪಟೇಲರ

ಫೋಟೋ ಇದೆ, ವಿಜಯಕುಮಾರ್ ಅವರ ಒಂದು ಫೋಟೋ ಇದೆ ಎನ್.ಟಿ.ಆರ್. ಅವರ ಫೋಟೋ ಇರಬಹುದು Rupees 274 crors more needed for Telugu Ganga project ಜಯಲಲಿತ ಅವರು ಹೋಗುತ್ತಾರೆ, ಎನ್.ಟಿ.ಆರ್. ಅವರು ಹೋಗುತ್ತಾರೆ ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ ಅಂದರೆ N.T. Rama Rao has committed an offence and Tamil Nadu Government have become an abettor ಅಲ್ಲವೆ? ಆಮೇಲೆ ಮುಖ್ಯಮಂತ್ರಿಯವರ ಸ್ಪಷ್ಟೀಕರಣ. ಆಮೇಲೆ N.T.R. demands immediate release of Tunga water state ready to partcipate in Jurala ಹೀಗೆ ಏನೇನೋ ಇವೆ. ಹೀಗೆ ಏನೇನೋ ಇದೆ. ಇನ್ನೊಂದು ಬರುತ್ತದೆ Karnataka is taken for a ride ಹೇಳಿಕೊಂಡು ಹೊರೆ ಜಾಸ್ತಿ ಬರುತ್ತದೆ. ಒಂದು ನಮಗೆ, ಅಸ್ತಿತ್ವದಲ್ಲಿರತಕ್ಕ ಯಾವುದೇ ಸರ್ಕಾರಕ್ಕೆ ಗೌರವ ತರತಕ್ಕ ವಿಚಾರಗಳೂ ಈಗಿಲ್ಲ. ಏತಕ್ಕೆ ಹೇಳುತ್ತೇನೆಂದರೆ, ಈಗ ತೆಲುಗು ಗಂಗಾ ತೆಗೆದುಕೊಳ್ಳೋಣ. ಏಕೆಂದರೆ ಎಲ್.ಟಿ.ಆರ್. ಮತ್ತು ಜಯಲಲಿತಾ ಅವರು ಅದರಲ್ಲಿ ಸೇರುತ್ತಾರೆ. ಪ್ರಾಜೆಕ್ಟ್ ಕಾಸ್ಟ್ ಹೆಚ್ಚಾಗುತ್ತದೆ. ಹೆಚ್ಚಾಗುವುದಿಲ್ಲವೆ ಅವರದ್ದು ನೀರಾವರಿ ಮಾಡುವುದಕ್ಕೆ ಹೊರಟೆ? ಹೆಚ್ಚಾದುದಕ್ಕೆ ಕಾಸ್ಟ್ ಕೊಡುತ್ತಾರೆ ತಮಿಳ್ನಾಡಿನವರು, ಕೇಂದ್ರ ಸರ್ಕಾರದವರು ಕಣ್ಣುಚ್ಚಿಕೊಂಡು ಕುಳಿತುಕೊಳ್ಳುತ್ತಾರೆ. ಎನ್‌ವಿರನ್‌ಮೆಂಟ್ ಕ್ಲಿಯರೆನ್ಸ್ ಕೊಡುತ್ತಾರೆ, ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ ತೆಲುಗು ಗಂಗಾ ಪ್ರಾಜೆಕ್ಟ್‌ಗೆ ತೆಲುಗು ಗಂಗಾ ಪ್ರಾಜೆಕ್ಟ್ ಏನು? ಅದು ಒಂದು ನಿಮಿಷ ಹೇಳಿಬಿಡಬೇಕಲ್ಲ. 1976ರಲ್ಲಿ ಮೊದಲು ಕುಡಿಯುವ ನೀರಿಗೆ ನೀರು ಕೊಡಬೇಕೆಂದು ಸಂಬಂಧಪಟ್ಟ ರಾಜ್ಯಗಳು ಅಂದರೆ ಕೃಷ್ಣ ಬೇಸಿನ್ ರಾಜ್ಯಗಳು, ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಸೇರಿ 5 ಟಿಎಂಸಿ. ಕುಡಿಯುವ ಪರ್ಪಸ್‌ಗೆ ನೀರು ಕೊಡಬೇಕು ಎಂದು. it was reduced to writing as an agreement on 28th of Octomber, 1977.

ಏನು ಹೇಳುತ್ತಾರೆ ಅದರಲ್ಲಿ, ಹೈಲೈಟ್ಸ್ ಓದಿ ಬಿಡುತ್ತೇನೆ. Tamil Nadu shall be permitted to draw not more than 15 tmc cft. of water in a year. The period for such drawal shall be from Ist July to 31st October of the year ಟೈಂ ಹಾಕಿದ್ದಾರೆ. Canal from Srisailam to Somasila dam on Pennar shall have a discharge of only 1500 cuescs capacity ಟೈಂ ಹಾಕಿದ್ದಾರೆ. canal from Srisailam to Somasila dam on shall have a discharges of 1500 cusecs capacity 1500 ಕ್ಯೂಸೆಕ್ಸ್ ಹಾಕಿರುವ ಪೀರಿಯಡ್‌ಯಲ್ಲಿ 15 ಟಿಎಂಸಿ. ಬರಬೇಕಾದರೆ ಒಂದು ಕೂಸೆಕ್ಸ್ ಅಂದರೆ ಒಂದು ಸೆಕೆಂಡಿಗೆ ಘನ ಅಡಿ ನೀರು ಹೋಗುತ್ತದೆ. 1500x60 seconds x 60 minutes x 24 x 100 days ಲೆಕ್ಕ ಹಾಕಿದರೆ 15 ದಿನಕ್ಕೆ ಕರೆಕ್ಟಾಗಿ ಬರುತ್ತದೆ ಅವರು ಹಾಕಿರುವ ಲೆಕ್ಕ Canal has to be lined and it shall not

be used for carrying water for irrigation and other consumptive uses it is specific. Government of India will arrange to inspect and ensure that withdrawal from Srisailam shall not exceed 15 TMC cft in a year and this water is used only for water supply to Madras city. ಈಗಿನ ತೆಲುಗುಗಂಗಾ ಯೋಜನೆ ಹೇಗಿದೆ ಎಂದರೆ ಅಧ್ಯಕ್ಷರೆ,

The purpose is not limited to bringing water supply to Madras city only but is also planned to irrigate vast areas of Andhra Pradesh. Capacity of the canal is not 1500 cusecs but it is 11500 cusecs. They can withdraw not 15 TMC cft. but 29.7 TMC cft in 30 days or 99.36 TMC in 100 days ಅದನ್ನು ತೆಗೆದುಕೊಂಡರೆ 200 ದಿನಕ್ಕೆ ಅಂದರೆ ಡಬಲ್ ಆಗುತ್ತದೆ. ಒಂದು ಕ್ರಾಪ್ ಸೀಸನ್ನಿಗೆ ನಾನು ಹೇಳುತ್ತಿರತಕ್ಕದ್ದು it is against the order of the Bachwat tribunal. There is no provision for this project either in Scheme A or in Scheme - B of trubinal order. Hence, it violates the order of the Tribunal. ಈಗ ಏನಾಗಿದೆ ಎಂದರೆ ಎನ್.ಟಿ.ಆರ್. ಏನು ಮಾಡುತ್ತಾರೆಂದು ನಮಗೆ ಗೊತ್ತಾಗುತ್ತದೆ. ತಮಿಳ್ನಾಡಿನವರು ಏನು ಸಹಕಾರ ಕೊಡುತ್ತಾರೆಂದು ಗೊತ್ತಾಗುತ್ತದೆ. ನಮ್ಮ ಸರ್ಕಾರ ಏನು ಮಾಡಿದೆ ಈ ದಿಸೆಯಲ್ಲಿ ಎಂಬುದು ನಮಗೆ ಅರ್ಥವಾಗುತ್ತದೆ. ನಾವು ಸರ್ಪ್ಲಸ್ ವಾಟರ್ ಉಪಯೋಗಿಸಿಕೊಳ್ಳುತ್ತೇವೆಂದು ಕುಳಿತುಕೊಂಡು ಇವೆಲ್ಲಾ ಆಗಿದೆ. must be in a position to tell the Government of India to tell the concered parties, come what way, we are not ready to sacrifice or own interest. ಹೇಳಬೇಕಾಗುತ್ತದಲ್ಲ, ನಾವು ಎಲ್ಲ ಕುಳಿತುಕೊಳ್ಳುವುದಕ್ಕಾಗುತ್ತದೆ? ಇದಕ್ಕೆ ಏನು ಮಾಡಿದೆ ಸರ್ಕಾರ? ದಯವಿಟ್ಟು ಅವರು ಉತ್ತರ ಹೇಳಬೇಕಾಗುತ್ತದೆ. ಏನು ಮಾಡಿದ್ದಾರೆ ಹೇಳಲಿ ಅವರು. ಇನ್ನು ನಮ್ಮಲ್ಲಿ ಏನಾಗಿದೆ ಎಂದರೆ ಅಪ್ಪರ್ ತುಂಗಾ, ಅಪ್ಪರ್ ಭದ್ರಾ ಬಗ್ಗೆ ಟ್ರಿಬ್ಯುನಲ್‌ನಲ್ಲಿ ಏನು ಹೇಳಿದ್ದಾರೆ? ಅದು ಸ್ಕೀಂ - ಬಿ ಇರಬಹುದು. ತುಂಗಭದ್ರ ಸಬ್ ಬೇಸಿನ್‌ನಲ್ಲಿ 320 ಟಿಎಂಸಿ. ಮೇಲೆ ಉಪಯೋಗಿಸಬೇಡಿ ಎಂದರು. ನಮ್ಮವರು ಕೊಟ್ಟಿರತಕ್ಕ ಅಂಕಿಸಂಖ್ಯೆ ಪ್ರಕಾರ 304 ಟಿಎಂಸಿ. ನೀರು ಉಪಯೋಗಿಸಿ ಆಗಿವೆ ನಾವು. ಇನ್ನೂ 16 ಟಿಎಂಸಿ. ನೀರು ಉಳಿದುಕೊಂಡಿದೆ ನಾವು ಕೊಟ್ಟಿರುವ ಅಂಕಿಸಂಖ್ಯೆ ಪ್ರಕಾರ. ವರ್ಕಿಂಗ್ ಟೇಬಲ್ ನಾವು ಮಾಡಿಕೊಟ್ಟಿದ್ದೇವಲ್ಲ. ಇವತ್ತು ಅಪ್ಪರ್ ತುಂಗಾ ಅಪ್ಪರ್ ಭದ್ರ ಆಗಬೇಕು. ಏಕೆ ಹೀಗೆ ಮಾಡಿಕೊಂಡೆವು? ಟ್ರಿಬ್ಯುನಲ್‌ನವರು ರೆಸ್ಟ್ರಿಕ್ಷನ್ ಹಾಕುವಾಗ ಏನು ಮಾಡುತ್ತಿದ್ದೆವು. ಆದು ಒಂದು ಕಡೆ ಇರಲಿ. ಈಗ ನಾವು ಏನು ಮಾಡಿದ್ದೇವೆಂದರೆ ಅದು ಯಾರು ಕೊಟ್ಟರೋ ಗೊತ್ತಿಲ್ಲ; ಎಲ್ಲ ಅಪ್ರಿಷಿಯೇಟೆಡ್

ಫಿಗರ್ಸ್ ಕೊಟ್ಟಿದ್ದಾರೆ. ನಾನು ಒಂದೆರಡು ಉದಾಹರಣೆ ಹೇಳುತ್ತೇನೆ. ವಾಣಿವಿಲಾಸ ಸಾಗರ ನನಗೆ ಗೊತ್ತಿರುವ ಪ್ರಕಾರ ಅದರ ಈಲ್ಡ್ ಇರುವುದು 5.70 ಟಿಎಂಸಿ; ನಾವು ಟ್ರಿಬ್ಯುನಲ್‌ಗೆ ಕೊಟ್ಟಿರುವುದು 8.30 ಟಿಎಂಸಿ. ನೀರು ಉಪಯೋಗಿಸುತ್ತಿದ್ದೇವೆ ಎಂದು. ಎರಡು ಟಿಎಂಸಿ ಜಾಸ್ತಿ ಉಪಯೋಗಿಸುತ್ತಿದ್ದೇವೆಂದು ಹೇಳಿದ್ದೇವೆ. ಉದಾಹರಣೆಗೆ ಮಲಪ್ರಭಾ ತೆಗೆದುಕೊಂಡರೆ 37 ಟಿಎಂಸಿ ಈಲ್ಡ್ ಇದೆ. ನಾವು ಮಾದಾಯಿ ಏನು ಮಾಡಿದ್ದೇವೆ? ಈಗ ಉಪ ಮುಖ್ಯ ಮಂತ್ರಿಗಳು ಇಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಮಾದಾಯಿ ವಾಟರ್ ಡೈವರ್ಟ್ ಮಾಡಿಕೊಂಡು 49 ಟಿಎಂಸಿ. ನೀರು ಉಪಯೋಗಿಸಬೇಕು ಮಲಪ್ರಭಾದಲ್ಲಿ ಎಂದು ನಮ್ಮ ಪ್ಲಾನ್. ನಾನು ಮಂತ್ರಿಯಾಗಿದ್ದಾಗ 80 ಸಾವಿರ ಏಕರೆಗೆ ನೀರಾವರಿ ಇನ್‌ಕ್ರೀಸ್ ಮಾಡಿದೆ. ಅದು ಹೇಗೇಗೋ ಪವರ್ ಜನರೇಷನ್ ಆಯಿತು. ನಮಗೆ ಅಧಿಕೃತ ಅಂಕಿಅಂಶಗಳನ್ನು ಸರ್ಕಾರ ದವರು ಕೊಟ್ಟಿಲ್ಲ. ಶ್ರೀ ಜೆ.ಹೆಚ್.ಪಟೇಲ್‌ರ ಹಿಂದೆ ಪವರ್ ಮಿನಿಸ್ಟರ್ ಇದ್ದಾಗ ಎಲ್ಲಾ ಮಾಡಿಕೊಂಡರು. ಅದನ್ನು ಕಾವೇರಿಗೆ ಬಿಟ್ಟುಕೊಟ್ಟರು ಎಂದು ಬಂದಿತ್ತು. ಅದಕ್ಕೆ ಅವರು ಉತ್ತರ ಹೇಳಿದರೆ ವಾಸಿ. ಆಮೇಲೆ ವಿಜಯನಗರ ಕೆನಾಲ್ಸ್. ನಾವು ಉಪಯೋಗಿಸಿರುವುದು 5 ಟಿ.ಎಂ.ಸಿ.ಎಫ್.ಟಿ. ಲೆಕ್ಕ ಕೊಟ್ಟಿರುವುದು 12.05 ಟಿ.ಎಂ.ಸಿ.ಎಫ್.ಟಿ. ಉಪಯೋಗಿಸಿದ್ದೇವೆ ಎಂದು. ತಪ್ಪಿದ್ದರೆ ಸರಿ ಮಾಡಲಿ. ನಾನು ಈ ಅಂಕಿಅಂಶಗಳನ್ನು ಯಾವುದೋ ಸೋರ್ಸ್‌ನಿಂದ ತೆಗೆದುಕೊಂಡಿರುತ್ತೇನೆ. ಸರಿಯಿಲ್ಲದಿದ್ದರೆ ಸರ್ಕಾರದವರು ಬೇಕಾದರೆ ಹೇಳಲಿ. ಆಮೇಲೆ ಗೋಂದಿ ಅಣೆಕಟ್ಟು. 2.70 ಈಲ್ಡ್ ಇರುವುದು. ನಾವು ಹೇಳಿರತಕ್ಕದ್ದು 3.10 ಉಪಯೋಗಿಸುತ್ತಿದ್ದೇವೆ ಎಂದು. ತುಂಗಭದ್ರಾ ಪ್ರಾಜೆಕ್ಟ್ ಒಟ್ಟು ಉಪಯೋಗಿಸುತ್ತಾ ಇರುವುದು ಈಗ 110 ಟಿಎಂಸಿಎಫ್‌ಟಿ. ಇದು ಭಾರೀ ಪ್ರಾಮುಖ್ಯ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಇದನ್ನು ಹೇಳುತ್ತಾರೆ ಅಂದುಕೊಂಡಿದ್ದೇನೆ. ಲೆಕ್ಕ ಕೊಟ್ಟಿರುವುದು 132 ಟಿಎಂಸಿಎಫ್‌ಟಿ ಎಂದ. ಅದರ ಅರ್ಥ ಏನು? 65ರಲ್ಲಿ 12 ಹೋದರೆ 53 ಟಿಎಂಸಿಎಫ್‌ಟಿ ಹೆಚ್ಚಿಗೆ ಉಪಯೋಗಿಸುತ್ತಿದ್ದೇವೆ ಎಂದು ಕೊಟ್ಟಿದ್ದೇವೆ. ನಾನು ಏತಕ್ಕೆ ಈ ಅಂಕಿಅಂಶ 53 ಹೇಳುತ್ತಿದ್ದೇನೆ ಅಂದರೆ 53 ಮತ್ತು 16 ಅಂದರೆ 69 ಅಥವಾ 70 ಟಿಎಂಸಿಎಫ್‌ಟಿ.ಗೆ ನಾವು ಧೈರ್ಯವಾಗಿ ಅಪ್ಪರ್‌ತುಂಗಾ ಅಪ್ಪರ್ ಭದ್ರಾಗೆ ಪ್ರಾಜೆಕ್ಟ್ ಪ್ಲಾನ್ ಹಾಕಿಕೊಳ್ಳಬಹುದು. ತುಂಗಭದ್ರಾ ಬೇಸಿನ್‌ನಲ್ಲಿ. ಇದನ್ನು ಹೇಳುವುದಕ್ಕೋಸ್ಕರ ಅಂಕಿಸಂಖ್ಯೆ ಕೊಟ್ಟೆ. ಏಕೆಂದರೆ ಇವತ್ತು ಏನು ಅಪ್ಪರ್ ಭದ್ರಾ ಅಣೆಕಟ್ಟಿನಲ್ಲಿ ನೀರಾವರಿ ಮಾಡಬೇಕು ಅಲ್ಲಿ ಇರತಕ್ಕಂಥದ್ದೆಲ್ಲಾ ತುಂಬಾ ಬರಪೀಡಿತ ಪ್ರದೇಶಗಳೆ, ಅದನ್ನು ನಾವು, 19 ತಾಲ್ಲೂಕು ಬರಪೀಡಿತ ಪ್ರದೇಶ. ಇವುಗಳಿಗೆ ನೀರಾವರಿ ಆಗತಕ್ಕದ್ದು. ಇದನ್ನು ಸರ್ಕಾರ ಪ್ರಾರಂಭಮಾಡಬೇಕು. ಅಪ್ಪರ್ ತುಂಬಾ ಕೂಡ ಭರದಿಂದ ನಡೆಸಬೇಕಾಗುತ್ತದೆ ಇವರು. ಇಷ್ಟನ್ನು ಹೇಳಿ ಇನ್ನು ಬೇರೆ ಬೇರೆ ಪ್ರಾಜೆಕ್ಟ್‌ಗಳಿವೆ. ನಮ್ಮ ಸ್ಥಿತಿ ಹೇಗಿದೆ ಎಂದರೆ ಯು.ಕೆ.ಪಿ. 1969ರಲ್ಲಿ ಪ್ರಾರಂಭ. ಘಟಪ್ರಭ 1948. ಮಲಪ್ರಭ 1960. ಅಪ್ಪರ್ ಮುಲ್ಲಾಮಾರಿ 1976. ಇದೆಲ್ಲಾ ಪ್ರಾರಂಭವಾದುದು ಹೇಳುತ್ತಿರುವುದು. ಸೌದ್‌ಫರ್ 1973. ದಾದ್‌ಗಂಗಾ ನನಗೆ ಗೊತ್ತಿಲ್ಲ, ಅವರೇ ಹೇಳಬೇಕು. ಹಿಪ್ಪರಗಿ ಬ್ಯಾರೇಜ್ 1973. ಬೆಣ್ಣೆತುರಾ 1973. ಕಾರಂಜಾ 1972. ರಾಮ್‌ತಾಲಾ ಲಿಫ್ಟ್

ಇರಿಗೇಷನ್ 1983. ಅಮರ್ಜಾ 1975. ಲೋಯರ್ ಮುಲ್ಲಾಮಾರಿ 1975 ಹಿರೀಹಳ್ಳ, ರಾಯಚೂರು 1977. ಮಸ್ಕಿನಾಳ, ರಾಯಚೂರು 1976. ಚುಲ್ಕಿನಾಳ, ಬೀದರ್ 1976. ಇದೆಲ್ಲಾ ಪ್ರಾರಂಭವಾದ ಇಸವಿಗಳು ಆಮೇಲೆ ಭೀಮಾ ಫ್ಲೋ ಇರಿಗೇಷನ್ ಸ್ಕೀಮ್ ಏನಾಯಿತು ಗೊತ್ತಿಲ್ಲ. ಭೀಮಾ ಲಿಫ್ಟ್ ಇರಿಗೇಷನ್ ಸ್ಕೀಂ ಎರಡನ್ನೂ ಕಮೆನ್ಸ್ ಮಾಡುವವರಿಲ್ಲವೋ ಏನೋ ನನಗೆ ಗೊತ್ತಾಗಿಲ್ಲ. ಮಾಡಿಲ್ಲ ಅಂತ ಹೇಳುತ್ತಾರೆ. ಅಪ್ಪರ್ ತುಂಗಾ ಅಪ್ಪರ್‌ಭದ್ರಾ ಹೇಳಿದ್ದೇನೆ. ಇವೆಲ್ಲಾ ಬರಪೀಡಿತ ಪ್ರದೇಶದಲ್ಲಿರತಕ್ಕ ಜನಗಳ ಕಣ್ಣೀರು ಒರೆಸುತ್ತೇವೆ ಎಂದರೆ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಇನ್ನು ಹೆಚ್ಚಿಗೆ ಲಂಬಿಸಿ ಮಾತನಾಡದೆ ಸರ್ಕಾರ ಈ ವಿಚಾರದಲ್ಲಿ ಇನ್ನು ಕ್ಷಣಮಾತ್ರ ಕೂಡ ತಡಮಾಡಬಾರದು. ಒಂದು ವಿಚಾರ ಏನು ಹೇಳುತ್ತೇನೆ ಸರ್ಕಾರಕ್ಕೆ ಅಂದರೆ, ಇನ್ನೂ ವ್ಯಾಪಕವಾಗಿ ಪ್ರಾಜೆಕ್ಟ್ ಡೀಟೈಲ್ಸ್ ಎಲ್ಲಾ ತೆಗೆದುಕೊಂಡು ನಾನು ಮಾತನಾಡಬಲ್ಲೆ. ಅಪ್ಪರ್‌ಕೃಷ್ಣಾಗೆ ಎಷ್ಟು ನೀರು ಬೇಕು? ನಾವು ಎಷ್ಟಕ್ಕೆ ಪ್ಲಾನ್ ಮಾಡಿದ್ದೆವು? ಈಗ ಎಷ್ಟು ಅಲಾಟ್ ಮಾಡಿದ್ದಾರೆ? ಈಗ 153 ಅಲಾಟ್ ಮಾಡಿಕೊಂಡಿದ್ದಾರೆ. ನಮಗೆ 300 ಚಿಲ್ಲರೆ ಟಿಎಂಸಿಎಫ್‌ಟಿ ಬೇಕು ನಾವು ಪ್ಲಾಸ್ ಮಾಡಿರುವ ಪ್ರಕಾರ ಕರೆಕ್ಟಾಗಿ ನೀರಾವರಿ ಆಗಬೇಕಾದರೆ. ಪ್ರತಿ ಪ್ರಾಜೆಕ್ಟ್‌ವೈಸ್ ಹೀಗೆಲ್ಲಾ ಹೇಳಿಕೊಂಡು ಹೋಗಬಹುದು. ಅವೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ,. ಇದೊಂದು ಉದಾಹರಣೆಗೆ ಹೇಳಿದೆ. ಒಂದು 51 ಟಿಎಂಸಿಎಫ್‌ಟಿ ಇನ್ನೊಂದು 102, ಫಸ್ಟ್ ಸ್ಟೇಜ್‌ದು 102 ಹಾಕಿಕೊಂಡಿದ್ದಾರೆ. ಆ ಮೇಲೆ 51 ಹಾಕಿಕೊಂಡಿದ್ದಾರೆ. ಅಂದರೆ 153 ಟಿಎಂಸಿಎಫ್‌ಟಿ ಮಾತ್ರ. 300 ಟಿಎಂಸಿಎಫ್‌ಟಿ ಮಿನಿಮಂ ಆಗಬೇಕು ನಮಗೆ. ಇಲ್ಲದೇ ಇದ್ದರೆ ತಾಪತ್ರಯ ಆಗುತ್ತದೆ ಒಂದು ಏನು ನಾನು ಹೇಳುವುದು ಅಂದರೆ You cannot have the cake and eat it also. ಹೇಗಾಗುತ್ತದೆ ಈಗ ಆಂಧ್ರದಲ್ಲಿ ನಾಗಾರ್ಜುನಸಾಗರ, ಶ್ರಿಶೈಲ ಇವೆಲ್ಲಾ ಮುಗಿಸಬೇಕಾದರೆ ಏನು ಮಾಡಿದರು ಅಧ್ಯಕ್ಷರೆ, ಒಂದು ಬಿಲ್ಡಿಂಗ್ ಕಟ್ಟಲಿಲ್ಲ. ಚಿತ್ತೂರಿಗೆ ಹೋಗಿ ಇವತ್ತೂ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸು ಹಳೇ ಮನೆಯೊಳಗೆ ಇದೆ. ನಮ್ಮಗಳಿಗೆ ಮಿನಿ ವಿಧಾನಸೌಧಗಳಾಗಬೇಕು. ಅದಕ್ಕೆ ಮೊದಲು ಅಧಿಕಾರಿಗಳಿಗೆ ಆರ್. ಸಿ.ಸಿ.ಬಿಲ್ಡಿಂಗೇ ಆಗಬೇಕು ವಾಸಕ್ಕೆ. ಇಲ್ಲದೇ ಇದ್ದರೆ ಯಾರೂ ಹೋಗುವುದೇ ಇಲ್ಲ ಅಲ್ಲಿಗೆ ಈಗ ಪಾಪುಲಿಸ್ಟ್ ಪ್ರೋಗ್ರಾಂ ಏತಕ್ಕೆ ಬೇಕು ನಿಮಗೆ? It is a luxury. We cannot afford to have that luxury. ಅವರು ಹಿಂದೆ ಹೇಳಿದ್ದರು. ಅದನ್ನೇ ರಿಪೀಟ್ ಮಾಡುತ್ತಿದ್ದೇನೆ. ಈ ಕಡೆ ಇದ್ದಾಗ ಹೇಳಿದ್ದರು ಪಾಪ. ಈಗ ಅಲ್ಲಿ ಹೋಗಿದ್ದಾರೆ. ಈಗ ಅದೇನೋ ಮಾಡಿದ್ದಾರೆ. 1220 ಕೋಟಿ ರೂಪಾಯಿ ಏನೋ ಖರ್ಚು ಮಾಡಿ ನಾಗೇಗೌಡರು ಹಾಲು ಕೊಡುತ್ತಿದ್ದರು. ಇವರು ಹಾಲು ಕೊಡುವುದನ್ನು ನಿಲ್ಲಿಸಿದರು ನಾವು ಅಕ್ಕಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ನಿನ್ನೆ ಹೇಳುತ್ತಿದ್ದರಲ್ಲ - ನಮ್ಮ ನಾಯಕರು ಪ್ರಶ್ನೆಗೆ ಉತ್ತರ ಹೇಳುತ್ತಾ ಆ ಸ್ಕೀಂ ನಿಲ್ಲಿಸಿಬಿಟ್ಟಿದ್ದೇವೆ ಎಂದು ಹೇಳಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ: ಅದರ ಪರಿಣಾಮ ನಿಮ್ಮ ಮೇಲೂ ಆಗಿ ನೀವೂ ಕೂಡ ಎರಡು ರೂಪಾಯಿ ಕೆ.ಜಿ. ಕೊಡುವುದಕ್ಕೆ ಹೊರಟುಬಿಟ್ಟಿರಿ ಎಲ್ಲಾ ಕಡೆ.

ಶ್ರೀ ಎಚ್.ಎನ್. ನಂಜೇಗೌಡ : ಅದೇನೇ ಇರಲಿ. ನಾನು ಏತಕ್ಕೆ ಹೇಳುತ್ತೇನೆ ಅಂದರೆ ಈಗ the Government must atleast spell out their priorities and stick to them. ನಾನು ಅದೂ ಮಾಡುತ್ತೇನೆ, ಹೈದರಾಬಾದ್ ಬೋರ್ಡೂ ಬೇಕು, ಮಲೆನಾಡು ಡೆವಲಪ್ಮೆಂಟ್ ಬೋರ್ಡೂ ಬೇಕು, ಮೈದಾನದ ಡೆವಲಪ್ಮೆಂಟ್ ಬೋರ್ಡೂ ಬೇಕು, ಆಮೇಲೆ ಅಕ್ಕಿ ಎರಡು ರೂಪಾಯಿ ಕೆ.ಜಿ.ಯಂತೆ ಕೊಡಬೇಕು, ನಿಲ್ಲಿಸಿ ಇವೆಲ್ಲವೂ ಇದು ಯಾಕೆ? Why don't you invest all the money on the productive schemes? What better schemes you are having than for Irrigation and Productive schemes? ನಾನು ನಿರೀಕ್ಷೆ ಮಾಡುತ್ತೇನೆ ಅಧ್ಯಕ್ಷರೆ, ಇಲ್ಲಿಯವರೆಗೆ ನಾವು.... ಚುನಾವಣೆ ಮುಗಿಯಿತು ಈಗ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಸನ್ಮಾನ್ಯ ಉಪಾಧ್ಯಕ್ಷರೆ, ನಂಜೇಗೌಡರು ಹೇಳುವುದರಲ್ಲಿ ಅರ್ಥ ಇದೆ, ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲರೂ ಕೂಡ ಒಪ್ಪಿಕೊಳ್ಳುತ್ತಾರೆ, ಪ್ರೊಡಕ್ಟೀವ್ ಸ್ಕೀಂಗಳಿಗೆ ನಮ್ಮ ಹಣವನ್ನು ತೊಡಗಿಸಬೇಕು ಮತ್ತು ಆದರಿಂದ ಉತ್ಪಾದನಾ ಶಕ್ತಿ ಹೆಚ್ಚು ಆಗುತ್ತದೆ, ಅದಕ್ಕೆ ಹೆಚ್ಚಿನ ಹಣವನ್ನು ಹಾಕಬೇಕು ಎನ್ನತಕ್ಕದ್ದು ಎಲ್ಲರ ಇಚ್ಛೆ. ಆದರೆ ಅದನ್ನು ಮಾಡುವಾಗ ನಾವು ಸಮಾಜದಲ್ಲಿರತಕ್ಕ ಅನೇಕ ದುರ್ಬಲವರ್ಗದವರಿಗೆ ಸಹಾಯ ಮಾಡತಕ್ಕ ಯೋಜನೆಯನ್ನೂ ಕೈ ಬಿಡುವುದಕ್ಕಾಗುವುದಿಲ್ಲ. ಕೆಲವು ವೆಲ್‌ಫೇರ್ ಸ್ಕೀಂಗಳು. ಉದಾಹರಣೆಗೆ ಹಿಂದುಳಿದ ಪ್ರದೇಶದಲ್ಲಿ ಒಂದು ಸ್ಕೂಲ್ ಇರಬಹುದು. ಸ್ಕೂಲು ನಿಮ್ಮ ದೃಷ್ಟಿಯಿಂದ ಅನಪ್ರೊಡಕ್ಟೀವ್ ಇರಬಹುದು. ಆದರೆ ಸಮಾಜದ ದೃಷ್ಟಿಯಿಂದ ದೇಶದ ದೃಷ್ಟಿಯಿಂದ ಅದು ಪ್ರೊಡಕ್ಟೀವ್ ಹೆಲ್ತ್. ಇದೂ ಪ್ರೊಡಕ್ಟೀವ್ ಇನ್ನು ಉಳಿದಂಥ ಅನೇಕ ವಿಚಾರಗಳಲ್ಲಿ ನಾವು ಸ್ಕಾಲರ್‌ಷಿಪ್ ಕೊಡುತ್ತೇವೆ. ಹಾಸ್ಟೆಲ್ ಮಾಡುತ್ತೇವೆ. ಇದು ಅನ್‌ಪ್ರೊಡಕ್ಟೀವ್. ಆದರೆ ಅದೆಲ್ಲವೂ ಅವಶ್ಯಕತೆ ಇರುತ್ತದೆ. ಸಬ್ಸಿಡಿ ಇಂಥದ್ದೆಲ್ಲಾ ಅವರು ಹೇಳಿದ್ದು ಒಪ್ಪಿಕೊಳ್ಳುತ್ತೇನೆ. ಉಳಿದಂಥ ವೆಲ್‌ಫೇರ್ ಮೆಷರ್ಸ್‌ಗೆ ನಾವು ಇದೇ ಟೈಮ್‌ನಲ್ಲಿ ಈ ಹೆಸರಿನಲ್ಲಿ ಅದಕ್ಕೆ ಏನೂ ಕೊಡದೆ ಅದಲ್ಲಿಗೇ ಮುಳುಗಿಸಿಬಿಡುತ್ತೇವೆ ಅಂದರೆ ಉಳಿದಂಥ ಜನರಿಗೆ ಸ್ವಲ್ಪ ತಾಪತ್ರಯ ಆಗುತ್ತದೆ. ಏಕಾಗುತ್ತದೆಂದರೆ ತಮಗೆ ಗೊತ್ತಿದ್ದಹಾಗೆ ಇಡೀ 4 ಕೋಟಿ 80 ಲಕ್ಷ ಜನರಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ಜಮೀನು ಇರತಕ್ಕವರು ಬಹಳ ಅಂದರೆ 60 ಲಕ್ಷ 65 ಲಕ್ಷ ಪಟ್ಟೇದಾರರು ಈ ದೇಶದಲ್ಲಿದ್ದಾರೆ. ಅದರಲ್ಲಿ ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್ 20-25 ಲಕ್ಷ ಇವರಿದ್ದರೆ ಉಳಿದವರು ಜಮೀನು ಜಾಸ್ತಿ ಇರತಕ್ಕವರು 15-20 ಲಕ್ಷದವರೆಗೆ ಹಿಡುವಳಿ ಇರತಕ್ಕವರು ಬರುತ್ತಾರೆ. ಅದಕ್ಕೆ ನೀವು ಇದೇ ಒಂದು ದೃಷ್ಟಿಕೋನ ಇಟ್ಟುಕೊಂಡು ಉಳಿದ ಎಲ್ಲರಿಗೂ ಸವಲತ್ತುಗಳಿಂದ ವಂಚಿತರನ್ನಾಗಿ ಮಾಡುವುದಕ್ಕಾಗು ವುದಿಲ್ಲ. ಜೊತೆಜೊತೆಯಲ್ಲಿ ಕೆಲವು ಸಲ ತೆಗೆದುಕೊಂಡು ಹೋಗಬೇಕಾಗುತ್ತದೆ. ಈಗ ಮನೆ ಕಟ್ಟುವುದು ಬಿಲ್ಡಿಂಗ್ ಕಟ್ಟುವುದು ಬೇಕಾದರೆ ನಿಲ್ಲಿಸಿ. ಉಳಿದಂಥ ವೆಲ್‌ಫೇರ್ ಸ್ಕೀಂಗಳು ಏಕೆಂದರೆ ನೀವು ಹೈದರಾಬಾದ್ ಕರ್ನಾಟಕ ಬೋರ್ಡ್ ಬಗ್ಗೆ ಹೇಳಿದಿರಿ. ಆಗ ಸ್ವಲ್ಪ ಬೇಜಾರಾಯಿತು.

ಶ್ರೀ ಎಚ್.ಎನ್.ನಂಜೇಗೌಡ : ಅದೊಂದೇ ಹೇಳಲಿಲ್ಲ ನಾನು. ಮಲೆನಾಡು ಡೆವಲಪ್ಮೆಂಟ್ ಬೋರ್ಡ್ ಹೇಳಿದೆ. ಮೈದಾನ ಡೆವಲಪ್ಮೆಂಟ್ ಬೋರ್ಡ್ ಹೇಳಿದೆ. ನಾನು ಹೇಳತಕ್ಕದ್ದು ಪ್ರಿಯಾರಿಟೀಸ್. ನಾನು ಹೇಳತಕ್ಕದ್ದು ಕೊಳಕಲು ರೋಡಿನಲ್ಲಿ ಗಾಡಿ ಹೊಡೆಯೋಣ. ಕಾರು ಏರ್ಪಡಿಸೋಣ. ಏನಾಗುತ್ತೆ? ನಾನು ಸೋಷಿಯಲ್ ವೆಲ್‌ಫೇರ್ ಮೆಷರ್ಸ್ ಏನೇನಿದೆ ಅದನ್ನು ನಿಲ್ಲಿಸಿ ಎಂದು ಹೇಳಲಿಲ್ಲ. ಅದಲ್ಲದೆ ಬೇರೆ ಬೇರೆ ಖರ್ಚುಗಳಿವೆ. ಹಿಂದೆ 1969ರಲ್ಲಿ ಅಂತ ಕಾಣುತ್ತದೆ ರಿಸೋರ್ಸ್ ಮೊಬಲೈಸೇಷನ್ ಕಮಿಟಿ ಮಾಡಿದ್ದರು ಈ ಸಭೆಯದು. ವೈ.ರಾಮಕೃಷ್ಣ ಅವರೂ ಮೆಂಬರ್ ಆಗಿದ್ದರು. ಬಹುಶಃ ಅದರಲ್ಲಿ ಮಾರ್ಗಸೂಚಿಯನ್ನೂ ಹಾಕಿದ್ದಾರೆ ಯಾವುದನ್ನು ಕೈಬಿಡಬಹುದು. ಎಂಥೆಂಥ ಸ್ಕೀಮ್ಸ್ ಕೈಬಿಡಬಹುದು ಎಂದು. ಈಗ ಕೃಷ್ಣಾ ಬೇಸಿನ್‌ದೇ 19 ಪ್ರಾಜೆಕ್ಟ್ ಹೆಸರು ಹೇಳಿದ್ದೇನೆ. ಈ 19 ಪ್ರಾಜೆಕ್ಟ್‌ಗೆ ಎಷ್ಟು ಖರ್ಚಾಗುತ್ತದೆ? ಅಪ್ಪರ್ ತುಂಗಾ, ಅಪ್ಪರ್ ಭದ್ರಾ, ಭೀಮಾ ಫ್ಲೋ ಇರಿಗೇಷನ್, ಭೀಮಾ ಲಿಫ್ಟ್ ಇರಿಗೇಷನ್ ಇವೆಲ್ಲಾ ಸೇರಿ ಎಷ್ಟಾಗುತ್ತದೆ. ಎಂಬುದನ್ನು ಅವರು ಲೆಕ್ಕ ಹೇಳಬೇಕು. ಈ ಸ್ಕೀಂಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸಿಂಗಟಲೂರೂ ಲಿಫ್ಟ್ ಇರಿಗೇಷನ್ ಸ್ಕೀಮ್ ತುಂಗಭದ್ರಾದಲ್ಲಿ, ಏಕೆಂದರೆ ಸಿಂಗಟಲೂರಿನಲ್ಲೇ ಆಗಬೇಕಾಗಿತ್ತು ತುಂಗಭದ್ರಾ 1945ರಲ್ಲಿ ಪ್ರಾರಂಭ ಮಾಡಿದಾಗ, ಇದಾಗಿದ್ದರೆ ಇನ್ನೊಂದು ಮೂರು ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯಲ್ಲಿ ನೀರಾವರಿ ಆಗುತ್ತಿತ್ತು. ಕೃಷ್ಣಾ ಬೇಸಿಸ್‌ನಲ್ಲಿರತಕ್ಕದ್ದನ್ನೇ ಹೇಳುತ್ತಿದ್ದೇನೆ. ನಾನು ಒಂದು ಅಂದಾಜು ಹೇಳಿ. ಇಷ್ಟನ್ನು ಹೇಳಿ, ರಿಸೋರ್ಸ್ ಮೊಬಲೈಸ್ ಮಾಡಬೇಕು You should spell out your priorties, You should spell out whether you want to have irrigation as the first priority or not. ಏತಕ್ಕೆ ಇದನ್ನು ಹೇಳುತ್ತೇನೆಂದರೆ ಅಧ್ಯಕ್ಷರೇ ಅಂದರೆ ನಾವು ಅವತ್ತು ಫೈನಾನ್ಸ್ ಮೇಲೆ ಓಟ್ ಮಾಡತಕ್ಕ ಕಾಲದಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಎಷ್ಟು ಕೋಟಿ ಓಟು ಮಾಡಬೇಕು ಅಂದರೆ ಸರ್ಕಾರದ ಹತ್ತಿರ ತಕ್ಷಣ ಉತ್ತರ ಇರಲಿಲ್ಲ. ಎಷ್ಟು ಕ್ಯಾಷುಯಲ್ಲಾಗಿ ತೆಗೆದುಕೊಂಡಿದ್ದಾರೆ ನೋಡಿ. ನಮ್ಮ ಹಣಕಾಸಿನ ಮಂತ್ರಿಗಳಿಗೆ ತಕ್ಷಣ ಉತ್ತರ ಹೇಳುವುದಕ್ಕೆ ಉತ್ತರ ಇರಲಿಲ್ಲ. ಅರ್ಧ ಗಂಟೆ ಹಿಡಿಯಿತು ಇಲ್ಲಿ. ನಾವು ಕಾದು ಎಲ್ಲಾ ಮಾಡಬೇಕಾಯಿತು. ಇಷ್ಟು ಕ್ಯಾಷುಯಲ್ಲಾಗಿ ತೆಗೆದುಕೊಳ್ಳಬೇಡಿ. Let us be serious. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇನ್ನು ಸುಳ್ಳುಗಳನ್ನು ಹೇಳಬೇಕಾದ ಅವಶ್ಯಕತೆ ಇಲ್ಲ. ಚುನಾವಣೆಯಾಯಿತು. ಇನ್ನು 5 ವರ್ಷ ಅಧಿಕಾರದಲ್ಲಿರುತ್ತೀರಿ. ಸಂತೋಷ 5 ವರ್ಷದೊಳಗೆ ಅಪ್ಪರ್ ಕೃಷ್ಣಾ ಯೋಜನೆಯನ್ನು ಮುಗಿಸಿಬಿಟ್ಟರೆ. You should not perpetuate the myth. It must become a reality. ರಿಯಾಲಿಟೀಸ್‌ಗೆ ನಾನೂ ಸಂತೋಷಪಡುತ್ತೇನೆ. ನಮ್ಮ ಜಿಲ್ಲೆಯವರೊಬ್ಬರು ಮುಖ್ಯ ಮಂತ್ರಿಯಾದಾಗ ಇವೆಲ್ಲಾ ಮುಗಿದೆ ಹೋದವು ಅಂದರೆ ನಾನೂ ಬುಜತಟ್ಟಿಕೊಳ್ಳಬಹುದಲ್ಲ ; ಆದರೆ ನನಗಂತೂ ಇದನ್ನು ಮುಗಿಸುವುದಕ್ಕಾಗು ವುದಿಲ್ಲ ಎಂದು ಅನ್ನಿಸಿದೆ.

ಇನ್ನು ರೀ-ಹ್ಯಾಬಿಲಿಟೇಷನ್ ನಾವು ಇದ್ದಾಗ ಒಂದು ಯೋಜನೆ ಏನು ಮಾಡಿದ್ದೇವು ಅಂದರೆ, ಹಳೆಯ ಮೈಸೂರು ಭಾಗದಲ್ಲಿ ಹೇಮಾವತಿ ಯೋಜನೆಯ

ರೀ-ಹ್ಯಾಬಿಲಿಟೇಟ್ ಮಾಡುವಂತಹ ಕಾಲದಲ್ಲಿ ಸರ್ಕಾರಿ ಜಮೀನು ಸಾಕಷ್ಟು ಇತ್ತು. ಸರ್ಕಾರಿ ಜಮೀನನ್ನು ಮುಳುಗಡೆಯಾದವರಿಗೂ ಕೊಟ್ಟರು, ಪರಿಹಾರವನ್ನೂ ಕೊಟ್ಟರು. ಇಲ್ಲಿ ಏನಾಗಿದೆ ಅಂದರೆ ಮಾರುಕಟ್ಟೆ ರೇಟಿನಲ್ಲಿ ಪರಿಹಾರವೂ ಸಿಕ್ಕುತ್ತಿಲ್ಲ. ಜಮೀನನ್ನು ಕೊಡುವುದಕ್ಕೆ ಜಮೀನೇ ಇಲ್ಲ. ಸನ್ಮಾನ್ಯ ದಿವಂಗತ ದೇವರಾಜ ಅರಸುರವರು ಇದ್ದಂತಹ ಕಾಲದಲ್ಲಿ ಒಂದು ಸಂದರ್ಭದಲ್ಲಿ ಏನು ಯೋಜನೆ ಮಾಡಿದ್ದರು ಅಂದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ. ಆ ಪ್ರಶ್ನೆ ಬೇರೆ. ಯಾರು ದೊಡ್ಡ ಹಿಡುವಳಿದಾರರು ಇದ್ದಾರೆ, ನೀರಾವರಿಯಾಗುತ್ತದೆ. 80 ಎಕರೆ ಆಗಬಹುದು, 50 ಎಕರೆ ಆಗಬಹುದು, 40 ಎಕರೆ ಆಗಬಹುದು, 100 ಎಕರೆ ಆಗಬಹುದು. ಆ ಜಮೀನನ್ನು ಅಕ್ವೈರ್ ಮಾಡಿಕೊಂಡು ಮುಳುಗಡೆಯಾದವರಿಗೆ ಕೊಂಡುವಂಥದ್ದು ಮುಳುಗಡೆಯವರದ್ದು ಸಮಸ್ಯೆಯೋ ಸಮಸ್ಯೆ ಇದು ಹ್ಯೂಮನ್ ಪ್ರಾಬ್ಲಮ್. ಅಪ್ಪರ್ ಕೃಷ್ಣಾದಲ್ಲಿ 88 ಸಾವಿರ ಎಕರೆ ಮುಳುಗಡೆಯಾಗುತ್ತದೆ ಎಂದು ಅವತ್ತು ಇತ್ತು. ಇವತ್ತು ಎಷ್ಟು ಆಗುತ್ತದೆಯೋ ಗೊತ್ತಿಲ್ಲ. Almost an irrigable area under a small project 88 ಸಾವಿರ ಎಕರೆ ಮುಳುಗಡೆಯ ಬಗ್ಗೆಯೂ ನೀವು ಸೀರಿಯಸ್ಸಾಗಿ ಗಮನಹರಿಸಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಿ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ. ಜುರಾಲ, ತೆಲುಗು ಗಂಗಾ ಯೋಜನೆಗಳ ಬಗ್ಗೆ ನಿರ್ಧಿಷ್ಟವಾದ ಉತ್ತರವನ್ನು ತೆಗೆದುಕೊಳ್ಳದೆ, ಜುರಾಲ, ತೆಲುಗು ಗಂಗಾ ಯೋಜನೆಗಳ ಬಗ್ಗೆ ನಿರ್ಧಿಷ್ಟವಾದ ಉತ್ತರವನ್ನು ನಾನು ಬಯಸುತ್ತೇನೆ. ಜುರಾಲ ಬಗ್ಗೆ ಅನೇಕ ವಿಚಾರಗಳು ಬಂದಿದ್ದು, ನನಗೇ ಕನ್‌ಫ್ಯೂಸ್ ಆಗಿದೆ. ಯಾವುದು ಸರಿ : ಯಾವುದು ಸರಿಯಲ್ಲ. ತೆಲುಗು ಗಂಗಾಕ್ಕೆ What do you propose to do? ಇಲ್ಲಿಯವರೆಗೆ ಸರ್ಕಾರ ಏನು ಮಾಡಿದೆ. ಮುಂದೆ ಏನು ಮಾಡುವುದಕ್ಕೆ ಯೋಚನೆ ಮಾಡಿದ್ದೀರಿ? ಜುರಾಲ ಪ್ರಾಜೆಕ್ಟ್‌ನ ಅವ್ಯವಸ್ಥೆ ಏನು? ತುಂಗ ಭದ್ರಾದ ಲೋ-ಲೆವಲ್ ಕೆನಾಲ್‌ನಲ್ಲಿ ಈಗಲೂ ಕೂಡ 3 ಸಾವಿರ ಕ್ಯೂಸೆಕ್ಸ್ ಆಂಧ್ರಕ್ಕೆ ನೀರು ಬಿಡುತ್ತಾ ಇದ್ದಾರೆ. ಏನು ಕಾರಣಕ್ಕೆ ನೇರವಾಗಿ ಬಿಡುತ್ತಿದ್ದೀರಿ ಅದಾದರೂ ಗೊತ್ತಾಗಬೇಕಲ್ಲ ಬಿಡುತ್ತಿದ್ದೀರೋ ರಾಜ ರೋಷವಾಗಿ ಬಿಡುತ್ತಿದ್ದೀರೋ? ಎನ್ನುವುದು ಸಭೆಗೆ ಗೊತ್ತಾಗಬೇಕಲ್ಲ. ಅಥವಾ ಕದ್ದು ಬಿಡುತ್ತಿದ್ದೀರೋ ಅದಾದರೂ ಗೊತ್ತಾಗಬೇಕಲ್ಲ. Is it Understandable? can you not stop it and feed our own farmers. ಬೆಳೆಬಂದು ವಡೆ ಬಂದು ಗಬ್ಬಾಗತಕ್ಕಂತಹ ಟೈಮು. ಪೈರು ನೀರಿಲ್ಲದೆ ಒಣಗುತ್ತಿದೆ. ಸರ್ಕಾರ ಅದರ ಬಗ್ಗೆ ಬೆಳಕು ಚೆಲ್ಲಬೇಕು. ಎನ್ನತಕ್ಕಂತಹದ್ದನ್ನು ಒತ್ತಾಯ ಮಾಡಿ. ಇಷ್ಟೊತ್ತು ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ, ಎಲ್ಲರಿಗೂ ವಂದಿಸಿ, ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಶ್ರೀರಂಗದೇವರಾಯಲು (ಗಂಗಾವತಿ) : ನಾನು 1983ರಿಂದ ಈ ಸದನದಲ್ಲಿದ್ದೇನೆ. ನಾನು ಭಾಷಣ ಮಾಡುತ್ತಿರುವುದು ಮೊದಲನೆಯ ಸಲ. ಅಷ್ಟೊಂದು ಒತ್ತಡ ಮಾಡುತ್ತಿದ್ದೇನೆ. ಕಾರಣ ಇಷ್ಟೆ, ಮಾರ್ಚಿ 18ನೇ ತಾರೀಖಿಗೆ ಲೋ ಲೆವಲ್ ಕೆನಾಲ್‌ನ್ನು ಕ್ಲೋಸ್ ಮಾಡುವುದನ್ನು ಬಿಟ್ಟು ಈವರೆಗೆ ನೀರನ್ನು ನೀವು ಕೊಡುತ್ತಿದ್ದೀರಿ. ಒಂದು ನಿಮಿಷ - ನಿಮಿಷಕ್ಕೂ ನಮ್ಮ ಜಲಾಶಯದಲ್ಲಿ ನೀರು ಕಡಿಮೆಯಾಗುತ್ತಿದೆ.

ನೀರು ಕಡಿಮೆಯಾದಾಗ ರೈತರ ಒಂದು ಅಳಲನ್ನು ಅವರ ಕಣ್ಣೀರನ್ನು ಒರೆಸತಕ್ಕ ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ನನಗೆ ಮಾತನಾಡುವುದಕ್ಕೆ ಏಕೆ ಅವಕಾಶ ಕೊಡಲಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಶ್ರೀಮಾನ್ ನಂಜೇಗೌಡರು ಮಾತನಾಡುವುದಕ್ಕಿಂತ ಮೊದಲು ಮಾತನಾಡಬೇಕೆಂದು ಇದ್ದೆ. ಆಂಧ್ರಕ್ಕೆ ಹೋಗುತ್ತಿರುವ ಲೋ-ಲೆವಲ್ ಕೆನಾಲ್‌ನ್ನು ನಿಲ್ಲಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಉಪಾಧ್ಯಕ್ಷರೆ, ತಮಗೆ ಗೊತ್ತಿದೆ, ತಾವು ರಾಯಚೂರು ಜಿಲ್ಲೆಯವರು. ನಮ್ಮ ಭಾಗದಲ್ಲಿರತಕ್ಕ ಕಬ್ಬಿಗೆ 500 ಕ್ಯೂಸೆಕ್ಸ್ ನೀರು ಒಂದು ದಿವಸಕ್ಕೆ ಬೇಕು. ಲೋ-ಲೆವಲ್ ಕೆನಾಲ್‌ನಲ್ಲಿ 1800 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೀರಿ ಅವರಿಗೆ ಬಿಡುತ್ತಿರುವ ಒಂದು ದಿನದ ನೀರು ನಮಗೆ ಮೂರೂವರೆ ದಿವಸಕ್ಕೆ ಸಾಕಾಗುತ್ತದೆ. ಆದ್ದರಿಂದ ದಯಮಾಡಿ ನೀವು ಅದನ್ನು ನಿಲ್ಲಿಸಿದರೆ, ನಮ್ಮ ರೈತರು ಮೂರೂವರೆ ದಿವಸ ಸಂತೋಷವಾಗಿರತಕ್ಕ ಪರಿಸ್ಥಿತಿ ಬರುತ್ತದೆ. ದಯಮಾಡಿ ತಕ್ಷಣ ನಿಲ್ಲಿಸಿರಿ ಮಾರ್ಚ 10ನೇ ತಾರೀಖು ನಿಲ್ಲಿಸಬೇಕಾಗಿತ್ತು. ಇನ್ನೂವರೆಗೆ ಅವರಿಗೆ ನೀರನ್ನು ಕೊಡುತ್ತಿದ್ದೀರಿ. ನಾವು ಅಲ್ಲಿ ಅಧಿಕಾರಿಗಳಿಗೆ ಹೇಳುತ್ತಿದ್ದರೆ ಇಲ್ಲ, ಹಂತ ಹಂತವಾಗಿ ಕಡಿಮೆ ಮಾಡುತ್ತಾ ಬರುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಈ ಮಾತನ್ನು ಹೇಳಿ ಒಂದು ವಾರವಾಯಿತು. ಇನ್ನೂ ಕಡಿಮೆ ಮಾಡಿಲ್ಲ. ಈಗ ಕೂಡ ನನಗೆ ಫೋನ್ ಬಂತು. ಇನ್ನೂ ಕಡಿಮೆ ಮಾಡಿಲ್ಲ. ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಜನರ ಕಣ್ಣೀರಿನ ಅಳಲು ಏನು ಇದೆ, ಅವರ ಕಣ್ಣೀರನ್ನು ಒರೆಸುವ ಪ್ರಯತ್ನವನ್ನು ಮಾಡಿ ಎಂಬುದಾಗಿ ಕಳಕಳಿಯಿಂದ ತಮ್ಮ ಮೂಲಕ ಅದನ್ನು ಕೇಳಿಕೊಳ್ಳುತ್ತೇನೆ.

* ಶ್ರೀ ಕೆ. ವಿರೂಪಾಕ್ಷಪ್ಪ : (ಸಿಂಧನೂರು) :: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಶ್ರೀರಂಗದೇವರಾಯಲು ಅವರು ಹೇಳಿರುವಂತೆ, ತಮಗೂ ಗೊತ್ತಿರುವಂತೆ, ತಾವೂ ಕೂಡ ನಮ್ಮ ರಾಯಚೂರು ಜಿಲ್ಲೆಯವರು. ತುಂಗ ಭದ್ರಾ ಜಲಾಶಯದಲ್ಲಿ ಹೆಚ್ಚಿನ ಭಾಗದ ನೀರನ್ನು ನಮ್ಮ ರಾಯಚೂರು ಜಿಲ್ಲೆ ಪಡೆಯುತ್ತಿರತಕ್ಕಂತಹದ್ದು ತಮಗೆ ಗೊತ್ತಿರುವ ವಿಷಯ. ಅಂದರೆ ಶೇ. 70 ಭಾಗ ನಮ್ಮ ಜಲಾಶಯದ ನೀರನ್ನು ನಮ್ಮ ರಾಯಚೂರು ಜಿಲ್ಲೆಯ 6 ಲಕ್ಷ ಏಕರೆ ಪ್ರದೇಶದ ನೀರಾವರಿಗೆ ಉಪಯೋಗಿಸುತ್ತಿದ್ದೇವೆ. ಅದರ ಪೈಕಿ ನೀರಾವರಿ ಮಾಡುತ್ತಿರತಕ್ಕಂಥದ್ದು 4 ಲಕ್ಷ ಎಕರೆ ಮಾತ್ರ. ಹಿಂಗಾರಿ ಸೀಸನ್‌ನಲ್ಲಿ ಬೆಳೆದು ನಿಂತರತಕ್ಕ 4 ಲಕ್ಷ ಎಕರೆಯಲ್ಲಿ ಅಂದಾಜು ಎರಡೂ - ಎರಡೂವರೆ ಲಕ್ಷ ಏಕರೆ ಭತ್ತ 1 ಲಕ್ಷ ಎಕರೆ ಹತ್ತಿ, ಮತ್ತು 50 ಸಾವಿರ ಎಕರೆ ಎಣ್ಣೆ ಕಾಳು ಬೆಳೆಗಳು. ಆದರೆ ಇವತ್ತು ಸರ್ಕಾರದ ಒಂದು ನೀತಿಯಿಂದಾಗಿ ಈ ಬೆಳೆಗಳ ಪೈಕಿ ಒಂದು ನೀತಿಯಿಂದಾಗಿ ಈ ಬೆಳೆಗಳ ಪೈಕಿ ಒಂದು ಲಕ್ಷ ಎಕರೆಗೆ ಮೇಲ್ಪಟ್ಟು, ಹಾನಿಗೊಳಗತಕ್ಕದ್ದು ತಮಗೂ ಗೊತ್ತಿರುವ ವಿಚಾರ. ಇದೇ ಏಪ್ರಿಲ್ ತಿಂಗಳು 3 ನೇ ತಾರೀಖು ಈ ಸದನದಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮುಖ್ಯಮಂತ್ರಿಗಳು ಏಪ್ರಿಲ್ 8 ನೇ ತಾರೀಖಿಗೆ ನೀರು ನಿಲ್ಲಿಸುತ್ತೇವೆ, ಅದರ ನಂತರ ನಾವು ನೀರನ್ನು ಕೊಡುವುದಕ್ಕಾಗುವುದಿಲ್ಲ, ಜಲಾಶಯದಲ್ಲಿ ನೀರಿನ ಕೊರತೆ ಇದೆ, ಅಲ್ಲದೆ ಎಡದಂತೆ ಮುಖ್ಯ ಕಾಲುವೆಯ ಒಳಮೈ ದುರಸ್ತಿ ಕಾರ್ಯವನ್ನು ನಾವು ತೀವ್ರವಾಗಿ

ತೆಗೆದುಕೊಳ್ಳಬೇಕಾಗಿದೆ ಎನ್ನತಕ್ಕಂತಹ ಮಾತನ್ನು ಆ ದಿವಸ ಹೇಳಿದರು. ಅದರ ನಂತರ ನಮ್ಮ ರಾಯಚೂರು ಜಿಲ್ಲೆಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ರೈತರ ಪ್ರತಿಭಟನೆ, ಚಳುವಳಿ, ಪ್ರಾರಂಭವಾದದ್ದು ಕೂಡ ತಮಗೆ ಗೊತ್ತಿದೆ. ರೈತರ ಪ್ರತಿಭಟನೆ ಪ್ರಾರಂಭವಾದ ನಂತರ ಸರ್ಕಾರ ಪುನಃ 15ನೇ ತಾರೀಖಿನವರೆಗೆ ನೀರನ್ನು ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ಶ್ರೀಮಾನ್ ರಾಯರೆಡ್ಡಿಯವರು ಹೇಳಿಕೆ ಕೊಟ್ಟು ಅಧಿಕಾರಿಗಳಿಗೆ ಆದೇಶ ಕೊಟ್ಟರು. ಆ ಪ್ರಕಾರ ಕೆನಾಲ್‌ನಲ್ಲಿ ನೀರನ್ನು ಮುಂದುವರಿಸಿದರು. ಆದರೆ ಅವರು ಹೇಳಿದ ಪ್ರಕಾರ ಪ್ರತಿ ದಿವಸ 3500 ಕ್ಯೂಸೆಕ್ಸ್ ನೀರು ಕಡಿಮೆಯಾಗುತ್ತ ಏನು ಬರಬೇಕಾಗಿತ್ತು, ಅದು ಕೆನಾಲ್‌ನಲ್ಲಿ ಬರಲಿಲ್ಲ. ಪ್ರತಿ ದಿವಸ ನೀರು ಹೋಗಿ ಇವತ್ತು ಸಾಕಷ್ಟು ಬೆಳೆ ಅಲ್ಲಿ ಒಣಗಿದೆ. ಇದಕ್ಕೆ ಕಾರಣ ಇಷ್ಟೆ. ಎಡದಂಡೆ. ಮುಖ್ಯ ಕಾಲುವೆಗೆ ಬರತಕ್ಕಂತಹ ಅಂದಾಜು ನನಗೆ ತಿಳಿದ ಮಟ್ಟಿಗೆ 78 ಟಿ.ಎಂ.ಸಿ. ನೀರು ಈ ವರ್ಷದಲ್ಲಿ ನಮ್ಮ ಎಡದಂತೆ ಕಾಲುವೆಗೆ ಬಿಡಬೇಕಾಗಿತ್ತು. ಆದರೆ ಆ ಪೈಕಿ ನಮ್ಮ ಎಡದಂಡೆ ಕಾಲುವೆಯಲ್ಲಿ ಉಪಯೋಗಿಸಿಕೊಂಡಿರುವುದು 70 ಟಿ.ಎಂ.ಸಿ. ಮಾತ್ರ ಎಂದು ನನಗೆ ತಿಳಿದು ಬಂದಿರತಕ್ಕಂಥದ್ದು. ಆದರೆ ನಮ್ಮ ನೀರನ್ನು ಈಗಾಗಲೇ ನಮ್ಮ ಹಿರಿಯ ಸದಸ್ಯರು ಹೇಳಿದಂತೆ ಇದುವರೆಗೂ ಕೂಡ ಅಂಧ್ರಕ್ಕೆ ಬಿಡತಕ್ಕಂತಹದ್ದು, ಅಲ್ಲದೆ ಹಿಂದೆ ನಮ್ಮ ತುಂಗಭದ್ರ ಬೋರ್ಡ್. ಆಂಧ್ರ ಸರ್ಕಾರದ ವಿನಂತಿ ಮೇರೆಗೆ, ಈ ಸರ್ಕಾರ ಆಂದ್ರಕ್ಕೆ 2 ಟಿ.ಎಂ.ಸಿ. ನೀರನ್ನು ಕೊಟ್ಟಿರುವುದು. ಅದೂ ಅಲ್ಲದೆ, ನಮ್ಮ ನೀರಾವರಿ ಸಲಹಾ ಸಮಿತಿಯ ನಿರ್ಣಯದ ವಿರುದ್ಧವಾಗಿ, ಅಥವಾ ನಿರ್ಣಯನ್ನು ಕಡೆಗಣಿಸಿ, ಹೆಚ್ಚಿಗೆ ನೀರು ಕೊಟ್ಟಿರತಕ್ಕಂಥಹದ್ದು ನಮ್ಮ ಎಡದಂತೆ ಕಾಲುವೆಯ ನೀರು ಎನ್ನತಕ್ಕಂತಹದ್ದು ನನ್ನ ಪ್ರತಿಪಾದನೆ. ತಮ್ಮ ಬೇಜವಾಬ್ದಾರಿಯಿಂದಾಗಿ ಅಲಕ್ಷ್ಯತನದಿಂದಾಗಿ ರಾಯಚೂರು ಜಿಲ್ಲೆಯಲ್ಲಿ ಲಕ್ಷಾಂತರ ಏಕರೆಯಲ್ಲಿ ಬೆಳೆ ಹಾಳಾಗಿ, ನೂರಾರು ಕೋಟಿ ಹಾನಿಯಾಗಿದೆ. ಆ ಬೆಳೆ ಹಾನಿಗೆ, ಈ ಸರ್ಕಾರದ ನಿರ್ಲಕ್ಷ್ಯತನವೇ ಕಾರಣ ಅನ್ನತಕ್ಕಂತಹ ದೂರನ್ನು ನಾನು ಕೊಡುತ್ತಿದ್ದೇನೆ. ಅದರ ಜೊತೆಗೆ ಈ ಹಾನಿಗೊಳಗಾದ ರೈತರಿಗೆ ಯಾವ ರೀತಿಯಲ್ಲಿ ಪರಿಹಾರವನ್ನು ಒದಗಿಸುತ್ತೀರಿ ಎಂಬುದನ್ನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಂಡು, ಸದನದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

* ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಬಹಳ ಸಂತೋಷ. ಇವತ್ತು ಈ ಸದನದಲ್ಲಿ ಈ ಅಧಿವೇಶನದ ಕೊನೆಯ ದಿವಸ ನಾವು ಕರ್ನಾಟಕ ರಾಜ್ಯದ ಜೀವಾಳಾದಂತಹ ನೀರಾವರಿಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇನ್ನೊಂದು ಸ್ವಾಗತಾರ್ಹವಾದಂತಹ ವಿಚಾರ ಎಂದು ಹೇಳಿದರೆ, ನೀರಾವರಿ ಬಗ್ಗೆ ಆಳವಾದ ಅಧ್ಯಯನ ಮಾಡಿದಂಥ ಮತ್ತು ಆ ಬಗ್ಗೆ ವಿಶೇಷವಾದಂತಹ ಹೋರಾಟವನ್ನು ಸಚಿವರಾಗಿದ್ದಾಗ ಅಥವಾ ಸಂಸತ್ ಸದಸ್ಯರಾಗಿದ್ದಾಗ ಮಾಡಿದಂತಹ ಮಾನ್ಯ ದೇವೇಗೌಡರೆ ಮುಖ್ಯಮಂತ್ರಿಯಾಗಿ ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಂಥಹ ಈ ಸಂದರ್ಭದಲ್ಲಿ ಇದು ಬಹಳ ಪ್ರಸ್ತುತ ವಾಗಿದೆ. ಕರ್ನಾಟಕ ರಾಜ್ಯದ ಈ ಒಂದು ಸಮಸ್ಯೆ, ಅದರ ಬಹಳ ಸ್ಪಷ್ಟವಾದ

ವಿಶ್ಲೇಷಣೆ, ಚಿತ್ರಣವನ್ನು ನಮ್ಮ ಅತ್ಯಂತ ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಸ್ಪಷ್ಟಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನು ಇವತ್ತು ವಿಶ್ಲೇಷಣೆ ಮಾಡುವುದಕ್ಕೆ ಅಥವಾ ಕರ್ನಾಟಕ ರಾಜ್ಯ ಅನುಭವಿಸಿದಂಥ ಕಷ್ಟನಷ್ಟ ಅಥವಾ ದುರಂತವನ್ನು ಅವರಷ್ಟು ಸ್ಪಷ್ಟವಾಗಿ ಬಹುಶಃ ಬೇರೆ ಯಾರೂ ಮುಂದೆ ಇಡುವುದಕ್ಕೆ ಸಾಧ್ಯ ವಾಗುವುದಿಲ್ಲ. ಆದ್ದರಿಂದ ಈ ಹಿನ್ನಲೆಯ ಲಾಭವನ್ನು ನಾನು ತೆಗೆದುಕೊಂಡು ಪ್ರಸ್ತುತ ಯಾವ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ, ಯಾವರೀತಿಯಲ್ಲಿ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಒಮ್ಮನಸ್ಸಿನಿಂದ ಈ ಸವಾಲುಗಳನ್ನು ಸ್ವೀಕರಿಸಬೇಕಾದಂಥ ಒಂದು ಚಟುವಟಿಕೆಯನ್ನು ಮಾಡಬೇಕೆಂದು ಹೇಳಿ ಕೆಲವು ಮಾತುಗಳನ್ನು ಮಾತ್ರ ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಇಡೀ ರಾಷ್ಟ್ರದಲ್ಲಿ ಇವತ್ತು ನೀರಾವರಿಯಲ್ಲಿ ವಿಶೇಷವಾದಂಥ ಅನ್ಯಾಯ ತಾರತಮ್ಯ ಆಗಿದ್ದರೆ ಅದು ದಕ್ಷಿಣ ಭಾರತದಲ್ಲಿ ಮಾತ್ರವಲ್ಲ, ಅದು ಇಡೀ ರಾಷ್ಟ್ರದಲ್ಲಿ ಕರ್ನಾಟಕಕ್ಕೆ. ಮಾನ್ಯ ಗುಲಾಟಿಯವರು ಮಾಸ್ಟರ್ ಪ್ಲಾನ್ ಅನ್ನು ತಯಾರು ಮಾಡಿದ್ದಾರೆ. ಅದು ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟಿದ್ದುದು. ಎಲ್ಲಾ ಇರಿಗೇಶನ್ ಕಮೀಷನ್ ಕೂಡ ಈ ಮಾತನ್ನು ಒಪ್ಪಿಕೊಂಡಿದೆ. ಕರ್ನಾಟಕ ಇವತ್ತು ಅತ್ಯಂತ ವಿಶೇಷವಾದಂಥ ಸಮಸ್ಯೆಯನ್ನು ನೀರಾವರಿ ಕ್ಷೇತ್ರದಲ್ಲಿ ಎದುರಿಸುವಂಥ ರಾಜ್ಯವೆಂದು, ಅದನ್ನು ಇರಿಗೇಶನ್ ಕಮೀಷನ್ ಗಮನಿಸಿದೆ. ಆ ಒಂದು ಇರಿಗೇಶನ್ ಕಮೀಷನ್ ಮಾಡಿದಂಥ ಒಂದು ಸಣ್ಣ ವಿಶ್ಲೇಷಣೆಯನ್ನು ಈ ಸದನಮುಂದೆ ನಾನು ಇಡುವುದಿದ್ದರೆ ಆಂಧ್ರಪ್ರದೇಶದ 7 ಜಿಲ್ಲೆಗಳು ಬರಗಾಲ ಪ್ರದೇಶಗಳು ಆಗಿದ್ದರೆ, 60 ತಾಲ್ಲೂಕುಗಳು ಅಲ್ಲಿ ಇದ್ದರೆ, ನಮ್ಮ ಕರ್ನಾಟಕದಲ್ಲಿ 12 ಜಿಲ್ಲೆಗಳು, 88 ತಾಲ್ಲೂಕುಗಳು ಬರಗಾಲ ಪೀಡಿತವಾಗಿದೆ. ಗುಜರಾತಿನಲ್ಲಿ ಕೂಡ 11 ಜಿಲ್ಲೆಗಳು, 60 ತಾಲ್ಲೂಕುಗಳು ಇವೆ. ಹರಿಯಾಣ - 3 ಜಿಲ್ಲೆಗಳು, 6 ತಾಲ್ಲೂಕುಗಳು ಇವೆ. ಮಧ್ಯಪ್ರದೇಶ 9 ಜಿಲ್ಲೆಗಳು, 24 ತಾಲ್ಲೂಕುಗಳು ಇವೆ. ಮಹಾರಾಷ್ಟ್ರ 9 ಜಿಲ್ಲೆಗಳು 45 ತಾಲ್ಲೂಕುಗಳು ಇವೆ. ರಾಜಸ್ಥಾನ 9 ಜಿಲ್ಲೆಗಳು ಅದು ಮರುಭೂಮಿಪ್ರದೇಶ ಇದ್ದರೂ ಕೂಡ 19 ತಾಲ್ಲೂಕುಗಳು ಮಾತ್ರ ಇವೆ. ತಮಿಳುನಾಡು 7 ಜಿಲ್ಲೆಗಳು 24 ತಾಲ್ಲೂಕುಗಳಲ್ಲಿ ಮಾತ್ರ ಬರಗಾಲದ ಪ್ರದೇಶಗಳೆಂದು ಈಗಾಗಲೇ ಗುರುತಿಸಲ್ಪಟ್ಟಿವೆ. ಆದ್ದರಿಂದ ನಮ್ಮ ರಾಜ್ಯದ ಸಮಸ್ಯೆಯನ್ನು ಇವತ್ತು ಹೋಗಲಾಡಿಸಬೇಕಾದರೆ ನೀರಾವರಿಗೆ ಪ್ರಥಮ ಆಧ್ಯತೆಯನ್ನು ಕೊಡಬೇಕು. ಮತ್ತು ವಿಶೇಷವಾದಂಥ ಸಮರೋಪಾದಿಯ ಒಂದು ಕಾರ್ಯಕ್ರಮವನ್ನು ರೂಪಿಸಿ ನಮ್ಮ ರಾಜ್ಯದ ಒಂದು ಸಮಸ್ಯೆಯನ್ನು ಹೋಗಲಾಡಿಸಬೇಕಾದಂಥ ಅವಶ್ಯಕತೆ ಇದೆ ಎಂಬುದಕ್ಕೆ ಬಹುಶಃ ಇರಿಗೇಶನ್ ಕಮಿಷನ್ ಕೊಟ್ಟಂಥ ಚಿತ್ರಕ್ಕಿಂತ ಬೇರೆ ಚಿತ್ರ ಖಂಡಿತವಾಗಿಯೂ ಬೇಕಾಗಿಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಾವು ಸದ್ಯ ಎದುರಿಸತಕ್ಕಂಥ ಜಲಾನಯನ ಯೋಜನೆಗಳು ಎರಡು. ಒಂದು ಕಾವೇರಿ ಬೇಸಿಸ್ ಜಲಾಯನ ಪ್ರದೇಶ ಮತ್ತೊಂದು ಕೃಷ್ಣಾ ಬೇಸಿಸ್ ಜಲಾಯನ. ಈ ಎರಡು ಜಲಾಯನಗಳಲ್ಲಿ ಇವತ್ತು ವಿಶೇಷ ಒತ್ತಡದಿಂದ ನಾವು ಕೆಲಸ ಮಾಡಬೇಕಾಗಿದೆ. ನಮ್ಮ ಹಕ್ಕಿನ ಪ್ರಶ್ನೆ ಇದೆ. ನಾವು ಜವಾಬ್ದಾರಿಯಿಂದ ಹಕ್ಕನ್ನು ಉಳಿಸಿಕೊಳ್ಳಬೇಕಾದಂಥ ಒಂದು ಕರ್ತವ್ಯ, ನಿಗದಿಯಾದಂಥ ಒಂದು ಹೋರಾಟನ್ನು

ತಯಾರು ಮಾಡಿಕೊಂಡು ಇವತ್ತು ನಮ್ಮ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿದೆ. ಆದರೆ ಅಷ್ಟಕ್ಕೇ ಈ ಸಮಸ್ಯೆಗಳು ನೆರವೇರುತ್ತವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅಂಡರ್‌ಗ್ರೌಂಡ್ ವಾಟರ್ ಸಮಸ್ಯೆ, ಏಕೆಂದರೆ ಅತ್ಯಂತ ಕಡುಬಡವರು ಇರತಕ್ಕಂಥವರು ಜಲಾನಯನದಿಂದ ಮತ್ತೂ ಹೊರಕ್ಕೆ ಇರತಕ್ಕಂಥ ಜನರು ಯಾರು ಇದ್ದಾರೆ, ಅವರು ಅತ್ಯಂತ ಕಡುಬಡವರು ಇದ್ದಾರೆ. ಅನೇಕ ಕಡೆಗಳಲ್ಲಿ ಯಾವುದೇ ನದಿಗಳು, ಜಲಾಯನ ಪ್ರದೇಶ ಆ ಕಡೆ ಜನರನ್ನು ಇವತ್ತು ಅಕರ್ಷಿಸದೇ ಇರಬಹುದು. ಇದು ಒಂದು ಆಧ್ಯತೆಯ ಕಾರ್ಯಕ್ರಮವಾಗಿದೆ. ಏಕೆಂದರೆ ಒಂದು ರೀತಿಯ ಕೃಷ್ಣಾ ಜಲಾಯನ ಅಥವಾ ಕಾವೇರಿ ಜಲಾಯನ ನಮಗೆ ಒತ್ತಡ ಕೊಡಬಹುದು. ಕಾನೂನಿನ ಒತ್ತಡ ಇದೆ. ಅದನ್ನು ನಾವು ನಿಭಾಯಿಸಬೇಕು. ಏಕೆಂದರೆ ಇತಿಹಾಸದ ಚಕ್ರ ನಿಲ್ಲುವುದಿಲ್ಲ. ಅದು ಮುಂದುವರೆಸಿಕೊಂಡು ಹೋಗುತ್ತದೆ. ಮಾನ್ಯ ನಂಜೇಗೌಡರು ಒಂದು ಮಾತನ್ನು ಹೇಳಿದರು. ವಾಸ್ತವಿಕತೆಯನ್ನು ನಾವು ಎದುರಿಸೋಣ, ಎರಡು ಸಾವಿರ ಎ.ಡಿ.ಯೊಳಗೆ ಕೃಷ್ಣಾ ಜಲಾಯನವನ್ನು ಯಾವುದೇ ರೀತಿಯಿಂದ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಈ ವಾಸ್ತವಿಕತೆಯನ್ನು ಅರಿತುಕೊಂಡು ಇವತ್ತು ನಾವು ಕೆಲಸ ಮಾಡಬೇಕೆಂದು ಅವರು ಹೇಳಿದರು. ಅದು ವ್ಯಾವಹಾರಿಕವಾಗಿ ಮಾನ್ಯ ನಂಜೇಗೌಡರು ಹೇಳತಕ್ಕಂಥ ಮಾತು ಸರಿ ಇದ್ದರೂ ಕೂಡ ನಾವು ಇವತ್ತು ನಮ್ಮ ನೀರಾವರಿಯ ಒಂದು ವಿಚಾರದಲ್ಲಿ ಇವತ್ತು ನಡೆದ ಘಟನೆಗಳು ನಮ್ಮ ಮುಂದಿವೆ. ಅದನ್ನು ಅನುಭವಿಸಿದಂಥ ಕಷ್ಟನಷ್ಟಗಳನ್ನು ಇವತ್ತು ಆಲೋಚನೆ ಮಾಡುವುದಿದ್ದರೆ, ಆ ಅಪಾಯದ ಅಲುಗಿಗೆ ನಮ್ಮ ತಲೆಯನ್ನು ನಾವು ಕೊಡತಕ್ಕಂಥಾದ್ದು ಸೂಕ್ತವಾಗುವುದಿಲ್ಲ. ನಾವು ನಿಗದಿತ ಸಮಯಕ್ಕೆ ನಮ್ಮ ಕೃಷ್ಣಾ ಜಲಾನಯದ ಯೋಜನೆಗಳನ್ನು ಇವತ್ತು ನಾವು ಪೂರೈಸಬೇಕಾದರೂ ಈ ಒಂದು ಕಾರ್ಯವನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಬೇರೆ ರೀತಿಯಲ್ಲಿ ಎದುರಿಸಬೇಕಾದಂಥ ತ್ಯಾಗವನ್ನು ಮಾಡಿಯಾದರೂ ಕೂಡ ನಾವು ಮಾಡಬೇಕಾದ ರಾಜಕೀಯ ಸಂಕಲ್ಪ, ಇಡೀ ಕರ್ನಾಟಕ ರಾಜ್ಯದ ಜನರ ಸಂಕಲ್ಪ, ಇದನ್ನು ನಾವು ಮುಂದೆ ಇಟ್ಟುಕೊಂಡು ಹೋಗಬೇಕಾದಂಥ ಅವಶ್ಯಕತೆ ಇವತ್ತು ಖಂಡಿತವಾಗಿಯೂ ಇದೆ. ಕಾವೇರಿ ಜಲಾಯನ ಇರಿತ್ತು ಎರಡು ಸಾವಿರ ಎ.ಡಿ. ಎಂದು ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ. ಇವತ್ತು ನಿಮಿಷ ನಿಮಿಷಕ್ಕೂ ಕೂಡ ತಲೆಯ ಮೇಲೆ ತೂಗತಕ್ಕಂಥ ಕತ್ತಿಯ ಒಂದು ಸ್ಮರಣೆಯನ್ನು ಮಾಡಿಕೊಂಡು ಕಾವೇರಿ ಜಲಾಯನ ಯೋಜನೆಗಳನ್ನು ಕೂಡ ನಾವು ಕಣ್ಣಿಗೆ ಕಣ್ಣು ಇಟ್ಟು ಈ ಕಾರ್ಯಕ್ರಮವನ್ನು ಮಾಡಬೇಕಾದಂಥ ಅವಶ್ಯಕತೆ ಇವತ್ತು ಬಹಳ ಇದೆ ಎಂಬುದನ್ನು ಎಂದಿಗೂ ಕೂಡ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಬಹಳ ವಿವರವಾಗಿ ವಿಶ್ಲೇಷಣೆ ಮಾಡಿ ಮಾನ್ಯ ನಂಜೇಗೌಡರು ಹೇಳಿದ್ದಾರೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾವು ವಹಿಸಬೇಕಾದಂಥ ಎಚ್ಚರಿಕೆ ಬಹಳ ಮುಖ್ಯ, ಅದು ವಿಜಿಲೆನ್ಸ್ ಇವತ್ತು ನಾವು ಎಲ್ಲಿಯವರೆಗೆ ಅದು ಒಂದು ಶತಮಾನದಿಂದ ಇರಬಹುದು ಅಥವಾ ಅನಂತರ ಇರಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಇರಬಹುದು ಅಥವಾ ಸ್ವಾತಂತ್ರ್ಯ ನಂತರ ಇರಬಹುದು. ನಾವು ಎಲ್ಲಿ ಎಚ್ಚರತಪ್ಪಿದ್ದೇವೆ, ಎಲ್ಲಿ ಎಡವಿದ್ದೇವೆ

ಅದರಿಂದ ನಷ್ಟವನ್ನು ಇವತ್ತು ಅನುಭವಿಸುತ್ತಿದ್ದೇವೆ. ನಾವು ಈ ಎಚ್ಚರಿಕೆಯನ್ನು ತಪ್ಪಿಸದ ರೀತಿಯಲ್ಲಿ ಸರ್ಕಾರವಾಗಲೀ, ಜನರಾಗಲೀ, ಇದನ್ನು ಬಹಳ ಜಾಗರೂಕತೆಯಿಂದ ಮುಂದೆ ಮಾಡಿಕೊಂಡು ಹೋಗಬೇಕಾಗುತ್ತದೆ. ನಮ್ಮ ನೀರಿನ ಹಕ್ಕನ್ನು ಕಾಪಾಡುವಂಥ ದೃಷ್ಟಿಯಿಂದ ಪಕ್ಷ ದಾಕ್ಷಿಣ್ಯ ಅಥವಾ ಯಾವುದೇ ರೀತಿಯಾದಂಥ ಒಂದು ಮುಲೂಜಿಗೆ ನಮ್ಮನ್ನು ನಾವು ಅಂಟಿಸಿಕೊಳ್ಳತಕ್ಕಂಥ ಕೆಲಸ ಮಾಡಿದಾಗ ಮಾತ್ರ ಕರ್ನಾಟಕ ರಾಜ್ಯ ತನ್ನದೇ ಆದಂಥ ಕಾಲಮೇಲೆ ನಿಂತು ನೀರಿನ ಹಕ್ಕನ್ನು ರಕ್ಷಣೆ ಮಾಡುವ ಹೋರಾಟವನ್ನು ನಾವು ಮಾಡಬಹುದು ಎಂಬ ಒಂದು ಮನಸ್ಸು ನಮ್ಮಲ್ಲಿ ಬಂದಾಗ ಮಾತ್ರ ಈ ಹಕ್ಕಿನ ರಕ್ಷಣೆಯನ್ನು ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ನಿಮ್ಮ ನೀರಿನ ಹಕ್ಕಿನ ರಕ್ಷಣೆಗೆ ಸಹಾಯಕ್ಕೆ ಯಾರೂ ಬರುವುದಿಲ್ಲ. ಅದನ್ನು ನೀವೇ ಮಾಡಬೇಕು. ಇದು ಸನ್ಮಾನ್ಯ ದೇವೇಗೌಡರಿಗೆ ತಿಳಿದಿದೆ, ಇದು ನಮ್ಮ ಅನುಭವ ಕೂಡ ಆಗಿದೆ. ಇವತ್ತು ನಾವು ತಲೆಯೆತ್ತಿ ನಮ್ಮ ಅಭಿಮಾನ ಮತ್ತು ಗೌರವವನ್ನು, ನಮ್ಮ ಹಕ್ಕನ್ನು ಉಳಿಸಿಕೊಳ್ಳಬೇಕು ಎಂಬ ರೀತಿಯ ಹೋರಾಟದ ಮನಸ್ಸು ನಮ್ಮನ್ನು ಯಾವಾಗಲೂ ಕೂಡ ಜನತೆದಿಂದ ಕಾಪಾಡಿಕೊಳ್ಳತಕ್ಕಂಥ ಅವಶ್ಯಕತೆ ಇದೆ. ಇದನ್ನು ನಾನು ಬಹಳ ಸ್ಥೂಲವಾಗಿ ಹೇಳಬೇಕಾದರೆ ತಮಗೆ ಗೊತ್ತಿದೆ, ಬಚಾವತ್ ಆಯೋಗದ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದರಲ್ಲಿ ಆಗತಕ್ಕಂಥ ಆತಂಕ ಅನ್ಯಾಯದ ಬಗ್ಗೆ ಸನ್ಮಾನ್ಯ ನಂಜೇಗೌಡರು ಕೂಡ ವಿಶ್ಲೇಷಣೆ ಮಾಡಿದ್ದಾರೆ. ಇವತ್ತು ಆದಂತಹ ಅನ್ಯಾಯಕ್ಕೆ ಮತ್ತೂ ಕೂಡ ಹೆಚ್ಚಿನ ಧಾಳಿಯನ್ನು ಮಾಡತಕ್ಕಂಥ ಕೆಲಸ ತೆಲುಗು ಗಂಗಾ ಮೂಲಕ ಆಗಿದೆ. ನಾವು ಇದೇ ಸದನದಲ್ಲಿ ವಿರೋಧಪಕ್ಷದಲ್ಲಿ ಇದ್ದೆವು. ನನಗನಿಸುತ್ತವೆ ಸನ್ಮಾನ್ಯ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು ಏಕೆಂದರೆ ಬೇರೆ ಬೇರೆ ರೀತಿಯ ಬಲೆಯನ್ನು ಬಾಕಿಯವರು ಹೂಡುತ್ತಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿ ಮದ್ರಾಸಿಗೆ ಹೋದರು. ಆಗ ಎಂ.ಜಿ.ಆರ್. ರವರು ಇದ್ದರು. ಮಾನ್ಯ ಎನ್.ಟಿ. ರಾಮರಾವ್‌ರವರು ಆಂಧ್ರದ ಮುಖ್ಯ ಮಂತ್ರಿಯಾಗಿದ್ದರು. ಸಮಾರಂಭ ಬಹಳ ಸರಳ. ಏನು ಸಮಾರಂಭ ಎಂದು ಹೇಳಿದರೆ, ಅಗ್ರಿಮೆಂಟ್ ಮಾಡತಕ್ಕಂಥದ್ದು, ಕುಡಿಯುವ ನೀರು ಎಂದು ಪ್ರಚಾರ. ಇನಾಗ್ಯುರೇಷನ್. ಮಾಡತಕ್ಕಂಥ ಕೆಲಸ. 1976ನಲ್ಲಿ ಅಗ್ರಿಮೆಂಟ್ ಆಗಿದೆ. ಅದು 5 ಟಿಎಂಸಿ, 10 ಟಿ.ಎಂ.ಸಿ, 10 ಟಿಎಂಸಿ, 15 ಟಿಎಂಸಿ, ನೀರನ್ನು ಕೊಡತಕ್ಕ ಅಗ್ರಿಮೆಂಟ್, We are a party to it. That is exclusively a drinking water component. ಮದ್ರಾಸಿಗೆ ನೀರು ಕೊಡತಕ್ಕಂಥಾದ್ದು ಅದಕ್ಕೆ ಯಾರ ಆಕ್ಷೇಪಣೆಯೂ ಇರಲಿಲ್ಲ. ಆದರೆ ಏನು ಸಮಾರಂಭ ಮಾಡಿದರು. ಆ ಸಮಾರಂಭ ಒಂದು ವಿಶೇಷವಾದಂಥ ಅಪಾಯದ ಗಂಟೆಯನ್ನು ಅಥವಾ ಏನು ನಮಗೆ ಅನ್ಯಾಯವಾಗಿದೆ, ಆ ಅನ್ಯಾಯಕ್ಕೆ ಇನ್ನೂ ಏಟನ್ನು ಕೊಡತಕ್ಕ ಒಂದು ಅಘಾತವನ್ನು ಮಾಡತಕ್ಕಂಥ ಕೆಲಸ ಆಯಿತು. ಆ ದಿವಸ ಇರಿಗೇಷನ್ ಕಾಂಪೊನೆಂಟನ್ನು ಕೂಡ ಆ ಪ್ರಾಜೆಕ್ಟ್‌ನಲ್ಲಿ ಸೇರಿಸಿದರು. ಆ ದಿವಸ ಅದು ತೆಲುಗು ಗಂಗಾ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. What is not available ಆಂಧ್ರಪ್ರದೇಶದ ಸರ್ಕಾರವೇ ಸ್ಪಷ್ಟವಾಗಿ, ತಾವು ಹೊರತಂದಂಥ ಇರಿಗೇಷನ್ ಡಿಪಾರ್ಟ್‌ಮೆಂಟಿನ ಒಂದು

ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. Only for drinking water component,' ಮದ್ರಾಸಿಗೆ ನೀರಾವರಿ ಉಪಯೋಗಕ್ಕೆ, ಆಂಧ್ರಪ್ರದೇಶ ಉಪಯೋಗಿಸಿಕೊಳ್ಳತಕ್ಕಂಥ ಪ್ರಶ್ನೆ ಬರುವುದಿಲ್ಲವೆಂಬ ಮಾತನ್ನು ಅವರು ಹೇಳಿದ್ದಾರೆ. ನನ್ನ ಹತ್ತಿರ ಒಂದು ಕಾಪಿ ಇತ್ತು, ನಾನು ಇವತ್ತು ಅದನ್ನು ತರಲಿಲ್ಲ. ಆಂಧ್ರಪ್ರದೇಶದ ಸುತ್ತೋಲೆಯ ವರದಿ ಕೊಟ್ಟಾಗ, ತೆಲುಗು ಗಂಗಾ ಕಾಂಪೊನೆಂಟನ್ನು ಇವತ್ತು ಸೇರಿಸಿ, ಅವರು ಈ ಕಾರ್ಯಕ್ರಮವನ್ನು ಅಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದನ್ನು ನಾವು ತಡೆಹಿಡಿಯಲೇಬೇಕು. ಕಾನೂನು ಮುಖಾಂತರ ಮಾಡುತ್ತೀರೋ ಹಾಗೆ ಮಾಡುತ್ತೀರೋ ಅದನ್ನು ತಡೆಯಲೇಬೇಕು. ಏಕೆಂದರೆ ತಮಗೆ ಗೊತ್ತಿದೆ, ಅನೇಕ ಬಾರಿ, ಎರಡು ಮೂರು ಸಾರಿ, ಮೂರು ಸುತ್ತಿನ ಮಾತುಕತೆ ಆಗಿದೆ. ಏಕೆಂದರೆ, ತೆಲುಗು ಗಂಗಾ ಮಾಡಬಹುದು, ಅಥವಾ ಕರ್ನಾಟಕದವರು ಬೇರೆ ಅಡಿಷನಲ್ ಪ್ರಾಜೆಕ್ಟ್ ಮಾಡಬಹುದು. ಆದರೆ ಪಾರ್ಟ್ (ಬಿ) ಯನ್ನು ಸರ್ಪ್ಲಸ್ ವಾಟರ್ ಎಂದು ಏನಿದೆ, ಪಾರ್ಟ್ (ಬಿ)ಯಲ್ಲಿ ಯಾವುದು ಇವತ್ತು ನೋಟಿಫೈ ಆಗಲಿಲ್ಲ, ಈ ಮೂರು ರಾಜ್ಯಗಳೂ ಕೂಡ, ಕರ್ನಾಟಕ, ಮಹಾರಾಷ್ಟ್ರ, ಮತ್ತು ಆಂಧ್ರಪ್ರದೇಶ ವಾಟರ್ವ (ಬಿ) ಗೆ ಒಪ್ಪಿಕೊಂಡೇ , ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವಂಥ ವಿಚಾರವನ್ನು ನಾವು ತಿರುಪಡಿಯಲ್ಲಿ, ಆಗ ವೀರೆಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಹೇಳಿದ್ದೇವೆ ಆಮೇಲೆ ಪುನಃ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾದಾಗ ಮೂರು ರಾಜ್ಯದ ಮುಖ್ಯಮಂತ್ರಿಗಳ ಸಭೆ ನಡೆಯಿತು. ನಾನು ಮುಖ್ಯಮಂತ್ರಿಯಾದಾಗ ಮಹಾಬಲೇಶ್ವರದಲ್ಲಿಯೂ ಕೂಡ ಈ ಸಭೆ ನಡೆದು, ಇವತ್ತು ಯಾವುದೇ ಒಂದು ಅಂತಿಮ ತೀರ್ಮಾನಕ್ಕೆ ಬರಲಿಕ್ಕಾಗಲಿಲ್ಲ. ಮಾಹಿತಿಯನ್ನು ಸಂಗ್ರಹಣೆ ಮಾಡತಕ್ಕ ನಿರ್ಣಯವನ್ನು ಮಾಡಿದ್ದೇವೆಯೇ ಹೊರತು. ಪಾರ್ಟ್ (ಬಿ) ಏನು ಒಂದು ಪಾರ್ಟ್ ಲಿಫ್ ಬಚಾವತ್ ಅವಾರ್ಡ್ ಇದೆ, ಅದನ್ನು ಒಪ್ಪಕೊಳ್ಳತಕ್ಕಂಥ ಮಾತು ಇವತ್ತೂ ಆಗಲಿಲ್ಲ. ಬಹುಶಃ ಸರಿಯಾದ ಒತ್ತಡವನ್ನು ಕಾನೂನಿನ ಮುಖಾಂತರವಾಗಿ ಅಥವಾ ಕಾನೂನೇತರ ನಿಗದಿ ಇವತ್ತು ನಾವು ಮಾಡದೇ ಇದ್ದರೆ ನಮ್ಮ ಹಕ್ಕನ್ನು ಚಲಾಯಿಸತಕ್ಕ ಒಂದು ಸ್ವತಂತ್ರ್ಯವಾದಂಥ ಒಂದು ವಾದವನ್ನು ಇಡುವುದಕ್ಕೆ ನಾವು ಮುಂದೆ ಬರದೇ ಇದ್ದರೆ, incorporating Part-B of the report ಅದನ್ನು ಮಾಡುವುದಕ್ಕೆ ಆಂಧ್ರಪ್ರದೇಶ ಮುಂದೆ ಬರುವುದಿಲ್ಲ. We have to force them to that situation. ಇಲ್ಲದೇ ಇದ್ದರೆ ತೆಲುಗು ಗಂಗಾ ಇವತ್ತು ಮುಂದುವರಿಸುವುದಕ್ಕೆ ನಾವು ಬಿಡುವುದಿಲ್ಲ ಎಂಬ ಒಂದು ಫಲದಿಂದ ಕರ್ನಾಟಕ ರಾಜ್ಯ ಮುಂದೆ ಹೋಗತಕ್ಕಂಥ ಅವಶ್ಯಕತೆ ಬಹಳ ಇದೆ.

ಶ್ರೀ ಎಂ. ನಾರಾಯಣಸ್ವಾಮಿ : ತಾವು ಹೇಳಿದಿರಿ, ಹೆಗಡೆಯವರು ಹೋಗಿ ತೆಲುಗು ಗಂಗಾ ಪ್ರಾಜೆಕ್ಟ್‌ನ್ನು ಉದ್ಘಾಟನೆ ಮಾಡಿದರು, ಭಾಷಣ ಮಾಡಿದರು ಎಂದು. ವೀರೇಂದ್ರಪಾಟೀಲರ ಸರ್ಕಾರ ಇದ್ದಾಗ, ಮದ್ರಾಸಿನಿಂದ ಅವರು ಇಲ್ಲಿಗೆ ಬಂದವರಲ್ಲ, ಅವರು ಸೌಜನ್ಯಕ್ಕೂ ಕೂಡ ಕನಿಷ್ಟ, ಮಾತನಾಡದೆ ವಾಪಸ್ ಹೋಗಿ,........

ಶ್ರೀ ಎಂ. ವೀರಪ್ಪಮೊಯಿಲಿ :- ನೀವು ಯಾವುಯಾವುದೋ ಮಾತನಾಡುತ್ತಿದ್ದೀರಿ. ನೀವು ಕಾವೇರಿ ಎಂದು ಹೇಳುತ್ತಿದ್ದೀರಿ, ನಾನು ಕೃಷ್ಣಾ ಎಂದು ಹೇಳುತ್ತಿದ್ದೇನೆ. ನಾನು ಹೇಳಿದ ವಿಷಯಕ್ಕೂ ನೀವು ಹೇಳಿದ ವಿಷಯಕ್ಕೂ ತಾಳಮೇಳ ಇಲ್ಲ. ತಾವು ದಯವಿಟ್ಟು ಅರ್ಥಮಾಡಿಕೊಳ್ಳಿ.

ಶ್ರೀ ಎಂ. ನಾರಾಯಣ ಸ್ವಾಮಿ : ತಾವು ರಾಮಕೃಷ್ಣಾ ಹೆಗಡೆಯವರ ಬಗ್ಗೆ ಏನು ಭಾಷಣ ಮಾಡಿದಿರಿ. ರಾಮಕೃಷ್ಣಾ ಹೆಗಡೆಯವರು ತೆಲುಗು ಗಂಗಾ ಪ್ರಾಜೆಕ್ಟ್ ಇನಾಗ್ಯುರೇಷನ್ ಸಮಾರಂಭಕ್ಕೆ ಹೋದರು. ಅದನ್ನು ದುರಪಯೋಗ ಮಾಡಿಕೊಂಡರು ಎಂದು ಹೇಳಿದಿರಿ. ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಇದರ ಬಗ್ಗೆ ಸರಿಯಾಗಿ ನೋಡಲಿಲ್ಲವೆನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ದಯಮಾಡಿ ತಿಳಿದುಕೊಳ್ಳಬೇಕು. ಇದನ್ನು ಸೂಕ್ಷ್ಮವಾಗಿ ಫಾಲೋ ಆಫ್ ಮಾಡಿ ಹೇಳಿದರೆ, ಅದಕ್ಕೆ ನಾವು ಉತ್ತರ ಕೊಡಬಹುದು. ನೀವು ಏನು ಮಾತನಾಡುತ್ತಿದ್ದೀರಿ. ತೆಲುಗು ಗಂಗಾ ಪ್ರಾಜೆಕ್ಟ್ ಇನಾಗ್ಯುರೇಷನ್‌ಗೆ ಯಾರು ಹೋಗಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ : ತಾವು ರಾಮಕೃಷ್ಣ ಹೆಗಡೆಯವರ ಹೆಸರನ್ನು ಉಪಯೋಗಿಸಿದಿರಿ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ದಯಮಾಡಿ, ಸ್ವಲ್ಪ ಫಾಲೋ ಆಫ್ ಮಾಡಿ.

ಶ್ರೀ ಹೆಚ್.ಎನ್. ನಂಜೇಗೌಡ :- ಹೆಗಡೆಯವರ ಹೆಸರು ಏಕೆ ಉಪಯೋಗಿಸಿದರೆಂದರೆ, ಅವತ್ತು ಮದ್ರಾಸಿನಲ್ಲಿ ಒಂದು ಸಮಾರಂಭವಾಯಿತು. ಕುಡಿಯುವ ನೀರಿಗೆ ಎಂದು ಕರೆದು. 15 ಟಿಎಂಸಿ ನೀರು ತೆಗೆದುಕೊಳ್ಳುವುದಕ್ಕಲ್ಲ ಅವತ್ತು ಇನಾಗ್ಯುರೇಟ್ ಮಾಡಿದ್ದುದು. ತೆಲುಗು ಗಂಗಾವನ್ನೂ ಸೇರಿಸಿ ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ, ಒಂದು ಬುಕ್‌ಲೆಟ್ ಮಾಡಿ ಎಲ್ಲರಿಗೂ ಹಂಚಿದರು. ಬಹುಶಃ ಇನ್ನು ಯಾರಾದರೂ ಸ್ವಾಭಿಮಾನ ಇರತಕ್ಕಂಥ ಕರ್ನಾಟಕ ರಾಜ್ಯದ ಹಿತ ನೋಡತಕ್ಕಂಥ ಮುಖ್ಯಮಂತ್ರಿ ಇದ್ದರೆ, ಅದನ್ನು ವಾಕ್ ಔಟ್ ಮಾಡಿ ಬರುತ್ತಿದ್ದರು. ಆ ಸಭೆಯಲ್ಲಿ ಭಾಗವಹಿಸುತ್ತಾ ಇರಲಿಲ್ಲ. ಇದು ಸೀರಿಯಸ್‌ನೆಸ್ ಇದೆ, ಅವರಿಗೆ ಅರ್ಥವಾಗುವುದಿಲ್ಲ, ಅಷ್ಟೆ.

ಶ್ರೀ ಎಂ.ವೀರಪ್ಪಮೊಯಿಲಿ : ಇಂಥಾದ್ದು ಅನೇಕ ಸಂದರ್ಭಗಳು ಇರಬಹುದು ನಾನು ಒಂದು ಉದಾಹರಣೆ ಹೇಳಿದೆ. ನಾನು ಒಂದು ಉದಾಹರಣೆಯನ್ನು ಏಕೆ ಕೊಟ್ಟಿದ್ದೇನೆಂದರೆ, ನಾವು ಎಚ್ಚರಿಕೆಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಈ ಸಂಬಂಧವಾಗಿ ಯಾವುದೇ ಮಾತುಕತೆ ಯಾವುದೇ ಕಡೆಯಲ್ಲಿ ನಡೆದರೂ ಕೂಡ It is a Consent, ಹೌದು, Implied Consent ಆಗುತ್ತದೆ. ಆ ಧೈರ್ಯದಿಂದ ಇವತ್ತು ಆ ತೆಲುಗು ಗಂಗಾ ಪ್ರಾಜೆಕ್ಟ್‌ನ್ನು ಬುಲ್ಡೋಜ್ ಮಾಡಿಕೊಂಡು ಆಂದ್ರಪ್ರದೇಶದಲ್ಲಿ ಹೋಗತಕ್ಕ ಪರಿಸ್ಥಿತಿ, ಉದ್ಭವವಾಗಿದೆ. ಇನ್ನು ಎರಡನೇ ವಿಚಾರ, ಎಚ್ಚರಿಕೆಯ ವಿಚಾರ ಮಾನ್ಯ

ಸದಸ್ಯರಾದ ವಿರೂಪಾಕ್ಷಪ್ಪನವರು ಮತ್ತು ಗಂಗಾವತಿಯ ಸದಸ್ಯರಾದ ಮಾನ್ಯ ಶ್ರೀರಂಗದೇವರಾಯಲು ಅವರು ಒಂದು ವಿಚಾರ ಹೇಳಿದರು. ಎಲ್ಲಿ ನಾವು ಎಚ್ಚರ ತಪ್ಪಿದರೆ, ಯಾವರೀತಿಯಲ್ಲಿ ಗಂಡಾಂತರಕ್ಕೆ ಒಳಗಾಗುತ್ತೇವೆ, ಇದನ್ನು ಪ್ರಸ್ತಾಪ ಮಾಡಲಿಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. 1986ರಲ್ಲಿಯೂ ಕೂಡ ಇದೇ ತರಹ ತುಂಗಭದ್ರಾದಲ್ಲಿ ನೀರು ಬಿಡತಕ್ಕ ಸಂದರ್ಭ ಬಂದಾಗ, ಗಂಡಾತರ ಒದಗಿತ್ತು. ರಾಯಚೂರು ಜಿಲ್ಲೆಯವರಿಗೆ ಎಂದು ತೊಂದರೆಯಾಗಿತ್ತು. ಆ ಸಂದರ್ಭದಲ್ಲಿ ನಾವೂ ಕೂಡ ಸಿಂಧನೂರು ಭಾಗದಲ್ಲಿ ಹೋಗಿದ್ದೆವು. ಅದೇ ರೀತಿಯಲ್ಲಿ, ಒಂದು ರೀತಿಯ ಎಚ್ಚರ ತಪ್ಪಿ ನಡೆದುದರಿಂದ ರಾಯಚೂರು ಜಿಲ್ಲೆ ಕಷ್ಟನಷ್ಟಕ್ಕೆ ಒಳಗಾಗಬೇಕಾದ ಪರಿಸ್ಥಿತಿ ಬಂದಿದೆ. ಮಾನ್ಯ ಸದಸ್ಯರು ಇವತ್ತು ಪ್ರಸ್ತಾಪ ಮಾಡಿದ್ದಾರೆ. ನೀರಾವರಿ ಸಲಹಾ ಸಮಿತಿಯ ಸಭೆಯನ್ನು 5 ನೇ ಡಿಸೆಂಬರ್ 1994ರಲ್ಲಿ ಮಾಡಿದ್ದಾರೆ. ಅದರ ಪ್ರಕಾರ ರೈಟ್‌ಬ್ಯಾಂಕ್ ಹೆಚ್.ಎಲ್.ಸಿ ಅದು ತಾರೀಖು 31, 1994ರ ಡಿಸೆಂಬರ್‌ವರೆಗೆ ನೀರು ಕೊಡಬೇಕು ಮತ್ತು ರೈಟ್ ಬ್ಯಾಂಕ್ ಲೋ ಲೆವಲ್ ಕ್ಯಾನಲ್ ನವರು 15ನೇ ತಾರೀಖು ಮಾರ್ಚ್ 1995ರ ವರೆಗೆ ನೀರು ಕೊಡಬೇಕು. ಲೆಫ್ಟ್ ಬ್ಯಾಂಕ್ ಕ್ಯಾನಲ್ ಅಂದರೆ, ರಾಯಚೂರು ಜಿಲ್ಲೆಗೆ ಹೋಗತಕ್ಕಂಥದ್ದು, 8 ನೇ ತಾರೀಖು ಏಪ್ರಿಲ್ 1995ರ ವರೆಗೆ ನೀರು ಕೊಡಬೇಕೆಂದು ನೀರಾವರಿ ಸಲಹಾ ಸಮಿತಿ ಅವತ್ತು ನಿರ್ಣಯ ಮಾಡಿದೆ. ನಿರ್ಣಯ ಮಾಡಿದಮೇಲೆ ರೈಟ್ ಬ್ಯಾಂಕ್ ಕ್ಯಾನಲ್ ಹೆಚ್.ಎಲ್.ಸಿ ಏನಿದೆ, ಅಲ್ಲಿ ಮುಂದುವರಿಸಿದರು. ಫೆಬ್ರವರಿ 1995ರ ತನಕ ಅದನ್ನು ವಿಸ್ತರಿಸಿದರು. ರೈಟ್ ಬ್ಯಾಂಕ್ ಲೋ ಲೆವಲ್ ಕ್ಯಾನಲ್‌ನ್ನು ಕೂಡ 31ನೇ ತಾರೀಖು ಮಾರ್ಚ್ 1995 ರ ವರೆಗೆ ವಿಸ್ತರಿಸಿದರು. ಆದರೆ ರಾಯಚೂರು ಜಿಲ್ಲೆಗೆ ಹೋಗತಕ್ಕಂಥ ಒಂದು ಅವಧಿ ಏನು ಇದೆ 8 ನೇ ತಾರೀಖಿನವರೆಗೂ ವಿಸ್ತರಿಸುವ ಪ್ರಶ್ನೆಯೇ ಇಲ್ಲ, ಆದರೆ 3ನೇ ತಾರೀಖಿಗೆ ನೀರು ಕಡಿಮೆ ಆಯಿತು. ನೇರವಾಗಿ ಒಂದು ಜಿಲ್ಲೆಗೆ ಬರಬೇಕಾದಂತಹ ಒಂದು ಹೆಚ್ಚಿನ ನೀರನ್ನು ಅಪಹರಿಸತಕ್ಕಂಥ ಕಾರ್ಯಕ್ರಮ ಇಲ್ಲಿ ಆಗಿದೆ. ತಮಗೆ ಗೊತ್ತಿದೆ ಅಧ್ಯಕ್ಷರೇ ತಾವು ಅದೇ ಜಿಲ್ಲೆಯಿಂದ ಬಂದವರು. ರಾಯಚೂರು ನಗರಕ್ಕೂ ಕೂಡ ಕುಡಿಯುವ ನೀರಿನ ಸಮಸ್ಯೆ ಇದರಿಂದ ಬಂದಿದೆ. ಐ.ಸಿ.ಸಿ. ಮೀಟಿಂಗ್ ನೀರಾವರಿ ಸಲಹಾ ಸಮಿತಿಯ ಮೀಟಿಂಗ್‌ನ್ನು ಕೂಡ ಕರೆಯದೇ ಈ ರೀತಿಯಲ್ಲಿ ಡೈವರ್ಷನ್ ಮಾಡಿಕೊಂಡು ಒಂದು ವೇಳೆ ಒಂದು ನಿರ್ಣಯವನ್ನು ಸರ್ಕಾರ ಕೈಗೊಂಡರೂ ಕೂಡ ನೀರಾವರಿ ಸಲಹಾಸಮಿತಿಯಲ್ಲಿ ಅದನ್ನು ತಂದು ರ್‍ಯಾಟಿಫೈ ಮಾಡಿಕೊಳ್ಳಬೇಕಾದಂತಹ ಅವಶ್ಯಕತೆ ಇದ್ದರೂ ಕೂಡ ಆ ರೀತಿಯಲ್ಲಿ ಕಾರ್ಯಕ್ರಮ ಮಾಡದೇ, ಯಾವ ರೀತಿಯಲ್ಲಿ ಕಷ್ಟನಷ್ಟಕ್ಕೆ ರಾಯಚೂರು ಜಿಲ್ಲೆ ಒಳಗಾಗಿದೆ ಅಂದರೆ ಸುಮಾರು ಎರಡೂವರೆ ಲಕ್ಷ ಏಕರೆಯಲ್ಲಿ ಭತ್ತ ಇದೆ, ಹತ್ತಿ ಸುಮಾರು ಒಂದು ಲಕ್ಷ ಎಕರೆಯಲ್ಲಿ ಇದೆ, ಸುಮಾರು 50 ಸಾವಿರ ಎಕರೆ ಇವತ್ತು ಗ್ರಾಂಡ್‌ನಟ್ ಇದೆ. ಬೆಳೆದು ನಿಂತ ಬೆಳೆ ಏನು ಇದೆ, ಅದು ಇವತ್ತು ಸಂಪೂರ್ಣವಾಗಿ ನಾಶಮಾಡತಕ್ಕಂಥ ಒಂದು ಪರಿಸ್ಥಿತಿಯಲ್ಲಿ ರಾಯಚೂರು ಜಿಲ್ಲೆ ಇದೆ. ಅದೇ ರೀತಿಯಲ್ಲಿ ಗಂಗಾವತಿಯಲ್ಲಿ ಕಬ್ಬು ಬೆಳೆ ಕೂಡ ನಿಂತಿದೆ. 2 ಟಿ.ಎಂ.ಸಿ. ನೀರನ್ನು ಕೊಡತಕ್ಕಂಥ ಸಂದರ್ಭ ಕೂಡ ಇಲ್ಲ, ಅದರಲ್ಲಿ ನಾವು ಪಾಯಿಂಂಟ್ 8 ಟಿಎಂಸಿ

ನೀರನ್ನು ಕರ್ನಾಟಕದ ರೈತರಿಗೆ ಕೊಡುತ್ತಿದ್ದೇವೆ. ಕರ್ನಾಟಕದ ರೈತರು ಆ ಕ್ಯಾನಲ್‌ನಲ್ಲಿ ನೀರನ್ನು ಕೇಳಿಯೇ ಇಲ್ಲ. ಅದರ ಅವಶ್ಯಕತೆ ಕೂಡ ಇರಲಿಲ್ಲ. ಅದು ಏಕೆಂದರೆ ಪಾಯಿಂಟ್ 8 ಅದು ಯೂ ಅಪರೇಶನ್ ಮತ್ತು ಅದು ನೆಟ್ 1.76 ಟಿಎಂಸಿ ನೀರು ಆಂಧ್ರಪ್ರದೇಶಕ್ಕೆ ಹೋಗಲಿಕ್ಕೆ ಇದು ಒಂದು ಕುಶನ್ ಅಷ್ಟೇ. ನೇರವಾಗಿ ವೇಸ್ಟೇಜ್ ನೀರನ್ನು ಕೂಡ ಆಂಧ್ರಪ್ರದೇಶಕ್ಕೆ ಕೊಡತಕ್ಕಂಥ ವ್ಯವಸ್ಥೆ ಏನು ಮಾಡಿದ್ದಾರೆ ನಿಜವಾಗಿಯೂ ಇದು ವಾಟರ್ ಸಪ್ಲೈಗೆ 5 ಟಿಎಂಸಿ ನೀರು ಏನು ಆಂಧ್ರಪ್ರದೇಶಕ್ಕೆ ಹೋಗಬೇಕಾಗಿತ್ತು. ಅದನ್ನು ಮೊದಲು ಬಿಡುಗಡೆ ಮಾಡುವುದಿಲ್ಲ, ರಾಯಚೂರು ಜಿಲ್ಲೆಯ ಅವಶ್ಯಕತೆಯನ್ನು ಪೂರೈಸಿದ ಮೇಲೆ ಲೋ ಲೆವೆಲ್ ಕ್ಯಾನಲ್ ಇದ್ದುದ್ದರಿಂದ ಅಲ್ಲಿ ನೀರು ಡಿಸ್‌ಚಾರ್ಜ್ ಆಗದೇ ಇರುವುದರಿಂದ 5 ಟಿಎಂಸಿ ನೀರು ಏನು ಇದೆ ಅದು ವರ್ಷ ಆ ಪ್ರದೇಶದ ಜನರಿಗೆ ಕುಡಿಯುವ ನೀರನ್ನು ಒದಗಿಸಬೇಕು ಅದನ್ನು ಯಾವಾಗಲೂ ಕೂಡ ಆಂಧ್ರಪ್ರದೇಶದ ಇಂಜಿನೀಯರ್ ಜೊತೆ ಮಾತುಕತೆ ಮಾಡಿ ರಾಯಚೂರಿಗೆ ನೀರು ಬಿಟ್ಟ ಮೇಲೆ 5 ಟಿಎಂಸಿ ನೀರನ್ನು ರಿಜರ್ವ್ ಇಟ್ಟು ಆಮೇಲೆ ನೀರನ್ನು ಬಿಡುಗಡೆ ಮಾಡತಕ್ಕಂಥ ಒಂದು ಟ್ಯಾಕ್ಟಿಕಲ್ ಏನು ವಿಚಾರ ಇದೆ, ಅದನ್ನು ಕೂಡ ಮರೆತು ಆ 5 ಟಿ.ಎಂ.ಸಿ ನೀರನ್ನು ಬಿಡುಗಡೆ ಮಾಡಿದ ಮೇಲೆ ರಾಯಚೂರಿಗೆ ಹೋಗತಕ್ಕಂಥ ನೀರನ್ನು ತಪ್ಪಿಸತಕ್ಕಂಥ ಕೆಲಸ ಇವತ್ತು ಏನು ಆಗಿದೆ ಇದು ಅಜಗಣ ಕತೆಯಿಂದ ಆಗಿದೆ. ಸರಿಯಾದ ನಂತಹ ಒಂದು ಎಚ್ಚರಿಕೆಯನ್ನು ವಹಿಸಿಕೊಳ್ಳದೆ ಇದ್ದ ಕಾರಣ ಇವತ್ತು ಈ ರೀತಿಯಾದ ಪರಿಸ್ಥಿತಿ ಆ ಪ್ರದೇಶದಲ್ಲಿ ಉದ್ಭವವಾಗಿದೆ. ಭದ್ರಾದಿಂದ ನೀರನ್ನು ಬಿಡುತ್ತೇವೆಂದು ಹೇಳಿದರೆ ತಮಗೆ ಗೊತ್ತಿದೆ ಎರಡು ಟಿಎಂಸಿ ನೀರು ಬಿಟ್ಟರೂ ಕೂಡ ಒಂದು ಟಿಎಂಸಿ ನೀರು ಅಲ್ಲಿ ಹೋದರೂ ಕೂಡ ಡಿಸ್‌ಚಾರ್ಜ್ ಲೆವೆಲ್‌ಗೆ ಅದು ಬಾರದೇ ಇರತಕ್ಕಂಥ ಒಂದು ಪರಿಸ್ಥಿತಿ ಇದ್ದು ವಿಪರೀತವಾದ ಒಂದು ನಷ್ಟವನ್ನು ಆ ಪ್ರದೇಶದ ಜನ ಅನುಭವಿಸತಕ್ಕಂಥ ಪರಿಸ್ಥಿತಿ ಅಲ್ಲಿ ಬಂದಿದೆ. ಅನೇಕ ವರ್ಷಗಳಿಂದ ಈ ರೀತಿಯಾದ ತೊಂದರೆ ಅನುಭವಿಸಿದಾಗಲೂ ಕೂಡ ನಾವು ಜಾಗ್ರತೆ ಆಂಧ್ರಪ್ರದೇಶದ ಜೊತೆ ಮಾತನಾಡಿಕೊಂಡು ಆಮೇಲೆ ಬಿಡುಗಡೆ ಮಾಡಿದ್ದು, 1986ನೇ ಇಸವಿಯಲ್ಲಿ ಆದಂತಹ ಅದೇ ರೀತಿಯಾದಂತಹ ಒಂದು ಮಿಸ್ಟೇಕ್ ಅನ್ನು ಇವತ್ತು ತಾವು ಅಧಿಕಾರಕ್ಕೆ ಬಂದ ಕೂಡಲೇ ಉದ್ಭವವಾಗಬಾರದಿತ್ತು. ಅದು ಅದರೆ ಇವತ್ತು ಆಗಿದೆ. ಹಿಂದೆ 8-3-95ರಲ್ಲಿ ಕೂಡ TB Water to AP - agreed working arrangement. Karnataka ಇದು ಪತ್ರಿಕೆಯಲ್ಲಿ ಬಂದಿದೆ. Karnataka to release Tunga Water to A.P. Is Karnataka getting share of water ? ಎಲ್ಲಾ ಪತ್ರಿಕೆಗಳಲ್ಲಿ ಕೂಡ ಇದು ಬಂದಿದೆ. ಸುಮಾರು 100 ಕೋಟಿ ರೂಪಾಯಿಗಳ ಬೆಳೆ ರಾಯಚೂರು ಜಿಲ್ಲೆಯಲ್ಲಿ ನಾಶವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆದ್ದರಿಂದ ನಾವು ಎಚ್ಚರ ತಪ್ಪಿ ನೀರಾವರಿ ಕಾರ್ಯಕ್ರಮಗಳನ್ನು ನಡೆಸಿದರೆ ವಿಶೇಷ ರೀತಿಯಾದಂತಹ ಅನಾಹುತ ಆಗುತ್ತದೆ ಎಂಬುದಕ್ಕೆ ಇದು ಎರಡನೇಯ ಉದಾಹರಣೆ. ಮಾನ್ಯ ಅಧ್ಯಕ್ಷರೇ ರಾಯಚೂರು ಹತ್ತಿರ ಒಂದು ಬ್ಯಾಲೆನ್ಸಿಂಗ್ ರಿಜರ್ವ್‌ವಾಯರ್ ಆಗಬೇಕೆಂದು ನಾವು ಯೋಜನೆಯನ್ನು ಮಾಡಿ 1995-96ರ ಆರ್ಥಿಕ ವರ್ಷದಲ್ಲಿ ಮುಕ್ತಾಯವಾಗಬೇಕು.

ಮತ್ತೆ ಸುಮಾರು 60 ಪರ್ಸೆಂಟ್ ಕೆಲಸ ಇದರಲ್ಲಿ ಆಗಿದೆ ಇನ್ನು 40 ಪರ್ಸೆಂಟ್ ಕೆಲಸ ಆಗಬೇಕು. ಇದು ಆದರೆ ಸುಮಾರು 75 ಸಾವಿರ ಎಕರೆ ಜಮೀನಿಗೆ ಮತ್ತು ರಾಯಚೂರು ಟೌನ್‌ಗೆ ನೀರು ಬರುವುದಕ್ಕೆ ಸಾಧ್ಯವಾಗುತ್ತದೆ. ತಮ್ಮ ಸರ್ಕಾರ ಬಂದ ಮೇಲೆ ಬ್ಯಾಲೆನ್ಸಿಂಗ್ ರಿಜರ್ವ್‌ವಾಯರ್ ಕೆಲಸ ಪೂರ್ತಿಯಾಗಿ ನಿಂತು ಹೋಗಿದೆ. ರಾಯಚೂರು ಜಿಲ್ಲೆಗೆ ಸಂಪೂರ್ಣವಾಗಿ ನೀರನ್ನು ನಿರಾಕರಿಸತಕ್ಕ ಕೆಲಸ ಆಗಿದೆ ಇಂತಹ ಅನಾಹುತಗಳನ್ನು ತಪ್ಪಿಸಬೇಕಾದರೆ ಇವತ್ತು ಇಂತಹ ಬ್ಯಾಲೆನ್ಸಿಂಗ್ ರಿಜರ್ವ್‌ವಾಯರ್‌ನ ಅವಶ್ಯಕತೆ ಇದೆ. ಆ ಕೆಲಸವನ್ನು ನಿಲ್ಲಿಸಿದಂತಹ ಒಂದು ಕ್ರಮ ಇದರಿಂದ ಆ ಜಿಲ್ಲೆಯ ಜನತೆಗೆ ವಿಶೇಷವಾಗಿ ಅನ್ಯಾಯವಾಗುತ್ತದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಾವೇರಿ ವಿಚಾರದಲ್ಲಿ ಅಥವಾ ಕೃಷ್ಣ ನದಿ ನೀರಿನ ವಿಚಾರದಲ್ಲಿ ಕೆಲವು ನಿರ್ಣಯಗಳನ್ನು ಮಾಡಿದ್ದೇವೆ. ನಾವು ನಮ್ಮ ಸರ್ಕಾರ ಇರುವಾಗ ಅಲ್ಮಟ್ಟಿ ಡ್ಯಾಮ್ ಹೈಟ್‌ನ್ನು ಎತ್ತರಿಸತಕ್ಕಂಥ ಒಂದು ಕಾಲದಲ್ಲಿ we were on the defensive... ಆಂಧ್ರಪ್ರದೇಶ ಬಹಳ ಮುಂದುವರಿಸಿಕೊಂಡು ಹೋಗುತ್ತಿತ್ತು. ಆಂಧ್ರಪ್ರದೇಶಕ್ಕೆ ಇವತ್ತು ಸ್ಪಷ್ಟವಾಗಿ ಗೊತ್ತಿದೆ ಕರ್ನಾಟಕ ರಾಜ್ಯ ತನ್ನ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳತಕ್ಕಂಥ ಒಂದು ಕಾರ್ಯ ಸಿದ್ಧತೆಯಲ್ಲಿದ್ದಾರೆ ಎಂದು ಒಂದು ರೀತಿಯ ಆತ್ಮ ವಿಶ್ವಾಸ ನೀರಾವರಿ ಯೋಜನೆಗಳ ಬಗ್ಗೆ ಬಂದಿದೆ. ಮುಖ್ಯವಾಗಿ ಕೃಷ್ಣಾ ನದಿ ನೀರನ ಯೋಜನೆ ಬಗ್ಗೆ ಬಂದಿದೆ. ಇವತ್ತು ಕಾವೇರಿ ವಿವಾದದಲ್ಲಿ ಕೂಡ ಹೌದು ಸಂಘರ್ಷ ನಡೆದಿದೆ ನಾವು ಕಾನೂನು ಸಂಘರ್ಷಣೆ ಮಾಡಿದ್ದೇವೆ. ನಮ್ಮ ಹಕ್ಕನ್ನು ಕಾಪಾಡಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಸವಾಲುಗಳನ್ನು ಎದುರಿಸತಕ್ಕಂಥ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡಿದ್ದೇವೆ. ಕೇಂದ್ರ ಸರ್ಕಾರ ಟ್ರಿಬ್ಯುನಲ್ ಮಾಡಿದರು. ಟ್ರಿಬ್ಯುನಲ್ ಮಾಡತಕ್ಕಂಥ ಸಂದರ್ಭದಲ್ಲಿ ತಮಗೆ ಗೊತ್ತಿದೆ ಸುಪ್ರೀಂ ಕೋರ್ಟಿನಲ್ಲಿ ಟ್ರಿಬ್ಯುನಲ್ ಅನ್ನು ಮಾಡಬೇಕು ಎಂದು ಹೇಳಿ ಅಪ್ಪಣೆಯನ್ನು ಕೊಟ್ಟಂತಹ ಒಂದು ವಿಚಾರ, ನೀರಾವರಿ ವಿಚಾರದಲ್ಲಿ ಈ ರಾಷ್ಟ್ರದ ಇತಿಹಾಸದಲ್ಲಿ ಇಲ್ಲ. ಅದು ಏಕೆಂದರೆ ಆಗಿನ ಕೇಂದ್ರ ಸರ್ಕಾರ 1989-90 ರಲ್ಲಿ ಕೇಂದ್ರಸರ್ಕಾರದ ಸಾಲಿಸಿಟರ್ ಜನರಲ್ ಇವತ್ತು ಟ್ರಿಬ್ಯುನಲ್ ಮಾಡುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ ಎಂಬುದನ್ನು ಒಪ್ಪಿ ಸುಪ್ರೀಂ ಕೋರ್ಟ್ ಇವತ್ತು ಆಜ್ಞಾಪನಾ ಮಾಡತಕ್ಕಂಥ ಒಂದು ಪರಿಸ್ಥಿತಿ ಕರ್ನಾಟಕ ರಾಜ್ಯದ ಪಾಲಿಗೆ ಆ ದೌರ್ಭಾಗ್ಯ ಬಂತು. ಯಾವ ರಾಜ್ಯದಲ್ಲೂ ಕೂಡ ಈ ರೀತಿಯಲ್ಲಿ ಆಗಿಲ್ಲ. ನಾನು ಸುಪ್ರೀಂ ಕೋರ್ಟ್‌ನ್ನು ದೂರುವುದಕ್ಕೆ ಇಷ್ಟಪಡುವುದಿಲ್ಲ. ಕೇಂದ್ರ ಸರ್ಕಾರದ ಸಾಲಿಸಿಟರ್ ಜನರಲ್ ಅವರೇ ಇವತ್ತು ನಾನು ಅದಕ್ಕೆ ಒಪ್ಪುತ್ತೇನೆ ಎಂದು ಹೇಳತಕ್ಕಂಥ ಕಗೂಲಿಯನ್ನು ಕೊಟ್ಟಂತಹ ಒಂದು ಪ್ರಸಂಗ ಅಲ್ಲಿ ಬಂದಾಗ ಬೇರೆ ಉಪಾಯ ಇರಲಿಲ್ಲ. ಟ್ರಿಬ್ಯುನಲ್ ಅನ್ನು ಮಾಡಿದ್ದಾರೆ. ಟ್ರಿಬ್ಯುನಲ್ ಆದ ಮೇಲೆ ಇಂಟೀರಿಯಂ ಆರ್ಡರ್ ಕೂಡ, ಯಾವುದೇ ಒಂದು ಟ್ರಿಬ್ಯುನಲ್, ಈ ರೀತಿಯಾದಂತಹ ಇಂಜಕ್ಷನ್ ಆರ್ಡರನ್ನು ಕೊಟ್ಟಂತಹ ಪರಿಸ್ಥಿತಿ ಇತಿಹಾಸದಲ್ಲಿ ಇದು ಮೊದಲು. ಇಟೀರಿಯಂ ಆರ್ಡರ್‌ನ್ನು ಟ್ರಿಬ್ಯುನಲ್ ಕೊಟ್ಟಂತಹ ಪ್ರಸಂಗ ನೀರಾವರಿ ಇತಿಹಾಸದಲ್ಲಿ ಇದು ಪ್ರಪ್ರಥಮ. ಇದನ್ನೂ ಕೂಡ ಎದುರಿಸಿ ಇವತ್ತು ನಮ್ಮ ರಾಜ್ಯದ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಮುಂದೆ ಬಂದಾಗ ಗೆಜೆಟ್ ನೋಟಿಫಿಕೇಷನ್ ಆಯಿತು.

4.20 ಪಿ.ಎಂ

ಇಂಟೀರಿಯಮ್ ಆರ್ಡ್‌ರ್ ಆಯಿತು. ಗೆಜೆಟ್ ನೋಟಿಫಿಕೇಶನ್ ಆದ ಮೇಲೆ ಮಾನಿಟರಿಂಗ್ ಸೆಲ್ ಮಾಡತಕ್ಕಂಥ ಪ್ರಯತ್ನ ಮಾಡುವ ಸಲುವಾಗಿ ತಮಿಳುನಾಡು ಮುಖ್ಯಮಂತ್ರಿ ಯಾವ ಈ ಸತ್ಯಾಗ್ರಹಕ್ಕೆ ಕುಳಿತುಕೊಂಡರು. ಆದರೆ, ಅದಕ್ಕೆ ಕರ್ನಾಟಕ ರಾಜ್ಯ ಬಗ್ಗಲಿಲ್ಲ. ಆ ಮಾನಿಟರಿಂಗ್ ಸೆಲ್ ಮಾಡತಕ್ಕಂಥಾದ್ದಕ್ಕೆ ನಾವು ಒಪ್ಪಿಗೆಯನ್ನು ಕೊಡಲಿಲ್ಲ. ಪ್ರಧಾನಿಯವರಿಗೆ ಮತ್ತು ಕೇಂದ್ರದ ನೀರಾವರಿ ಸಚಿವರಿಗೆ ಈ ಬಗ್ಗೆ ನಮ್ಮ ತೀವ್ರವಾದ ಪ್ರತಿಭಟನೆಯನ್ನು ಮಾಡಿದ್ದೇವೆ. ಇದು ನಡೆದಂಥ ಒಂದು ಇತಿಹಾಸ. ಈ ಕಾರಣದಿಂದ ನಾವು ಇವತ್ತು ಕಾವೇರಿ ಜಲಾನಯನ ರಕ್ಷಣೆ ಮತ್ತು ಕೃಷ್ಣಾ ನದಿ ನೀರಿನ ರಕ್ಷಣೆಯನ್ನು ಮಾಡಿಕೊಂಡು ಹೋಗಬೇಕಾಗಿದೆ. ಇದರ ಬಗ್ಗೆ ಒಂದು ಸಂಪೂರ್ಣವಾದ ಭದ್ರತೆಯನ್ನು ಯಾವುದೇ ರೀತಿಯಾದಂಥ ಚಾಂಚಲ್ಯತೆಗೆ ಅಥವಾ ದಾಕ್ಷಿಣ್ಯಕ್ಕೆ ಒಳಗಾಗಿದೆ, ನಿಮ್ಮ ಪಕ್ಷವೇ ಇರಬಹುದು ಅಥವಾ ತಮಗೆ ಸಹಾಯಕವಾಗಿರತಕ್ಕಂಥ ಮಿತ್ರ ಪಕ್ಷವೇ ಇರಬಹುದು, ಆದರೆ ಕರ್ನಾಟಕ ರಾಜ್ಯದ ನೀರಿನ ಹಕ್ಕಿನ ಸಂದರ್ಭದಲ್ಲಿ ಯಾವುದೇ ರೀತಿಯಾದಂಥ ಒಪ್ಪಂದವನ್ನು ರಾಜಿಯನ್ನು ಮಾಡದೆ ಮುಂದುವರಿಸತಕ್ಕಂಥ ಒಂದು ಛಲವನ್ನು ಕಂಡು ಸಂಕಲ್ಪವನ್ನು ಮಾನ್ಯ ಮುಖ್ಯಮಂತ್ರಿಯವರು ಮತ್ತು ಅವರ ಸರ್ಕಾರ ಈ ಬಗ್ಗೆ ತೋರಿಸುತ್ತೀರೆಂದು ನಾನು ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ನೀರಾವರಿ ಬಗ್ಗೆ ಎಲ್ಲಾ ವಿಚಾರಗಳನ್ನು ಹೇಳಲಿಕ್ಕೆ ಸಮಯವಿಲ್ಲ. ಏಕೆಂದರೆ ಇನ್ನೂ ಅನೇಕ ಮಂದಿ ಈ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಬೇಕಾದ ಅವಶ್ಯಕತೆ ಇರುವುದರಿಂದ ನಾನು ಎಲ್ಲಾ ವಿಚಾರಗಳನ್ನು ಹೇಳಿದೆ ಕಾವೇರಿ ಬೇಸಿನ್ ವಿಚಾರದ ಬಗ್ಗೆ ನಾನು ಪ್ರಸ್ತಾಪ ಮಾಡುವುದಿದ್ದರೆ, ದೇವರಾಜ ಅರಸ್ ಕೆನಾಲ್ ಅಥವಾ ವರುಣಾ ಕೆನಾಲ್ ಎಂದು ಏನಿದೆ? ಆ ಯೋಚನೆ ಹೈಕೋರ್ಟಿನ ಒಂದು ಆದೇಶದಿಂದ ಕೆಲಸ ನಿಂತಿತ್ತು. ಕೆನಾಲ್‌ನ ವರ್ಕ್ಸ್‌ನ ಮುಂದಿನ ಭಾಗವನ್ನು ಮುಂದುವರಿಸಿಕೊಂಡು ಹೋಗಿದ್ದರೂ ಕೂಡ ಕೆಲವು ಕಡೆ ಹೈ ಕೋರ್ಟ್ ತಡೆ ಆಜ್ಞೆ ಇದ್ದುದರಿಂದ ಅದನ್ನು ಮಾಡಲಿಕ್ಕೆ ಆಗಿರಲಿಲ್ಲ. ಆದರೆ ದಿನಾಂಕ : 25-7-94ಕ್ಕೆ ಈ ಒಂದು ತಡೆ ಆಜ್ಞೆ ತೆರವು ಆಗಿದೆ. ಈ ಕೆಲಸವನ್ನು ತೀವ್ರಗತಿಯಿಂದ ಮುಂದುವರಿಸಿಕೊಂಡು ಹೋಗಬೇಕಾದ ಅವಶ್ಯಕತೆ ಇವತ್ತು ಇದೆ. ಇವತ್ತು ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಒಂದು ಕಾರ್ಯಕ್ರಮದ ಬಗ್ಗೆ ನಾನು ಈಗಾಗಲೇ ಹೇಳಿದಂತೆ ವಿಶೇಷವಾದಂಥ ಭದ್ರತೆಯಿಂದ ಕೆಲಸ ಮಾಡಬೇಕಾದ ಅವಶ್ಯಕತೆ ಇವತ್ತು ಇದೆ. ಆದರೆ ತಾವು ಇವತ್ತು ನಡೆದುಕೊಂಡು ಬಂದಂಥ ವಿಚಾರದ ಬಗ್ಗೆ ನಾನು ಹೇಳಬೇಕಾದರೆ,. ಈ ಭದ್ರತೆ ಬಗ್ಗೆ ಸಂಶಯ ಪಡತಕ್ಕಂಥ ಕೆಲವು ಕೆಲಸವನ್ನು ತಾವು ಮಾಡುತ್ತಿದ್ದೀರೆಂಬ ಅನುಮಾನ ಇವತ್ತು ಇಲ್ಲಿ ಮೂಡಿದೆ. ಏಕೆಂದರೆ ಇವತ್ತು ಗೋರೂರು ಚಾನಲ್ ಬಗ್ಗೆ 93-94ರಲ್ಲಿ 66.47 ಕ್ರೋರ್ಸ್ ಖರ್ಚು ಮಾಡಿದ್ದರೆ, 94-95 ರಲ್ಲಿ 50 ಕೋಟಿ ಕೊಟ್ಟಿದ್ದಾರೆ, ಅದನ್ನು ನೀವು ರಿವೈಸ್ ಮಾಡಿಕೊಂಡು 45 ಕೋಟಿ ರೂಪಾಯಿ ಮಾತ್ರ 94-95ರಲ್ಲಿ ಖರ್ಚು ಮಾಡಿ ಅದರ ಮೊತ್ತವನ್ನು ತಾವು ಇಳಿಸಿದ್ದೀರಿ. ಬರುವ ವರ್ಷ ಅಂದರೆ 95-96ಕ್ಕೆ 50 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಹೇಮಾವತಿ, ತುಮಕೂರು ಕೆನಾಲ್‌ಗೆ 93-94ಕ್ಕೆ 45.58 ಕೋಟಿ ಖರ್ಚು

ಮಾಡಿದ್ದರೆ, 94-95 ರ ಬಜೆಟ್‌ನಲ್ಲಿ 100 ಕೋಟಿ 95-96 ರೂಪಾಯಿ ಕೊಟ್ಟಿದ್ದರೆ, ಅದನ್ನು ರಿವೈಸ್ ಮಾಡಿಕೊಂಡು ಎಷ್ಟು ಖರ್ಚು ಮಾಡಿದ್ದೀರೋ ಗೊತ್ತಿಲ್ಲ, ಆದರೆ 86.50 ಕೋಟಿ ರೂಪಾಯಿಗೆ ಇಳಿಸಿದ್ದೀರಿ. ಬರುವ ವರ್ಷಕ್ಕೆ 110 ಕೋಟಿ ರೂಪಾಯಿ ತಾವು ಕೊಟ್ಟಿದ್ದೀರಿ. ಹಾರಂಗಿಗೆ ಕೂಡ 24 ರಿಂದ 19 ಕ್ಕೆ ಇಳಿಸಿದ್ದೀರಿ, ಆಮೇಲೆ 95-96ಕ್ಕೆ 19.90 ಕೋಟಿ ರೂಪಾಯಿಗಳನ್ನು ಮೇರಟೇನ್‌ಗಾಗಿ ಮಾಡಿಕೊಂಡಿದ್ದೀರಿ; ಕಬಿನಿ 94-95 ರಲ್ಲಿ 20 ಕೋಟಿ ಮಾಡಿದ್ದೀರಿ, ಆದಮೇಲೆ 95-96ಕ್ಕೆ 25 ಕೂಡ ಕೊಟ್ಟಿಲ್ಲ ಬರೀ 20ಕ್ಕೆ ಇಳಿಸಿದ್ದೀರಿ ಯಗಚಿ ಕೂಡ 24.25 ಕ್ರೋರ್ಸ್ ಕೊಟ್ಟಿದ್ದಾರೆ, 94-95 ಕ್ಕೆ 20 ಕೋಟಿ ರೂಪಾಯಿಗೆ ತಾವು ಇಳಿಸಿದ್ದೀರಿ. ಬರುವ ವರ್ಷಕ್ಕೆ ಇದರಲ್ಲಿ ಬರೀ 25 ಕೋಟಿ ರೂಪಾಯಿ ಮಾತ್ರ ಇಟ್ಟಿದ್ದೀರಿ ಆದ್ದರಿಂದ, ಇವತ್ತು ತಾವು ಈ ರೀತಿಯಲ್ಲಿ ಬಜೆಟ್‌ನಲ್ಲಿ ಹಣವನ್ನು ಕೆಳಗೆ ಇಳಿಸಿ, ಈ ಟೆಂಪೋ ಆಫ್ ವರ್ಕ್ಸ್ ಏನಿದೆ? ಅದನ್ನು ಇದರಿಂದ ಮೈನ್‌ಟೇನ್ ಮಾಡಿಕೊಂಡು ಹೋಗಲಿಕ್ಕೆ ಖಂಡಿತವಾಗಿ ಕೂಡ ಸಾಧ್ಯವಾಗುವುದಿಲ್ಲವೆಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾದಂಥ ಅವಶ್ಯಕತೆ ಇಲ್ಲ. ಏಕೆಂದರೆ ಅನೇಕ ಕೆಲಸಗಳು ಅಲೈನ್‌ಮೆಂಟ್‌ನ್ನು ಇವತ್ತು ತೆರವು ಮಾಡಿ, ಬಾಗೂರು - ನವಿಲೆ ಟನಲ್ ಅನ್ನು ತೆರೆವು ಮಾಡಿಕೊಂಡು ನಾಗಮಂಗಲಕ್ಕೆ ಅಥವಾ ತುಮಕೂರು ಜಿಲ್ಲೆಗೆ ನೀರು ಪ್ರವೇಶ ಮಾಡತಕ್ಕಂಥ ಪರಿಸ್ಥಿತಿಯನ್ನು ಕೊಟ್ಟಮೇಲೆ ನಿಜವಾಗಿಯೂ ಮೇ 95ಕ್ಕೆ ಕಡಿಮೆ ಪಕ್ಷ ಸುಮಾರು 80 ಸಾವಿರ ಎಕರೆ ಜಮೀನಿಗೆ ನೀರಾವರಿ ಮಾಡಬೇಕಾಗಿತ್ತು. ನಾವು ಇದ್ದಾಗ ಸುಮಾರು 35 ಸಾವಿರ ಎಕರೆಗೆ ನೀರನ್ನು ಕೊಟ್ಟಿದ್ದೆವು. ಇವತ್ತು ಆ ಕೆಲಸ ಆಗತಕ್ಕಂಥ ಪರಿಸ್ಥಿತಿ ಅಲ್ಲಿ ಕಾಣುತ್ತಿಲ್ಲ. ಅದೇ ರೀತಿಯಲ್ಲಿ ಕೆ.ಆರ್. ಪೇಟ್‌ಗೆ ಕೂಡ ಕಟ್ಟಿಮೌಗೆರೆ ಟನಲ್ ಅನ್ನು ಓಪನ್ ಅಫ್ ಮಾಡಿಕೊಂಡು ನೀರನ್ನು ಕೊಡತಕ್ಕಂಥ ಒಂದು ಯೋಜನೆಯನ್ನು ಮಾಡಿದ್ದೆವು. ಇವತ್ತು ಆ ಕೆಲಸವನ್ನು ನಿಲ್ಲಿಸಿಬಿಡುತ್ತಾರೆಂದು ತಿಳಿದು ಬಂದಿದೆ ಅಲ್ಲಿ ಪೀಸ್ ವರ್ಕ್ಸ್‌ಕೊಟ್ಟಿದ್ದಾರೆ, ಪೀಸ್ ಕೊಟ್ಟಿದ್ದರಲ್ಲಿ ಇರ್‌ರೆಗ್ಯುಲಾರಟಿಯಾಗಿರುವುದರಿಂದ ಅದನ್ನು ನಿಲ್ಲಿಸತಕ್ಕಂಥ ದೃಷ್ಟಿಯಲ್ಲಿ ನಾವು ಇದನ್ನು ಮಾಡಿದ್ದೇವೆಂದು ತಾವು ಪತ್ರಿಕಾ ಹೇಳಿಕೆ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಆದರೆ, 7-1-95ಕ್ಕೆ ತಾವು ಏನು ಒಂದು ರಿವ್ಯೂ ಮೀಟಿಂಗ್‌ನ್ನು ಮಾಡಿದ್ದೀರಿ? ಅದರ ಪ್ರಕಾರ ತಾವು ಏನು ಆದೇಶಗಳನ್ನು ಕೊಟ್ಟಿದ್ದೀರಿ? ಇದು ಬರೀ ಪೀಸ್ ವರ್ಕ್ ಕೊಟ್ಟಿದ್ದರಲ್ಲಿ ಅನ್ಯಾಯವಾಗಿದೆ, ಅಕ್ರಮವಾಗಿದೆ, ಇದೇ ಅದಕ್ಕೆ ಮುಖ್ಯ ಕಾರಣವೆಂದು ನಮಗೆಲ್ಲಾ ಕಾಣುವುದಿಲ್ಲ. ತಾವು ಇದರಲ್ಲಿ ಹೇಳಿದ ಪ್ರಕಾರ, don't allow a single work of non - potential in nature right from the date of issue of Government letter dated 22.12.94. Necessary Circular in this regard shall be issued by the Chief Engineer. No Command Area achucut work to be tackled until further orders of the Government. No other non- development irrigation work shall be tackled. Half done departmental work only after submitting detailed

report shall be done indicating if its is essential or otherwise and no departmental work hereafter be taken up without the approval of the Government. There is no proper programme in respect of lining works and hence stop it at once for all. If there is no continuity in the lining to be done only after planning and fixing priority. Detailed report on all lift irrigation works may be submitted indicating estimated cost when administrative approval recorded, technical sanction are recorded, water availability, power supply availability and its feasibility, the stage of works and the amount spent at that time. Then, in respect of yegachi a detailed note has to be prepared and discussed separately. Regarding original scope of the project provisions as proposal of the scheme is at different stage of the work and only in case of breach.... In respect of Yagachi a detailed note is to be prepared and discussed separately regarding the original scope of the budget provision and the present proposed of the sheme with different stages of the work of the project only incase of the breach...... ಈ ತರಹ ನೀವು ಹೇಳಿದ್ದೀರಿ. ಅಂದರೆ ತಾವು ಇರ್‌ರೆಗ್ಯುಲೆರಿಟಿ ಆಗಿದೆ, ಅದು ಪೀಸ್ ವರ್ಕ್‌ನಲ್ಲಿ ಆಗಿದೆ ಎಂದು ಹೇಳಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ತಾವು ನಡೆಸಿದ ಒಂದು ಸಭೆಯ ಪ್ರೋಸೀಡಿಂಗ್ಸ್‌ಗೂ ಇದಕ್ಕೂ ಯಾವ ತಾಳಮೇಳವೂ ಇಲ್ಲ. ಯಾವ ರೀತಿಯಲ್ಲಿ ಪ್ರೊಸೀಡಿಂಗ್ಸ್ ಕೊಟ್ಟು ಟೆಂಡರ್ ಅದ ಕೆಲಸಗಳು ಟೆಂಡರ್ ಆಗದೇ ಕೊಟ್ಟಂಥ ಪೀಸ್‌ವರ್ಕ್‌ಗಳು ಅಥವಾ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಮೂಲಕ ಮಾಡಿಸಿಬೇಕಾದಂಥ ಎಲ್ಲಾ ಕೆಲಸಗಳು ಕಡಿಮೆ ಪಕ್ಷ 80 ಪರ್‌ಸೆಂಟನಷ್ಟು ಕೆಲಸಗಳನ್ನು ತಾವು ನಿಲ್ಲಿಸಿದ್ದೀರಿ. ಇದರ ಔಚಿತ್ಯವನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಯುಕೆಪಿ ಅಥವಾ ಕಾವೇರಿ ಬೇಸಿನ್ ಬಗ್ಗೆ 2000 ಎ.ಡಿ.ಯವರೆಗೆ ಕಾಯಬೇಕೆಂದು ಒಂದು ನಿಗದಿ ಇದ್ದರೂ ಕೂಡ, ಇವೊತ್ತು ಕಾವೇರಿ ಜಲಾನಯನ ಯೋಜನೆಯಲ್ಲಿ ನಿಮಿಷ ನಿಮಿಷ ಕೂಡ ನಾವು ಏನು ವ್ಯಯ ಮಾಡುತ್ತಾ ಇದ್ದೇವೆ ಒಂದು ವ್ಯವಸ್ಥಿತವಾದಂಥ ರೀತಿಯಲ್ಲಿ ಆ ಕೆಲಸವನ್ನು ಮಾಡಿ, ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡದೇ ಹೋದರೆ, ನಮಗೆ ಯಾವ ಸಂದರ್ಭದಲ್ಲಿ ದೊಡ್ಡದೊಂದು ಆಘಾತ ಬರುತ್ತದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಅದನ್ನು ಊಹೆ ಮಾಡಲೂ ಆಗುವುದಿಲ್ಲ. ಆ ಕೆಲಸಗಳನ್ನು ಪುನಃ ಪ್ರಾರಂಭ ಮಾಡಬೇಕೆಂಬ ಬಗ್ಗೆ ತಾವು ಯೋಚನೆ ಮಾಡಿಲ್ಲ. ಅಲ್ಲಿರತಕ್ಕಂಥ ಲಿಫ್ಟ್ ಇರಿಗೇಶನ್ ವರ್ಕ್ ಆಗಲೀ, ಅಥವಾ ಇನ್ನಿತರ ಕೆಲಸಗಳಾಗಲೀ,

ಅವುಗಳಿಗೆ ಟೆಕ್ನಿಕಲ್ ಅಪ್ರೂವಲ್ ಆಗಿದೆ. ವಾಟರ್ ಅವೆಲಬಿಲಿಟಿ ಇದೆ, ಇದರ ಬಗ್ಗೆ ತಾವು ನೀರಾವರಿ ಸಚಿವರಾಗಿದ್ದಾಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಕಡೆಯಿಂದ ನಾನೇ ವರದಿಯನ್ನು ಕೊಟ್ಟಿದ್ದೆ. ಹೈದ್ರಾಲಜಿಯನ್ನು ಮರುನಿಷ್ಕರ್ಶೆ ಮಾಡಿದ ಬಗ್ಗೆ ಆ ಔಚಿತ್ಯವನ್ನು ನಾನೇ ಪ್ರಶ್ನೆ ಮಾಡಿದ್ದೇನೆ. ಆದ್ದರಿಂದ ಯಾವ ಹೈದ್ರಾಲಜಿಯ ಬಗ್ಗೆ ವಾಟರ್ ಅವೈಲೆಬಿಲಿಟಿಯ ಬಗ್ಗೆ ತಾವು ಅಂತಿಮ ನಿರ್ಣಯ ಬಗ್ಗೆ ತಾವು ಅಂತಿಮ ನಿರ್ಣಯವನ್ನು ಕೊಟ್ಟಿದ್ದೀರಿ, ಅದನ್ನು ಇವೊತ್ತು ತಾವೇ ಪ್ರಶ್ನೆ ಮಾಡತಕ್ಕಂಥ ಪರಿಸ್ಥಿತಿ ಬಂದು ಇವೊತ್ತು ತಾವು ಅಂಥ ಕೆಲಸವನ್ನು ನಿಲ್ಲಿಸಬೇಕಾದರೆ, ಇದರ ಔಚಿತ್ಯ ಏನು ಎಂಬ ಬಗ್ಗೆ ತಾವು ಖಂಡಿತವಾಗಿಯೂ ಉತ್ತರ ಕೊಡುತ್ತೀರಿ ಎಂದು ನಂಬಿದ್ದೇನೆ. ಇವೊತ್ತು ಲಿಫ್ಟ್ ಇರಿಗೇಶನ್ ಕೆಲಸಗಳಿಗೂ ಕೂಡ ಟೆಕ್ನಿಕಲ್ ಅಪ್ರೂವಲ್ ಅಗಿದೆ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿದೆ. ಅದು ಹಳೇಬೀಡು ಲಿಫ್ಟ್ ಇರಿಗೇಶನ್ ಪ್ರಾಜೆಕ್ಟ್ ಇರಬಹುದು, ಅಂಜನಾಪುರ ಲಿಫ್ಟ್ ಇರಿಗೇಶನ್ ಪ್ರಾಜೆಕ್ಟ್ ಇರಬಹುದು, ನಿಮ್ಮ ತಾಲ್ಲೂಕಿನ ಹಳ್ಳಿಮಾನಸೂರು ಅಥವಾ ಕಾಮಸಮುದ್ರ ಪ್ರಾಜೆಕ್ಟ್ ಇರಬಹುದು, ತಮ್ಮದೇ ಆದಂಥ ಹುಚ್ಚನ ಕೊಪ್ಪಲು ಪ್ರಾಜೆಕ್ಟ್ ಇರಬಹುದು, ಚನ್ನರಾಯಪಟ್ಟಣದ ಕಾಚಾರನಹಳ್ಳಿ ಪ್ರಾಜೆಕ್ಟ್ ಇರಬಹುದು, ಇದು ರಿಜನರೇಶನ್ ಆಫ್ ದಿ ವಾಟರ್. ಇದರ ಆಧಾರದ ಮೇಲೆ ಎಲ್ಲಾ ಲಿಫ್ಟ್ ಇರಿಗೇಶನ್ ಪ್ರಾಜೆಕ್ಟ್‌ಗಳನ್ನು ಎಲ್ಲಾ ಫಾರ್ಮಾಲಿಟಿಯನ್ನು ಅನುಸರಿಸಿ ಮಾಡಿರುವಾಗ ತಾವು ಆ ಕೆಲಸವನ್ನು ನಿಲ್ಲಿಸುವಂಥ ಅವಶ್ಯಕತೆ ಇರಲಿಲ್ಲ. You could have stil ordered for enquiry. ತಮಗೆ ಅನುಮಾನ ಬಂದರೆ ಅವರು ಯಾರೇ ಇದ್ದರೂ ಅಂಥ ಅಧಿಕಾರಿಯನ್ನು ಮನೆಗೆ ಕಳುಹಿಸಬಹುದಾಗಿತ್ತು. ಅವರಿಗೆ ಯಾವ ಶಿಕ್ಷೆಯನ್ನು ಕೊಡಬೇಕೋ ಅದನ್ನು ಮಾಡಬಹುದಾಗಿತ್ತು. ಆದರೆ ಇವೊತ್ತು ಆ ಕೆಲಸಗಳನ್ನು ನಿಲ್ಲಿಸತಕ್ಕಂಥ ತೀವ್ರವಾದ ಕಾರ್ಯಕ್ರಮವನ್ನು ಏನು ತೆಗೆದು ಕೊಂಡಿದ್ದೀರಿ, ಇದರಿಂದ ಖಂಡಿತವಾಗಿಯೂ ಕೂಡ ಕಾವೇರಿ ಬೇಸಿಸ್‌ನಲ್ಲಿರತಕ್ಕಂಥ ರೈತರುಗಳ ಹಿತಾಶಕ್ತಿ ಆಗುವುದಿಲ್ಲ. ಲಿಫ್ಟ್ ಇರಿಗೇಶನ್ ಪ್ರಾಜೆಕ್ಟ್‌ಗಳಿಗೆ 5-6 ಕೋಟಿ ರೂಪಾಯಿಗಳು ಖರ್ಚಾಗಿವೆ. ಇಷ್ಟು ಹಣ ಖರ್ಚಾದುದು ಮಾತ್ರ ಅಲ್ಲದೆ ಅಲ್ಲಿ ಸುಮಾರು ಕೋಟಿ ರೂಪಾಯಿಗಳ ಇಕ್ವಿಟ್‌ಮೆಂಟ್‌ಗಳನ್ನು ತಂದಂಥ ಕಂಟ್ರಾಕ್ಟರ್‌ಗಳು ಹಿಂದಕ್ಕೆ ಕಳುಹಿಸಿದ್ದಾರೆ. ಅದನ್ನು ಪುನಃ ಸಾಗಿಸಿ ಪುನಃ ಕೆಲಸವನ್ನು ಪ್ರಾರಂಭ ಮಾಡಬೇಕಾದರೆ ಇನ್ನೂ ಕಡಿಮೆ ಅಂದರೆ 6 ತಿಂಗಳಾದರೂ ಬೇಕಾಗುತ್ತದೆ. ಯಗಚಿಯ ಪ್ರಾರಂಭ ಮಾಡಬೇಕಾದರೆ ಇನ್ನೂ ಕಡಿಮೆ ಅಂದರೆ 6 ತಿಂಗಳಾದರೂ ಬೇಕಾಗುತ್ತದೆ. ಯಗಚಿಯ ಕೆಲಸದ ಬಗ್ಗೆಯೂ ಕೂಡ ತಮಗೆ ಗೊತ್ತಿದೆ. ಹಿಂದೆ ಆ ಕೆಲಸವು ತಟಸ್ಥವಾಗಿತ್ತು. ನಾನೇ ಆ ಸ್ಥಳಕ್ಕೆ ಸಂದರ್ಭ ಕೊಟ್ಟಿದ್ದೆ. ಡ್ಯಾಂ ವರ್ಕ್ ಮತ್ತು ಟ್ಯಾನಲ್ ವರ್ಕ್ ಎರಡೂ ನಿಂತು ಹೋಗಿದೆ. ಇವೊತ್ತು ನಮಗೆ ಒಂದು ವಿಷಯದ ಬಗ್ಗೆ ತಾವು ಹೇಳಬೇಕಾಗುತ್ತದೆ. ಇಂಜಿನೀಯರ್ಸ್. ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆ, ಉದಾಹರಣೆಗೆ ಒಬ್ಬ ದುಮಕನಾಳ್ ಎಂಬ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಇದ್ದರು. He was to retire on 31st March, but he was asked to go on compulsory leave on 25th of March. ಏನೆಂದರೆ 25ಕ್ಕೆ ಎಲ್.ಒ.ಸಿ. ಬಂತು. but

he was not entitled to issue LOC. Another person takes over charge, who is E.E. ಅವರು 31ಕ್ಕೆ ಚಾರ್ಜ್ ಕೊಟ್ಟು ಮನೆಗೆ ಹೋದರು. ಈ ರೀತಿ ಆದರೆ ಯಾವ ರೀತಿಯಲ್ಲಿ ಅವರುಗಳಿಂದ ಒಂದು ಮೊರಲ್‌ನ್ನು ನಿರೀಕ್ಷಿಸಬಹುದು. ಒಂದು ವೇಳೆ ಆ ದುಮಕನಾಳ್ ತಪ್ಪಿಸ್ಥನಾಗಿದ್ದರೆ you should have taken action and you should have prosecuted him. You could have taken action against him and nobody would have objected for it. ಆದರೆ ಈ ರೀತಿಯಾಗಿ ಕೆಲವು ಇನ್ಸಿಡೆಂಟ್ಸ್‌ಗಳು ಅಲ್ಲಿ ಆದಾಗ ಅಲ್ಲಿರತಕ್ಕಂಥ ಇಂಜಿನೀಯರ್ಸ್‌ಗೆ ಏನಾಗುತ್ತಾರೆ ಅಂದರೆ they will be cowed down. ಇಂಜೀನೀಯರ್‌ಗೆ ಒಂದು ಇಂಟೆಗ್ರಿಟಿಯಿಂದ ಒಂದು ಧೈರ್ಯದಿಂದ ಕೆಲಸ ಮಾಡತಕ್ಕಂಥ ಅವಕಾಶಬೇಕಾಗುತ್ತದೆ. ತುಮಕೂರು ಚೀಫ್ ಇಂಜಿನೀಯರ್ಸ್ ಆಫೀಸ್‌ನಲ್ಲಿ 2-3 ಜನರಿಗೆ ಸಸ್ಪೆಂಡ್ ಮಾಡಿದ್ದಾರೆ. and I am told that they have been reinstated in the evening itself. ಏನೋ ಇಲ್ಲೀಗೆಲಿಟಿ ಆಗಿದೆ ಎಂದು ಹಾಗೆ ಮಾಡಿದ್ದಾರೆ. ಹಾಗೆ ಒಂದು ವೇಳೆ ಆಗಿದ್ದರೆ ತಾವು ಸಸ್ಪೆಂಡ್ ಏಕೆ ಮಾಡಬೇಕು? ರೀಇನ್ಸ್ಟೇಟ್ ಏಕೆ ಮಾಡಬೇಕು? ಯಗಚಿಯ ಇಂಜಿನಿಯರ್ಸ್‌ನ್ನು ಸಸ್ಪೆಂಡ್ ಮಾಡುತ್ತೀರಿ. ಮತ್ತೆ 15 ದಿವಸಗಳನ್ನು ರೀಇನ್‌ಸ್ಟೇಟ್ ಮಾಡುತ್ತೀರಿ ಇದರಿಂದ ಒಂದು ರೀತಿಯಲ್ಲಿ ಭಯ ಉಂಟಾಗಿ ನಿರ್ಭೀತಿಯಿಂದ ಆ ಪ್ರಾಜೆಕ್ಟ್‌ಗಳಲ್ಲಿನ ಇಂಜಿನೀಯರ್ಸ್‌ಗೆ ಖಂಡಿತವಾಗಿಯೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿಯಲ್ಲಿ ಅನೇಕ ಕಡೆಗಳಲ್ಲಿ ಆಗಿದೆ. ಈ ರೀತಿಯಲ್ಲಿ ತಾವು ಕೆಲಸವನ್ನು ನಿಲ್ಲಿಸಿ ಇಂಜಿನೀಯರ್ಸ್‌ನ್ನು ಸಸ್ಪೆಂಡ್ ಮಾಡತಕ್ಕಂಥಾದ್ದು ರೀಸೆಲೇಟ್ ಮಾಡತಕ್ಕಂಥಾದ್ದು ಕಂಪಲ್‌ಸರಿ ರಜೆಯ ಮೇಲೆ ಕಳುಹಿಸಿರತಕ್ಕಂಥಾದ್ದು ಮುಂತಾದವುಗಳನ್ನು ಮಾಡುವುದರಿಂದ ಖಂಡಿತವಾಗಿ ಅವರು ಡಿ-ಮಾರಲೈಸ್ ಆಗುತ್ತದೆ. ನಮ್ಮ ಈ ಪ್ರಾಜೆಕ್ಟ್‌ಗಳು ಸಮಯಕ್ಕೆ ಸರಿಯಾಗಿ ಆಗಬೇಕಾದರೆ, ಅದನ್ನು ಧೈರ್ಯವಾಗಿ ನಾವು ಮಾಡಬೇಕಾದರೆ ಆ ಇಂಜಿನೀಯರ್ಸ್ ಮೇಲೆ ವಿಶ್ವಾಸ ನೀಡಬೇಕು. ಅವರುಗಳು ನಿಜವಾಗಿಯೂ ನಮ್ಮ ಆಸ್ತಿ. ಆದರೆ ಯಾರು ತಪ್ಪಿತಸ್ಥರು ಇದ್ದಾರೆ ಅವರನ್ನು ಸಸ್ಪೆಂಡ್ ಮಾಡಿ ಅಥವಾ ಕಠಿಣ ಕ್ರಮ ತೆಗೆದುಕೊಳ್ಳಿ. ಒಂದು ವೇಳೆ ಕಾನೂನ್ನು ಮಾಡಿ ಅಂಥವರನ್ನು ಡಿಸ್‌ಮಿಸ್ ಮಾಡುವಂಥ ಕೆಲಸವನ್ನು ಮಾಡಿದರೂ ಕೂಡ ನಾವು ನಿಮಗೆ ಅಡ್ಡಿ ಬರುವುದಿಲ್ಲ. ಅದಕ್ಕೆ ನಮ್ಮ ಬೆಂಬಲ ಇದೆ. ಕರ್ತವ್ಯವನ್ನು ನಿರ್ವಹಿಸತಕ್ಕಂಥ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ಅವರನ್ನು ದೃತಿಗೆಡಿಸತಕ್ಕಂಥ ಕೆಲಸ ಮಾಡಿದಾಗ, ಅಲ್ಲಿನ ಇಂಜಿನೀಯರ್ಸ್ ನಿರ್ಭೀತಿಯಿಂದ ಕೆಲಸ ಮಾಡಲು ಆಗುವುದಿಲ್ಲ. ಹೇಮಾವತಿ ಇರಲಿ ಹಾಸನ ಜಿಲ್ಲೆಯಲ್ಲಿರತಕ್ಕಂಥ ಕೆಲಸಗಳೇ ಇರಲಿ, ಇವತ್ತು ತುಮಕೂರು ಜಿಲ್ಲೆಗೆ ನೀರು ಬಂದಿದೆ. ನಮಗೆ ಗೊತ್ತಿದೆ, ಯಾವುದೇ ಒಂದು ಪೀಸ್ ವರ್ಕ್‌ನ್ನು ನಾವು ಕೊಟ್ಟಾಗ, ಕಾಂಟ್ರಾಕ್ಟರ್ ಮಾರ್ಜ್‌ನ 10 ಪರ್‌ಸೆಂಟ್ ಏನಿದೆ, ಅದನ್ನು ನಾವು ಕಡಿಮೆ ಮಾಡಿ ಎಂಟ್ರುಸ್ಟ್ ಮಾಡುತ್ತೇವೆ. ತಾವು ಕೂಡ 10 ಪರ್‌ಸೆಂಟ್ ಕಡಿಮೆ ಮಾಡಿ ಅವರಿಗೇ ಕೆಲಸ ಕೊಡುತ್ತೇವೆ ಎಂದು ಹೇಳಿದ್ದನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಇದೇನೂ ಹೊಸ

ಕ್ರಮ ಅಲ್ಲ. ಆ ಒಂದು ಪದ್ಧತಿಯು ಪ್ರಮುಖವಾಗಿ ಕಾವೇರಿ ಬೇಸಿನ್ ಪ್ರಾಜೆಕ್ಟ್‌ನಲ್ಲಿ ಏಕೆ ಬಂತು ಅಂದರೆ, ತಾವೇ ತಮ್ಮ ಕಾಲದಲ್ಲಿ ಒಂದು ಆಜ್ಞೆಯನ್ನು ಈ ಪೀಸ್ ವರ್ಕ್ ಬಗ್ಗೆ ಕೊಟ್ಟಿದ್ದೀರಿ, ಆ ಸರ್ಕುಲರ್ ಕೂಡ ನನ್ನ ಹತ್ತಿರ ಇದೆ. ನಾನು ಪಿಎಸಿಯಲ್ಲಿ ಚೇರ್ಮನ್ ಆಗಿದ್ದಾಗ, ಪೀಸ್ ವರ್ಕ್ ಮತ್ತು ಕಾಂಟ್ರಾಕ್ಟ್ ವರ್ಕ್ ಮತ್ತು ಡಿಪಾರ್ಟ್‌ಮೆಂಟಲ್ ವರ್ಕ್ ಬಗ್ಗೆ ಕೂಡ ನಾನು ಕಮೆಂಟ್ಸ್ ಮಾಡಿದ್ದೆ.

ಶ್ರೀ ಎಚ್.ಎನ್. ನಂಜೇಗೌಡ : ಈ ಪೀಸ್‌ವರ್ಕ್ 1972ರಲ್ಲಿ ಪ್ರಾರಂಭವಾಯಿತು, ಉದ್ದೇಶ ಏನಿತ್ತು ಅಂದರೆ ಲೋಕಲ್ ಕಂಟ್ರಾಕ್ಟರ್‌ಗಳಿಗೆ ಕೆಲಸ ಸಿಕ್ಕಿರಲಿಲ್ಲ. ಅವರಿಗೆ ಅವಕಾಶಮಾಡಿ ಕೊಡೋಣ, ಹೊರಗಡೆಯವರೆಲ್ಲ ಬರುತ್ತಾರಲ್ಲ ಎಂದು ನಾವು ಕೊಟ್ಟೆವು. ಬರುತ್ತಾ ಬರುತ್ತಾ ಪೀಸ್‌ರೇಟಲ್ಲಿ ಲೋಕಲ್ ಕಂಟ್ರಾಕ್ಟರ್ಸ್‌ಗೆ ಏನು ಕೊಡುತ್ತಿದ್ದೆವು ಅದೂ ಹೊರಗಡೆಯವರಿಗೇ ಹೋಗುತ್ತಿದೆ. ಅಲ್ಲಿ ಹೊಗಕೂಡದು ಎನ್ನುವುದಷ್ಟೇ ನಮ್ಮ ಭಾವನೆ.

ಶ್ರೀ ರಂಗದೇವರಾಯಲು : ಅಧ್ಯಕ್ಷರೇ ಪೀಸ್‌ವರ್ಕ್ ಅಂದರೆ ರೈತರಿಗೆ ಕೆಲಸ ಮಾಡುವುದಕ್ಕಾಗಿ ಕೊಡುತ್ತಿದ್ದೇವೆ, ಒಂದು ನಾನ್‌ಪೊಲಿಟಿಕಲ್ ರೈತರ ಆರ್ಗನೈಜೇಶನ್ ಮಾಡಿಬಿಟ್ಟು ನಿಮ್ಮಲ್ಲಿ ಕೆನಾಲ್ಸ್ ಇಷ್ಟಿವೆ ಮಾಡಿಕೊಳ್ಳಿರಪ್ಪ ಅಂತ ಅವರಿಗೆ ಪೀಸ್‌ವರ್ಕಾಗಿ ಕೊಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೆಲಸ ಎಲ್ಲಿ ಆಗಿಲ್ಲ ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಿ, ಆದರೆ ಕೆಲಸ ನಿಲ್ಲಸುವಂತಹ ಕೆಲಸ ಏನಾಗಿದೆ ಇವತ್ತು ಇದರಿಂದ ಆ ಭಾಗದ ಜನರಿಗೆ ವಿಶೇಷವಾದ ಆತಂಕ ಉದ್ಭವವಾಗಿದೆ. ಇನ್ನು ಯುಕೆಪಿ ಕೆಲಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ನಾನು ಅಪೇಕ್ಷೆ ಪಡುತ್ತಿದ್ದೇನೆ. ಯುಕೆಪಿಯಲ್ಲಿ ಆರ್ ಅಂಡ್ ಆರ್ ವರ್ಕ್ ಎಂದು ತಮಗೆ ಗೊತ್ತಿದೆ. ಒಂದು ಕಾಲದಲ್ಲಿ ಆ ವರ್ಕ್ ಸಮರ್ಪಕವಾಗಿ ಆಗಲಿಲ್ಲವೆಂದು ವಿಶ್ವಬ್ಯಾಂಕಿನವರು ನಮಗೆ ಬರತಕ್ಕ ಸಾಲವನ್ನೇ ನಿಲ್ಲಿಸಿಬಿಟ್ಟರು. ಆ ಬಗ್ಗೆ ನಾವು ಅವರ ಜೊತೆ ಮಾತು ಕತೆ ನಡೆಸಿ ಯುಕೆಪಿಗೆ ಮತ್ತೆ ವಿಶ್ವಬ್ಯಾಂಕಿನ ಸಾಲ ಮಾಡಿಸಿದೆವು. ಆದರೆ ಈಗ ಪುನಃ ಆರ್ ಅಂಡ್ ಆರ್ ವರ್ಕ್ ನಿಂತುಹೋಗಿದೆ. ಏಕೆಂದರೆ ಇದರ ಬಗ್ಗೆ ಒಂದು ಹೊಸ ನೀತಿಯನ್ನು ವಿಶ್ವಬ್ಯಾಂಕಿನ ಜೊತೆ ಮಾತನಾಡಿಕೊಂಡು, ಒಂದು ಡ್ರಾಫ್ಟನ್ನು ನನ್ನ ಸರ್ಕಾರ ಇದ್ದಾಗ ಸಿದ್ಧಮಾಡಿ ಮುಖ್ಯವಾಗಿ 10 ಹೆಕ್ಟೇರಿಗಿಂತ ಹೆಚ್ಚು ಜಮೀನಿರುವವರಿಗೆ ಎಕ್ಸ್‌ಗ್ರೇಶಿಯಾ ಎಂದು ಪೇಮೆಂಟ್ ಮಾಡಬೇಕೆಂದೂ, ಮಾಡದೇ ಇದ್ದರೆ ಅಲ್ಲಿನ ರೈತರು ತೊಂದರೆ ಮಾಡುತ್ತಾರೆ ಚಳುವಳಿ ಮಾಡುತ್ತಾರೆ ಮತ್ತು ಕೆಲಸ ಮುಂದುವರಿಯುವುದಿಲ್ಲವೆಂಬ ದೃಷ್ಟಿಯಿಂದ ಅದನ್ನು ನಾವು ಮಾಡಿದೆವು. ಆ ಡ್ರಾಫ್ಟ್ ಪಾಲಿಸಿಯನ್ನು 4 ತಿಂಗಳಿಂದ ತಾವು ಒಪ್ಪದೇ ಇದ್ದುದರಿಂದ ಇವತ್ತು ಆರ್ ಅಂಡ್ ಆರ್ ವರ್ಕ್ ನಿಂತುಹೋಗಿದೆ. 12 ಕೋಟಿ ರೂಪಾಯಿಗಳಲ್ಲಿ ಐದಾರು ಕೋಟಿ ನಮ್ಮ ಕಾಲದಲ್ಲಿ ಏನು ಖರ್ಚಾಯಿತು ಅಷ್ಟರಲ್ಲೇ ನಿಂತಿದ್ದರಿಂದ ಸುಮಾರು 21 ಗ್ರಾಮದ ಜನರನ್ನು ಜೂನ್ 95 ಒಳಗೆ ಸೆಟ್ಲ್‌ಮೆಂಟ್ ಮಾಡಬೇಕಾಗಿತ್ತೋ ಯಾವುದೇ ರೀತಿಯ ಕಂಟಿನ್‌ಜೆನ್ಸಿ ಪ್ಲಾನ್ ಆಗಲಿಲ್ಲ, ತಮಗೆ ಗೊತ್ತಿದೆ. ಅಲಮಟ್ಟಿ

ಡ್ಯಾಂ ಸುಮಾರು ಜೂನ್ 95ಕ್ಕೆ 506 ಮೀಟರ್ ಎತ್ತರಕ್ಕೆ ಹೋಗಬೇಕಾಗಿದೆ ಈಗಾಗಲೇ 504 ಮೀಟರ್ ಎತ್ತರಕ್ಕಿದೆ ಅಲಮಟ್ಟಿ ಡ್ಯಾಂಗೆ 1983ರಲ್ಲಿ ಆಯಕಟ್ಟು ಹಾಕಿದ್ದದು ಅವರ ಮೇಲೆ ಏಳಲೇ ಇಲ್ಲ. ಆಮೇಲೆ ಎಲ್ಲಾ ಸಮಸ್ಯೆಗಳನ್ನು ನಾವು ಪರಿಹಾರ ಮಾಡಿ ವರ್ಕನ್ನು ಟೆಂಡರ್ ಮೂಲಕ ಎನ್‌ಟ್ರಸ್ಟ್ ಮಾಡಿಕೊಂಡು 504 ಮೀಟರ್‌ನಿಂದ ಜೂನ್ 95ಕ್ಕೆ 506 ಮೀಟರ್‌ಗೆ ಬರಬೇಕು, ಅದನ್ನು ಸಮರೋಪಾದಿಯಲ್ಲಿ ಆರ್ ಅಂಡ್ ಆರ್ ವರ್ಕ್‌ಗೆ ಬೇಕಾದಂತಹ ಹಣವನ್ನು ಕೊಟ್ಟು ಏನು ಒಂದು ಕರಡು ನೀತಿ ಒದಗಿಸಬೇಕೆಂದಿದ್ದೆವು ಅದರ ಬಗ್ಗೆ ತಾವು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಬಹುಶಃ ರೈತರು ಅಲ್ಲಿ ಪ್ರತಿಭಟಿಸಿ ಒಮ್ಮೆ ನಿಲ್ಲಿಸಿದರೆ ಒಂದು ದಶಕದಲ್ಲಿ ಅಲಮಟ್ಟಿಡ್ಯಾಂ ಕೆಲಸವಾಗದೆ ಏನು ಸ್ಥಗಿತವಾಗಿತ್ತು, ಆದೇ ಪರಿಸ್ಥಿತಿ ಮತ್ತೆ ಇವತ್ತ ಮರುಕಳಿಸುವಂತಹ ಒಂದು ಅವಶ್ಯಕತೆ ಖಂಡಿತ ಇವತ್ತಿದೆ. ಅದೇ ರೀತಿ ಮುಳವಾಡ ಪ್ರಾಜೆಕ್ಟ್ ಇತ್ತು, ಅಲಮಟ್ಟಿಬೆಫ್ಟ್ ಬ್ಯಾಂಕಿಗೆ ಅಥವಾ ರಾಂಪುರ Life Irrigation Project ಇದೆ Almatti Right Bank Canal ಇದೆ. ಅದೂ ಕೂಡ ಕೆಲಸ ಸಾಧಾರಣ ಅಲ್ಲಿ ನಿಂತುಹೊಗಿದೆ. ಅದನ್ನೂ ತಾವು ವಿಶೇಷವಾಗಿ ಕಾರ್ಯಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇದೆ. ನಾರಾಯಣಪುರ Right Bank Canal ಈಗಾಗಲೇ ಕಾರ್ಯಕ್ರಮ ಸಿದ್ಧಪಡಿಸಿದ್ದೇವೆ, ಅದನ್ನು Water and Power Commission ಗೆ ತೆಗೆದುಕೊಂಡು ಹೋಗಿ ಯಾರು ಯಾವರೀತಿ ಖರ್ಚನ್ನು ಹಂಚಿಕೊಳ್ಳಬೇಕು, ಅದರ ಬಗ್ಗೆ ವಿಶೇಷವಾಗಿ ಕ್ರಮ ತೆಗೆದುಕೊಂಡು ಆ ಕೆಲಸ ಮುಂದುವರಿಸಬೇಕಾಗಿದೆ. Bagalkot Town Development ಕೂಡ ನಾವು ಸಾಕಷ್ಟು ಫ್ರೀಸೈಟನ್ನು ಅಲ್ಲಿ ಸಿದ್ಧಪಡಿಸಿದ್ದೇವೆ, ಆದರೆ ರಸ್ತೆ ವಿದ್ಯುತ್‌ಸಂಪರ್ಕ ಕೆಲಸ ಕೂಡ ಸ್ಥಗಿತಗೊಂಡಿದೆ. ಅನೇಕ ವರ್ಷಗಳ ಮೇಲೆ ತಮಗೆ ಗೊತ್ತಿದೆ, ವಿಶ್ವಬ್ಯಾಂಕಿನ ಸಾಲ ತೆಗೆದುಕೊಂಡರೂ ಅದನ್ನು ಸರಿಯಾಗಿ ಉಪಯೋಗ ಮಾಡುವಂತಹ ಪರಿಸ್ಥಿತಿಯಲ್ಲಿ ಒಂದು ದಶಕದಿಂದ ಆಗಿಲ್ಲ. ಕಷ್ಟದಲ್ಲಿ ಬಿದ್ದಿದ್ದೇವೆ ಆದರೆ 93-94ರಲ್ಲಿ ಸುಮಾರು 110 ಕೋಟಿ ವಿಶ್ವಬ್ಯಾಂಕಿನ ಸಾಲವನ್ನು ಯುಕೆಪಿಯಲ್ಲಿ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಯಿತು. 94-95ಕ್ಕೆ 142 ಕೋಟಿ ವಿಶ್ವಬ್ಯಾಂಕ್ ಸಾಲ ಉಪಯೋಗಿಸಲು ಸಾಧ್ಯವಾಯಿತು. ಆದರೆ, ಅನೇಕ ತಾಂತ್ರಿಕ ಸಮಸ್ಯೆಗಳನ್ನು ಅಥವಾ ನೀತಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹಾರ ಮಾಡದೇ ಇದ್ದರೆ ವಿಶ್ವಬ್ಯಾಂಕ್ ಪುನಃ ಇಂತಹ ಕೆಲಸಗಳನ್ನು ನಿಲ್ಲಿಸುವಂತಹ ಪರಿಸ್ಥಿತಿ ಉದ್ಭವಿಸುತ್ತದೆ. ಕೃಷ್ಣಾ ಜಲಭಾಗ್ಯ ನಿಗಮ, ಇದರ ಬಗ್ಗೆ CRISIL ತಾವು ಒತ್ತಾಯ ಮಾಡಬೇಕಾಗುತ್ತದೆ, ಅವರು ನಾವು ಬಾಂಡ್ ಎತ್ತಲು ಅನುಮತಿ ನೀಡಬೇಕಾಗಿದೆ ಅದರ ಬಗ್ಗೆ ಆದಷ್ಟು ಜಾಗ್ರತೆ ತಾವು ಸಂಬಂಧಪಟ್ಟವರ ಜೊತೆ ಮಾತನಾಡಿಕೊಂಡು ಕೆಲಸ ಮಾಡಬೇಕಾದ್ದು ಅವಶ್ಯಕತೆ ಇದೆ. ಅದರೆ ಕೃಷ್ಣ ಜಲ ಭಾಗ್ಯ ನಿಗಮವನ್ನು ಮಾಡುವಾಗ ಸ್ಪಷ್ಟವಾದ ನೀತಿ ಕೊಟ್ಟಿದ್ದೆವು ಅದಂದರೆ ಆ ನಿಗಮ ಬಾಂಡ್‌ಗಳನ್ನು ಮಾರುಕಟ್ಟೆಯಿಂದ ಎತ್ತುತ್ತದೆ but that should be in additionality to the budgetary support ಎಂದು ನಾವು ಹೇಳಿದ್ದೆವು. ಏಕೆಂದರೆ ತಮಗೆ ಗೊತ್ತಿದೆ ಮಾರುಕಟ್ಟೆಯಲ್ಲಿ ಆ ಬ್ರಾಂಡ್ ಸಾಲವನ್ನು ಎತ್ತುವುದು ಅಷ್ಟು ಸುಲಭವಲ್ಲ.

ಆದರೆ, ನೀವು ಈಗ ಬಜೆಟರಿ ಸಪೋರ್ಟ್‌ನ್ನು ಕಡಿಮೆ ಮಾಡಿದ್ದೀರಿ, 1000 ಕೋಟಿ ಅಥವಾ 300 ಕೋಟಿ ನಾವು ಎತ್ತುತ್ತೇವೆ ಎಂದು ತಮಗೆ ಸದುದ್ದೇಶ ಇರಬಹುದು, ಆದರೆ ಬಜೆಟ್‌ನಲ್ಲಿ ಈ ಕ್ವಿಟಿಯಾಗಿ ಕೊಟ್ಟಿದ್ದು ಕೃಷ್ಣ ನಿಗಮಕ್ಕೆ 100 ಕೋಟಿ ಮಾತ್ರ, ಬಜೆಟ್‌ನಲ್ಲಿ ಕೊಟ್ಟಿದ್ದು 84 ಕೋಟಿ ಮತ್ತು ಉಳಿದದ್ದು ಒಟ್ಟು 200 ಕೋಟಿ ಮಾತ್ರ, ಯುಕೆಪಿಗೆ ಕೊಟ್ಟಿದ್ದೀರಿ. ಅದರೆ ಇದರಿಂದ ಆ ಭಾಗದ ಜನರಿಗೆ ಖಂಡಿತ ಸಹಾಯ ಮಾಡಲು ಆಗುವುದಿಲ್ಲ, ಖಂಡಿತವಾಗಿ ಪುನಃ ಸಂಪೂರ್ಣ ಬಜೆಟರಿ ಸಪೋರ್ಟ್ ಕೊಡಬೇಕಾದ ಒಂದು ಅಥಾರಿಟಿಯನ್ನು ನಾವು ಸೃಷ್ಟಿಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : 94-95ರ ಸಾಲಿನಲ್ಲಿ ಮುಳುವಾಡ ಏತ ನೀರಾವರಿಗೆ ಸರ್ಕಾರ 275 ಲಕ್ಷ ಒದಗಿಸಿತ್ತು ಅದರಲ್ಲಿ ಕೇವಲ 124 ಲಕ್ಷ ಮಾತ್ರ ಖರ್ಚುಮಾಡಿದ್ದಾರೆ. ಉಳಿದ 151 ಲಕ್ಷ ಖರ್ಚಾಗಿಲ್ಲ, ಅದು ಏಕೆ ಖರ್ಚಾಗಲಿಲ್ಲವೆಂಬುದನ್ನು ದಯವಿಟ್ಟು ಸದನಕ್ಕೆ ತಿಳಿಸಬೇಕೆಂದು ವಿನಂತಿಸುತ್ತೇನೆ. ಮುಳುವಾಡ ಏತ ನೀರಾವರಿ 2800 ಕೋಟಿ ರೂ ಪ್ರಾಜೆಕ್ಟ್ ಇದೇ ರೀತಿ ಖರ್ಚು ಮಾಡುತ್ತಾ ಹೋದರೆ 2000 ಇಸವಿ ಒಳಗೆ ಮುಗಿಸಲು ಸಾಧ್ಯವಿದೆಯೇ ಎಂಬ ಅನುಮಾನ ಇದೆ. ಅ ಹಣ ಖರ್ಚುಮಾಡದಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಮತ್ತು ಏಕೆ ಖರ್ಚುಮಾಡಲಿಲ್ಲ ಎಂಬುದನ್ನು ಈ ಸದನಕ್ಕೆ ತಿಳಿಸಬೇಕೆಂದು ವಿನಂತಿಸುತ್ತೇನೆ.

4.50 ಪಿ.ಎಂ.

ಶ್ರೀ ಎಂ. ವೀರಪ್ಪಮೊಯಿಲಿ - ಅದಕ್ಕೆ ಉತ್ತರವನ್ನು ಮುಖ್ಯಮಂತ್ರಿಗಳು ಕೊಡುತ್ತಾರೆ. ಆದರೆ ಇವತ್ತು ನಾವು ಏನು ಕೊಟ್ಟಿದ್ದೇವೆ, ನೀವೇನು ಕೊಟ್ಟಿದ್ದೀರಿ, ಅದನ್ನೆಲ್ಲಾ ಇವತ್ತು ವಿಮರ್ಶೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಹೆಚ್ಚು ವಿವರಗಳಿಗೆ ನಾನು ಹೋಗುವುದಕ್ಕೆ ಬಯಸುವುದಿಲ್ಲ. ಏನು ಅಥಾರಿಟಿ ಇದೆ. ಆಥಾರಿಟಿಯನ್ನು ವ್ಯಾಪಕವಾಗಿ ಉಳಿದ ಪ್ರಾಜೆಕ್ಟ್‌ಗಳಿಗೆ ವಿಸ್ತರಿಸಬೇಕು. ಇವತ್ತು ಆಥಾರಿಟಿ ರಾಷ್ಟ್ರಾಧ್ಯಕ್ಷರ ಒಂದು ಅಂಕಿತಕ್ಕಾಗಿ ಬಿದ್ದಿದೆ. ಆ ಆಥಾರಿಟಿಯ ಸ್ಕೋಪ್ ಬಂದಿದೆ. ನಿಗಮದ ಸ್ಕೋಪ್ ಮತ್ತೊಂದು ಇದೆ. ಅವೆರೆಡೂ ಕೂಡ ಅತ್ಯಂತ ಪ್ರಾಯೋಜನಕಾರಿಯಾದಂಥ ಒಂದು ಪಾತ್ರವನ್ನು ಖಂಡಿತವಾಗಿ ವಹಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಆದ್ದರಿಂದ ಆ ಎರಡನ್ನೂ ಕೂಡ ದಯಮಾಡಿ ತಡಮಾಡದೆ ಮುಂದುವರೆಸಿಕೊಂಡು ಹೋಗಬೇಕೆಂದು ನಾನು ಇಲ್ಲಿ ವಿಶೇಷವಾಗಿ ಹೇಳುತ್ತೇನೆ. ಇನ್ನು ಅಪ್ಪರ್‌ಭದ್ರಾದ ಬಗ್ಗೆ ಸನ್ಮಾನ್ಯ ನಂಜೇಗೌಡರು ಕೆಲವು ವಿಚಾರಗಳನ್ನು ಹೇಳಿದರು. ಅಲ್ಲಿ ನೀರಿದೆ, ಆದನ್ನು ನಾನು ಒಪ್ಪುತ್ತೇನೆ. ಆದರೆ ಕೆಲವು ತಾಂತ್ರಿಕ ತೊಂದರೆಗಳು ಅಪ್ಪರ್‌ಭದ್ರಾದ ಬಗ್ಗೆ ಇವೆ. ಅದಕ್ಕೆ ಪರ್ಯಾಯವಾಗಿ ಎರಡು ಯೋಜನೆಗಳನ್ನು ತೆಗೆದುಕೊಳ್ಳಬೇಕು ಎಂದು ನಾವು ಕರಡು ಯೋಜನೆಯನ್ನು ತಯಾರು ಮಾಡಿದ್ದೇವೆ. ಅದು ತಮ್ಮ ಸರ್ಕಾರದಲ್ಲಿದೆ. ಅದನ್ನು 95-96ರ ಆರ್ಥಿಕ ವರ್ಷದಲ್ಲಿ ಅನುಷ್ಠಾನ ಮಾಡಬೇಕು ಎಂದು ನನ್ನ ಉದ್ದೇಶ ಇತ್ತು, ಅದೆಲ್ಲ

ಸಿದ್ಧವಾಗಿತ್ತು. ಮತ್ತೆ ಚುನಾವಣೆ ಬಂತು ಎಂದು, ನಾವು ಶಂಕುಸ್ಥಾಪನೆ ಕೂಡ ಮಾಡಲಿಲ್ಲ. ಅದನ್ನು ಹಾಗೆಯೇ ಇಟ್ಟೆವು. ಆದರೆ ಅಪ್ಪರ್ ಭದ್ರಾದ ಬದಲಾಗಿ ಎರಡು ಯೋಜನೆಗಳನ್ನು ನಾವು ಏನು ರೂಪಿಸಿದ್ದೇವೆ, ಆ ಎರಡು ಯೋಜನೆಗಳನ್ನು ಕೂಡ ಅನುಷ್ಠಾನ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ತಾವು ಕೈಗೆತ್ತಿಕೊಳ್ಳಬೇಕೆಂದು ನಾನು ಇವತ್ತು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆದ್ದರಿಂದ ಇನ್ನು ಹೆಚ್ಚು ಮಾತುಗಳನ್ನು ನಾನು ಆಡುವುದಕ್ಕೆ ಹೋಗುವುದಿಲ್ಲ. ಇವತ್ತು ಈ ಎಲ್ಲಾ ನೀರಾವರಿ ಯೋಜನೆಗಳು ನಮ್ಮ ಜೀವಾಳ. ತಮ್ಮ ಸರ್ಕಾರದ ಪ್ರೈಯಾರಿಟಿಯನ್ನು ತಾವು ದಯಮಾಡಿ ಸ್ಪೆಲೌಟ್ ಮಾಡಬೇಕು. ಅದು ಇವತ್ತು ಬಜೆಟ್‌ನಲ್ಲಾಗಲಿ, ಅಥವಾ ಯಾವುದೇ ರೀತಿಯಾದಂಥ ತಮ್ಮ ಒಂದು ನಡವಳಿಕೆಯಲ್ಲಿ ಆಗಲಿ ವ್ಯಕ್ತವಾಗಿಲ್ಲ. 92-93ರಲ್ಲಿ ಸುಮಾರು 12 ಪರ್‌ಸಂಟ್ ನೀರಾವರಿಗೆ ಇಟ್ಟಿದ್ದೇವೆ. ಇವತ್ತು ಸಾಧಾರಣ 21-23 ಪರ್‌ಸೆಂಟ್‌ವರೆಗೆ ಇವತ್ತು ಬಜೆಟ್‌ನಲ್ಲಿ ನಾವು ಹಣ ಒದಗಿಸಿದಾಗ ಈ ಕಾರ್ಯಕ್ರಮ ಅನ್‌ಗೋಯಿಂಗ್ ಪ್ರಾಜೆಕ್ಟ್‌ಗಳು ಇವೆ. ಅದು ಕಾರಾಂಜಾ ಇರಬಹುದು, ಕಾರಾಂಜಾಕ್ಕೂ ಕೂಡ ಬಹಳ ಕಡಿಮೆ ಹಣ ಇವತ್ತು ತಾವು ಕೊಟ್ಟಿದ್ದೀರಿ. ಕಾರಾಂಜಾದ ಬಗ್ಗೆ ನಾವು 16 ಕೋಟಿ ರೂಪಾಯಿಗಳನ್ನು 93-94 ರಲ್ಲಿ ನಾವು ಖರ್ಚು ಮಾಡಿದ್ದೇವೆ. 94-95 ಕ್ಕೆ ನಾವು 30 ಕೋಟಿ ರೂಪಾಯಿ ಕೊಟ್ಟೆವು. ನನಗೆ ನೆನಪಿರುವ ಪ್ರಕಾರ ಆದರೆ ಈ ವರ್ಷ ಅದು 30 ಕೋಟಿ ರೂಪಾಯಿ ಕೋಟಾ ಕೂಡ ಕೊಟ್ಟಿಲ್ಲ. ಬಹುಶಃ 16 ಕೋಟಿ ರೂಪಾಯಿಗೆ ಆ ಕಾರಂಜವನ್ನು ಸೀಮಿತಗೊಳಿಸುವ ಒಂದು ಪರಿಸ್ಥಿತಿ ಮಾಡಿದರೆ ಇವತ್ತು ಕಾರಂಜ ಡ್ಯಾಮನ್ನು ಕಟ್ಟಿ ನಾವು ಏನು ನೀರು ಅಲ್ಲಿ ಹಿಡಿದಿಟ್ಟಿದ್ದೇವೆ. ಈ ರೀತಿಯಲ್ಲಿ ಖರ್ಚು ಮಾಡಿದರೆ, ಅಲ್ಲಿ ಹಿಡಿದಿರುವ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಕೂಡ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ ಎಂಬ ಒಂದು ವಿಚಾರವನ್ನು ಹೇಳುತ್ತೇನೆ. ನನ್ನ ಜಿಲ್ಲೆಯಲ್ಲಿ ಒಂದು ಸಣ್ಣ ಯೋಜನೆ. ಅದು ವರಾಹಿ ಯೋಜನೆ. ಅದಕ್ಕೆ ನಾವು 10 ಕೋಟಿ ರೂಪಾಯಿ ಈ ವರ್ಷ ಖರ್ಚು ಮಾಡಬೇಕು ಎಂದು ಇದ್ದರೆ ಬರುವ ವರ್ಷಕ್ಕೆ ಬಹುಶಃ ಬರೀ ಒಂದೂವರೆ ಕೋಟಿ ರೂಪಾಯಿ ತಾವು ಕೊಟ್ಟಿದ್ದೀರಿ. ಆದ್ದರಿಂದ ಇವತ್ತು ಯಾವ ಯೋಜನೆಗಳಿಗೆ ಯಾವ ಒಂದು ಪ್ರೈಯಾರಿಟಿ ತಮ್ಮದು ಇದೆ. ಮತ್ತು ಯಾವ ರೀತಿಯಲ್ಲಿ ತಾವು ನಿಗದಿತ ಸಮಯಕ್ಕೆ ಸರಿಯಾಗಿ ನಮ್ಮ ಒಂದು ಕಾನೂನಿನ ಪ್ರಕಾರ ನಮ್ಮ ಹಕ್ಕನ್ನು ಚಲಾಯಿಸತಕ್ಕಂಥದ್ದು ಮತ್ತು ಉಳಿದ ಯೋಜನೆಗಳಿಗೆ ಕೂಡ ತಾವು ಯಾವ ರೀತಿಯಲ್ಲಿ ತಮ್ಮ ಒಂದು ಆಧ್ಯತೆಯನ್ನು ಕೊಡುತ್ತೀರಿ ಎಂಬ ಒಂದು ವಿಚಾರವನ್ನು ತಾವು ಹೇಳಬೇಕು ಎಂದು ಹೇಳಿ ಇಷ್ಟು ಮಾತ್ರ ಹೇಳಿ ನನಗೆ ಈ ಒಂದು ಅವಕಾಶವನ್ನು ಮಾಡಿಕೊಟ್ಟಂಥ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : (ಕಿರುಗಾವಲು) ಮಾನ್ಯ ಅಧ್ಯಕ್ಷರೇ, ಈ ದಿವಸ ರಾಜ್ಯದ ನೀರಾವರಿ ಬಗ್ಗೆ ವಿಶೇಷವಾದಂಥ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಹಾಗೂ ಈ ಸದನದ ಎಲ್ಲಾ ಬಿಸಿನೆಸ್ ಅಡ್ವೈಸರಿ ಕಮಿಟಿಯ ಸದಸ್ಯರಿಗೆ ವಿಶೇಷವಾಗಿ ಅಭಿನಂದಿಸಬೇಕಾಗಿದೆ. ಆದರಲ್ಲೂ ಸಹ ಕರ್ನಾಟಕ ರಾಜ್ಯದ

ನೀರಾವರಿ ಇತಿಹಾಸವನ್ನು ಬಹಳ ಅಚ್ಚು ಕಟ್ಟಾಗಿ ರಾಜಕೀಯವನ್ನು ಮಿಕ್ಸ್‌ಮಾಡದೆ ವಿಚಾರವನ್ನು ಮಾನ್ಯ ಹಿರಿಯರಾದ ನಂಜೇಗೌಡರು ಬಹಳ ಸ್ಥೂಲವಾಗಿ ಈ ಸದನದ ಗಮನಕ್ಕೆ ತಂದಿರುವುದು ನಮಗೆಲ್ಲರಿಗೂ ಮೆಚ್ಚಿಗೆ ತಂದಿದೆ ಎಂದು ಹೇಳಿದರೆ ಯಾರೂ ಅನ್ಯಥಾ ಭಾವಿಸಬಾರದು. ಹಾಗೆಯೇ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರೂ ಸಹ ರಾಜ್ಯದ ಹಿತದೃಷ್ಟಿಯಿಂದ, ರೈತರ ಹಿತ ದೃಷ್ಟಿಯಿಂದ ಅವರ ಅನೇಕ ಸಲಹೆಗಳೂ ಸಹ ಗಂಭೀರವಾಗಿತ್ತು ಎನ್ನುವ ಮಾತನ್ನು ಹೇಳಿದರೂ ಸಹ ತಪ್ಪಾಗಲಾರದು, ನಾನು ಕಳೆದ 15-20 ವರ್ಷಗಳಿಂದ ವಿಧಾನಮಂಡಲದ ಈ ನೀರಾವರಿ ಚರ್ಚೆಗಳಲ್ಲಿ ಭಾಗವಹಿಸಿದಂಥ ಸಂದರ್ಭದಲ್ಲಿ ಎಲ್ಲಾ ಸರ್ಕಾರಗಳು ಸಹ ಎಲ್ಲಾ ಮುಖ್ಯಮಂತ್ರಿಗಳೂ ಸಹ ಅವರ ಕೈಲಾದಷ್ಟು ಮಟ್ಟಿಗೆ ಕೆಲಸ ಮಾಡಿಕೊಂಡು ಬಂದಿದ್ದಾರೆ ಎಂದು ಹೇಳಿದರೆ, ಯಾರು ತಪ್ಪಾಗಿ ಭಾವಿಸಿಕೊಳ್ಳಬಾರದು. ಒಬ್ಬರು ಹೆಚ್ಚಿಗೆ ಮಾಡಿರಬಹುದು. ಒಬ್ಬರು ಕಡಿಮೆ ಮಾಡಿರಬಹುದು. ಒಬ್ಬರು ಇದಕ್ಕೆ ಅಪ್ರೂವಲ್ ಕೊಟ್ಟರು. ಒಬ್ಬರು ಅದಕ್ಕೆ ಅಪ್ರೂವಲ್ ಕೊಟ್ಟರು ; ಒಬ್ಬರಿಗೆ ಇದಕ್ಕೆ ಸಿಕ್ಕಿದೆ. ತೆಲ್ಲಂಗಾಣಕ್ಕೆ ಸಿಕ್ಕಿಲ್ಲ, ಈ ರೀತಿಯಾದ ವ್ಯತ್ಯಾಸಗಳನ್ನು ಕಾಣಬಹುದೇ ವಿನಹ ನೀರಾವರಿಗೆ 1969 ವೀರೇಂದ್ರ ಪಾಟೀಲರ ಕಾಲದಿಂದ ನೋಡಿದ ಮೇಲೆ ಅವತ್ತಿನಿಂದ ಇವತ್ತಿನವರೆಗೆ ಪ್ರತಿ ಸರ್ಕಾರವೂ ಸಹಾ 69ರ ನಂತರ ಅದರಲ್ಲಿ 72ರಲ್ಲಿ ದೇವರಾಜಅರಸ್‌ರವರು ಬಂದ ಮೇಲಂತೂ ಹೆಚ್ಚು ಗಮನವನ್ನು ಕೊಟ್ಟುಕೊಂಡು ಬಂದಿದ್ದಾರೆ, ಅನೇಕ ರಾಜಕೀಯ ಭಿನ್ನಾಭಿಪ್ರಾಯಗಳು ಇರಬಹುದು, ಇರುತ್ತವೆ. ರಾಜಕೀಯ ಭಿನ್ನಾಭಿಪ್ರಾಯ ಇದ್ದಾಕ್ಷಣಕ್ಕೆ ಯಾರೂ ಸಹಾ ರಾಜ್ಯದ ಹಿತವನ್ನು ಕಡೆಗಾಣಿಸುತ್ತಾರೆ ಎಂದು ಭಾವಿಸಿಕೊಳ್ಳುವುದು ಸರಿಯಿಲ್ಲ ಎಂದು ಈ ಸದನದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ನಂಜೇಗೌಡರು ಹೇಳಿದಂತೆ ಇದು ಒಂದು ದುರ್ದೈವ, ನಮ್ಮ ರಾಜ್ಯದಲ್ಲಿ ಈ ನೀರಾವರಿ ಬಗ್ಗೆ ಕೇಂದ್ರದ ಹಾಗೂ ಈ ನ್ಯಾಯಾಲಯಗಳ ಈ ಕಡೆಗಾಣಿಕೆಯನ್ನಂತೂ ಸಹ ನಾವು ಕಂಡುಕೊಂಡು ಬಂದಿದ್ದೇವೆ. ಇದರ ಬಗ್ಗೆ ಎಲ್ಲರೂ ಅವರ ಕೈಲಾದಷ್ಟು ಮಟ್ಟಿಗೆ ಹೋರಾಟವನ್ನು ಮಾಡಿಕೊಂಡು ಬಂದರೂ ಸಹ ಏನು ಪ್ರಯೋಜನ ಆಗಲಿಲ್ಲ. ಈ ಮಾತನ್ನು ನಾನು ಬರೀ ಕಾವೇರಿ ಟ್ರಿಬ್ಯೂನಲ್‌ಗೆ ಆಗಲಿ ಅಥವಾ ಕೃಷ್ಣ ಟ್ರಿಬ್ಯೂನಲ್‌ಗೆ ಆಗಲಿ ಅಥವಾ ಮೊಯಿಲಿಯವರು ಹೇಳಿದ ರೀತಿ ಸುಪ್ರೀಂ ಕೋರ್ಟಿನ ಡೈರೆಕ್ಷನ್ಸ್ ಬಗ್ಗೆಯಾಗಲಿ, ಟ್ರಿಬ್ಯೂನಲ್ ಕಾನ್‌ಸ್ಟಿಟ್ಯೂಟ್ ಬಗ್ಗೆಯಾಗಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮದು ಒಂದು ತಪ್ಪಿದೆ. ನಮ್ಮ ರಾಜ್ಯ ಸರ್ಕಾರಗಳು ಈ ನೀರಾವರಿ ವಿಚಾರವನ್ನು ನಿರಾಸಕ್ತಿಯಿಂದ ಕಾಣತಕ್ಕಂಥದ್ದೇ ನಮ್ಮ ಸರ್ಕಾರದ ತಪ್ಪುಗಳು ಎಂದು ನಾನಂದುಕೊಂಡಿದ್ದೇನೆ. ಕಾರಣವೇನೆಂದರೆ ಬಹಳಷ್ಟು ಆಸಕ್ತಿ ಇರುವ ವಿಚಾರವಲ್ಲ ಇದು. ಇದರಲ್ಲಿ ಹೆಚ್ಚು ಹಣವನ್ನು ನಾವು ಉಪಯೋಗಿಸದರೆ ಯಾರೋ ಕೃಷ್ಣಾದಲ್ಲಿರುವವರು ಒಬ್ಬ ರೈತರು, ಕಾವೇರಿಯಲ್ಲಿರುವ ಮತ್ತೊಂದು ರೈತರು ಇವರಿಗೆ ಸಹಾಯವಾಗುತ್ತದೇಯೋ ದೊಡ್ಡ ರೈತರಿಗೆ ಸಹಾಯವಾಗುತ್ತೇನೋ ಸಣ್ಣ ರೈತರಿಗೆ ಸಹಾಯವಾಗುತ್ತದೇನೋ ಎನ್ನುವ ಅನೇಕ ಚಿಂತನೆಗಳಿಂದ ಈ ಗಮನ ಬಹಳಷ್ಟು ಕಡಿಮೆಯಾಗಿದೆ ಎನ್ನುವ ಮಾತನ್ನು

ಹೇಳುತ್ತಾ, ನಾನು ಅದನ್ನು ಅಷ್ಟಕ್ಕೆ ನಿಲ್ಲಿಸುತ್ತೇನೆ. ಇವತ್ತು ಹೆಚ್ಚು ಗಮನವನ್ನು ತಮ್ಮ ಮುಖ್ಯಮಂತ್ರಿಗಳು ಕೊಡಬೇಕು - ಎಂದು ನಮ್ಮೆಲ್ಲರ ಆಸಕ್ತಿ. ನಾನೂ ಸಹ ಕಾಂಗ್ರೆಸ್ ಪಕ್ಷದಲ್ಲಿದ್ದಾಗ ತೀಕ್ಷ್ಣವಾಗಿ ವೀರಪ್ಪಮೊಯಿಲಿಯವರ ಪಬ್ಲಿಕ್ ಅಕೌಂಟ್ಸ್ ರಿಪೋರ್ಟ್ ಮೇಲೆ ಹೇಮಾವತಿ ವಿಚಾರ ಬಂದಾಗ ಬಹಳಷ್ಟು ಭಾಷಣ ಮಾಡಿದಂಥ ಜ್ಞಾಪಕಗಳು ನಮಗೆ ಇವೆ. ನಮ್ಮ ಮುಖ್ಯಮಂತ್ರಿಗಳು ನೀರಾವರಿಗೆ ಬಹಳಷ್ಟು ಪ್ರಾಧಾನ್ಯವನ್ನು ಕೊಟ್ಟುಕೊಂಡು ಬಂದಿರುವವರು ಎಂದು ನಮ್ಮ ನಂಜೇಗೌಡರ ಬಾಯಲ್ಲೇ ಹೇಳಿದ್ದಾರೆ. ಈ ಸದನದ ಇತಿಹಾಸದಲ್ಲಿ ನಾನ್ ಅಫಿಷಿಯಲ್ ರೆಜ್ಯುಲೇಷನ್ ಪಾಸ್ ಆದದ್ದು ಕಾವೇರಿ ವಿಚಾರದಲ್ಲಿ ಸರ್ವಾನುಮತದಿಂದ ತಂದವರು ಶ್ರೀಮಾನ್ ದೇವೇಗೌಡರು ಎಂದು ಬೆಳಿಗ್ಗೆ ಮಾನ್ಯ ನಂಜೇಗೌಡರು ಹೇಳಿದ್ದನ್ನು ನಾನು ಕೇಳಿದೆ. ಆದ್ದರಿಂದ ಇವತ್ತಿನ ದಿವಸ ಒಂದು ಕ್ಷಣವೂ ಸಹ ಕಾವೇರಿ ವಿಚಾರದಲ್ಲಿ ತಡಮಾಡದೆ, ಇದು ಬಹಳ ಪ್ರಾಮುಖ್ಯವಾದುದು ಎಂದು ಏನು ಮಾತನ್ನು ಹೇಳಿದ್ದಾರೆ. ಆ ಮಾತಿಗೆ ಬಹಳ ಒತ್ತಾಸೆಯನ್ನು ಕೊಡುತ್ತೇನೆ. ಆ ಮಾತಿಗೆ ಅರ್ಥ ಇದೆ ಎಂದು ನನಗನಿಸುತ್ತದೆ. ಇವತ್ತಿನ ದಿವಸ ಬೆಳಿಗ್ಗೆ ನಂಜೇಗೌಡರು ಒಂದು ಮಾತನ್ನು ಹೇಳಿದರು. ನಮ್ಮ ಕರ್ನಾಟಕದ ಸರಾಸರಿ, ನಮ್ಮ ಆಂಧ್ರಪ್ರದೇಶದ ಸರಾಸರಿ, ತಮಿಳುನಾಡು ಸರಾಸರಿ, ಮಹಾರಾಷ್ಟ್ರದ ಸರಾಸರಿ, ಎಲ್ಲಾ ಹೇಳುತ್ತಾ ಇವತ್ತಿನ ದಿವಸ ನಾವು ನಮ್ಮ ಸರಾಸರಿ ತಮಿಳುನಾಡಿನ ಅರ್ಧದಷ್ಟು ಇಲ್ಲ. 34 ಪರ್‌ಸೆಂಟ್ ತಮಿಳುನಾಡು ಇದ್ದರೆ, ನಾನು ತರಿಸಿ ನೋಡಿದೆ. 26 ರಿಂದ 27 ಪರ್‌ಸೆಂಟ್ ನಮ್ಮದು ಇದೆ. ಇದರ ಡಿಸ್‌ಪ್ಯೂಟ್ ಏನಿದೆ ಎಂದರೆ ಪೊಟೆನ್ಸಿಯಲ್ ಕ್ರಿಯೇಟ್ ಎಂದರೆ ಅದರ ಅರ್ಥ ಏನು ಎಂದು ಗೊತ್ತಾಗಬೇಕಲ್ಲ. ಜಮೀನಿಗೆ ನೀರು ಬಿದ್ದು ಬೆಳೆ ಬೆಳೆದಿದ್ದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ ? ಇಲ್ಲಾ, ನಾವು ನೀರು ಕೊಟ್ಟಿದ್ದೇವೆ ಎಂದು ನಾಲೆಗೆ ಕೊಟ್ಟಿದ್ದು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ ? ಎಂದು ಈ ಪೊಟೆನ್ಸಿಯಲ್ ಕ್ರಿಯೇಟ್ ಬಗ್ಗೆ ಬಹಳಷ್ಟು ಕನ್‌ಫ್ಯೂಷನ್ ಇದೆ. ನಮಗೆ ಅವಕಾಶ ಇರತಕ್ಕದ್ದು ಇನ್ನೂ ಸುಮಾರು ಒಂದು ಕೋಟಿ ಏಳು ಲಕ್ಷ ಹೆಕ್ಟೇರ್‌ನಲ್ಲಿ ನೀರಾವರಿ ಮಾಡಬೇಕಾಗಿದ್ದು, ನಾವು 33 ಲಕ್ಷ ಹೆಕ್ಟೇರ್ ಮಾತ್ರ ನೀರಾವರಿ ಮಾಡುವುದಕ್ಕೆ ಅವಕಾಶ ಅಗಿದೆ. ಇನ್ನೂ 55 ರಿಂದ 57 ಲಕ್ಷ ಹೆಕ್ಟೇರ್ ನೀರಾವರಿಗೆ ಅವಕಾಶ ಇದೆ. ಇನ್ನೂ 31 ಪರ್ಸೆಂಟ್ ಜಾಸ್ತಿ ಆಗಬೇಕು ಎಂಬ ಇಚ್ಛೆ ನಮ್ಮ ಸರ್ಕಾರಕ್ಕೆ ಇದೆ. ಅದನ್ನು ಉಪಯೋಗಿಸಿಕೊಳ್ಳಬೇಕಾದರೆ 10 ಕೋಟಿ ರೂಪಾಯಿ ಬೇಕಾಗಿದೆ. ಇದರ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ವರ್ಷ 45 ಎಕರೆಗೆ ಪೊಟೆನ್ಸಿಯಲ್ ಕ್ರಿಯೇಟ್ ಮಾಡಬೇಕು ಎಂದು ಇದ್ದೇವೆ. ಅದರ ಬಗ್ಗೆ ಹೆಚ್ಚು ಗಮನ ಹರಿಸಿ, ರಾಜ್ಯಪಾಲರ ಭಾಷಣದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಟಾರ್ಗೆಟ್ ಫಿಕ್ಸ್ ಮಾಡುವಾಗ ರಿಯಾಲಿಟಿ ಇರಬೇಕು. ಅದರೆ ರಿಯಾಲಿಟಿ ಇಲ್ಲದೇ ನಮ್ಮ ಅಧಿಕಾರಿಗಳು ಟಾರ್ಗೆಟ್ ಫಿಕ್ಸ್ ಮಾಡಿದರೆ ಅದು ಸರಿಯಾದ ಟಾರ್ಗೆಟ್ ಆಗುವುದಿಲ್ಲ. ಲೆಕ್ಕದಲ್ಲಿ 37 ಕೋಟಿ ರೂಪಾಯಿ ಗ್ರಾಂಟ್ ಎಂದು 8 ಕೋಟಿ ರೂಪಾಯಿ ಈ ಬಾಬಿಗೆ ಕೊಟ್ಟರೆ ಅದು ಸರಿಯಾದ ಟಾರ್ಗೆಟ್ ಆಗುವುದಿಲ್ಲ. ನಮ್ಮ ಮಾನ್ಯ ಎಸ್.ಎಂ.

ಕೃಷ್ಣ ಅವರು ಮಾನ್ಯ ನೀರಾವರಿ ಮಂತ್ರಿಯಾಗಿದ್ದಾಗ 35 ಕೋಟಿ ರೂಪಾಯಿ ಕೊಟ್ಟಿದ್ದರು ಮೊಯಿಲಿಯವರು ತಾವು ಬಹಳಷ್ಟು ಫ್ರೀಡಂ ಕೊಟ್ಟಿದ್ದೀರಿ, ಮುಖ್ಯಮಂತ್ರಿಗಳು ಆಗಿದ್ದಾಗ. ತಾವು ಮುಖ್ಯಮಂತ್ರಿಗಳು ಆಗಿದ್ದಾಗ ಮಂತ್ರಿಗಳಿಗೆ ಬಹಳಷ್ಟು ಫ್ರೀಡಂ ಕೊಟ್ಟಂತಹವರು. ನಾನು ಸಹ ತಮ್ಮ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಯಾರಿಗೂ ನೀವು ಅಡ್ಡಿ ಮಾಡುತ್ತಿರಲಿಲ್ಲ. ಎಲ್ಲರಿಗೂ ನೀವು ಬಹಳ, ತುಂಬಾ ಫ್ರೀಡಂ ಕೊಟ್ಟಿದ್ದಿರಿ. ಈಗ ನೀವು ಒಂದು ಮಾತು ಹೇಳಿದಿರಿ. ನೀವು ಹೇಳಿದ ಮಾತನ್ನು ನಾನು ಕೇಳಿಸಿಕೊಂಡೆ ಪೀಸ್ ವರ್ಕ್ ಬಗ್ಗೆ ಪ್ರಸ್ತಾಪಮಾಡಿದಿರಿ. ನಾನು ಪ್ರಾರಂಭದಲ್ಲಿಯೇ ಜ್ಞಾಪಕ ಇದ್ದಾಗ, ಆ ಮಾತಿನ ವಿಷಯ ಮುಗಿಸಿಬಿಡುತ್ತೇನೆ. ಪೀಸ್ ವರ್ಕ್ ಬಗ್ಗೆ ಬಹಳ ಪ್ರಸ್ತಾಪ ಮಾಡಿದರು. ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಸುಮಾರು ಒಂದೂವರೆ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ 185 ಕೋಟಿ ರೂಪಾಯಿ ಇರಿಗೇಷನ್, ಇನ್ನೂರು ಕೋಟಿ ರೂಪಾಯಿ ಡಿಪಾರ್ಟ್‌ಮಂಟ್, 70 ಕೋಟಿ ರೂಪಾಯಿ ಪಿಡಬ್ಲ್ಯೂಡಿಗೆ. ಇಷ್ಟು ಪೀಸ್ ವರ್ಕ್, ಕೋಟಿಗಟ್ಟಲೆ ರೂಪಾಯಿ, ಸುಮಾರು 400 ಕೋಟಿ ರೂಪಾಯಿಗಳಷ್ಟು ಪೀಸ್ ವರ್ಕ್ ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆದಿದೆ. ತಮ್ಮ ಗಮನಕ್ಕೆ ಬರಲಾರದ ವಿಷಯ ಇದೆ. ಚೀಫ್ ಮಿನಿಸ್ಟರ್ ಡೈರೆಕ್ಷನ್ ಅನ್ನು ಓವರ್‌ಲುಕ್ ಮಾಡಿ ಕೊಡಿ ಎಂದು ಮಂಡ್ಯದಲ್ಲಿರತಕ್ಕ ಒಬ್ಬ ಸಿಂಗರಿಗೌಡರು ಎನ್ನುವ ಕ್ಲಾಸ್ ಒನ್ ಕಂಟ್ರಾಕ್ಟರ್ ಇದ್ದರು. ಅವರಿಗೆ ಹಿಂದೆ ಇದ್ದಂತಹ ಮಾನ್ಯ ಉಪ ಮುಖ್ಯಮಂತ್ರಿಗಳು ಕೊಟ್ಟರು. ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಎನ್‌ಕ್ವೈರಿ ಅರ್ಡರ್ ಮಾಡಬೇಕು ಎಂದು ಹೇಳಿದ್ದಾರೆ, ನಾನು ಕೇಳುತ್ತೇನೆ ನೀವು ಎನ್‌ಕ್ವೈರಿ ಅರ್ಡರ್ ಮಾಡಬೇಕು. ಪೀಸ್ ವರ್ಕ್‌ನಲ್ಲಿ ಕೆಲಸ ಕೊಟ್ಟರೆ ಪೀಸ್ ವರ್ಕ್‌ಗೆ ಯಾರ ಮೇಲೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡುತ್ತೀರಿ ? ಹೇಮಾವತಿ ಕೆಲಸ ಆಗಿಲ್ಲ ಎಂದು ಹೇಳುತ್ತೀರಿ, ಕೆ.ಅರ್. ಪೇಟೆ ನಮ್ಮ ಕೃಷ್ಣ ಅವರ ಕಾನ್ಸ್‌ಟಿಟುಯೆನ್ಸಿ. 45 ಸಾವಿರ ಎಕರೆಗೆ ನೀರಾವರಿ ಅಗಬೇಕು. ಪಾಂಡವಪುರದಲ್ಲಿ 45 ಸಾವಿರ ಎಕೆರೆಗೆ ಅಗಬೇಕು. ನಾಗಮಂಗಲಕ್ಕೆ 60 ಸಾವಿರ ಎಕರೆಗೆ ಆಗಬೇಕು. ಇವತ್ತಿನ ದಿವಸ ಆ ಮೂರು ಏರಿಯಾದಲ್ಲಿ ಕೋಟ್ಯಾಂತರ ರೂಪಾಯಿಗಳ ಕೆಲಸ ಆಗಿದೆ. ಲೈನಿಂಗ್ ನಡೆದಿದೆ, ಈಗಾಗಲೇ ಅಲ್ಲಿ ಲೈನಿಂಗ್ ಕಿತ್ತು ಹೋಗುವುದಕ್ಕೆ ಪ್ರಾರಂಭ ಆಗಿದೆ. 40 ರೂಪಾಯಿ 50 ರೂಪಾಯಿ ಸಾಯಿಲ್ ವರ್ಕ್‌ಗೆ ಎಚ್‌ಸಿ ಒಳಗೆ 110 ರೂಪಾಯಿವರೆಗೆ ಕೊಟ್ಟಿದ್ದಾರೆ. ಕೋಟಿಗಟ್ಟಲೆ ರೂಪಾಯಿ ಕೊಟ್ಟಿದ್ದಾರೆ, ಯಾವುದು ಪೀಸ್ ವರ್ಕ್ ಎಂದರೆ ಯಾವುದು ಸಹ ಟೆಕ್ನಿಕಲ್ ಆಗಿ ಟೆಂಡರ್‌ವರ್ಕ್ ಆಗಿ ಇರುವುದಿಲ್ಲವೋ ಅಡಿಷನಲ್ ವರ್ಕ್ ಇರಬೇಕೇ ವಿನಹ ಅಡಿಷನಲ್ ಆಗಿ ತುಂಬಾ ಎಮರ್ಜೆನ್ಸಿಯಾಗಿ ಯಾವುದೋ ಲೋಕಲ್ ಕಂಟ್ರಾಕ್ಟರ್‌ಗಳಿಗೆ ಕೊಡತಕ್ಕದ್ದು ಇರಬೇಕೇ ವಿನಹ ಅದೇ ಮೇಜರ್ ವರ್ಕ್ ಆಗಿ ಇರಬಾರದು.

ಶ್ರೀ ವಿ. ಸೋಮಶೇಖರ್ : ಯಾವಾಗ ಕೊಟಿದ್ದುದು, ಯಾವಾಗ ನಡೆದಿದ್ದುದು ಯಾವ ಕಾಲದಲ್ಲಿ ಆ ತರಹ ಕೆಲಸ ನಡೆದಿದ್ದು ಎಂಬುದನ್ನು ನೀವು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಮೊಯಿಲಿಯವರೇ ಒಂದು ವಿಚಾರ ಹೇಳಿದ್ದಾರೆ. ಬಹಳ ಚೆನ್ನಾಗಿ ಹೇಳಿದ್ದಾರೆ. ಇಂಜಿನಿಯರ್ಸ್‌ಗಳಿಗೆ, ಆಶ್ರಮದ ವಿಚಾರ ಮತ್ತೊಂದು ಹೇಳುತ್ತಾ ಹೇಳಿದರು ಜವಾಬ್ದಾರಿ ಫಿಕ್ಸ್ ಮಾಡಬೇಕಾದರೆ ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದಾರೆ. ನಾನು ಇವತ್ತು ಹೇಳುತ್ತೇನೆ. ಅದಕ್ಕೆ ಏನು ಜವಾಬು? 1992ರಿಂದ, 1993ರಿಂದ 1994ರವರೆಗೆ ಇವತ್ತಿನವರೆಗೆ ಈ ಸರ್ಕಾರದ್ದೂ ಸೇರಿಕೊಂಡು ನಾಲ್ಕು ಮೂರು ಕೋಟಿ ರೂಪಾಯಿ ಪೀಸ್ ವರ್ಕ್ ಕೊಟ್ಟಿದ್ದಾರೆ. ನಿಮಗೆ ಲಿಫ್ಟ್ ಇರಿಗೇಷನ್ ವಿಚಾರ ಹೇಳುತ್ತೇನೆ. ಲಿಫ್ಟ್ ಇರಿಗೇಷನ್‌ದು ತಮಗೆ ಜ್ಞಾಪಕ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮಲ್ಲಿ ಚಿಕ್ಕಸಂಖ್ಯಾ ಲಿಫ್ಟ್ ಇರಿಗೇಷನ್ ಸ್ಯಾಂಕ್ಷನ್ ಆಗಿದೆ. ಅದಕ್ಕೆ ಟೆಕ್ನಿಕಲ್ ಅಡ್ಮಿನಿಸ್ಟ್ರೇಷನ್ ಸಿಕ್ಕಿದೆ. ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಸಿಕ್ಕಿದೆ, ಕೆಲಸ ಶುರು ಮಾಡಿಲ್ಲ. ಅದರೆ ಮೋಟಾರ್ಸ್ ಕಳೆದುಕೊಂಡಿದ್ದಾರೆ. ಆಗಲೇ ಮೋಟಾರ್ಸ್ ಕಳೆದುಕೊಂಡಿದ್ದಾರೆ. ಸುಮಾರು ಕೋಟ್ಯಾಂತರ ರೂಪಾಯಿ ಸುಮಾರು 10, 15, 20 ಕೋಟಿ ರೂಪಾಯಿ ಮೋಟಾರ್‌ನ್ನು ಲಿಫ್ಟ್ ಇರಿಗೇಷನಲ್ಲಿ ಕಳೆದುಕೊಂಡು ಕಮೀಷನ್‌ಗೋಸ್ಕರ ಇಟ್ಟಿದ್ದಾರೆ. ಈ ಕಡೆ ಪೀಸ್ ವರ್ಕ್‌ಗೋಸ್ಕರ ಕೋಟ್ಯಾಂತರ ರೂಪಾಯಿ ಕೆಲಸ ಮಾಡಿದ್ದಾರೆ. ಅದರೆ ನಾನು ಮುಖ್ಯಮಂತ್ರಿಗಳಲ್ಲಿ ಏಕೆ ಕೇಳತಕ್ಕದ್ದು ಎಂದರೆ ನಮ್ಮ ಮಾಜೀ ಮುಖ್ಯಮಂತ್ರಿಗಳೇ ಕೇಳಿರುವುದರಿಂದ ಇದು ರಾಜಕಾರಣ ಆಗುವುದಿಲ್ಲ. ಅಧಿಕಾರಿಗಳಿಗೆ ನಿಜವಾಗಿಯೂ ಯಾವ ಚೀಫ್ ಇಂಜಿನಿಯರ್ ಇದ್ದಾರೆ, ಅವರ ಬಗ್ಗೆ ನಾವು ಇದೇ ಸದನದಲ್ಲಿ ಬೇಕಾದಷ್ಟು ಸಲ ಚರ್ಚೆ ಮಾಡಿದ್ದೇವೆ. ನೂರು ರೂಪಾಯಿ ನಾವು ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟರೆ 50 ರೂಪಾಯಿ ಕೆಲಸ ಆದರೆ ಸಾಕು ಎಂದು ಪ್ರಸ್ತಾಪ ಮಾಡಿದ್ದೇವೆ. 50 ರೂಪಾಯಿ ಕೆಲಸವೂ ಆಗುವುದಿಲ್ಲ ಎಂದು ನಮ್ಮ ಮಾನ್ಯ ಪುಟ್ಟಣ್ಣಯ್ಯನವರು ಹೇಳುತ್ತಾರೆ. ನಮ್ಮ ಈಗಿನ ಮುಖ್ಯಮಂತ್ರಿಗಳು ಹಿಂದೆ ಯಾವುದೋ ಒಂದು ಇಂಜಿನಿಯರ್ ಸಭೆಯಲ್ಲಿ ಹೇಳುತ್ತಾ ಹೇಳಿದರು. ನನಗೆ ಜ್ಞಾಪಕ ಇದೆ, 1987ರಲ್ಲೋ ಅಥವಾ 1988ರಲ್ಲೋ. ಈ ರಾಜ್ಯದಲ್ಲಿ ನೂರು ರೂಪಾಯಿ ಕೆಲಸವಲ್ಲ, 50 ರೂಪಾಯಿ ಕೆಲಸ ಅದರೆ ಇಂಜಿನಿಯರ್ಸ್‌ಗೆ ನಾನು ಶಹಭಾಸ್‌ಗಿರಿ ಕೊಡುತ್ತೇನೆ ಎನ್ನತಕ್ಕ ಮಾತನ್ನು ಅವರು ಹೇಳಿದರು. ಈ ಪೀಸ್ ವರ್ಕ್ ವಿಚಾರದಲ್ಲಿ ಇಷ್ಟೊಂದು ಅವ್ಯವಹಾರ ಇದೆ. ಕರ್ನಾಟಕ ಕನ್ಸ್ಟ್ರಕ್ಷನ್ ಕಾರ್ಪೊರೇಷನ್‌ನವರು ಕಂಟ್ರಾಕ್ಟರ್‌ಗಳಿಗೆ ಎಜೆಂಟ್ ಆಗಿ ಹೋಗಿಬಿಟ್ಟಿದ್ದಾರೆ. ತಮಗೆ ಗೊತ್ತಿದೆ. ತಾವು ಯಾವುದೇ ವಿಚಾರದಲ್ಲಿಯೂ ತಲೆ ಹಾಕಲಿಲ್ಲ. ನನಗೆ ತುಂಬಾ ಚೆನ್ನಾಗಿ ಗೊತ್ತಿದೆ, ನಾನು ಮಾತನಾಡಲು ಇಚ್ಛೆಪಡುತ್ತೇನೆ. ತಾವು ಹೇಳಿದ್ದಕ್ಕೆ ನಾನು ಹೇಳಿದೆ. ತಾವು ತಲೆ ಹಾಕುವುದನ್ನು ಬಿಟ್ಟಿರಿ. ಇವತ್ತು ನಮ್ಮ ಸರ್ಕಾರ ಯಾವ ಇಂಜಿನಿಯರ್ಸ್ ತಪ್ಪಿತಸ್ಥರು ಇದ್ದಾರೆ, ಹೇಮಾವತಿಯ ವಿಚಾರ ಹೇಳುತ್ತೇವೆ, ಕಂಟ್ರಾಕ್ಟರ್ಸ್, ಇಂಜಿನಿಯರ್ಸ್ ಮತ್ತೊಬ್ಬರು ಸೇರಿ ಕೋಟಿಗಟ್ಟಲೆ ಲೂಟಿ ಮಾಡಿದ್ದಾರೆ ಅ ಎರಡು ವರ್ಷಗಳಲ್ಲಿ 170, 180 ಕೋಟಿ ರೂಪಾಯಿಗಳ ಪೀಸ್ ವರ್ಕ್ ತೆಗೆದುಕೊಂಡು ಕೆಲಸ ನಡೆದರೆ ಈ ರಾಜ್ಯದಲ್ಲಿ ಇಂಜಿನಿಯರ್ಸ್ ಏಕೆ ಬೇಕು ? ಟೆಂಡರ್ಸ್ ಏಕೆ ಬೇಕು ? ಕಂಟ್ರಾಕ್ಟ್ ಮತ್ತೊಂದು

ನಾರ್ಮ್ಸ್ ನಮಗೆ ಏಕೆ ಬೇಕು ಎನ್ನತಕ್ಕದ್ದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿರುತ್ತದೆ. ಆದರಿಂದ ಒಂದೇ ಒಂದು ವಿಚಾರ ನಾನು ಈ ಸರ್ಕಾರದಿಂದ ಬಯಸತಕ್ಕದ್ದು ಏನೆಂದರೆ ಎನ್‌ಕ್ವೈರಿ ತಾವು ಕಾನ್‌ಸ್ಟಿಟ್ಯೂಟ್ ಮಾಡಬೇಕು. ತಾವು ಇದರಿಂದ ದೂರ ಹೋಗಬಾರದು. ಕಳೆದ ಎರಡು, ಮೂರು ನಾಲ್ಕು ವರ್ಷಗಳವರೆಗೆ ನಮ್ಮ ಸರ್ಕಾರ ಏನೇನು ಕೆಲಸವನ್ನು ಪೀಸ್ ವರ್ಕ್‌ನಲ್ಲಿ ಮಾಡಿದೆ, ಎಲ್ಲೆಲ್ಲಿ ಅವ್ಯವಹಾರಗಳು ನಡೆದಿವೆ? ಎಲ್ಲೆಲ್ಲಿ ಎಕ್ಸಸ್ ಪೇಮೆಂಟ್‌ಗಳು ಆಗಿದ್ದಾವೆ, ಎಲ್ಲೆಲ್ಲಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಿಂದ ಪೇಮೆಂಟ್‌ಗಳು ಆಗಿದ್ದವೆ, ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಮೆಟೀರಿಯಲ್ಸ್ ಕೊಂಡಿದ್ದಾರೆ, ಯಾರಾರು ಡೈರೆಕ್ಷನ್ ಕೊಟ್ಟಿದ್ದಾರೆ ? ಎಂದು ನೋಡಬೇಕು ಸ್ವಾಮಿ ಡೆಪ್ಯುಟಿ ಚೀಫ್ ಮಿನಿಸ್ಟರ್ ಡೈರೆಕ್ಷನ್ಸ ಮೇಲೆ, ಪೀಸ್ ವರ್ಕ್‌ಗಳನ್ನು ಕೊಟ್ಟಿದ್ದಾರೆ. It is not the Chief Engineer, it is not the Chief Secretary, it is not at the official level. It is at the ex-Deputy Chief Minister's level. ಆದ್ದರಿಂದ ನಾನು ಹೇಳುತ್ತಿದ್ದೇನೆ, ನಮ್ಮ ಎಕ್ಸ್ ಚೀಫ್ ಮಿನಿಸ್ಟರ್ ಹೇಳಿರುವುದರಿಂದ, ಅವರು ಎನ್‌ಕ್ವೈರಿ ಕಾನ್‌ಸ್ಟಿಟ್ಯೂಟ್ ಮಾಡಬೇಕು. ಎನ್‌ಕ್ವೈರಿ ಕಾನ್‌ಸ್ಟಿಟ್ಯೂಟ್ ಮಾಡಿದಾಗ ಯಾರು ಹೊರಗಡೆ ಬರುತ್ತಾರೆ ಎನ್ನತಕ್ಕದ್ದು ಅರ್ಥ ಆಗುತ್ತದೆ. ಇಲ್ಲಿ ನಾವು ಬಡಿದುಕೊಳ್ಳುತ್ತಿದ್ದೇವೆ. ಹಣ ಇದೆ, ಪೊಲಿಟಿಕಲ್ ವಿಲ್ ಬೇಕು, ಕಾವೇರಿಗೆ ಒಂದೊಂದು ನಿಮಿಷವು ಬಹಳ ಮುಖ್ಯ ಎಂದು ಹೇಳುತ್ತಿದ್ದೇವೆ. ಕಾವೇರಿಗೆ 300 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಬೇಕಾಗಿದೆ. ನೀವು ಕೃಷ್ಣಾಗೆ 100 ಕೋಟಿ ಈಕ್ವಿಟಿ, ನೂರು ಕೋಟಿ ಬಜೆಟ್ ಇಟ್ಟಿದ್ದೀರಿ. ಮತ್ತೆ 300 ಕೋಟಿ ರೂಪಾಯಿಯನ್ನು ಕೃಷ್ಣಾ ಜಲಾನಯನದ ಮೇಲೆ ಎತ್ತುತಿದ್ದೇವೆ. ಹಣದ ಪರಿಸ್ಥಿತಿ ಈ ರೀತಿ ಇದೆ; ಫೈನಾನ್ಸಿಯಲ್ Constiaints ಇದೆ. ಇಂತಹ ಪರಿಸ್ಥಿತಿಯೊಳಗೆ ಸರಿಯಾಗಿ ಹಣವನ್ನು ನೀರಾವರಿ ವಿಚಾರದಲ್ಲಿ ಉಪಯೋಗಿಸದೇ ಹೋದರೆ ಹೇಗೆ? ಇಲ್ಲಿ ಸರಿಯಾಗಿ ಹಣ ಉಪಯೋಗಿಸದೇ ಇರತಕ್ಕದ್ದನ್ನು ನಮ್ಮ ಸರ್ಕಾರ ಮನಗಾಣಬೇಕು. ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಳಿಗ್ಗೆ ಕಾವೇರಿ ವಿಚಾರದಲ್ಲಿ ಮಾನ್ಯ ನಂಜೇಗೌಡರು ಎರಡು ವಿಚಾರಗಳ ಪ್ರಸ್ತಾಪ ಮಾಡಿದರು. ಕೊನೆಯಲ್ಲಿ ಎರಡು ಅಮೆಂಡ್‌ಮೆಂಟ್ ಮಾಡಿ ಕೊಂಡಿದ್ದಾರೆ. ಟ್ರಿಬ್ಯೂನಲ್ ಬಗ್ಗೆ ಮತ್ತು ಟ್ರಿಬ್ಯುನಲ್ ಮೆಂಬರ್ಸ್ ಬಗ್ಗೆ ಮಾತನಾಡುತ್ತಾ ಹೇಳಿದರು. ನನ್ನ ಇಂಟೆನ್‌ಷನ್ ಇಲ್ಲಿದೆ ಎನ್ನುವುದನ್ನು ಅವರು ಹೇಳಿದರು. ಯಾರ ಮೇಲೂ ಸಹ ಗೂಬೆ ಕೂರಿಸತಕ್ಕ ವಿಚಾರ ಅಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ನನಗೆ ಇವತ್ತು ಈ ಸಂದರ್ಭದಲ್ಲಿ ಹೆಚ್ಚು ಅದನ್ನು ಚರ್ಚೆ ಮಾಡತಕ್ಕದ್ದು ಸೂಕ್ತ ಅಲ್ಲ ಎಂದು ಅನಿಸಿದೆ. ಕಾರಣ, ಏಪ್ರಿಲ್ 20ನೇ ತಾರೀಖಿನ ದಿವಸ, ಮತ್ತೆ ಅಲ್ಲಿ ಸಿಟಿಂಗ್‌ಗೆ ಕೂಡುತ್ತಿದ್ದಾರೆ. ಈಗಾಗಲೇ ಇಲ್ಲಿ ತಮಿಳುನಾಡಿನ ಅನೇಕ ಅಸೋಸಿಯೇಷನ್‌ಗಳವರು ಮತ್ತೆ ಟ್ರಿಬ್ಯೂನಲ್ ಫೀಡ್ ಮಾಡುತ್ತಿದ್ದಾರೆ. ಕರ್ನಾಟಕಕ್ಕೆ ಮೋರ್ ದ್ಯಾನ್ 200 ಟಿಎಂಸಿ ನೀರು ಬೇಕಾಗಿಲ್ಲ; ಅವರು ಮತ್ತೆ 315, 325, 335 ಕೇಳುತ್ತಿದ್ದಾರೆ ಎಂದು ಹೇಳಿ;

ಅಸೋಸಿಯೆಷನ್‌ನವರು ಮೀಟಿಂಗ್ ಮಾಡಿ, ಫಾರ್ಮರ್ಸ್ ಸುಪ್ರೀಂ ಕೋರ್ಟಿಗೆ ಹೋದರು ಅದೇ ಮೆತೆಡ್‌ನಲ್ಲಿ ಟೆಕ್ನಲಜಿ ಹೆಸರಿನಲ್ಲಿ ಹೋದರು. ನಾನು ಡೆಕನ್ ಹೆರಾಲ್ಡ್‌ನಲ್ಲಿ ಮೊನ್ನೆ ಕೆಲವು ಹೇಳಿಕೆಯನ್ನು ಓದಿದಿ. 200 ಟಿಎಂಸಿ ಅವರಿಗೆ ಬೇಕಾದಷ್ಟು ಆಯಿತು. ಅವರು ಹಳೆ ಅಚ್ಚುಕಟ್ಟು ಕೆಆರ್‌ಎಸ್ ಅನ್ನು ಯಾವ ರೀತಿ ಕ್ಲೈಮ್ ಮಾಡುತ್ತಿದ್ದಾರೆ 50-60 ವರ್ಷದಿಂದ, ನಾವು ಸಹ ಇವತ್ತು ತಂಜಾವೂರಿನಿಂದ ಅದನ್ನೇ ಪ್ರಯತ್ನ ಮಾಡುತ್ತಿದ್ದೇವೆ. ನಮಗೂ ಕೊಡಬೇಕು ಎಂದು ಹೇಳಿಕೊಂಡು ಟೆಕ್ನಿಕಲ್ ಅಸೋಸಿಯೋಷನ್‌ನವರು ಫೀಡ್ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾವು ಹೆಚ್ಚು ಹಣವನ್ನು ಕೊಡುವುದರ ಜೊತೆಗೆ ನಮ್ಮ ಟ್ರಿಬ್ಯುನಲ್ ಬಗ್ಗೆ ಗಮನಹರಿಸಬೇಕು. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಒಂದು ಸುಗ್ರೀವಾಜ್ಞೆ ಮಾಡಿದರು. ಅದನೆಲ್ಲಾ ಸಹ ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ಮೊಯಿಲಿಯವರ ಕಾಲದಲ್ಲಿ ಮಾನ್ಯ ಶುಕ್ಲಾರವರು ಬಂದು ಬಹುಶಃ ಶುಕ್ಲಾರವರು ತಮ್ಮ ಮೇಲೆಯೇ ಮದ್ರಾಸಿನಲ್ಲಿ ಒಂದು ಗೂಬೆಯನ್ನು ಕೂರಿಸಿ ಹೋದರು. ಇದು ತಮಗೆ ಜ್ಞಾಪಕ ಇದೆ ಎಂದು ಅಂದುಕೊಂಡಿದ್ದೇನೆ. ಜಯಲಲಿತಾ ಅವರ ಜೊತೆಯಲ್ಲಿ ಮಾತನಾಡತಕ್ಕ ಕಾಲದಲ್ಲಿ, ಟ್ರಿಬ್ಯುನಲ್ ಇಂಟರಿಮ್ ಆರ್ಡರ್ ಇಂಪ್ಲಿಮೆಂಟ್ ಮಾಡುವುದಕ್ಕೆ ಮೊಯಿಲಿಯವರು ಕನ್ಸಂಟ್ ಕೊಟಿದ್ದಾರೆ ಎಂದು ಹೇಳಿದರು. ನಾವೆಲ್ಲರೂ ಸಹ ಶುಕ್ಲಾ ಅವರ ಮೇಲೆ ಬಹಿರಂಗವಾಗಿ ಹೇಳಿಕೆ ಕೊಟ್ಟೆವು. ಇಲ್ಲ ಸಾಧ್ಯ ಇಲ್ಲ, ಆಗುವುದಿಲ್ಲ ಎನ್ನುವ ಮಾತನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಇವತ್ತು ಒಂದು ವಿಚಾರದಲ್ಲಿ ಟ್ರಿಬ್ಯುನಲ್ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಹೆಚ್ಚು ವಿಶ್ವಾಸವನ್ನು ಇಟ್ಟುಕೊಳ್ಳುವುದಕ್ಕಿಂತ ಹೆಚ್ಚು ಫ್ಯಾಕ್ಟ್ಸನ್ನು ಫೀಡ್ ಮಾಡತಕ್ಕ ಕಡೆಗೆ ಗಮನವನ್ನು ಹರಿಸಬೇಕು. ನಾವು ನಂಬಿಕೆ ಇಟ್ಟುಕೊಳ್ಳಲೇಬೇಕಾಗುತ್ತದೆ. ಈಗ ನಾವು ಒಪ್ಪಿಕೊಂಡು ಎಲ್ಲಾ ಒಂದು ಹಂತಕ್ಕೆ ಬಂದಿರತಕ್ಕ ಈ ಕಾಲದಲ್ಲಿ, ಇನ್ನು ಅಂತ್ಯ ಇರತಕ್ಕ ಸಂದರ್ಭದಲ್ಲಿ ನಾವು ಟ್ರಿಬ್ಯುನಲ್ ಬಗ್ಗೆ ಹೆಚ್ಚು ಗಮನ ಮಾಡದೇ ಬೇರೆ ರೀತಿಯಲ್ಲಿ ಫ್ಯಾಕ್ಟ್ಸ್ ಫೀಡ್ ಮಾಡದೇ ಬೇರೆ ರೀತಿಯಲ್ಲಿ ಚರ್ಚೆ ಮಾಡಿದರೆ ತುಂಬಾ ತಪ್ಪಾಗುತ್ತದೆ. ಈಗಲೂ ನಾನು ಮಾನ್ಯ ಮುಖ್ಯಮಂತಿಯವರಿಗೆ ನಮ್ಮ ಸರ್ಕಾರಕ್ಕೆ ಒಂದು ಸಲಹೆ ಕೊಡಲು ಇಚ್ಛಿಪಡುತ್ತೇನೆ. ತಾವು ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿ ; ಈ ಹಂತದಲ್ಲಿ ದೊಡ್ಡ ವಿಚಾರ ಆಗುವುದಿಲ್ಲ. ಒಂದು ಮಾತನ್ನು ಮಾನ್ಯ ನಂಜೇಗೌಡರು ಹೇಳಿದರು. ಯಾವುದೇ ಜಜ್ಮೆಂಟ್ ಅದು ಇಂಪ್ಲಿಮೆಂಟ್ ಆಗುವ ಸ್ಟೇಜಿನಲ್ಲಿರಬೇಕು ಎಂದು ಹೇಳಿದರು. ಹಾಗೇಯೆ ಯಾವುದೇ ಒಂದು ಟ್ರಿಬ್ಯುನಲ್ ಅವಾರ್ಡ್, ಅದು ಇಂಪ್ಲಿಮೆಂಟ್ ಆಗುವಂತಹ ಅವಾರ್ಡ್ ಇರಬೇಕು ಎನ್ನತಕ್ಕ ಮಾತನ್ನು ಸಹ ಹೇಳಿದರು. ಈಗಲೂ ಸಹ ತಾವು ಪ್ರೈಮ್ ಮಿನಿಸ್ಟರ್ ಹತ್ತಿರ ಮತ್ತೆ ಮಾತನಾಡಿ ಈ ರಾಜೀ ಸೂತ್ರಕ್ಕೆ ಹೆಚ್ಚು ಗಮನಕೊಡತಕ್ಕದ್ದು ಸೂಕ್ತ ಎನ್ನತಕ್ಕದ್ದನ್ನು ಈಗಲೂ ಸಹ ಹೇಳುತ್ತೇನೆ. ತಾವು ಪ್ರಯತ್ನ ಮಾಡಬೇಕು. ಫೈನಲ್ ಆಗಿ ಟ್ರಿಬ್ಯೂನಲ್ ಅವಾರ್ಡ್ ಕೊಟ್ಟರೂ ಸಹ ಯಾರ ಪರವಾಗಿ ಅಥವಾ ಯಾರ ವಿರುದ್ಧವಾಗಿ ಬರುತ್ತದೆ ಎನ್ನತಕ್ಕ ವಿಚಾರ ಅಲ್ಲ. ನಮ್ಮ ಎರಡೂ ರಾಜ್ಯಗಳ ಹಿತದೃಷ್ಟಿಯಿಂದ ಕಾವೇರಿ ಜಲಾನಯದ ರೈತರ ಹಿತದೃಷ್ಟಿಯಿಂದ ನೀವು ಪ್ರೈಮ್

ಮಿನಿಸ್ಟರ್ ಹತ್ತಿರ ಮಾತನಾಡಿ, ಆದೇನೂ ಲೀಗಲ್ ಆಗಿ ದೊಡ್ಡ ಸಮಸ್ಯೆ ಆಗುವುದಿಲ್ಲ. ಕಾಂಪ್ರಮೈಸ್ ಫಾರ್ಮಾಲಿಟಿಯಿಂದ ಯಾವುದೇ ಒಂದು ಸಮಸ್ಯೆ ಉದ್ಭವಿಸುವುದಿಲ್ಲ. ಎರಡು ರಾಜ್ಯಗಳ ಒಪ್ಪಂದವಾಗಿದೆ ಎಂದು ಹೇಳಿ ಎರಡು ರಾಜ್ಯದ ಒಪ್ಪಂದವನ್ನು ಟ್ರಿಬ್ಯುನಲ್ ಮುಂದೆ ಇಟ್ಟರೆ, ಆ ಟ್ರಿಬ್ಯುನಲ್ ಬೇಡ ಎಂದು ಹೇಳಿ ತಿರಸ್ಕಾರ ಮಾಡುವುದಕ್ಕಾಗುವುದಿಲ್ಲ. ಈಗಲೂ ಸಹ ನೀವು ಮತ್ತೊಂದು ಸಾರಿ ಈ ರಾಜಿ ಪ್ರಯತ್ನಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸೂಕ್ಷ್ಮವಾಗಿ ತಮ್ಮ ಮುಂದಿಡುತ್ತೇನೆ. ಇವತ್ತಿನ ದಿವಸ ಕಾವೇರಿ ವಿಚಾರದಲ್ಲಿ ನಾನ್‌ಪ್ಲಾನ್‌ನಲ್ಲಿ ಮುನ್ನೂರು ಕೋಟಿ ರೂಪಾಯಿ ಇಟ್ಟೀದ್ದೀರಿ, ನಮ್ಮ ಪ್ಲಾನ್ ಒಳಗೆ ಸಹ 32 ಕೋಟಿ ರೂಪಾಯಿ ಇಟ್ಟೀದ್ದೀರಿ ಅದು ವಿಸಿ ಮಾಡ್ರನೈಸೇಷನ್. ನನಗೆ ಇರತಕ್ಕಂಥ ಗಮನವೇ ಅಲ್ಲಿ? ಇವತ್ತು ನಾವೆಲ್ಲರೂ ಸಹ ನಮ್ಮ ಜಿಲ್ಲೆಯಲ್ಲಿ ಬಹಳ ವಿಶೇಷವಾಗಿ ವಿ.ಸಿ. ಮಾಡ್ರನೈಸೇಷನ್ ಮುಗಿಯುತ್ತದೆ ಎಂದು ಅಪೇಕ್ಷೆ ಮಾಡಿದ್ದೆವು. ವರುಣ ನಾಲೆಯ ಬಗ್ಗೆ ನಮ್ಮ ಮೊಯಿಲಿಯವರು ಹೇಳಿದರು, ವರುಣ ನಾಲೆಯ ಬಗ್ಗೆ ನಮಗೆ ತಕರಾರು ಇಲ್ಲ ನಾವೂ ಅವರು ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಏನು ಒಪ್ಪಂದ ಅಂದರೆ ಆದಷ್ಟು ಬೇಗ ಎರಡೂ ಮುಗಿಸಿಕೊಡುವ ಒಪ್ಪಂದ. ಆಗ ದೇವರಾಜ ಅರಸುರವರು ಮೂರನೇ ಮಹಡಿಯಲ್ಲಿ ಕುಳಿತುಕೊಂಡಾಗಲೂ ನನಗೆ ಹೇಳಿದರು. ಇದಕ್ಕೆ ಎಷ್ಟು ಹಣ ಕೊಡುತ್ತೇವೆ, ಅದಕ್ಕೆ ಅಷ್ಟೇ ಹಣ ಕೊಡುತ್ತೇವೆಂದು ಹೇಳಿ. ಅದಕ್ಕೂ 32 ಕೋಟಿ ಕೋಟ್ಟಿದ್ದೀರಿ, ನಮಗೂ 32 ಕೋಟಿ ಕೊಟ್ಟಿದ್ದೀರಿ. ನಾನು ಇಲ್ಲ ಎಂದು ಹೇಳುವುದಿಲ್ಲ. ಪುನಃ ಅದು ಗ್ರ್ಯಾಂಟ್ ಆಗಬಾರದು. ಎಲ್‌ಓಸಿ ಆಗಬೇಕು ಅನ್ನತಕ್ಕಂಥದ್ದು ನಮ್ಮ ಅನಿಸಿಕೆ. ಬರೀ ಗ್ರ್ಯಾಂಟ್ ಕೊಡುತ್ತೀರಿ ಎಂದು ಹೇಳಿ ಎಷ್ಟೆಷ್ಟು ಫಿಗರ್ಸ್ ಬರೆದುಕೊಂಡು ಹೋಗಿ ಗ್ರ್ಯಾಂಟ್ ಆಗತಕ್ಕಂಥಾದ್ದು ಅಲ್ಲ. ಇವತ್ತು ನಮ್ಮ ಭಾಗದಲ್ಲೂ ಸಹ ನಮ್ಮ ಎರಡು ಮೂರು ತಾಲ್ಲೂಕುಗಳಿಗೆ ತೀವ್ರವಾದಂತಹ ನೀರಿನ ಅಭಾವವನ್ನು ನಾವು ಎದುರಿಸುತ್ತಿದ್ದೇವೆ. ಎರಡು ಮೂರು ತಾಲ್ಲೂಕುಗಳು ಅಂತೂ ಇವತ್ತು ನಮ್ಮ ಹಳೆ ನಾಲೆಗಳು, ಹಳೇ ರೀತಿಯಾದ ಅಚ್ಚುಕಟ್ಟುಗಳಿವೆ. ಹಳೇ ನಾಲೆಗಳು ಎಂದು ಹೇಳಿದರೆ ಸುಮಾರು 50-60 ವರ್ಷದ ನಾಲೆಗಳು. ಅದು ಇವತ್ತಿನ ನಾಲೆಗಳು ಅಲ್ಲ. ಇವತ್ತು ಅದಕ್ಕೆ ಕಂಟ್ರೋಲಿಂಗ್ ಸಿಸ್ಟಮ್ ಇಲ್ಲ, ಶೆಲ್ಟಿಂಗ್ ಇಲ್ಲ, ಲೈನ್ ಕಿತ್ತು ಹೋಗಿದೆ. ನೀರು ಬಿಟ್ಟರೆ ಎಲ್ಲಾ ಹೋರಗಡೆ ಹರಿದುಕೊಂಡು ಹೋಗತಕ್ಕಂತಹ ಪರಿಸ್ಥಿತಿ ಇದೆ. ಸುಮಾರು 20-30 ಬ್ರಿಡ್ಜಸ್ ಆಗಬೇಕಾಗಿದೆ. 8-10 ಆಗಬೇಕಾಗಿದೆ. ಲೈನ್ ವರ್ಕ್ಸ್ ಆಕ್ವಡ್‌ಕ್ಟ್‌ಗಳು ಆಗಬೇಕಾಗಿದೆ. ಒಂದು ಲಿಂಕ್ ಕೆನಾಲ್ ಆಗಬೇಕಾಗಿದೆ. ನಮ್ಮ ಟನಾಲ್‌ವರ್ಕ್ಸ್ ಆಗಬೇಕಾಗಿದೆ. ನಿಮಗೆ ಹೋದ ವರ್ಷವೂ ಸಹ ನಮ್ಮ ಮೊಯಿಲಿ ಅವರ ಸರ್ಕಾರದಲ್ಲಿ 28 ಕೋಟಿ ಇಟ್ಟರೂ ಖರ್ಚಾಗಿದ್ದು ಬರೀ 8-10 ಕೋಟಿ ರೂಪಾಯಿ ಮಾತ್ರ. ವಿ.ಸಿ. ಮಾಡ್ರನೇಸೇಷನ್‌ಗೆ, ಕೇವಲ 8-10 ಕೋಟಿ. ಗ್ರ್ಯಾಂಟ್ ಕೊಡುವಾಗ ಮತ್ತೆ 25 ಕೋಟಿ ಎಂದು ತೋರಿಸಿದರು. ಅದರಿಂದ ಈ ಗ್ರ್ಯಾಂಟ್ ಆಗದೆ ಎಲ್‌ಓಸಿ ಕನ್‌ವರ್ಟ್ ಆದುದು. ಕನಿಷ್ಟ ಪಕ್ಷ ಸಿದ್ದರಾಮಯ್ಯನವರು ಈ ಕಡೆ ಗಮನ ಕೊಟ್ಟರೆ ತಾವು ವರಣಕ್ಕೊ ಹಣ ಇಟ್ಟುಕೊಳ್ಳಿ, ನಮ್ಮ ವಿ.ಸಿ.

ಮಾಡ್ರನೈಸೇಷನ್‌ಗೂ ಹಣ ಕೊಡಿ. ಆ ಎರಡೂ ಸಹ ಪ್ಲಾನ್ ಸ್ಕೀಮ್‌ನಲ್ಲಿ ಸೇರಿಸುವುದಕ್ಕೆ ನಮಗೆ ಏನೂ ತೊಂದರೆ ಇಲ್ಲ. ಆದರಿಂದ ಹೇಮಾವತಿ ಕಾವೇರಿ ಡಿಸ್‌ಪ್ಯೂಟ್ ಬರುವುದಿಲ್ಲ. ಕಾವೇರಿ ಟ್ರಿಬ್ಯುನಲ್ ಅಬ್‌ಜೆಕ್ಷನ್ ಬರುವುದಿಲ್ಲ, ಕಾರಣ ಏನೆಂದರೆ ನಮ್ಮದು ಹಳೆಯ ಅಚ್ಚುಕಟ್ಟು. ಅದು ಹಳೆಯ ಅಚ್ಚುಕಟ್ಟು, ಇದರ ರಿಪೇರಿಗೆ ನಾವು ಮೇಂಟೇನ್ ಮಾಡತಕ್ಕಂಥಾದ್ದಕ್ಕೆ ಇಟ್ಟಿರತಕ್ಕಂಥಾದ್ದು. ನಿಮ್ಮ ನಾನ್ ಪ್ಲಾನ್‌ನಲ್ಲಿ ಬರುತ್ತದೆ. ಮಾಡ್ರನೈಸೇಷನ್ ಆಫ್ ಪ್ಲ್ಯಾನ್ ಒಳಗಡೆ ಬರುತ್ತದೆ. ಅದಕ್ಕೂ 32 ಕೋಟಿ ಕೊಟ್ಟಿದ್ದೀರಿ ಇದಕ್ಕೂ 32 ಕೋಟಿ ಕೊಟ್ಟಿದ್ದೀರಿ. ನಿಮ್ಮ ಕಾಲದಲ್ಲಿ ಬಿಡುಗಡೆ ಮಾಡಿ. ದೇವರಾಜ ಅರಸುರವರು ಏನೇ ಜಗಳ ಇಟ್ಟುಕೊಂಡು ಹೋಗಲಿ, ಅವರು ಒಟ್ಟಿನಲ್ಲಿ ರೈತರಿಗೆ ನೀರು ಕೊಡಬೇಕು ಎನ್ನತಕ್ಕಂಥದ್ದು ಮಾತ್ರ ಅವರ ಮನಸ್ಸಿನಲ್ಲಿ ಇತ್ತು. ಈ ಮಾತನ್ನು ಮೂರನೆಯ ಮಹಡಿಯಲ್ಲಿ ಬಹಳ ವರ್ಷಗಳ ಹಿಂದೆ ಹೇಳಿದ್ದುದು, ನನಗೆ ಜ್ಞಾಪಕ ಇದೆ. ನಾವು ಯಾವ ರೈತರಿಗೂ ಅನ್ಯಾಯ ಮಾಡಬಾರದು, ಎಷ್ಟು ಡ್ಯೂಟಿ ಎಂದು ಅವರು ಹೇಳಿದ್ದರ ಮೇಲೆ ಮಾತನಾಡುವುದಕ್ಕೆ ಹೋದರೆ ಗಂಟೆಗಟ್ಟಲೆ ಆಗುತ್ತದೆ. ಆ ಡ್ಯೂಟಿ ಮೇಲೆ ನಮ್ಮ ರೈತರು ಎಷ್ಟು ನೀರು ಹಾಯಿಸಿಕೊಳ್ಳಬೇಕು ಕಬ್ಬಿಗೆ ಎಷ್ಟು ಹಾಯಿಸಿಕೊಳ್ಳಬೇಕು, ರಾಗಿಗೆ ಎಷ್ಟು ಹಾಯಿಸಿಕೊಳ್ಳಬೇಕು ಭತ್ತಕ್ಕೆ ಎಷ್ಟು ಹಾಯಿಸಿಕೊಳ್ಳಬೇಕು ಈ ಪದ್ಧತಿ ಏನಿದೆ, ವಾಟರ್ ಮ್ಯಾನೇಜ್‌ಮೆಂಟ್ ಏನು, ಇದರ ಬಗ್ಗೆ ರೈತರಿಗೆ ಎಷ್ಟೆಷ್ಟು ಮಾಡಬೇಕು ಎನ್ನತಕ್ಕಂತಹ ಮಾತನ್ನು ಆವತ್ತು ದೇವರಾಜ ಅರಸುರವರು ಹೇಳುತ್ತಿದ್ದರು. ಅದೇ ರೀತಿ ಮೂರು ವರ್ಷದಲ್ಲಿ ವಿಶ್ವೇಶ್ವರಯ್ಯ ಕೆನಾಲ್ ಮಾಡ್ರನೈಸೇಷನ್ ವರ್ಕ್ಸ್‌ನ್ನು ಮುಗಿಸುತ್ತೇವೆ, ವರುಣ ಮುಗಿಸುತ್ತೇವೆ ಎಂದು ಹೇಳಿದಿರಿ. ಮೂರು ವರ್ಷದಲ್ಲಿ ತಾವು ದಯವಿಟ್ಟು ಮುಗಿಸಲೇಬೇಕು. ನಮಗೆ ಬೇಕಾಗಿರತಕ್ಕಂಥದ್ದು 70 ಕೋಟಿ ರೂಪಾಯಿ ಮಾತ್ರ. ಇನ್ನು 70-80 ಕೋಟಿ ರೂಪಾಯಿ ಹಣ ಕೊಟ್ಟರೆ ಈ ಕೆಲಸ ಮುಗಿದು ಹೋಗುತ್ತದೆ. ಆದ್ದರಿಂದ ಇದನ್ನು ಮುಗಿಸಿ ಕೊಡಬೇಕೆಂಬ ಮಾತನ್ನು ತಮಗೆ ಹೇಳುತ್ತೇನೆ. ನಾನು ಮೊದಲೇ ವಿಚಾರ ಪ್ರಸ್ತಾಪ ಮಾಡುತ್ತಾ ಹೇಳಿದೆ, ನಮ್ಮ ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ಹೇಮಾವತಿ ನೀರು ಬರತಕ್ಕಂಥದ್ದು ಇದೆ. ನಮಗೆ ಅನ್ಯಾಯ ಆಗಿರತಕ್ಕಂಥದ್ದು ಏನೆಂದರೆ ಹಣ ಎಲ್ಲಾ ಸಂಪೂರ್ಣವಾಗಿ ದುರುಪಯೋಗವಾಗಿದೆ. ಕಳೆದ 6-7 ತಿಂಗಳಿಂದ, ಎಲ್ಲಾ ಕಡೆ ಪ್ರವಾಸ ಮಾಡಿ, 2-3 ಕಡೆ ನೋಡಿದಾಗ ಬಹಳಷ್ಟು ಹಣ ದುರುಪಯೋಗ ಆಗಿದೆ. ಯಾರಿಗೆ ಎಲ್ಲಿ ಹಣ ಹೋಗಿದೆ ಅದು ಹೇಗೆ ಹೋಗಿದೆ,

ಒಬ್ಬ ಮಾನ್ಯ ಸದಸ್ಯರು : ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳನ್ನು ತಾವು ಬಡ್ಜೆಟ್‌ನಲ್ಲಿ ಸೇರಿಸುತ್ತೀರ, ಅದರ ಮೇಲೆ ಎಲ್‌ಒಸಿ ನಿರ್ಬಂಧ ಇಡಬಾರದು. ಒಂದು ಸಾರಿ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಮಾಡಿದರೆ ಅದು 10 ಕೋಟಿ ಇರಬಹುದು, ಐದು ಕೋಟಿ ಇರಬಹುದು, ಎರಡು ಲಕ್ಷ ಇರಬಹುದು ಒಂದು ಲಕ್ಷ ಇರಬಹುದು, ಆ ಹಣ ಪೂರ್ತಿ ಖರ್ಚಾಗುವವರೆಗೆ ಎಲ್‌ಒಸಿ ನಿರ್ಬಂಧ ಇದರ ಮೇಲೆ ಇಡಬಾರದು ಎಂದು ತಮ್ಮ ಮೂಲಕ ವಿನಂತಿ ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ. ಕೇವಲ ಹಣ ಬಡ್ಜೆಟ್ಟಿನಲ್ಲಿ ತೋರಿಸುವುದರಿಂದ ಕಾಮಗಾರಿ ಆಗುವುದಿಲ್ಲ. ಈಗ 94-95ನೇ ಸಾಲಿನ

ಬಡ್ಜೆಟ್ಟಿನಲ್ಲಿ ಮುಳುವಾಡ ಏತ ನೀರಾವರಿ ಪ್ರಾಜೆಕ್ಟ್ ಸರ್ಕಾರ ಒದಗಿಸಿದ್ದು ಕೇವಲ 275 ಲಕ್ಷ ರೂಪಾಯಿ. 275 ಲಕ್ಷದಲ್ಲಿ ಅದು ಕೂಡ ಪೂರ್ತಿ ಖರ್ಚಾಗಲಿಲ್ಲ. ಕೇವಲ 124 ಲಕ್ಷ ರೂಪಾಯಿ ಖರ್ಚಾಯಿತು. ಅದರಿಂದ ಕೆಲಸ ಆಗಲಿಲ್ಲ. ಎರಡು ಸಾವಿರ ಇಸವಿ ಒಳಗಾಗಿ ನಾವು ಕೃಷ್ಣ ನೀರಿನ ಉಪಯೋಗ ಮಾಡಲು ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ ಲೋಕೋಪಯೋಗಿ ಸಚಿವರು ಇಂದಿನ ಮುಖ್ಯಮಂತ್ರಿಗಳು 1-10-1986ರಂದು ಕೃಷ್ಣ ಕಣಿವೆ ಪ್ರಾಜ್‌ಕ್ಟನಲ್ಲಿ ಬರತಕ್ಕಂತಹ ಅನಗವಾಡಿ ಸೇತುವೆಗೆ ಅಡಿಗಲ್ಲು ಹಾಕಿದರು. ಅಂದಾಜು ವೆಚ್ಚ 264 ಲಕ್ಷ ರೂಪಾಯಿ ಇತ್ತು. ನೀರಾವರಿ ಇಲಾಖೆ ಅಧಿಕಾರಿಗಳು, ಟೆಂಡರ್ ಕರೆಯುತ್ತೇವೆ ಎಂದು ಹೇಳಿಕೊಂಡು ಹೋದರೂ ಟೆಂಡರ್ ಕರೆಯಲಿಲ್ಲ ಕೆಲಸ ಮಾಡಲಿಲ್ಲ. ಅದರ ರಿವೈಸ್ಡ್ ಎಸ್ಟಿಮೇಟ್ ಮಾಡಿದ್ದಾರೆ. 700 ಲಕ್ಷ ರೂಪಾಯಿ ಆಗಿದೆ. 7 ಕೋಟಿ ರೂಪಾಯಿ ಆಗಿದೆ ಎರಡುವರೆ ಕೋಟಿ ರೂಪಾಯಿ ಇರತಕ್ಕಂತಹ ಒಂದು ಪ್ರಾಜೆಕ್ಟ್ ಏಳು ಕೋಟಿ ಆಗಿದೆ ಅದೇ ರೀತಿ ಇದು ಆಗಬಾರದು, ಈಗ ಮತ್ತೆ ಹೆಚ್ಚಾಗಿರಬಹುದು. ರಿವೈಸ್ಡ್ ಎಸ್ಟಿಮೇಟ್ ನಾನು ಹೇಳಿದೆ. ಇವತ್ತಿನ ರೇಟ್ ಹೇಳಲಿಲ್ಲ ಯಾವುದೇ ಕಾಮಗಾರಿಯನ್ನು ಬಡ್ಜೆಟ್ಟಿನಲ್ಲಿ ಸೇರಿಸುವ ಪೂರ್ಣದಲ್ಲಿ ಆಲೋಚನೆ ಮಾಡಿ ಸೇರಿಸಬೇಕು. ಮತ್ತು ಬಡ್ಜೆಟ್ಟಿನಲ್ಲಿ ಎಷ್ಟು ಹಣ ಒದಗಿಸಿರುತ್ತೀರಿ, ಅಷ್ಟು ಪೂರ್ತಿ ಹಣ ಆ ವರ್ಷದಲ್ಲಿ ಖರ್ಚು ಮಾಡುವುದಕ್ಕೆ ನಿರ್ಬಂಧ ಇರಬಾರದು. ಆ ತಿಂಗಳ ಸಿಸ್ಟಮ್ ಬಂದ್ ಮಾಡಲಿಕ್ಕೆ ಬೇಕಾದಂತಹ ಹಣ ಒದಗಿಸಿಕೊಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೃಷ್ಣ : ಪೀಸ್‌ವರ್ಕ್ ಜೊತೆ ಮೇಂಟೆನೆನ್ಸ್ ಗ್ರ್ಯಾಂಟ್ ಕೊಡುತ್ತೇವೆ. ಪ್ರತಿವರ್ಷ ಮೆಂಟೆನೆನ್ಸ್ ಗ್ರ್ಯಾಂಟ್ ಕೊಡುತ್ತಿದ್ದರು. ಇವತ್ತು ಯಾರಿಗೂ ಅದು ಬೇಕಾಗುತ್ತಿಲ್ಲ. ಸುಮಾರು 30-40 ವರ್ಷಗಳ ಹಿಂದೆ ಎಕರೆಗೆ ಬರೀ 50-60 ಸಾವಿರ ಈ ಮೇಂಟೆನೆನ್ಸ್ ಗ್ರ್ಯಾಂಟ್. ಮೇಂಟೆನೆನ್ಸ್ ಗ್ರ್ಯಾಂಟನ್ನು ಕೊಟ್ಟಿದ್ದು 30-40 ವರ್ಷಗಳಾದ ಮೇಲೆ ಅದನ್ನೇ ಕೊಟ್ಟರೆ ಹಳೇ ನಾಲೆಗಳು ಯಾವ ತರಹ ಮೇಂಟೇನ್ ಆಗುತ್ತವೆ. ಮತ್ತೆ ಬಂದಂತಹ ಹಣ ಆ ಮೇಂಟೆನೆನ್ಸ್ ಗ್ರಾಂಟ್‌ನಲ್ಲಿ ದುರುಪಯೋಗ ಆಗುತ್ತಿದೆ ಅದರ ಕಡೆಯೂ ಕೂಡ ಸರ್ಕಾರ ಗಮನಕೊಡಬೇಕೆಂದು ಸಭಾಧ್ಯಕ್ಷರ ಮುಖಾಂತರ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಈ ಪೀಸ್‌ವರ್ಕ್ ಬಗ್ಗೆ ಕೂಡಲೇ ಒಂದು ನೀತಿಯನ್ನು ಪ್ರಕಟಣೆ ಮಾಡಬೇಕು. ಒಂದು ಒಂದು ಫ್ಯಾಕ್ಟನ್ನು ಹೇಳಿದರೆ ನಮ್ಮ ಮುಖ್ಯಮಂತ್ರಿಗಳು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದು ಕಾಣುತ್ತದೆ. ಏನೆಂದರೆ ಯಾವ ಕೆಲಸ 99 ಪರ್ಸೆಂಟ್ 90 ಪರ್ಸೆಂಟ್ ಮುಗಿದು ಹೋಗಿರುತ್ತದೆ. ಒಂದು ಲಕ್ಷಕ್ಕಿಂತ ಕೆಳಗೆ ಇರತಕ್ಕಂಥದ್ದು ಹಿಂದೆ 50 ಸಾವಿರ ಇತ್ತು ಇವತ್ತು 10 ವರ್ಷದ ನಂತರ 50 ಸಾವಿರ ಬೇಡ ಒಂದು ಲಕ್ಷಕ್ಕೂ ಪೀಸ್‌ವರ್ಕ್‌ಗಳಿಗೆ ಕೆಲವು ಹೆಚ್ಚು ಸಣ್ಣ ಪುಟ್ಟ ಕೆಲಸಗಳಿಗೆ ನಮ್ಮ ಸ್ಥಳೀಯ ಕಂಟ್ರ್ಯಾಕ್ಟುದಾರರಿಗೆ ಅನುಕೂಲ ಆಗತಕ್ಕಂತಹ ಆ ಕೆಲಸ ಸಂಪೂರ್ಣ ಆಗತಕ್ಕಂಥದ್ದು, ಒಂದೇ ವರ್ಕಿಗೆ ಒಂದು ಲಕ್ಷ ಇರಬೇಕು. ಅಥವಾ

ಒಂದು ಕೆಲಸವನ್ನು ಪೀಸ್ ಮಾಡಿಕೊಂಡು 15 ಪೀಸ್‌ವೆಂದು ಹೇಳಿರುವುದು. ಅಲ್ಲ. ಆ ರೀತಿಯ ಆಗುವ ಪೀಸ್ ವರ್ಕ್‌ಗೆ ಒಂದಕ್ಕೆ ಒಂದು ಲಕ್ಷ ರೂಪಾಯಿ ಕೊಡುವಂತಹ ಒಂದು ಅವಕಾಶ ಮಾಡಿ ಕೊಡತಕ್ಕಂಥಾದ್ದು ಮತ್ತೆ, ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನನ್ನು ನಾವು ಏನಾದರೂ ಮಾಡಿ ಅಬಾಲಿಷ್ ಮಾಡಿದರೆ ಬಹಳ ಒಳ್ಳೆಯದು. ಇದು ನಾನು ಈಗಾಗಲೆ ಹೇಳಿದೆ ಏಕೆಂದರೆ ನಮ್ಮ ವೀರಪ್ಪ ಮೊಯಿಲಿಯವರ ಭಾಷಣಕ್ಕೆ ಪೂರಕವಾಗಿ ಅವರು ಏನು ಎನ್‌ಕ್ವೈರಿ ಮಾಡಬೇಕೆಂದು ಕೇಳಿದರು. ಅದಕ್ಕೆ ನಾನು ಪೂರಕವಾಗಿ ಹೇಳಿದೆ ಅಂದರೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಲ್ಲಿ ನಡೆದಿರತಕ್ಕಂತಹ ವ್ಯವಹಾರಗಳು, ನಿಮಗೆ ಅಲ್ಲಿ ಯಾವುದೇ ಕಂಟ್ರಾಕ್ಟ್‌ಗಳಿಗೆ 8 ಪರ್ಸೆಂಟ್ 10 ಪರ್ಸೆಂಟ್ ಏಳು ಪರ್ಸೆಂಟ್ ಅಡಿಷನ್‌ಲ್ ಆಗಿ ಕೊಡಬೇಕೆಂದು ಡೈರೆಕ್ಷನ್ ಮೇಲೆ ಇಂತಹ ಕೆಲಸಗಳನ್ನು ಪೀಸ್‌ವರ್ಕ್ ಮೇಲೆ ಕೊಟ್ಟುಕೊಂಡು ಕೋಟೆಗಟ್ಟಲೆ ವರ್ಕ್ಸ್‌ನ್ನು ಕೊಡತಕ್ಕಂಥಾದ್ದು ಅಥವಾ ಕಂಟ್ರಾಕ್ಟ್‌ರ್ಸ್‌ಗಳ ಕೈಗೆ ಕೊಡುವುದಕ್ಕೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಲ್ಲಿ ಇಂಜಿನಿಯರ್ಸ್ ಏಕೆ? ಎಸ್ಟಾಬ್ಲಿಷ್‌ಮೆಂಟ್ ಏಕೆ? ಅವರೆಲ್ಲಾ ಏತಕ್ಕೆ ಬೇಕು ಹೇಳಿ. ಇಷ್ಟು ಕಂಟ್ರ್ಯಾಕ್ಟ್ ಕೊಡುವುದಿದ್ದರೆ ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಏತಕ್ಕೆ ಬೇಕಾಗಿದೆ. ಇದರಿಂದ ಏನು ಪ್ರಯೋಜನ ಆಗುತ್ತದೆ ಎನ್ನುವುದನ್ನು ಸಹ ಮನಗಾಣಬೇಕು. ಪೀಸ್‌ವರ್ಕ್ ಬಗ್ಗೆ ಒಂದು ಬಹಳಷ್ಟು ಗೊಂದಲ ಇರತಕ್ಕಂತಹ ಈ ಪರಿಸ್ಥಿತಿ ಒಳಗೆ ಇಷ್ಟು ಪೀಸ್‌ವರ್ಕ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ನಾವು ಕೊಡುವುದಕ್ಕೆ ಆಗುವುದಿಲ್ಲ ಎಂದು ನನ್ನ ಸಲಹೆ. ಅಂದರೆ ಒಂದು ಲಕ್ಷ ರೂಪಾಯಿ ಮೇಲೆ ಪೀಸ್‌ವರ್ಕ್ ಕೊಡಬಾರದು ಮ್ಯಾಕ್ಸಿಮಮ್ ಎಂದರೆ ಒಂದೂವರೆ ಲಕ್ಷ. ಒಂದೂವರೆ ಲಕ್ಷದ ಮೇಲೆ ಪೀಸ್‌ವರ್ಕ್ ಕೊಟ್ಟರೆ, ಬೇಕಾದಷ್ಟು ದುರುಪಯೋಗ ಆಗುತ್ತದೆ. ಅದರಲ್ಲಿ ಸ್ಥಳೀಯ ಇಂಜಿನಿಯರ್ಸ್ ಕಂಟ್ರಾಕ್ಟರ್ ಸೇರಿಕೊಂಡು ಹಣ ಮಾಡುವುದಕ್ಕೆ ಸಹಾಯ ಆಗುತ್ತಿದೆಯೇ ವಿನಹ ಬೇರೆ ಯಾವುದೂ ಆಗುವುದಿಲ್ಲ ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಂಗಳೂರಿನಲ್ಲಿ ಇರುವಂತಹ ತುಂಬೆಯಲ್ಲಿ ವೆಂಟೆಡ್ ಡ್ಯಾಮನ್ನು ಕಟ್ಟಿದೆ. ಆ ವೆಂಟೆಡ್ ಡ್ಯಾಮನ್ನು ಕಟ್ಟಿದ್ದರಿಂದ ಈಗ ಬಿರುಕು ಬಿದ್ದು ಅಲ್ಲಿಂದ ನೀರು ಹೊರ ಬರುವಂತಹ ಪರಿಸ್ಥಿತಿ ಬಂದು ಕೊನೆಗೆ ಈಗ ಪುನಃ ಅದನ್ನು ಕಟ್ಟುವಂತಾದ್ದು, ಅಥವಾ ತೇಪೆ ಹಾಕುವುದಕ್ಕೆ ಸುಮಾರು 40 ಲಕ್ಷಕ್ಕೂ ಜಾಸ್ತಿ ಖರ್ಚಾಗಿದೆ. ಇಂತಹ ಒಂದು ಅವ್ಯವಸ್ಥೆ ಇದೆ ಎಂದು ಹೇಳಿದರೆ, ಒಳಗೊಳಗೆ ಏನೋ ಒಂದು ಅಗ್ರಿಮೆಂಟ್ ಆಗಿದೆ ನಾವು ಮಾಡುತ್ತೇವೆ ಎನ್ನುವಂತಹ ಪರಿಸ್ಥಿತಿ ಬಂದಿದೆ. ಅದರಿಂದ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಬಗ್ಗೆ ಮಾನ್ಯ ನಾಗೇಗೌಡರು ಏನು ಹೇಳಿದ್ದಾರೆ ಇದರ ಬಗ್ಗೆ ಗಂಭೀರವಾಗಿ ಪರಿಶೀಲಿಸುವಂತಹ ಒಂದು ಪರಿಸ್ಥಿತಿ ಬಂದಿದೆ.

5.20 ಪಿ.ಎಂ.

ಶ್ರೀ ಕೆ.ಎನ್ ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಪ್ರಕಾರ ಬೇಕಾದಷ್ಟು ಇಂಥ ನಿದರ್ಶನಗಳು ನನ್ನ ಹತ್ತಿರ ಇದೆ. ತುಮಕೂರು, ತುರುವೇಕೆರೆ, ಯಗಚಿದು, ಹೇಮಾವತಿದು, ಗೊರೂರು ಪ್ರಾಜೆಕ್ಟ್‌ದು ಇನ್ನೂ ಬೇಕಾದಷ್ಟು ಇದೆ, ಆದರೆ ಅದರ ಬಗ್ಗೆ ಹೇಳಲು ಸಮಯವಿಲ್ಲ. ಬೇಕಾದಷ್ಟು ಸದಸ್ಯರು ಮಾತನಾಡಬೇಕಾಗಿದೆ. ಆದ್ದರಿಂದ ನಾನು ಹೆಚ್ಚು ಹೇಳಲು ಹೋಗುವುದಿಲ್ಲ, ಆದರೆ ಅವರು ಮಾಡಲೇಬೇಕಾದ ಒಂದು ಕೆಲಸವೇನೆಂದರೆ, ಈ ಪೀಸ್ ವರ್ಕ್‌ನಲ್ಲಿ ಏನು ಅವ್ಯವಹಾರ ನಡೆದಿದೆ ಇದರ ಬಗ್ಗೆ ಸಮಗ್ರವಾದ ತನಿಖೆ ಮಾಡಲು ಸರ್ಕಾರ ತಯಾರಾಗಬೇಕು, ಜೊತೆಗೆ ಯಾವ ಇಂಜಿನಿಯರ್ ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಮಾಡುವ ರೀತಿಯಲ್ಲಿ ಕೆಲಸ ಮಾಡಬೇಕು. ಇಲ್ಲದಿದ್ದರೆ ನೀವು ಎಷ್ಟು ಕೋಟಿ ಕೊಟ್ಟರೂ ಸಹ ಪ್ರಯೋಜನವಾಗುವುದಿಲ್ಲ. ನಾವು ಕೃಷ್ಣಾಕ್ಕೆ 600 ಕೋಟಿ, ಕಾವೇರಿಗೆ 300 ಕೋಟಿ ಬೇರೆ 300 ಕೋಟಿ ಒಟ್ಟು 1200 ಕೋಟಿಯಾಯಿತು ಎಂದು ಪುಸ್ತಕದಲ್ಲಿ ಲೆಕ್ಕ ಹಾಕಿಕೊಳ್ಳಬೇಕೆ ವಿನಹ ನಿಖರವಾದ ಫ್ಯಾಕ್ಟ್ ಅಲ್ಲಿ ಇರುವುದಿಲ್ಲ. ಇನ್ನು ಮೆಂಟೆನೆನ್ಸ್ ವಿಚಾರದಲ್ಲಿ ಮಾನ್ಯ ಕೃಷ್ಣಪ್ಪನವರು ಮಾತನಾಡಿದರು. ಇದರ ಬಗ್ಗೆ ಸರ್ಕಾರಕ್ಕೆ ನಾನು ಸಲಹೆ ಕೊಡುವುದೇನೆಂದರೆ, ವಿಶ್ವಬ್ಯಾಂಕ್‌ನ ಸಹಾಯದಿಂದ ನ್ಯಾಷನಲ್ ವಾಟರ್ ಮೆನೇಜ್‌ಮೆಂಟ್ ಪ್ರಾಜೆಕ್ಟ್‌ನವರು ಹಿಂದೆ ಬಹಳಷ್ಟು ಹಣವನ್ನು ಕೊಡುತ್ತಿದ್ದರು. ತಮಗೆ ಜ್ಞಾಪಕವಿರಬಹುದು, 1994-95ರಲ್ಲಿ ಭಾರತ ಸರ್ಕಾರದಿಂದ ನ್ಯಾಷನಲ್ ವಾಟರ್ ಮೆನೇಜ್‌ಮೆಂಟ್ ಪ್ರಾಜೆಕ್ಟ್‌ನವರಿಂದ 15 ಕೋಟಿ ರೂಪಾಯಿ ಹಣ ಬಂತು. ಅದಕ್ಕೆ ರಾಜ್ಯ ಸರ್ಕಾರ ಸಹ 15 ಕೋಟಿ ರೂಪಾಯಿ ಹಣವನ್ನಾಕಿತು. ಆ 30 ಕೋಟಿ ಹಣವನ್ನು ಸಹ ಸಂಪೂರ್ಣವಾಗಿ ಕೃಷ್ಣಾ ಬೇಸಿನ್‌ನಲ್ಲಿ ಖರ್ಚು ಮಾಡುತ್ತಿದ್ದೀರಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಕಾವೇರಿ ಬೇಸಿನ್‌ಗೂ ಸಹ ಈ ನ್ಯಾಷನಲ್ ವಾಟರ್ ಮ್ಯಾನೇಜ್‌ಮೆಂಟ್ ಸ್ಕೀಮ್‌ನ್ನು ತರಬೇಕು. ಭಾರತ ಸರ್ಕಾರದವರು ಇದು ಪ್ಲಾನ್ ಸ್ಕೀಮ್‌ನಲ್ಲಿ ಸೇರಿಲ್ಲವೆಂದು ಅದಕ್ಕೆ ಅವಕಾಶ ಕೊಡುತ್ತಿಲ್ಲ. ನಮ್ಮಲ್ಲಿ ಕೆಆರ್‌ಎಸ್‌ನ್ನು ಕಟ್ಟಿ 50 ವರ್ಷಗಳಾಯಿತು, ಇದಲ್ಲದೆ ಇನ್ನು ಬೇರೆ ಬೇರೆ ಪ್ರಾಜೆಕ್ಟ್‌ಗಳಾಗಿ ಬಹಳ ವರ್ಷಗಳಾಗಿದೆ. ಪ್ಲೋಇರಿಗೇಷನ್‌ಗೆ ಒಂದು ಎಕರೆಗೆ ಮೆಂಟೆನೆನ್ಸ್ 150 ರೂಪಾಯಿ, ಲಿಫ್ಟ್ ಇರಿಗೇಷನ್‌ಗೆ 500 ರೂಪಾಯಿಯೆಂದು ಲೆಕ್ಕ ಮಾಡಿ ಕೊಡುತ್ತಿದ್ದಾರೆ. ಇದರಲ್ಲಿ ರಾಷ್ಟ್ರೀಯ ವಾಟರ್ ಮ್ಯಾನೇಜ್‌ಮೆಂಟ್ ಪ್ರಾಜೆಕ್ಟ್‌ನವರು 50 ಪರ್‌ಸೆಂಟ್, ರಾಜ್ಯ ಸರ್ಕಾರ 50 ಪರ್‌ಸೆಂಟ್ ಹಣವನ್ನು ಹಾಕಿ ಮಾಡಲಿ. ಆದರೆ ಅದರ ಸಂಪೂರ್ಣವಾದ ಹಣವನ್ನು ಕೃಷ್ಣ ಬೇಸಿನ್‌ಗೆ ಮಾತ್ರ ಉಪಯೋಗ ಮಾಡುತ್ತಿದ್ದೇವೆ, ಕಾವೇರಿ ಬೇಸಿನ್‌ಗೆ ಮಾಡುತ್ತಿಲ್ಲ, ಅದು ಪ್ಲಾನ್‌ಸ್ಕೀಮ್‌ನಲ್ಲಿ ಸೇರಿಲ್ಲವೆಂದು ಇದಕ್ಕೆ ಭಾರತ ಸರ್ಕಾರದವರು ಒಪ್ಪಿಗೆಯನ್ನು ಕೊಡುತ್ತಿಲ್ಲ. ಆದರೆ ನಮ್ಮವರು ಕೆನಾಲ್ ಪ್ಲಾನ್, ಸ್ಕೀಮ್‌ನಲ್ಲಿ ಸೇರಿದೆ ಎಂದು ಹೇಳುತ್ತಿದ್ದಾರೆ. ಈ ನ್ಯಾಷನಲ್ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲಿ ಮೇನ್‌ಟೆನೆನ್ಸ್ ಮಾಡತಕ್ಕದ್ದೆ ಬಹಳಷ್ಟು ಹಳೆಯ

ನಾಲೆಗಳನ್ನು, ಆದ್ದರಿಂದ ಈ ನ್ಯಾಷನಲ್ ವಾಟರ್ ಮ್ಯಾನೇಜ್‌ಮೆಂಟ್‌ನ ಕೆಳಗಡೆ ಕೃಷ್ಣಾ ಬೇಸಿನ್‌ಗೆ ಯಾವ ರೀತಿಯಲ್ಲಿ ರಾಜ್ಯಸರ್ಕಾರ 50 ಪರ್‌ಸೆಂಟ್ ಕೇಂದ್ರ ಸರ್ಕಾರ 50 ಪರ್‌ಸೆಂಟ್ ಕೊಡತಕ್ಕದ್ದು ಇದೆ. ಅದೇ ರೀತಿ ಕಾವೇರಿಯ ಬೇಸಿನ್‌ನ್ನು ಸೇರಿಸಿಕೊಳ್ಳಬೇಕು. ಅದರೆ, ವರುಣ ನಾಲಿ ಮಾಡ್ರನೈಜೇಷನ್, ಕೆಆರ್‌ಎಸ್ ಅಚ್ಚುಕಟ್ಟು ಪ್ಲಾನ್ ಸ್ಕೀಮ್‌ನಲ್ಲಿರುವುದರಿಂದ ಅದನ್ನು ಸೇರಿಸಿಕೊಳ್ಳಲು ಕನ್‌ವೆನ್ಸ್ ಮಾಡಬೇಕು. ಬಹಳಷ್ಟು ಯೋಜನೆಗಳಿಗೆ ಅಪ್ರೂಲ್‌ನ್ನು ಕೊಡುವಲ್ಲಿ ನಮಗೆ ತೊಂದರೆ ಮಾಡುತ್ತಾರೆ. ಬೇರೆ ಬೇರೆ ಸ್ಕೀಮ್‌ಗಳನ್ನು ಸೇರುಸುವಲ್ಲಿ ತೊಂದರೆ ಮಾಡುತ್ತಾರೆ, ಆದ್ದರಿಂದ ಇದನ್ನು ಹೇಗಾದರೂ ಮಾಡಿ, ಪ್ಲಾನ್‌ನಲ್ಲಿ ಸೇರಿಸಿಕೊಳ್ಳಬೇಕು, ಕೊನೆಯ ಪಕ್ಷ ಇದಕ್ಕಾಗಿ ಸ್ವಲ್ಪ ಹಣವನ್ನಾದರೂ ಸಹ ಖರ್ಚು ಮಾಡಬೇಕು. ಒಂದು ಪಕ್ಷ ಅವರು ಒಪ್ಪಿಗೆಯನ್ನು ಕೊಡಲಿಲ್ಲವೆಂದರೆ ನಿಮ್ಮ ಜೆಆರ್‌ವೈ ಅಡಿಷನಲ್ ಹಣದಲ್ಲಾದರೂ ಸಹ ಒಂದೊಂದು ವಿಭಾಗಕ್ಕೆ ಕೊನೆಯ ಪಕ್ಷ ಸ್ವಲ್ಪ ಹಣವನ್ನು ಖರ್ಚು ಮಾಡಬೇಕು. ಇದರಿಂದ ಜವಹರ್ ರೋಜ್‌ಗಾರ್ ಯೋಜನೆಯಲ್ಲಿ ಕೆಲಸವನ್ನು ಕೊಟ್ಟಂತಾಗುತ್ತದೆ. ಆದ್ದರಿಂದ ಇದರಲ್ಲಿ ಒಂದೊಂದು ವಿಭಾಗಕ್ಕೆ 5-6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ತಾವು ನಾಳೆ ಕಾವೇರಿ ಜೋನ್ ಇಂಪ್ರೂಮೆಂಟ್‌ಗೆ ಒಂದು ಬಿಲ್ಲನ್ನು ಇಲ್ಲಿ ತರುತ್ತಿದ್ದೀರಿ. ಅದರಲ್ಲಿ ಲೆವಿ ಮುಂತಾದವನ್ನು ಹಾಕುವ ಬಗ್ಗೆ ಇದೆ. ಈ ಕಾವೇರಿ ಜೋನ್‌ನಲ್ಲಿಯೂ ಸಹ ವಾಟರ್ ಮೇನೇಜ್‌ಮೆಂಟ್‌ನಿಂದ ಅಭಿವೃದ್ಧಿ ಮಾಡುವುದಕ್ಕೆ ಸೋರ್ಸ್‌ನ್ನು ಕ್ರಿಯೇಟ್ ಮಾಡಬೇಕು. ನೀವು ಹೊಸ ನಾಲೆಗಳನ್ನು ಮಾಡಿಕೊಂಡು ಹೋಗುವುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಈ ಹಳೆಯ ನಾಲೆಗಳನ್ನು ಮೆಂಟೇನ್ ಮಾಡದಿದ್ದರೆ ತುಂಬಾ ತಪ್ಪಾಗುತ್ತದೆ. ಇದರ ಬಗ್ಗೆ ಬೇಕಾದಷ್ಟು ವರದಿಗಳಿವೆ. ಇದರಲ್ಲಿ 50 ಪರ್‌ಸೆಂಟ್ ರಾಜ್ಯದವರು, 50 ಪರ್‌ಸೆಂಟ್ ಕೇಂದ್ರ ಸರ್ಕಾರದವರು ಕೊಡಬೇಕು ಅದನ್ನು ಒಪ್ಪಿಕೊಳ್ಳಬೇಕೆಂದು ವೈದನಾಥ್ ಕಮಿಟಿ ವರದಿಯಲ್ಲಿದೆ. ಆ ಎಲ್ಲಾ ವರದಿಯನ್ನಿಟ್ಟುಕೊಂಡು ತಾವು ಆಕ್ಚುಯಲ್ಲಾಗಿ ಮಾಡಬೇಕು. ಕೊನೆಯ ಪಕ್ಷ ನಾಲಾ ಮೆನ್‌ಟೆನೆನ್ಸ್‌ಗೆ 75 ಕೋಟಿ ರೂಪಾಯಿಗಳನ್ನು ಇಡದಿದ್ದರೆ ಈಗ ಇರತಕ್ಕ ನಾಲೆಗಳು ಬಹಳ ದುರವಸ್ಥೆಗೆ ಹೋಗುತ್ತದೆ.

ಮಾನ್ಯ ಸದಸ್ಯರೊಬ್ಬರು : ಸನ್ಮಾನ್ಯ ಅಧ್ಯಕ್ಷರೆ, ನಾಲೆ ಅಚ್ಚುಕಟ್ಟು ಪ್ರದೇಶಕ್ಕೆ 470/ಮತ್ತು 250ರ ಹೆಡ್‌ನಲ್ಲಿ ಕೇಂದ್ರ ಸರ್ಕಾರದಿಂದ ಹಣವನ್ನು ಒದಗಿಸಿಕೊಟ್ಟಿದ್ದಾರೆ. ಆದಕ್ಕೆ ತಕ್ಕಂತೆ ಎಲ್ಲಾ ಸಂಬಂಧಪಟ್ಟ ಇಂಜಿನಿಯರ್‌ಗಳು ಸಹ ಎಸ್ಟಿಮೇಟ್ ಮಾಡಿ ಹಣ ಬಿಡುಗಡೆ ಮಾಡಲು ಸರ್ಕಾರದಲ್ಲಿ ಕೇಳಿದ್ದಾರೆ, ನಾವು ಅನುಮತಿಯನ್ನು ಕೊಡುವವರೆಗೂ ಸಹ ನೀವು ಹಣವನ್ನು ಖರ್ಚು ಮಾಡಿ ಕೆಲಸ ತೆಗೆದುಕೊಳ್ಳಬಾರದೆಂದು ಸರ್ಕಾರದಲ್ಲಿ ಬಹುಶಃ ಅದನ್ನು ತಡೆಹಿಡಿದಿದ್ದಾರೆ. ಇದರ ಬಗ್ಗೆ ಸರ್ಕಾರ ಆಜ್ಞೆ ಮಾಡಿದೆ. ಆದ್ದರಿಂದ ಈ ನಾಲಾ ಅಚ್ಚುಕಟ್ಟಿಗಳು, ನದಿನೀರಿನ ಅಚ್ಚುಕಟ್ಟು ಇರಬಹುದು, ರಾಮಸ್ವಾಮಿ ನಾಲೆ ಇರಬಹುದು, ರಾಜಪರಮೇಶ್ವರಿ ನಾಲೆ ಇರಬಹುದು, ಯಾವುದು ಕಾವೇರಿ ಅಚ್ಚುಕಟ್ಟಿನಲ್ಲಿ ಬರುತ್ತದೆ ಆ ಹೆಡ್‌ನಲ್ಲಿರತಕ್ಕ ಹಣವನ್ನು ತಕ್ಷಣ ಬಿಡುಗಡೆ ಮಾಡುವುದರಿಂದ ಬಹುಶಃ ಆ

ನಾಲೆಗಳ ದುರಸ್ಥಿ ಕೆಲಸ ತ್ವರಿತವಾಗಿ ಆಗುತ್ತದೆ, ಸರ್ಕಾರ 4701 ಮತ್ತು 2500 ಹೆಡ್‌ನಲ್ಲಿರತಕ್ಕ ಹಣವನ್ನು ಬಿಡುಗಡೆ ಮಾಡಿ, ದಯವಿಟ್ಟು ಈ ನಾಲೆಗಳ ದುರಸ್ಥಿಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಇದರ ಬಗ್ಗೆ ಬೋರ್ಡ್ ಆಫ್ ಮಿಟಿಂಗ್‌ನಲ್ಲಿಯೂ ಸಹ ಸಾಕಷ್ಟು ಚರ್ಚೆಯಾಗಿದೆ. ಇದನ್ನು ಸರಿಯಾಗಿ ಮೇಂಟೆನೆನ್ಸ್ ಮಾಡದಿದ್ದರೆ ಅಚ್ಚುಕಟ್ಟಿನ ಪಕ್ಕದಲ್ಲಿರುವವರು ಬಹಳಷ್ಟು ತೊಂದರೆಗೆ ಒಳಗಾಗುತ್ತೇವೆ. ಹೊಸ ಅಚ್ಚುಕಟ್ಟಿನವರಿಗೆ ಒಂದು ತೊಂದರೆಯಾಗಿದ್ದರೆ ಹಳೆಯ ಅಚ್ಚುಕಟ್ಟು ಭಾಗದವರಿಗೆ ಮತ್ತೊಂದು ತೊಂದರೆಯಾಗಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕೆಂದು ನಮ್ಮೆಲ್ಲರ ಆಸೆಯಾಗಿದೆ. ಆದ್ದರಿಂದ ನಾವು ಮೇಂಟೆನೆನ್ಸ್ ಗ್ರಾಂಟ್ ಎಂದು ಬೇರೆಯಾಗಿ ಮೇನ್‌ಟೇನ್ ಮಾಡಬೇಕು, ಇಲ್ಲದಿದ್ದರೆ ಯಾವುದನ್ನೂ ಸಹ ರಿಪೇರಿ ಮಾಡದಿದ್ದರೆ ಬಹಳಷ್ಟು ತೊಂದರೆಯಾಗುತ್ತದೆ.

ಇನ್ನು ಸಣ್ಣ ನೀರಾವರಿಯ ಬಗ್ಗೆ ಸೂಕ್ಮವಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರೆ ಅವರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ನಮ್ಮ ರಾಜ್ಯದಲ್ಲಿ 40 ಸಾವಿರ ಟ್ಯಾಂಕ್‌ಗಳಿವೆ. ಇದರಲ್ಲಿ 1974ನೆ ಇಸವಿಯವರೆಗೆ ಸುಮಾರು 12 ಪರ್‌ಸೆಂಟ್ ಮೈನರ್ ಇರಿಗೇಷನ್‌ನಿಂದ ನೀರಾವರಿ ಮಾಡಿಕೊಂಡಿದ್ದೆವು. ಅದು ಇವತ್ತಿನ ದಿವಸ 7 ಪರ್‌ಸೆಂಟ್‌ಗೆ ಕಡಿಮೆಯಾಗಿದೆ. ಕಾರಣವೇನೆಂದರೆ, ಎಲ್ಲಾ ಕೆರೆಗಳೂ ಸಹ ಹೂಳು ತುಂಬಿಹೋಗಿದೆ. ಸಿಲ್ಟ್ ಆಗಿದೆ. ಎಷ್ಟೋ ಕೆರೆಗಳು ಮುಚ್ಚಿಹೋಗಿವೆ, ಎಷ್ಟೊ ಕೆರೆಗಳು ಸೈಟ್ ಆಗಿರುವುದು ಬೇರೆ ವಿಚಾರ. ಆದರೆ ಇರತಕ್ಕ ಕೆರೆಗಳನ್ನಾದರೂ ಉಪಯೋಗ ಮಾಡಿಕೊಳ್ಳಲು, ಸಣ್ಣ ಕೆರೆಗಳನ್ನು ಉಳಿಸಿಕೊಳ್ಳಲು ಯಾವ ಕೆರೆ ಉಪಯೋಗವಾಗುತ್ತದೆ, ಯಾವುದು ನೀರಾವರಿಗೆ ಉಪಯೋಗವಾಗುವುದಿಲ್ಲ, ಯಾವುದನ್ನು ಮುಚ್ಚಬೇಕು ಎಂಬ ಬಗ್ಗೆ ಮಾಸ್ಟರ್ ಪ್ಲಾನ್ ಮಾಡಿಸಬೇಕು, ಸರ್ವೆ ಮಾಡಬೇಕು. ನಾವೇನು ಮೈನರ್ ಇರಿಗೇಷನ್‌ನಲ್ಲಿ 75 ಕೋಟಿ ಇಟ್ಟಿದ್ದೇವೆ ಅದರಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡುವಂತಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಬೇಕಾದಷ್ಟು ಕರೆಗಳು ಹೂಳಿನಿಂದ ಮುಚ್ಚಿಹೋಗಿದೆ, ತೊಂದರೆಯಲ್ಲಿ ಸಿಕ್ಕಿಕೊಂಂಡಿವೆ. ಮಾನ್ಯ ಖರ್ಗೆಯವರು ಕೃಷ್ಣರವರಿಗೆ ಒಂದು, ಕಾವೇರಿ ಭಾಗದವರಿಗೆ ಒಂದು ರೀತಿಯಲ್ಲಿ ಅನುಕೂಲವಾಗುತ್ತದೆಂದು ಹೇಳಿದರು. ಆದರೆ ಕೃಷ್ಣಾ ಕಾವೇರಿ ಬೇಸಿನ್‌ನಲ್ಲಿರತಕ್ಕವರು ಮತ್ತು ಬಹಳ ಜನ ಸಣ್ಣ ನೀರಾವರಿಗಳ ಮೇಲೆ ಅವಲಂಬಿಸಿಕೊಂಡಿರತಕ್ಕಂಥ, ಕೆರೆಗಳ ನೀರಾವರಿಗಳ ಮೇಲೆ ಅವಲಂಬಿಸಿಕೊಂಡಿರತಕ್ಕ 100-500, ಎಕರೆ ಈ ರೀತಿ ಇರತಕ್ಕ ರೈತರಿಗೆ ಅನುಕೂಲವಾಗುವ ಕಡೆಗೆ ತಾವು ಗಮನ ಕೊಡಬೇಕು. ಮೈನರ್ ಇರಿಗೇಷನ್‌ಗೆ ಈಗ ಇಟ್ಟಿರುವ ಹಣ ಸಾಕಾಗುವುದಿಲ್ಲ. ಅಲ್ಲಿ ಹೆಚ್ಚು ಹಣಕ್ಕೆ ಅವಕಾಶ ಮಾಡಿಕೊಡಬೇಕು. ಮೈನರ್ ಇರಿಗೇಷನ್‌ನಲ್ಲಿ 7 ಪರ್‌ಸೆಂಟ್ ಕಡಿಮೆಯಾಗಿದೆ ಎಂದು ಹೇಳಿದರೆ ಅದರ ಬಗ್ಗೆ ಹೆಚ್ಚು ಗಮನವನ್ನು ನಾವು ನೀಡಬೇಕಾಗುತ್ತದೆ. ರಾಜ್ಯದಲ್ಲಿ 20 ಸಾವಿರ ಕೆರೆಗಳು ಮುಳುಗಿಹೋಗಿದೆ, ಮುಚ್ಚಿಹೋಗಿದೆ ಎಂದು

ಇದೊಂದು ಅಂಕಿಅಂಶದಿಂದ ಹೇಳಬಹುದು. ಆದ್ದರಿಂದ ಮೈನರ್ ಇರಿಗೇಷನ್‌ಗೆ ಹೆಚ್ಚು ಗಮನವನ್ನು ಕೊಡಬೇಕು. ಇನ್ನು ಲಿಫ್ಟ್ ಇರಿಗೇಷನನ್ನು ನಿಲ್ಲಿಸಬಾರದೆಂದು ಮಾನ್ಯ ಮೊಯಿಲಿಯವರು ಹೇಳಿದರು, ಇದರ ಬಗ್ಗೆ ನನ್ನದು ಎರಡು ರೀತಿಯಾದ ವಾದವಿದೆ. ಮೊದಲನೆಯದಾಗಿ ಎಲ್ಲಿ ನಾವು ನೀರನ್ನು ಸಂಗ್ರಹಣೆ ಮಾಡಿಟ್ಟುಕೊಳ್ಳಲು ಸಾಧ್ಯವಾಗುತ್ತದೆ ಅದರ ಬಗ್ಗೆ ಗಮನಹರಿಸಬೇಕು. ನಮ್ಮ ಕಾವೇರಿ ಮತ್ತು ಕೃಷ್ಣಾದಲ್ಲಿ ಫ್ಲೋ ಇರಿಗೇಷನ್‌ಗೆ ಯಾವ ರೀತಿ ಗಮನಹರಿಸಬೇಕು, ಯಾವ ರೀತಿಯಲ್ಲಿ ಲಿಫ್ಟ್ ಇರಿಗೇಷನ್‌ಗೆ ಗಮನಹರಿಸಬೇಕು ಎಂಬ ಪ್ರಶ್ನೆ ಇದೆ. ಇವತ್ತು ಫ್ಲೋ ಇರಿಗೇಷನ್‌ಗೆ ಹೆಚ್ಚು ಗಮನಹರಿಸಿ ಹೆಚ್ಚು ನೀರನ್ನು ಕೂಡಿಟ್ಟುಕೊಂಡರೆ, ಇವತ್ತೇನು 700 ಟಿಎಂಸಿ ನೀರು ಕೃಷ್ಣಾದ್ದು ಇದೆ, ಅಥವಾ 325-330 ಟಿಎಂಸಿ ಕಾವೇರಿದ್ದು ಏನಿದೆ, ಅದನ್ನು ನಾವು ಸಂಗ್ರಹಣೆ ಮಾಡಿ ಇಟ್ಟುಕೊಂಡರೆ ನಂತರ ನಾವು ಆ ನೀರನ್ನು ಯಾವಾಗ ಬೇಕಾದರೂ ಲಿಫ್ಟ್ ಮಾಡಿಕೊಳ್ಳಬಹುದು. ಈಗಲೇ ಕೆಲವು ಭಾಗದಲ್ಲಿ ಲಿಫ್ಟ್ ಇರಿಗೇಷನ್‌ಗೆ ಹೆಚ್ಚು ಹಣವನ್ನು ಖರ್ಚು ಮಾಡಿದರೆ, ನಾವು ನೀರನ್ನು ಸಂಗ್ರಹ ಮಾಡಿ ಇಟ್ಟುಕೊಳ್ಳಲು ಆಗುವುದಿಲ್ಲ. ಆದ್ದರಿಂದ ಯಾವ ಲಿಫ್ಟ್ ಇರಿಗೇಷನ್ ಅತ್ಯಾವಶ್ಯಕವಾಗಿದೆ ಯಾವ ಲಿಫ್ಟ್ ಇರಿಗೇಷನ್ ಕಡಿಮೆ ಪ್ರಮಾಣದಲ್ಲಿ ಉಪಯೋಗವಾಗುತ್ತದೆ, ಯಾವ ಲಿಫ್ಟ್ ಇರಿಗೇಷನ್ ಹೆಚ್ಚು ವೆಚ್ಚವಾಗುತ್ತದೆ, ಯಾವ ಲಿಫ್ಟ್ ಇರಿಗೇಷನ್ ಮಾಡುವುದರಿಂದ ನಾವು ಹೆಚ್ಚು ನೀರನ್ನು ಸಂಗ್ರಹ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಪ್ರಯಾರಿಟಿಯನ್ನು ನಿಗದಿ ಮಾಡಬೇಕು. ಫ್ಲೋ ಇರಿಗೇಷನ್‌ಗೆ, ಹೆಚ್ಚು ನೀರನ್ನು ನಮ್ಮ ರಾಜ್ಯದಲ್ಲೇ ಸಂಗ್ರಹ ಮಾಡಿಟ್ಟು ಕೊಳ್ಳುವುದಕ್ಕೆ ಪ್ರಯಾರಿಟಿ ಕೊಡಬೇಕು. ಇವತ್ತು ಬೆಳಿಗ್ಗೆ ಕಾವೇರಿ ವಿಚಾರವನ್ನು ಪ್ರಸ್ತಾಪ ಮಾಡುತ್ತ 250 ಟಿಎಂಸಿ ಗಿಂತ ಜಾಸ್ತಿ ನೀರು ಸಮುದ್ರಕ್ಕೆ ಹೋಗುತ್ತದೆ ಎಂದು ಹೇಳಿದ್ದೀರಿ, ಆದ್ದರಿಂದ ಮೊದಲು ನೀರನ್ನು ಸಂಗ್ರಹಣೆ ಮಾಡಿಟ್ಟುಕೊಳ್ಳುವ ಬುದ್ಧಿವಂತಿಕೆ ಸರ್ಕಾರಕ್ಕೆ ಇರಬೇಕು. ಈ ಕೆಲಸವನ್ನು ಹತ್ತು ವರ್ಷಗಳ ಹಿಂದೆಯೆ ಮಾಡಿ ಕೆರೆಗಳನ್ನು ಕಟ್ಟಿ, ಡ್ಯಾಂ ಗಳನ್ನು ಕಟ್ಟಿ ನೀರನ್ನು ಸಂಗ್ರಹಣೆ ಮಾಡಿಕೊಂಡಿದ್ದರೆ ನಾವು ಯಾವಾಗ ಬೇಕಾದರೂ ನೀರನ್ನು ಉಪಯೋಗ ಮಾಡಿಕೊಳ್ಳಬಹುದಾಗಿತ್ತು. ನಮ್ಮ ಪ್ರಯಾರಿಟಿ ಡ್ಯಾಂ ಗಳನ್ನು ಕಟ್ಟಿ ನೀರನ್ನು ಸಂಗ್ರಹಣೆ ಮಾಡಿಕೊಳ್ಳುವ ಕಡೆಗೆ ಹೋಗಲಿಲ್ಲ, ಅದಕ್ಕೆ ಬದಲಾಗಿ ನಾಲೆಯ ಕೆಲಸಕ್ಕೆ, ಗೇಟ್ ಹಾಕಲು, ಸಾಯಲ್ ಕೆಲಸಕ್ಕೆ, ನಮ್ಮ ಪ್ರಯಾರಿಟಿ ಹೋಯಿತು. ಆದ್ದರಿಂದ ಈ ಎರಡು ಮೂರು ವರ್ಷದಲ್ಲಿ ಲಿಫ್ಟ್ ಇರ್ರಿಗೇಷನ್‌ಗೆ ಪ್ರಯಾರಿಟಿಯನ್ನು ಮಾಡಲೇಬೇಕು ಎನ್ನುವ ಕಡೆ ಗಮನ ಕೊಡಿ.

ಶ್ರೀ ಕೆ. ವೆಂಕಟೇಶ್ : ಅಧ್ಯಕ್ಷರೇ, ಈಗ ನಮ್ಮ ನಾಗೇಗೌಡರು ಲಿಫ್ಟ್‌ಇರೀಗೇಷನ್ ಪ್ರಿಯಾರಿಟಿ ಮೇಲೆ ಮಾಡಬೇಕು ; ಡ್ರಿಪ್ ಇರ್ರಿಗೇಷನ್‌ಗೆ ಪ್ರಿಯಾರಿಟಿ ಕೊಡಬೇಕೆಂದೂ, ಹರಿಯುವ ನೀರಿಗೆ ನೀವು ಹೆಚ್ಚು ಆದ್ಯತೆ ಕೊಡಬೇಕೆಂದು ಹೇಳುತ್ತಿದ್ದಾರೆ. ನಿಮ್ಮಲ್ಲಿ ಈ ಕಾವೇರಿ ಬೇಸಿನ್‌ನಲ್ಲಿ ಸಾಕಷ್ಟು ಲಿಫ್ಟ್ ಇರ್ರಿಗೇಷನ್‌ನಲ್ಲಿ ಕೆಲಸ ಪ್ರಾರಂಭವಾಗಿದೆ. ಅಂದರೆ ಆಗಲೇ ನಮ್ಮ ಅರ್ಧ ಕೆಲಸ ಆಗಿದೆ, ಮುಕ್ಕಾಲು ಕೆಲಸ ಆಗಿದೆ. ಈ ಕೆಲಸವನ್ನು ನೀವು ಪ್ರಿಯಾರಿಟಿ

ಮೇಲೆ ತೆಗೆದುಕೊಂಡಾಗ ನಾವು ಕಾವೇರಿ ಬೇಸಿನ್‌ನಲ್ಲಿ ನೀರು ಉಪಯೋಗ ಮಾಡಿಕೊಳ್ಳಬೇಕು. ನಮಗೆ ತಮಿಳುನಾಡಿನಲ್ಲಿ ಡಿಸ್‌ಪ್ಯೂಟ್ ಇದೆ ಅನ್ನುವ ಸಂದರ್ಭದಲ್ಲಿ ನಾವು ಲಿಫ್ಟ್ ಇರ್ರಿಗೇಷನ್ ಉಪಯೋಗ ಪೂರ್ಣವಾಗಿ ಮಾಡಿಕೊಂಡಾಗ ಮಾತ್ರ ನಾವು ನೀರು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಬರೀ ನೀರು ಶೇಖರಣೆ ಮಾಡಿದರೆ, ಎಷ್ಟು ನೀರು ಶೇಖರಣೆ ಆಗುತ್ತದೆ ಎಂದು ಹೇಳಿ ನಾವು ತಮಿಳುನಾಡಿನವರಿಗೆ ಲೆಕ್ಕ ಕೊಟ್ಟ ಹಾಗೆ ಆಗುತ್ತದೆ. ಆದರೆ ನಾನು ನಮ್ಮ ಮುಖ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ, ಲಿಫ್ಟ್ ಇರ್ರಿಗೇಷನ್ ಯಾವುದು ಪ್ರಾರಂಭವಾಗಿದೆ, ಅರ್ಧ ಆಗಿದೆ, ಮುಕ್ಕಾಲು ಆಗಿದೆ, ಸಂಪೂರ್ಣವಾಗಿ ಅವುಗಳನ್ನು ಮುಗಿಸತಕ್ಕಂತಹ ಕೆಲಸ ತ್ವರಿತವಾಗಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ವೆಂಕಟೇಶ್‌ರವರು ಹೇಳಿರತಕ್ಕಂಥದ್ದು ಯಾವುದು ಎಂದರೆ ಎಲ್ಲಿ ಫ್ಲೋ ಇರ್ರಿಗೇಷನ್ ಇದೆ ಎಲ್ಲಿ ಲಿಫ್ಟ್ ಇರ್ರಿಗೇಷನ್ ಪ್ರಾರಂಭವಾಗಿದೆ ಎಲ್ಲಿ ಹಳ್ಳಿಗಳಲ್ಲಿ ವಾಟರ್ ಅವೈಲೆಬಿಲಿಟಿ ಇದೆ, ಇರ್ರಿಗೇಟ್ ಮಾಡುವುದಕ್ಕೆ ಲ್ಯಾಂಡ್ ಇದೆ, ಅಂತಹ ಕಡೆ ನಾವು ಲಿಫ್ಟ್ ಇರ್ರಿಗೇಷನ್ ಬೇಡ ಎಂದು ಹೇಳುವುದಿಲ್ಲ. ನೀವು ನೀರು ಕೊಟ್ಟು ಕೂಡಿಟ್ಟುಕೊಂಡು ತಮಿಳುನಾಡಿಗೆ ಲೆಕ್ಕ ಕೊಡದೆ ಹೋದರೆ ನಾಳೆ ಸಮಸ್ಯೆ ಬಂದೇ ಬರುತ್ತದೆ.

ಶ್ರೀ ಕೆ. ವೆಂಕಟೇಶ್ : ನಾವೆಲ್ಲಾ ವಾದ ಮಾಡುತ್ತಿರುವುದು ತಮಿಳು ನಾಡಿಗೂ ನಮಗೆ ಇರತಕ್ಕಂತಹ ವ್ಯತ್ಯಾಸಗಳನ್ನು ಚರ್ಚೆ ಮಾಡಿ ಇತ್ಯರ್ಥ ಪಡಿಸುವುದಕೋಸ್ಕರ. ನಮ್ಮೆಲ್ಲರ ಆಸೆ ಏನೆಂದರೆ ಆದಷ್ಟು ಶೀಘ್ರವಾಗಿ ನಮ್ಮ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳಿ. ಇಂತಹ ಸಂದರ್ಭದಲ್ಲಿ ಕೆಲವು ಕೆಲಸಗಳನ್ನು ನಿಧಾನ ಮಾಡುವುದು, ಕೆಲವು ಕೆಲಸ ಬೇಗ ಮಾಡುವುದು ಎಂದರೆ ಆ ನೀರು ಹೇಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ನಾವು ಯೋಚನೆ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ನಾನು ಹೇಳಿದಂತೆ ಕಡೆಯ ಕೆಳಗಡೆ ಲಿಫ್ಟ್ ಮಾಡತಕ್ಕಂಥದ್ದು ಒಂದು ಯೋಜನೆ. ಮೇಲುಗಡೆ ಮಾಡತಕ್ಕಂಥದ್ದು ಮತ್ತೊಂದು ಯೋಜನೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಕೆರೆ ಕೆಳಗೆ ಯಾವುದೋ ಒಂದು ನಾಲೆಗೆ ಒಳಗಾಕೆ ಹೋಗತಕ್ಕಂತಹ ಹಳ್ಳಕ್ಕೆ ಲಿಫ್ಟ್ ಮಾಡಿಕೊಂಡು ನೀವು ನೀರು ಎತ್ತುಕೊಂಡು ಬೇಸಾಯ ಮಾಡುತ್ತಿದ್ದರೆ ನಮ್ಮದು ಏನೂ ಅಭ್ಯಂತರವಿಲ್ಲ. ಮೈನ್ ಸ್ಟ್ರೀಮಿನಲ್ಲಿ ಕೆಳಗಡೆ ಡ್ಯಾಮ್ ಬಂದ ಮೇಲೆ ನಮ್ಮ ಕೆ.ಆರ್.ಎಸ್. ಅಚ್ಚುಕಟ್ಟು ಕೆಳಗೆ ಇರತಕ್ಕಂಥದ್ದರಲ್ಲಿ ಎಲ್ಲಿ ಲಿಫ್ಟ್ ಮಾಡಿದರೂ ತಪ್ಪಾಗುವುದಿಲ್ಲ. ಆ ಪ್ರಶ್ನೆ ಬರುತ್ತದೆ. ನಾವು ಕೆರೆ ಮೇರೆ ಎಲ್ಲಿ ಇವೆ ಅಲ್ಲಿ ಲಿಫ್ಟ್ ಮಾಡುವುದಕ್ಕೆ ಅವಕಾಶ ಕೊಟ್ಟರೆ ಕೊನೆಗೆ ಆ ದುಡ್ಡು ಲಿಫ್ಟ್ ಇರ್ರಿಗೇಷನ್ ಆಗತಕ್ಕಂತಹ ಒಂದು ಟಿಎಮ್‌ಸಿ ನೀರನ್ನು ಎತ್ತುವುದಕ್ಕೆ ಆಗತಕ್ಕಂತಹ ಲಿಫ್ಟ್ ಇರ್ರಿಗೇಷನ್ ಕಾಸ್ಟ್‌ನಲ್ಲಿ ಐದು ಟಿಎಮ್‌ಸಿ ನೀರು ನಾವು ಬೌಂಡ್ ಮಾಡಿಕೊಳ್ಳಬೇಕು. ಐದು ಟಿಎಮ್‌ಸಿ ನೀರನ್ನು ನಾವು ಇಟ್ಟುಕೊಳ್ಳಬೇಕು. ಆ ಕಾನ್‌ಸೆಫ್ಟ್ ಒಳಗಡೆ

ಹಣ ಇಲ್ಲದೆ ಇರತಕ್ಕಂಥದ್ದರಿಂದ ಈ ಸಾರಿ ನಿಮಗೆ 1217 ಕೋಟಿ ರೂಪಾಯಿ ಬೇಕು. 1,217 ಕೋಟಿ ರೂಪಾಯಿಯಲ್ಲಿ ನೀವು ಲಿಫ್ಟ್ ಇರ್ರಿಗೇಷನ್ ಎಂದು ನಾನು ಮೊದಲೇ ಹೇಳಿದ ಹಾಗೇ ಎಲ್ಲಾ ಮೆಷಿನ್ಸ್ ಎಲ್ಲಾ ಪೈಪ್ಸ್ ಕೊಂಡಿದ್ದು ಹಾಗೆ ಬಿದ್ದಿದ್ದಾವೆ. ಲಿಫ್ಟ್ ಇರ್ರಿಗೇಷನ್ ಆಗಿಲ್ಲ. ಒಂದೊಂದು ಡಿವಿಷನ್‌ನಲ್ಲಿ 5-5, 6-6 ಕೋಟಿ ರೂಪಾಯಿ ಲಿಫ್ಟ್ ಇರ್ರಿಗೇಷನ್ ಮೇಟೀರಿಯಲ್ ಕೊಂಡುಕೊಂಡು ಬಿಟ್ಟಿದ್ದಾರೆ. ಇನ್ನೂ ಈ ಸಿವಿಲ್ ವರ್ಕ್ಸ್ ಪ್ರಾರಂಭವಾಗಿಲ್ಲ. ಪವರ್‌ದೂ ಕೂಡ ಪ್ರಾಬ್ಲಮ್ ಇದೆ. ಇಂತಹ ಸಂದರ್ಭದಲ್ಲಿ ಇರ್ರಿಗೇಷನ್‌ಗೆ ಪ್ರಿಯಾರಿಟಿ ಫಿಕ್ಸ್ ಮಾಡಬೇಕು.

ಶ್ರೀ ಕೆ. ವೆಂಕಟೇಶ್ : ನಾನು ಹೇಳಿದಂಥ ಕೆಲಸ ಪೂರ್ಣವಾಗಿ ಮಾಡಿ ಎಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಇವರು ಕೆಲಸ ನಡೆಸುವುದಕ್ಕೆ ಎರಡು ವಿಚಾರ, ಕೆಲಸ ನಡೆಸುವುದಕ್ಕೆ ನನ್ನ ಅಭ್ಯಂತರವಿಲ್ಲ. ಕೆಲಸ ನಾಲ್ಕು ತಿಂಗಳಲ್ಲಿ ಪೂರ್ಣವಾಗಿದೆ. ಅಡ್‌ಮಿನಿಸ್ಟ್ರೇಷನ್ ಅಪ್ರೂವ್‌ಲ್ ಆಗಿದೆ. 50 ಪರ್ಸೆಂಟ್ ಹಣ ಖರ್ಚು ಮಾಡಿರುತ್ತೀರಿ, ಅಥವಾ ಎಲ್ಲಾ ಮೆಷಿನ್‌ಗಳನ್ನು ಕೊಂಡು ಕೊಂಡಿದ್ದು, ಸರ್ವೀಸ್ ಸ್ಟೇಷನ್ ಪಾಯಿಂಟ್ ಇಲ್ಲ. ಇದು ಏನೋ ಒಂದು ಟಿಎಮ್‌ಸಿ ಅಥವಾ ಒಂದು ಸಾವಿರ ಕ್ಯೂಸೆಕ್ಸ್ ನೀರು ಉಪಯೋಗ ಆಗದೆ ಇದ್ದರೆ ನಮಗೆ ಅಭ್ಯಂತರವಿಲ್ಲ. ಇಲ್ಲಿ ಏನಾಗಿದೆ ಅಂದರೆ ಹೆಚ್.ಸಿ. ಮೇಲುಗಡೆ ಇರಿಗೇಷನ್ ಹಾಕುವುದು, ಹೆಚ್.ಸಿ. ಡ್ಯಾಮ್ ಬಿಟ್ಟು ಬಿಡುವುದು, ಈ ರೀತಿಯಾದಂತಹ ಹೆಗ್ಗೂರು ಯೋಜನೆ 96ಕ್ಕೆ ಮುಗಿಯಬೇಕಾಗಿತ್ತು. ಅಲ್ಲಿ ಲಿಫ್ಟ್ ಇರ್ರಿಗೇಷನ್ (ಬಿ) ಪಾಯಿಂಟ್ ಹಾಕಿಕೊಂಡಿದ್ದೀರಿ 'ಬಿ' ಪಾಯಿಂಟ್‌ಗೆ ಇನ್ನು 'ಎ' ಪಾಯಿಂಟ್ ಲಿಫ್ಟ್ ಇರ್ರಿಗೇಷನ್ ಮಾಡದೆ ಹೋಗಿದ್ದರೆ ಹೆಗ್ಗೂರು ಪ್ರಾಜೆಕ್ಟ್ ಮುಗಿದು ಹೋಗುತ್ತಿತ್ತು. ಇದು ನಮಗೆ ಕೌಂಟಿಂಗ್ ಬರುತ್ತದೆ. ಫ್ಲೋಯಿಂಗ್ ಇರಿಗೇಷನ್ ಪ್ರಾಜೆಕ್ಟ್ ಒಳಗಡೆ ನಮ್ಮ ಪ್ರಿಯಾರಿಟಿ ನೀರು ಕೂಡಿಟ್ಟುಕೊಳ್ಳುವುದರಲ್ಲಿ ಇರಬೇಕಾಗಿದೆಯೇ ವಿನಹ ನಮ್ಮ ನೀರು ನಾವೇ ಯಾವಾಗ ಬೇಕಾದರೂ ಲಿಫ್ಟ್ ಮಾಡಿಕೊಳ್ಳಬಹುದು. ಡ್ಯಾಂನಲ್ಲಿ ನೀರು ಇದ್ದರೆ, 325 ಟಿಎಮ್‌ಸಿ ಕಾವೇರಿ ನೀರು ಉಳಿದುಕೊಳ್ಳುತ್ತದೆ ಎಂದರೆ ಯಾವಾಗಬೇಕಾದರೂ ಲಿಫ್ಟ್ ಮಾಡಿಕೊಳ್ಳಬಹುದು. 748 ಟಿಎಮ್‌ಸಿ ಬಂದರೆ ಯಾವಾಗ ಬೇಕಾದರೂ ಲಿಫ್ಟ್ ಮಾಡಿಕೊಳ್ಳಬಹುದು ಅದರಿಂದ ಏನೂ ತಪ್ಪಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೊಂದು ವಿಚಾರ ಅಂದರೆ ನಮ್ಮ ಕೃಷ್ಣ ಬೇಸಿನ್. ಇವತ್ತು ಬಹಳಷ್ಟು ಚರ್ಚೆಯನ್ನು ನಮ್ಮ ಹಿರಿಯ ಮುಖಂಡರಾದ ಮಾನ್ಯ ಮೊಯಿಲಿಯವರು ಹಾಗೂ ನಂಜೇಗೌಡರು ಮಾತಾನಾಡಿದ್ದಾರೆ. ಒಂದು ಪಾಯಿಂಟ್ ನಾನು ಆವತ್ತಿನ ದಿವಸ ಕ್ಲ್ಯಾರಿಫೈ ಮಾಡಿದೆ, ನಾನು ನಮ್ಮ ಮುಖ್ಯಮಂತ್ರಿಗಳಿಂದ ಅವರ ಉತ್ತರದಲ್ಲಿ ನಿರೀಕ್ಷಣೆ ಮಾಡುತ್ತೇನೆ. ಈ ಮುನ್ನೂರು ಕೋಟಿ ಕೃಷ್ಣ ಜಲ ನಿಗಮ ಎಂದು ಏನು ಮಾಡದ್ದಾರೆ, 100 ಕೋಟಿ ಈಕ್ವಿಟಿ ಒಂದು ರಾಜ್ಯಸರ್ಕಾರದಿಂದ, ಮುನ್ನೂರು ಕೋಟಿ ನಮ್ಮ ಶೇರ್ ಬಾಂಡ್ ಎಂದು ಹೇಳಿದ್ದಾರೆ. ಇದು ಇವತ್ತಿಗೂ ನನ್ನ ಅಭಿಪ್ರಾಯದಲ್ಲಿ ಪಬ್ಲಿಕ್‌ನಿಂದ ಕಲೆಕ್ಟ್ ಮಾಡತಕ್ಕಂತಹ

ಬಾಂಡ್ಸ್ ಅಲ್ಲ ಅದು ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್‌ನಿಂದ ಕಲೆಕ್ಟ್ ಮಾಡತಕ್ಕಂಥದ್ದೂ. ಎಲ್‌ಐಸಿ, ಯು ಟಿಐ, ಎಸ್.ಬಿ.ಐಯಲ್ಲಿ ಮೋಡಲ್ ಏಜೆನ್ಸಿಯಾಗಿ ಏನು ಬೇರೆ ಬೇರೆ ರಾಜ್ಯದವರು ಮಾಡಿದ್ದಾರೆ. ನಮ್ಮ ಗುಜರಾತ್‌ನವರು ಮಾಡಿದ್ದಾರೆ, ಸರ್ದಾರ್ ವಲ್ಲಭಾಬಾಯಿ ಪಟೇಲ್ ಯೋಜನೆ ಒಳಗಡೆ ಆ ಸರ್ದಾರ್ ಯೋಜನೆ ಯಾವ ರೀತಿ ಮಾಡಿಕೊಂಡು ಬಂದಿದ್ದಾರೆ ಅದೇ ರೀತಿ ಸಾರ್ವಜನಿಕರಿಂದ ನೀವು ಮುನ್ನೂರು ಕೋಟಿ ಖಂಡಿತ ಕಲೆಕ್ಟ್ ಮಾಡುವುದಕ್ಕಾಗುವುದಿಲ್ಲ. ರೈಲ್ವೇ ಬಾಂಡ್ಸ್ ಫೈಲ್ಯೂರ್ ಆಗಿದೆ, ಕೊಂಕಣಿ ರೈಲ್ವೆ ಬಾಂಡ್ಸ್ ಫೈಲ್ಯೂರ್ ಆಗಿದೆ, ಇರ್ರಿಗೇಷನ್ ಬಾಂಡ್ ಯಾರು ತೆಗೆದುಕೊಳ್ಳುತ್ತಾರೆ, ನನಗೆ ಗೊತ್ತಿದ್ದಹಾಗೆ ನ್ಯೂ ಫೈನಾಸ್ಸಿಯಲ್? ಇನ್‌ಸ್ಟಿಟ್ಯೂಷನ್‌ನಿಂದ ಮುನ್ನೂರು ಕೋಟಿ ರೈಸ್ ಮಾಡಿಕೊಳ್ಳಬಹುದು. ಅದರ ಬಗ್ಗೆ ಇನ್ನೂ ಕ್ಲಾರಿಫಿಕೇಷನ್ ಅಗಿಲ್ಲ. ಅವತ್ತು ಸಹ ಅವರು ಹೇಳಿದರು ತಾವು ಹೇಳಿದಿರಿ ನಾನು ಇವತ್ತು ಹೇಳಿದೆ 467 ಕೋಟಿ ರೂಪಾಯಿ ನಾನು ಬುಕ್‌ನಲ್ಲಿ ನೋಡಿದೆ. 467 ಕೋಟಿ ರೂಪಾಯಿ ಕೃಷ್ಣಗೆ ಕೊಟ್ಟಿರತಕ್ಕಂಥದು. ಮುನ್ನೂರು ಕೋಟಿ ರೂಪಾಯಿ ಕೃಷ್ಣ ಜಲ ನಿಗಮದಿಂದ, 350 ಕೋಟಿ ರೂಪಾಯಿ ಕಾವೇರಿಗೆ ಕೊಟ್ಟಿರುವುದು 100 ಕೋಟಿ ಈಕ್ವಿಟಿ ಕೃಷ್ಣ ಜಲನಿಗಮಕ್ಕೆ ಕೊಟ್ಟಿರತಕ್ಕಂಥದ್ದು, ಅಲ್ಲಿಗೆ ಟೋಟಲ್ 1,227 ಕೋಟಿ ಆಯಿತು. A part from the Minor Irrigation project. ಅಲ್ಲಿಗೆ 467 ಕೋಟಿಯಲ್ಲಿ ಮುನ್ನೂರು ಕೋಟಿ ಏನು ಕೃಷ್ಣ ಜಲ ನಿಗಮಕ್ಕೆ ಅಂತ ಮಾಡಿದ್ದೀರಿ ಪಬ್ಲಿಕ್‌ನಿಂದ ಕಾಂಟ್ರಿಬ್ಯೂಷನ್ ಕಲೆಕ್ಷನ್ ಮಾಡುತ್ತೀರೋ ಇಲ್ಲ, ಫೈನಾನ್ಸ್ ಇನ್‌ಸ್ಟಿಟ್ಯೂಷನ್‌ನಿಂದ ಮಾಡುತ್ತೀರೋ ಎಂದು ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ನಾನು ತಿಳಿದುಕೊಂಡಿರುವುದು ಪಬ್ಲಿಕ್‌ನಿಂದ ಅಲ್ಲ ಎಂದು ಒಟ್ಟಾರೆ ಒಂದು ಮಾತು ಹೇಳುವುದಾದರೆ ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ನಮ್ಮ ನೀರಾವರಿಗೆ ಹೆಚ್ಚು ಗಮನವನ್ನು ಹರಿಸತಕ್ಕಂತಹ ಸಂದರ್ಭದಲ್ಲಿ ನಾನು ಮುಖ್ಯವಾಗಿ ನಮ್ಮ ಈ ರೈತರ ಮೇಲೆ ತಾವು ಏನು ಈ ಬಿಲ್ ತರಬೇಕೆಂದು ಮಾಡಿದ್ದೀರಿ, ಬೆಟರ್‌ಮೆಂಟ್ ಲೆವಿ ಹಾಕತಕ್ಕಂತಹ ವಿಚಾರ ಏನಿದೆ ಇದನ್ನು ನಮ್ಮ ರೈತ ಸಂಘದವರು ಯೋಚನೆ ಮಾಡಬೇಕು. ಏಕೆ ಯೋಚನೆ ಮಾಡಲೇಬೇಕು ಎಂದರೆ ನಾವು ಒಂದಿಷ್ಟು ಹಣ ಕೋಡದೇ ಹೋದರೆ ಮೇಂಟೆನೆನ್ಸ್ ಆಗಲೀ, ಹಿಂದೆ ಯಾವುದೇ ಕೆಲಸ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಬಂಗಾರಪ್ಪನವರು ಒಪ್ಪುತ್ತಾರೆಂದು ಕಾಣುತ್ತದೆ. ಯಾವುದೇ ರೈತ ಕಂದಾಯ ಕಟ್ಟಬೇಡಿ ಎಂದರೂ ಅವನು ಕಟ್ಟೇ ಕಟ್ಟುತ್ತಾನೆ. ಕಂದಾಯ ಏಕೆ ಕಟ್ಟುತ್ತಾನೆ ಅಂದರೆ, ನನ್ನ ಹಕ್ಕು ಎಂದು ಹೇಳುತ್ತಾನೆ. ನಮಗೆ ಎರಡು ಸಾವಿರ ವರ್ಷದ ಒಳಗಡೆ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮುಗಿಸಿ, 20,000 ಹೆಕ್ಟೇರ್‌ಗೆ ನೀರು ಕೊಡಬೇಕು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ನಾಗೇಗೌಡರು ಬೆಟರ್‌ಮಂಟ್ ಲೆವಿ ಎಂದು ಆದೆಲ್ಲಾ ಮಾತನಾಡಬೇಕು. ರೈತರ ಬಗ್ಗೆ ಮಾತನಾಡಬಾರದು ಎಂದು ನಾನು ಹೇಳಲಿಲ್ಲ. ರೈತರಿಗೆ ನೀವು ದುಡ್ಡು ಕೊಡುತ್ತೀರಿ, ಕಾಸ್ಟ್ ಆಫ್ ಕನ್‌ವರ್ಷನ್‌ನಲ್ಲಿ ಸೇರಿಸಿ ಬೆಲೆ ನಿಗದಿ ಮಾಡಿದಾಗ ನೀವು ಏನಾದರೂ

ಮಾತನಾಡುವುದಕ್ಕೆ ಹಕ್ಕು ಇದೆ. ನನ್ನನ್ನು ಹರಾಜು ಹಾಕಿ ಬಿಟ್ಟು ದುಡ್ಡು ಕೊಡಿ ಅಂದರೆ ಎಲ್ಲಿಂದ ತಂದು ಕೊಡುವುದು ? ತಾವು ರೈತರ ಮಕ್ಕಳಾಗಿ ದಯವಿಟ್ಟು ಗಂಭೀರವಾಗಿ ಮಾತನಾಡಬೇಕು. ತಾವು ಯೋಜನೆ ಮಾಡಬೇಕು. ಕೊಡುವುದರಲ್ಲಿ ನಮ್ಮದು ಏನೂ ಅಭ್ಯಂತರವಿಲ್ಲ. ರೈತ ಸಂಘ ಎಂದು ಮೆನ್ಷನ್ ಮಾಡಿದ್ದರಿಂದ ನಾನು ಇಲ್ಲಿ ಮಾತನಾಡಬೇಕಾಗುತ್ತದೆ. ಈಗ ನಡೆಯುತ್ತಿರುವುದು ಏನು ವಾಟರ್ ಮೇಟೆನೆಸ್ಸ್ ವರ್ಕ್ ಮಾಡುತ್ತಿರುವುದು ಹೇಗೆ ಗೊತ್ತೇ ? ವಿಲೇಜ್ ಅಕೌಂಟೆಂಟ್‌ಗೆ ಬೆನಿಫಿಟ್ ಆಗುವ ಹಾಗೆ, ವರ್ಷಕ್ಕೆ ಇಷ್ಟು ಅಂತ ನಿಗದಿ ಮಾಡಿ ಎಲ್ಲಾ ಕುಳಿತು ಚರ್ಚೆ ಮಾಡಿ, ವರ್ಷಕ್ಕೆ ಇಷ್ಟು ಫಿಕ್ಸ್ ಮಾಡುತ್ತೇವೆ ಎಂದು ಇದ್ದರೂ ಏನೂ ಇಲ್ಲ. ಒಬ್ಬ ವಿಲೇಜ್ ಅಕೌಂಟೆಂಟ್ ಪಾಪ ಕಬ್ಬು ಇದ್ದರೆ ಭತ್ತ ಬರೆಯುತ್ತಾನೆ. ಅವನು ಒಂದು 50 ರೂಪಾಯಿ ಇಟ್ಟುಕೊಳ್ಳುತ್ತಾನೆ. ಇನ್ನೊಂದು 25 ರೂಪಾಯಿ ಸರ್ಕಾರಕ್ಕೆ ಮೋಸ ಮಾಡತಕ್ಕಂತಹ ಒಂದು ವ್ಯವಸ್ಥೆ ಆ ರೆವಿನ್ಯೂ ಇಲಾಖೆಯಲ್ಲಿ ಆಗತಕ್ಕಂತಹ ಅನ್ಯಾಯದ ಜೊತೆಗೆ ಇದೇ ನೀರಾವರಿ ಇಲಾಖೆ, ರೆವಿನ್ಯೂ ಇಲಾಖೆಯವರು ಇಬ್ಬರು ಸೇರಿ ಏನು ಪಹಣಿ ಬರೆಯಬೇಕು ಎಂದು ಅದನ್ನು ಬರೆಯುತ್ತಿದ್ದಾರೆ. ನಾವು ಎಲ್ಲಾ ವ್ಯವಸ್ಥೆಯನ್ನು ಹಾಳು ಮಾಡಿಕೊಂಡು ಸರ್ಕಾರಕ್ಕೆ ಆದಾಯ ಬರಲಿಲ್ಲ ಎಂದರೆ ಏನು ಪ್ರಯೋಜನ ? ದಯವಿಟ್ಟು ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಅದು ನಾನು ಒಪ್ಪುತ್ತೇನೆ. ಇದರಲ್ಲಿ ಎರಡು ಮಾತಿಲ್ಲ. ತಾವು ಹೇಳತಕ್ಕಂಥದ್ದು ಯಾವುದು ಬೆಲೆ, ನಿಗದಿ ಮಾಡಬೇಕು ಎನ್ನತಕ್ಕಂತಹ ವಿಚಾರದಲ್ಲಿ ನಮಗೆ ಎರಡನೇ ಮಾತೇ ಇಲ್ಲ. ಅದರಲ್ಲಿ ಯಾರದೂ ಸಹ ಭಿನ್ನಾಭಿಪ್ರಾಯವಿಲ್ಲ. ಈಗಾಗಲೇ ಹೇಳಿದ ರೀತಿ ಸ್ಟೇಟ್ ಅಗ್ರಿಕಲ್ಚರ್ ಪಾಲೀಸಿ ಮಾಡುತ್ತಿದ್ದೇವೆ. ಸ್ಟೇಟ್ ಅಗ್ರಿಕಲ್ಚರ್ ಪಾಲೀಸಿ ಮಾಡುವುದರಲ್ಲಿ ಅಗ್ರಿಕಲ್ಚರ್ ಮಂತ್ರಿಗಳಿದ್ದಾರೆ, ಎಲ್ಲರೂ ಇದ್ದಾರೆ. ಅದರಲ್ಲಿಯೂ ಸಹ ಕೆಲವು ಬೆಳೆಗಳಿಗೆ ಸ್ಟೇಟ್ ಬೆಲೆಯನ್ನು ನಮ್ಮ ರಾಜ್ಯ ಸರ್ಕಾರವೇ ನಿಗಧಿ ಮಾಡತಕ್ಕಂತಹ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದರಲ್ಲಿ ಎರಡನೇ ಮಾತಿಲ್ಲ. ಯಾವುದೇ ಬೇಸಾಯ ಮಾಡತಕ್ಕ ರೈತನಾದವನು, 10 ಎಕರೆ ಜಮೀನು ಇರತಕ್ಕ ಇವತ್ತಿನ ದಿವಸ ಕೂಲಿಯವನಿಗಿಂತ ಕಡಿಮೆ ಇದ್ದಾನೆ. ಅನ್ನತಕ್ಕಂಥದ್ದರಲ್ಲಿ ಎರಡು ಮಾತಿಲ್ಲ ಇದು ನೀವು ಕಂಡಿರತಕ್ಕಂಥದ್ದು. ಆದರೆ ಒಂದು ಮಾತು ಏನಾಗಿದೆ ಎಂದರೆ ಜನ-ಸಾಮಾನ್ಯನಾಗಿ ಏನು ಬಂದಿದೆ ಅಂದರೆ ಕೋಟ್ಯಾಂತರ ರೂಪಾಯಿ ನೀರಾವರಿಗೆ ಖರ್ಚು ಮಾಡುತ್ತಿದ್ದೇವೆ ನಿಜ. ಇಲ್ಲ ಎಂದು ಹೇಳುವುದಿಲ್ಲ, ನೀರಾವರಿ ಇದು ದೇಶದ ಸಂಪತ್ತು ರೈತ ಈ ದೇಶದ ಸಂಪತ್ತು, ಅವನು ಬೆಳೆ ಬೆಳೆಯತಕ್ಕಂಥವನು ಅವನನ್ನು ವ್ಯಾಪಾರ ದೃಷ್ಟಿಯಲ್ಲಿ ನೋಡಿಕೊಳ್ಳತಕ್ಕಂಥದ್ದು ಅಲ್ಲ. ಆತ ಅನ್ನ ಕೊಡತಕ್ಕಂತಹವನು ಅವನು ಬೆವರು ಸುರಿಸತಕ್ಕವನು ಬಡವನಾಗಿರತಕ್ಕಂಥವನು ಅವನು ಬೆಳೆಯುವ ಬೆಳೆಗೆ ಸರಿಯಾದ ಬೆಲೆ ನಿಗಧಿ ಮಾಡಬೇಕು, ಬೆಲೆ ನಿಗದಿ ಮಾಡುವುದರಲ್ಲಿ ಸರಿಯಾದ ರೀತಿ ವಿಚಾರ ಮಾಡಿ ಮಾಡಬೇಕು. ಆದರೆ ಬೆಟರ್‌ಮೆಂಟ್‌ರ್ ಲೆವಿ ಕೊಡುವುದರ ಬಗ್ಗೆ ಅವರು ಮಂತ್ರಿಯಾಗಿದ್ದಾಗ ಕ್ರಾಪ್ ಪ್ಯಾಂಟ್ರರ್ನ್ ತೆಗೆದುಕೊಂಡು ಬರುತ್ತೇವೆ ಎಂದು

ಹೇಳಿದ್ದರು. ಕ್ರಾಪ್ ಪ್ಯಾಟರ್ನ್‌ಗೆ ಸಹ ಚೀಫ್ ಇಂಜಿನಿಯರ್ ಅಂಗಡಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದರು. ಕ್ರಾಪ್ ಪ್ಯಾಟ್ರನ್‌ನಲ್ಲಿ ನೀರನ್ನು ಯಾವ ರೀತಿ ಉಪಯೋಗಿಸಬೇಕೆಂದು ರೈತರಿಗೆ ತಿಳುವಳಿಕೆ ಮಾಡುವುದು ಬಹಳ ಪ್ರಾಮುಖ್ಯವಾದುದು.

ಈ ಕ್ರಾಪ್ ಪ್ಯಾಟರ್ನ್‌ಸಿಸ್ಟಂನ್ನು ತರದೇ ಹೊದರೇ ವಾಟರ್ ಮ್ಯಾನೇಜ್‌ಮೆಂಟ್ ಸಹ ಸರಿಯಾಗುವುದಿಲ್ಲ. ನಾನು ವಿಶೇಷವಾಗಿ ನಮ್ಮ ಪ್ರಾಜೆಕ್ಟ್‌ಗೆ ಮತ್ತು ಮಾಡ್ರನೈಷನ್‌ಗೆ ಹೆಚ್ಚು ಗಮನ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ರವೀಂದ್ರನಾಥ್ ಎಸ್.ಎ (ಮಾಯಿಕೊಂಡ) : ಮಾನ್ಯ ಅಧ್ಯಕ್ಷರೇ, ನನಗೆ ಮೊದಲನೆಯದಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದಿಸುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಭದ್ರಾ ಹೊಳೆ ಹರಿಯುತ್ತಿದೆ. ಅದಕ್ಕೆ ತರೀಕೆರೆ ತಾಲ್ಲೂಕಿನಲ್ಲಿ ಲಕ್ಕಹಳ್ಳಿ ಡ್ಯಾಂ ಕಟ್ಟಿದ್ದೇವೆ. ಕಟ್ಟಿರತಕ್ಕಂಥ ಡ್ಯಾಂನಿಂದ ಎರಡು ಲಕ್ಷದ 65 ಸಾವಿರ ಎಕರೆಗೆ ನೀರು ಹಾಯುತ್ತಿದೆ. ಆ ನೀರು ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗೆ ಹಾಯುತ್ತಿದೆ. ಅದಕ್ಕೆ ಎರಡು ಕಾಲುವೆಯಿದ್ದು ಅದರಲ್ಲಿ ಬಲದಂಡೆ ಕಾಲುವೆ 18.9.93 ರಲ್ಲಿ ಒಡೆದಿದ್ದು ಇವತ್ತಿನವರೆಗೆ ಸಹ ರೀಪೇರಿಯಾಗಿಲ್ಲ. ಒಂದು ಕಾಲುವೆಯಿಂದ ಮಾತ್ರ ಈಗ ಎರಡು ಲಕ್ಷದ 35 ಸಾವಿರ ಎಕರೆಗೆ ನೀರು ಹಾಯುತ್ತಿದೆ. ಮಾನ್ಯ ಬಂಗಾರಪ್ಪನವರು ಹಿಂದೆ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಕಾಲುವೆ ಒಡೆಯಿತು. ಆ ಸಂದರ್ಭದಲ್ಲಿ ಅವರು ಮನಸ್ಸು ಮಾಡಿದ್ದರೆ ಬಂಗಾರದ ಪೈಪನ್ನೇ ಹಾಕಿಸಬಹುದಾಗಿತ್ತು. ಅದು ಕೇವಲ 200 ಅಡಿ ಮಾತ್ರ ಒಡೆದಿರತಕ್ಕಂಥಾದ್ದು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ಆ ಕಾಲುವೆ ಒಡೆದಾಗ ಕೇವಲ 11 ದಿವಸಗಳಲ್ಲಿ ರಾತ್ರಿ ಹಗಲು ಕೆಲಸ ಮಾಡಿಸಿ ನಿಮಗೆಲ್ಲಾ ನೀರು ಕೊಟ್ಟಿರುವುದು ಜ್ಞಾಪಕ ಇದೆ. ಮತ್ತು ಬರೀ 58 ದಿವಸಗಳಲ್ಲಿ ಕೆಲಸ ಮಾಡಿ ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಿ ರೈತರಿಗೆ ತೊಂದರೆ ಆಗದ ರೀತಿಯಲ್ಲಿ ನೀರು ಕೊಟ್ಟಿರುವುದನ್ನು ತಾವು ಗಮನಕ್ಕೆ ತಂದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್ : ನಾನು ಹೇಳುತ್ತಿರುವುದು, ಅವರು ಮನಸ್ಸು ಮಾಡಿದ್ದರೆ ಆಗುತ್ತಿತ್ತು ಎಂದು. ಈಗಲೂ ಸಹ 3 ವರ್ಷದ ಮೇಲೆ ಏಳು ತಿಂಗಳೂ ಆದರೂ ಸಹ ಇಲ್ಲಿಯವರೆಗೆ ಅದರ ರೀಪೇರಿ ಕೆಲಸ ಜೋರಾಗಿ ನಡೆದಿಲ್ಲ. ಈಗ ನಮ್ಮ ಭಾಗದಲ್ಲಿ ಎರಡು ಲಕ್ಷ ಎಕರೆಯಲ್ಲಿ ಭತ್ತದೆ ಬೆಳೆ ಪೂರ್ತಿ ಬರುತ್ತಿಲ್ಲ. ತುಂಗಭದ್ರಾದಲ್ಲೂ ಸಹ ಈಗ ಸ್ಟಾಂಡಿಂಗ್ ವಾಟರ್ 33 ಟಿಎಂಸಿ ಇದೆ. ತೊಂದರೆ ಆಗತಕ್ಕಂಥ ಸಂದರ್ಭದಲ್ಲಿ ತುಂಗಭದ್ರಾದಿಂದ ನೀರು ಬಿಟ್ಟುಕೊಂಡು ಬಂದು, ಗದುಗ ಆಗಲಿ, ದಾವಣಗೆರೆ ಆಗಲಿ, ಹರಿಹರದಾಗಲಿ ಬೆಳೆಗೆ ತೊಂದರೆ ಆಗದೆ ಇರತಕ್ಕಂಥ ರೀತಿಯ ವ್ಯವಸ್ಥೆ ಇದೆ. ಮೂರುವರೆ ವರ್ಷದಿಂದಲೂ ಅಲ್ಲಿ ನೀರಿನ ಭವಣೆ

ತಪ್ಪಿಲ್ಲ. ಇದರಿಂದ ಪ್ರತಿ ವರ್ಷ ಬೇಸಿಗೆ ಬೆಳೆಗಳಿಗೆ ತೊಂದರೆ ಆಗುತ್ತಿದ್ದು ಸರ್ಕಾರಕ್ಕೆ ಬರತಕ್ಕಂಥ ನೂರಾರು ಕೋಟಿ ರೂಪಾಯಿ ಟ್ಯಾಕ್ಸ್ ಮತ್ತು ರೈತರಿಗೆ 500 ಕೋಟಿ ರೂಪಾಯಿ ನಷ್ಟ ಆಗುತಕ್ಕಂಥಾದ್ದು ನಡೆಯುತ್ತಿದೆ. ಅದನ್ನು ತ್ವರಿತವಾಗಿ ರಿಪೇರಿ ಮಾಡಬೇಕು. ನಾವು 12ನೇ ತಾರೀಖು ತುಂಗಭದ್ರಾಗೆ ನೀರು ಬಿಟ್ಟಂತಹ ಸಂದರ್ಭದಲ್ಲಿ ಹೋಗಿದ್ದೇವು. ಅಲ್ಲಿ ಸಿಮೆಂಟಿನ ಕೊರತೆಯಿಂದ ಇವತ್ತೋ ನಾಳೆ ಕೆಲಸ ನಿಲ್ಲಿಸತಕ್ಕಂಥ ಸಂದರ್ಭ ಇದೆ. ಅಲ್ಲಿಗೆ ಇನ್ನು 65 ಸಾವಿರ ಚೀಲ ಸಿಮೆಂಟ್‌ನ ಅವಶ್ಯಕತೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದಿಂದ ಕೊಡತಕ್ಕಂಥ 65 ಸಾವಿರ ಚೀಲ ಸಿಮೆಂಟ್‌ನ್ನು ಕೊಟ್ಟು, ಮುಂದಿನ ಬೇಸಿಗೆಗೆ ದರೂ ಸಹ ತುಂಗಭದ್ರಾ ಆಗಲಿ ಆದರ ಕೆಳಗೆ ಇರತಕ್ಕಂಥ ಆಂದ್ರಕ್ಕೆ ನೀರು ಬಿಡತಕ್ಕಂಥಾದ್ದು ಇರಲಿ, ಭದ್ರಾ ಅಚ್ಚುಕಟ್ಟಿನಲ್ಲಿ ಇರತಕ್ಕಂಥ ಎಲ್ಲಾ ಬೆಳೆಗಳನ್ನು ಉಳಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲಿ ಚಾನೆಲ್ ತೆಗೆದು ಡ್ಯಾಂ ಕಟ್ಟಿ 30 ವರ್ಷವಾದರೂ ಸಹ ಇವತ್ತಿನವರೆಗೂ ಸಹ ಮೇನ್ ಚಾನಲ್ 6 ರಿಂದ 8 ಅಡಿ ಸಿಲ್ಟ್ಅಪ್ ಆಗಿದೆ. ಇವತ್ತು ಸಹ ಸಿಲ್ಟ್ಅಪ್ ಆಗಿರತಕ್ಕಂಥಾದ್ದರಿಂದ ಕೊನೆ ಭಾಗಗಳಲ್ಲಿರುವ 20-25 ಸಾವಿರ ಎಕರೆಗೆ ನೀರು ಸಿಗುತ್ತಾ ಇಲ್ಲ. ದೇವರ-ಬೆಳಗೆರೆ ಪಿಕಪ್ ಎಂದು ನಮ್ಮ ಹರಿಹರ ಮತ್ತು ದಾವಣಗೆರೆ ಭಾಗದಲ್ಲಿ ಕಟ್ಟಿದ್ದಾರೆ. ಅದು ಕಟ್ಟಿದಂದಿನಿಂದ ಇವತ್ತಿನ ತನಕ ಒಂದು ಕಾಲುವೆಯಲ್ಲಿ ನೀರು ಹೋಗದ ಹಾಗೆ ಮಾಡಿದ್ದಾರೆ. ಅಲ್ಲಿ 14 ಸಾವಿರ ಎಕರೆಗೆ ನೀರು ಹಾಯತಕ್ಕಂಥದ್ದರ ಬಗ್ಗೆ ಗಮನ ಹರಿಸಿ. ಕೇವಲ ಲಕ್ಷಗಳನ್ನು ಖರ್ಚು ಮಾಡಿದರೆ ಅಲ್ಲಿ 14 ಸಾವಿರ ಎಕರೆಗೆ ನೀರು ಹಾಯುತ್ತದೆ. ನಮಗೆ ಗೊತ್ತಿದ್ದ ಹಾಗೆ ನೂರಾರು ಕೋಟಿ ರೂಪಾಯಿ ಖರ್ಚು ಮಾಡಿದರೂ ಸಹ 14, 15 ಸಾವಿರ ಎಕರೆಗೆ ನೀರಾವರಿಯಾಗುತ್ತಿಲ್ಲ. ಅಂಥದ್ದಾರಲ್ಲಿ ಕೆಲವೇ ಲಕ್ಷಗಳನ್ನು ಖರ್ಚು ಮಾಡಿದರೆ ನಮ್ಮಲ್ಲಿ ನೀರು ಹಾಯುತ್ತದೆ, ಇವತ್ತು ಭದ್ರಾ ಡ್ಯಾಂನಲ್ಲಿ ಪಿಕಪ್‌ಗಳನ್ನು ಸರಿಯಾದ ರೀತಿಯಲ್ಲಿ ಮಾಡಿ ನೀರು ವಿತರಣೆ ಮಾಡದರೆ ಒಂದು ಲಕ್ಷ ಎಕರೆಗೆ ನೀರಾವರಿ ಮಾಡಬಹುದು. ಭಾರತ ದೇಶದಲ್ಲಿ ತೀರ ಕಡಿಮೆ ಹಣದಲ್ಲಿ ಮಾಡಿರತಕ್ಕಂಥ ಮೊದಲನೆಯದು ಡ್ಯಾಂ ಇದು ಎಂದರೆ ತಪ್ಪಾಗಲಾರದು. 38 ಕೋಟಿ ರೂಪಾಯಿಗಳ ಡ್ಯಾಂ ಕಟ್ಟಿ ಒಂದು ಸಾವಿರ ಎಕರೆಗೆ ನೀರಾವರಿ ಆಗುವಂತೆ ಮಾಡಿದ್ದಾರೆ. ಅಷ್ಟು ಅನುಕೂಲವಾಗಿರತಕ್ಕಂಥ ಈ ಡ್ಯಾಂನ್ನು ಇನ್ನು ಮುಂದಕ್ಕೆ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದರ ಜೊತೆಗೆ ಅಪ್ಪರ್ ತುಂಗಾ ಹಿಂದೆ 1992ನೇ ಇಸವಿಯಲ್ಲಿ ಶಿವಮೊಗ್ಗದಲ್ಲಿ ತರಾತುರಿಯಲ್ಲಿ ಹಿಂದಿನ ಮುಖ್ಯಮಂತ್ರಿಗಳು ಕಲ್ಲು ಹಾಕಿದರು, ಅದಕ್ಕೆ ಎರಡು ಕೋಟಿ ರೂಪಾಯಿ ಬಿಡುಗಡೆಯಾಗಿ ಹಾಗೆ ಉಳಿದಿದೆ. ಅದಕ್ಕೆ 400 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ. ಪ್ರತಿ ವರ್ಷ ಎರಡೆರಡು ಕೋಟಿ ರೂಪಾಯಿ ಕೊಟ್ಟರೆ ಇದಕ್ಕೆ 200 ವರ್ಷ ಬೇಕಾಗುತ್ತದೆ. ಆ ರೀತಿ ಮಾಡದೇ ಆದಷ್ಟು ಶೀಘ್ರವಾಗಿ ಇದನ್ನು ಮಾಡಿದರೆ ಆ ಭಾಗದ ರೈತರಿಗೆ ಎರಡು ಲಕ್ಷದ 65 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಅಲ್ಲಿ ಬರಗಾಲ ಬರುತ್ತಿದೆ. ಧಾರವಾಡ ಜಿಲ್ಲೆಯಲ್ಲಿ ರಾಣಿಬೆನ್ನೂರು, ಸವಣೂರು, ಹಾವೇರಿ, ಬ್ಯಾಡಗಿ ಈ ಭಾಗದಲ್ಲಿ ಸಾಕಷ್ಟು ನೀರಾವರಿ ಮಾಡತಕ್ಕಂಥ ಅನುಕೂಲ ಇದೆ. ಬರಗಾಲಕ್ಕೆ

ಖರ್ಚು ಮಾಡುವಂತಹ ಹಣವನ್ನು ಖರ್ಚು ಮಾಡಿದರೆ ಎಲ್ಲಾ ಭಾಗದಲ್ಲೂ ನೀರಾವರಿ ಯಾಗುತ್ತದೆ. ಅಪ್ಪರ್ ತುಂಗಾ ಯೋಜನೆಯನ್ನು ತ್ವರಿತ ಗತಿಯಲ್ಲಿ ಮಾಡಬೇಕು. ಅದರ ಜೊತೆಗೆ ತುಂಗಭದ್ರಾ ಡ್ಯಾಂನ ಹಿಂದುಗಡೆ ಲಕ್ಷಗಟ್ಟಲೆ ಎಕರೆ ಚೌಳಾಗಿದೆ. ಅಲ್ಲಿ ಅದು ಉಪಯೋಗಕ್ಕೆ ಬರದ ಹಾಗೆ ಹಾಪು ಬೆಳೆದು ರೈತಾಪಿ ಕೆಲಸಕ್ಕೆ ಬಾರದೆ ಇರುವ ಜಮೀನು ಇದೆ. ಅದನ್ನೂ ಸಹ ಸರ್ಕಾರ ಗಮನಹರಿಸಿ ಸರಿ ಮಾಡಬೇಕು. ಹಾಗೂ ಭದ್ರಾ ಮತ್ತು ತಂಗಭದ್ರಾ ಅಚ್ಚುಕಟ್ಟಿನಲ್ಲಿ, ಕೃಷ್ಣಾ ಬೇಸಿನ್‌ಲ್ಲಿ ಒಳ್ಳೆಯ ರೀತಿಯಲ್ಲಿ ಯೋಜನೆಗಳನ್ನು ಮಾಡಿದರೆ ಅಲ್ಲಿ ಒಳ್ಳೆಯ ನೀರಾವರಿ ಮಾಡಬಹುದು. ಇದಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಹೇಳುತ್ತಾ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಜಿ.ವಿ.ಶ್ರೀರಾಂರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ ನಾನೇನು ಇಲ್ಲಿ ಅಂಕಿ ಅಂಶಗಳನ್ನು ಹೇಳುವುದಿಲ್ಲ. ಸನ್ಮಾನ್ಯ ನಾಗೇಗೌಡರು ಮಾತನಾಡುತ್ತಾ ಇಲ್ಲಿ ಎರಡು ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದುವರೆಗೂ ಅಧಿಕಾರ ನಡೆಸಿಕೊಂಡು ಬಂದಂತಹ ಎಲ್ಲಾ ಸರ್ಕಾರಗಳು ಕೂಡ ನೀರಾವರಿ ಯೋಜನೆಗಳ ಬಗ್ಗೆ ಉದಾಸೀನ ಮನೋಭಾವ ತಾಳಿದ್ದಾರೆ ಎನ್ನುವ ವಿಚಾರವನ್ನು ಖಂಡಿತವಾಗಿ ಒಪ್ಪಬೇಕಾದಂತಹ ವಿಷಯ. ಆದರೆ ಇನ್ನೊಂದು ವಿಷಯವನ್ನು ಅವರು ಹೇಳಿದರು. ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ರಾಜಕೀಯ ಇಲ್ಲದೆ ನೀರಾವರಿ ವಿಷಯವನ್ನು ಮಾತಾನಾಡತಕ್ಕಂಥಾದ್ದು ಎನ್ನುವ ಅಂಶವನ್ನು ಖಂಡಿತ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇವತ್ತು ಇಡೀ ದೇಶದ ಜಲ ನೀತಿ ಏನಿದೆ ಆ ಜಲನೀತಿ ಬಗ್ಗೆ ತೀರ್ಮಾನ ಆಗಬೇಕು ಎನ್ನತಕ್ಕಂಥಾದ್ದು ಕೇಂದ್ರ ಸರ್ಕಾರದ ಧೋರಣೆ. ಹಾಗೆಯೇ ಒಂದು ರಾಜ್ಯದ ನೀರಾವರಿ ಜಲ ನೀತಿ ತೀರ್ಮಾನ ಎನ್ನತಕ್ಕಂಥಾದ್ದು ಕೂಡ ಆ ರಾಜ್ಯದಲ್ಲಿ ಯಾವ ಸರ್ಕಾರ ಅಧಿಕಾರ ನಡೆಸುತ್ತಿದೆ ಆ ಸರ್ಕಾರದ ತಾನು ಅನುಸರಿಸುತ್ತಿರತಕ್ಕಂಥ ಕೃಷಿ ನೀತಿಯ ಹಿನ್ನೆಲೆಯಲ್ಲಿ ನೀರಾವರಿ ಕೂಡ ಬಿದ್ದಿರುತ್ತದೆ. ಆದುದರಿಂದ ರಾಜಕೀಯ ಧೋರಣೆಯನ್ನು ಬಿಟ್ಟು ದೇಶದ ಮತ್ತು ರಾಜ್ಯದ ನೀರಾವರಿ ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥಾದ್ದು ಆಗಲಿ ಯೋಜನೆಗಳನ್ನು ರೂಪಿಸಿತಕ್ಕಂಥಾದ್ದು ಆಗಲಿ ಖಂಡಿತ ಸಾಧ್ಯವಿಲ್ಲ. ಆ ದೃಷ್ಟಿಯಲ್ಲಿ ನಾವು ಇಡೀ ದೇಶದ ನೀರಾವರಿ ಪರಿಸ್ಥಿತಿಯನ್ನು ಅವಲೋಕನ ಮಾಡಿದರೆ ನಮ್ಮ ದೇಶದಲ್ಲಿ ಒಟ್ಟು ನೀರಾವರಿಯನ್ನು ಬಳಸುವಂತಹ ಎಷ್ಟು ಶಕ್ತಿ ಇದೆ ಎಷ್ಟು ಅವಕಾಶಗಳು ಇದೆಯೋ ಅದರಲ್ಲಿ ನಾವು ಬಳಸುತ್ತಿರಕ್ಕಂಥಾದ್ದು ಕೇವಲ 24 ಪರ್ಸೆಂಟ್ ಮಾತ್ರ. ಆ 24 ಪರ್ಸೆಂಟ್‌ನಲ್ಲೂ ಕೂಡ ನೂರರಲ್ಲಿ 80 ಭಾಗ ಕೇವಲ ನಮ್ಮ ದೇಶದಲ್ಲಿ ಇರತಕ್ಕಂಥ ಮೂರು ರಾಜ್ಯಗಳು ಎಂದರೆ ಹರಿಯಾಣ, ಪಂಜಾಬ್ ಮತ್ತು ರಾಜಸ್ಥಾನ ರಾಜ್ಯಗಳಷ್ಟೇ ಉಪಯೋಗ ಮಾಡುತ್ತಿವೆ. ಉಳಿದ 20 ಭಾಗ ಇಡೀ ದೇಶದಲ್ಲಿ ಇರತಕ್ಕಂಥ ಬೇರೆ ರಾಜ್ಯಗಳು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ನೋಡಬೇಕು. ಇಲ್ಲಿ ರಾಜಕೀಯ ಇಲ್ಲವೆ ಎಂದು ಹೇಳತಕ್ಕಂಥ ಪರಿಸ್ಥಿತಿ. ಎಲ್ಲಿ ರಾಜಕೀಯ ಇದೆ ಎಂದು ಹೇಳಿದ್ದಾರೆ. ಇಡೀ ದೇಶ ಅಧಿಕಾರ ಸೂತ್ರವನ್ನು ಹಿಡಿದಿರತಕ್ಕಂಥ ಜನ ಯಾವ ಕಡೆಗೆ ಗಮನ ಹರಿಸಿದ್ದಾರೆ. ಕೈಗಾರೀಕರಣಕ್ಕೆ ಗಮನ

ಹರಿಸಿದ್ದಾರೋ ಅಥವಾ ಕೃಷಿ ಅಭಿವೃದ್ಧಿಯ ಬಗ್ಗೆ, ಕೃಷಿ ಧೋರಣೆ ಬಗ್ಗೆ ಗಮನ ಹರಿಸಿದ್ದಾರೋ ಎನ್ನುವುದನ್ನು ನೋಡಿದಾಗ ಸ್ವಾತಂತ್ರ್ಯದ ನಂತರವೂ ಕೂಡ ನಮ್ಮ ದೇಶದಲ್ಲಿ ಸರ್ಕಾರ ನಡೆಸಿದಂತಹ ರಾಜಕೀಯ ಪಕ್ಷಗಳು ಎಲ್ಲವೂ ಕೂಡ ಕೈಗಾರೀಕರಣಕ್ಕೆ ಹೆಚ್ಚಿನ ಮಹತ್ವನ್ನು ಕೊಟ್ಟು ಇಡೀ ದೇಶದ ಸಂಪತ್ತಿನಲ್ಲಿ ಶೇಕಡ 70 ಭಾಗವನ್ನು ಕೈಗಾರಿಕಾ ರಂಗಕ್ಕೆ ಉಪಯೋಗಿಸಿ ಕೃಷಿ ರಂಗವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರತಕ್ಕಂಥ ಪರಿಣಾಮವಾಗಿ ಇವತ್ತು ನಮ್ಮ ದೇಶದಲ್ಲಿ ನೀರಾವರಿ ಸಮಸ್ಯೆ ಇಷ್ಟು ಬಿಕ್ಕಟ್ಟಿಗೆ ಸಿಕ್ಕಿದೆ. ಈಗ ನಮ್ಮ ರಾಜ್ಯದ ಪರಿಸ್ಥಿತಿಗೆ ಬರುವಾಗ ನೀರಾವರಿ ಸಮಸ್ಯೆ, ಈ ಟ್ರಿಬ್ಯುನಲ್‌ಗಳು, ನದಿ ನೀರಿನ ವಿವಾದ ಇವೆಲ್ಲಾ ಪ್ರಾರಂಭವಾಗದ್ದು ಹೇಗೆ? ಮೊಟ್ಟಮೊದಲನೆಯದಾಗಿ 1892ನೇ ಇಸವಿಯಲ್ಲಿ ಈ ಸಮಸ್ಯೆ ಪ್ರಾರಂಭವಾಯಿತು. ಆಗ ನಮ್ಮ ದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿ ಅಧಿಕಾರದಲ್ಲಿ ಇದ್ದಾಗ ಇಡೀ ದಕ್ಷಿಣ ಭಾರತವನ್ನು ಮದ್ರಾಸ್ ಪ್ರಾಂತ್ಯ ಎಂದು ಕರೆಯುತ್ತಿದ್ದರು. ಈ ದಕ್ಷಿಣ ಭಾರತ ಆಡಳಿತ ಕೇಂದ್ರಿಕೃತವಾಗಿದ್ದು ಮದ್ರಾಸ್‌ನಲ್ಲಿ ಈಗಲೂ ಉತ್ತರ ಭಾರತಕ್ಕೆ ನಮ್ಮ ದಕ್ಷಿಣ ಭಾರತದವರು ಯಾರಾದರೂ ಹೋದರೆ ಮದ್ರಾಸ್‌ವಾಲಾ ಎಂದು ನಮ್ಮನ್ನು ಹೇಳುತ್ತಾರೆ. ಕರ್ನಾಟಕದವರು ಎಂದು ಯಾರೂ ಹೇಳುವುದಿಲ್ಲ. ಕೇರಳದವರು ಎಂದು ಹೇಳುವುದಿಲ್ಲ. ಆಂಧ್ರದವರು ಎಂದು ಹೇಳುವುದಿಲ್ಲ.

5.50 ಪಿ ಎಂ

ಕೇರಳದವರು ಎಂದು ಹೇಳುವುದಿಲ್ಲ. ಉತ್ತರಭಾರತದ ಜನರಿಗೆ ನಾವು ಈಗಲೂ ಮದ್ರಾಸಿನವರೆ ಆಗಿದ್ದೇವೆ. ಆ ದೃಷ್ಟಿಯಿಂದ ಮದ್ರಾಸಿನಲ್ಲಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಂತಹ ಜನ ಮೈಸೂರು ಬಗ್ಗೆ ಒಂದು ರೀತಿಯ ಸಾಮಂತರ ರೀತಿಯಲ್ಲಿ ವರ್ತನೆ ಮಾಡುತ್ತಿದ್ದರು. 1892ನೇ ಇಸವಿಯಲ್ಲಿ ಮದ್ರಾಸ್ ರಾಜ್ಯದಲ್ಲಿದ್ದಂತಹ ಬ್ರಿಟಿಷರ ಸರ್ಕಾರ ಮತ್ತು ಮೈಸೂರಿನಲ್ಲಿದ್ದಂತಹ ರಾಜರ ಸರ್ಕಾರದಲ್ಲಿ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಪ್ರತ್ಯೇಕವಾದಂತಹ ಒಪ್ಪಂದವಾದ ಮೇಲೆ ಕಾವೇರಿ ಅಣೆಕಟ್ಟನ್ನು ಕಟ್ಟುವಂತಹ ಪ್ರಸ್ತಾಪ ಬಂದಾಗ ತಮಿಳುನಾಡಿನ ಸರ್ಕಾರವೆಂದರೆ ಅವತ್ತಿನ ತಮಿಳುನಾಡಿನ ಸರ್ಕಾರ ಅದಕ್ಕೆ ತೀವ್ರವಾಗಿ ವಿರೋಧವನ್ನು ವ್ಯಕ್ತಪಡಿಸಿತು. ಕೊನೆಗೆ ಹೆಚ್.ಟಿ. ಕೃಷ್ಣನ್‌ರವರ ಮಧ್ಯಸ್ತಿಕೆಯಲ್ಲಿ ಕನ್ನಂಬಾಡಿ ಕಟ್ಟೆಯನ್ನು ಕಟ್ಟುವುದಕ್ಕೆ ಅನುಮತಿ ದೊರೆಯುತ್ತದೆ ಅಂತಹ ಸಂದರ್ಭದಲ್ಲಿ ನಮ್ಮ ದೇಶದ ಪ್ರಖ್ಯಾತ ಇಂಜಿನಿಯರ್ ಆದ ಮತ್ತು ಕನ್ನಂಬಾಡಿ ಕಟ್ಟೆಯ ರುವಾರಿಯೂ ಆದಂತಹ ಡಾ.ವಿಶ್ವೇಶ್ವರಯ್ಯನವರು ಒಂದು ಹೇಳಿಕೆಯನ್ನು ಸಮಿತಿ ಮುಂದೆ ಕೊಡುತ್ತಾರೆ. ಬಹುಶಃ ನಾವೆಲ್ಲರೂ ನೋಡಬೇಕಾದ ಪ್ರಸ್ತಾಪ ಈ ರೀತಿ ಇದೆ. ಕಾವೇರಿ ನದಿಯಲ್ಲಿ ಹರಿಯುವ ನೀರಿನ ಮುಕ್ಕಾಲು ಭಾಗದಷ್ಟು ನೀರು ಮೈಸೂರಿನ ಸರಹದ್ದಿನಲ್ಲೇ ಹರಿಯುತ್ತದೆ. ಆದರೆ, ಆ ನೀರಿನ ಪ್ರಯೋಜನ ಮೈಸೂರಿನ ಜನರಿಗೆ ಆಗುತ್ತಿಲ್ಲ. ಅದರ ಪೂರ್ಣ ಪ್ರಯೋಜನ ಆಗುತ್ತಿರುವುದು ಮದ್ರಾಸಿನ ಜನರಿಗೆ. ಕನ್ನಂಬಾಡಿ ಕಟ್ಟೆಯಲ್ಲಿ ಸಂಗ್ರಹ ಮಾಡಬೇಕಾಗಿದ್ದ ನೀರನ ಪ್ರಮಾಣದ 2ರಷ್ಟನ್ನು

ಮೆಟ್ಟೂರ್ ಅಣೆಕಟ್ಟಿನಲ್ಲಿ ಸಂಗ್ರಹಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ ಅಣೆಕಟ್ಟುಗಳಿಂದ ಮೈಸೂರು ರಾಜ್ಯದಲ್ಲಿ ಈಗಿರುವುದಕ್ಕಿಂತ ಒಂದು ಲಕ್ಷ ಐವತ್ತು ಸಾವಿರ ಎಕರೆಗಳು ಮತ್ತು ಮದ್ರಾಸ್ ರಾಜ್ಯದಲ್ಲಿ ಮೂರು ಲಕ್ಷದ 20 ಸಾವಿರ ಎಕರೆ ಹೆಚ್ಚುವರಿ ಸಾಗುವಳಿಯಾಗುವ ಅವಕಾಶ ಇದೆ. ಹೀಗಿದ್ದರೂ ಮದ್ರಾಸ್ ರಾಜ್ಯದ ತಕರಾರು ತಪ್ಪಿಲ್ಲ. ಕಾವೇರಿ ನದಿ ನೀರನ್ನು ಉಪಯೋಗಿಸುವ ಹಕ್ಕು ನಮಗಿದೆ. ಆದರೆ ನಾವು ಕಾವೇರಿ ನದಿ ನೀರನ್ನು ಪೂರ್ಣವಾಗಿ ಉಪಯೋಗಿಸುತ್ತಿಲ್ಲ. ನಾವು ಲೆಕ್ಕಚಾರ ಹಾಕಿ ನಮ್ಮ ಪಾಲಿನ ನೀರನ್ನು ಉಪಯೋಗಿಸಲು ನಿರ್ಣಯಿಸಿದ್ದೇವೆ. ಈ ಹಕ್ಕನ್ನು ಯಾರೂ ಪ್ರಶ್ನೆ ಮಾಡುವ ಹಾಗೆಯೇ ಇಲ್ಲ. ಇದು 1914ರಲ್ಲಿ ಡಾ. ವಿಶ್ವೇಶ್ವರಯ್ಯನವರು ಕೊಟ್ಟಂತಹ ಹೇಳಿಕೆಯಾಗಿದೆ. ಮಾನ್ಯ ನಂಜೇಗೌಡರು ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಕಾವೇರಿ ಟ್ರಿಬ್ಯೂನಲ್ ಬಗ್ಗೆಅದರ ವ್ಯಾಪ್ತಿಯ ಬಗ್ಗೆ, ಅಧಿಕಾರದ ಬಗ್ಗೆ ನಾವು ಒಂದು ಸ್ಪಷ್ಟ ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ನದಿ ನೀರಿನ ವಿವಾದಗಳು ರಾಜ್ಯ ರಾಜ್ಯಗಳ ನಡುವೆ ಬರತಕ್ಕಂಥಹ ಸಮಸ್ಯೆಗಳನ್ನು ನಾವು ಚರ್ಚೆ ಮಾಡುವಾಗ, ಆಲೋಚನೆ ಮಾಡುವಾಗ, ದೇಶದ ದೃಷ್ಟಿಯಿಂದ ಆಲೋಚನೆ ಮಾಡಬೇಕಾಗುತ್ತದೆ. ಒಂದು ರಾಜ್ಯ ಇನ್ನೊಂದು ರಾಜ್ಯದೊಂದಿಗೆ ವೈಷಮ್ಯ ಬೆಳಸುವಂತಹ ಅಂಶಗಳು ಏನಾದರೂ ಇದ್ದರೆ ನಾವು ಅದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಮಾತುಕತೆಗಳ ಮುಖಾಂತರವಾಗಿ ಪರಿಹಾರ ಮಾಡುವುದಕ್ಕೆ ಆದಷ್ಟು ಹೆಚ್ಚಿನ ಪ್ರಯತ್ನವನ್ನು ಮಾಡಬೇಕು. ಇವತ್ತು ಟ್ರಿಬ್ಯೂನಲ್ ಅನ್ನು ಬಹಿಷ್ಕಾರ ಮಾಡುವುದರಿಂದ ನಮಗೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಆದರೆ ಅದು ಇರುವುದರಿಂದ ಎಷ್ಟು ಪ್ರಯೋಜನವಾಗುತ್ತದೆ ಎಂಬ ವಿಷಯವನ್ನು ತೆಗೆದುಕೊಂಡರೆ ಅದು ಇರುವಾಗ ಎಷ್ಟು ಪ್ರಯೋಜನವಾಗುತ್ತದೆ, ಇಲ್ಲದೆ ಇದ್ದಾಗ ಎಷ್ಟು ಅಪಾಯವಾಗುತ್ತದೆ ಎಂಬ ಅಭಿಪ್ರಾಯವಿದೆ. ಆದುದರಿಂದ ಟ್ರಿಬ್ಯೂನಲ್ ಅನ್ನು ಬಹಿಷ್ಕಾರ ಮಾಡುವುದು ಸರಿಯಲ್ಲ. ಇವತ್ತು ಸಹ ನೀರಿನ ವಿವಾದ ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ಮಧ್ಯೆ ಬಂದಾಗ ಅದನ್ನು ಪರಿಹಾರ ಮಾಡುವುದಕ್ಕೆ ಒಂದು ವೈಜ್ಞಾನಿಕವಾದ ಚಿಂತನೆ ಇದೆಯೇ, ಪರಿಹಾರ ಮಾರ್ಗವಿದೆಯೇ? ಅದಕ್ಕೆ ಸ್ವತಃ ನಮ್ಮ ದೇಶ ರಾಜ್ಯಗಳು ರೂಪಿಸಿಕೊಂಡಿದೆಯೋ? ಎಂದರೆ ಅದು ಇದುವರೆಗೂ ವಿಫಲವಾಗಿದೆ. ನಾವು ರಾಷ್ಟ್ರಮಟ್ಟದಲ್ಲಿ, ರಾಜ್ಯ ಮಟ್ಟದಲ್ಲೂ ವಿಫಲರಾಗಿದ್ದೇವೆ. ಆದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಇದೇ ಸಮಸ್ಯೆ ಉದ್ಭವಿಸಬಾರದು. ಇದಕ್ಕೆ ನಿಖರವಾದಂತಹ ವೈಜ್ಞಾನಿಕವಾದಂತಹ ಒಂದು ವಿಶ್ಲೇಷಣೆ ಅಗತ್ಯವಿದೆ. ಇದನ್ನು ಸಂಪೂರ್ಣವಾಗಿ ಒಪ್ಪಬೇಕೆಂದು ಹೇಳುತ್ತಿಲ್ಲ. ಆದರೆ ಒಂದು ವಿಶ್ಲೇಷಣೆಯನ್ನು ಕಾಣಬಹುದು. 1942ನೇ ಇಸವಿಯಲ್ಲಿ Indus Commission ರಾಜ್ಯಗಳ ಮಧ್ಯೆ ನದಿ ನೀರಿನ ಹಕ್ಕುಗಳ ವಿಚಾರವಾದ ಬಗ್ಗೆ ಒಡಂಬಡಿಕೆ ಸಾಧ್ಯವಾಗದಿದ್ದಲ್ಲಿ ನಿಷ್ಪಕ್ಷಪಾತವಾದ ರೀತಿಯಲ್ಲಿ ಹಂಚಿಕೆಯ ತತ್ವದ ಆಧಾರದ ಮೇಲೆ ಪ್ರತಿಯೊಂದು ರಾಜ್ಯಗಳ ಪಾಲು ನಿರ್ಧರಿಸತಕ್ಕದ್ದು ಎಂದು ಹೇಳುವಂತಹ ಸಂದರ್ಭದಲ್ಲಿ 1966ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ತೀರ್ಮಾನದ ಬೇರೆ ಬೇರೆ ರಾಜ್ಯಗಳ ಸಮ್ಮೇಳನದಲ್ಲಿ ಆದಂತಹ ಒಂದು ತೀರ್ಮಾನದಲ್ಲಿ ಈ ಒಂದು ಅಭಿಪ್ರಾಯಕ್ಕೆ

ಬಂದಿದೆ. ನದಿ ಕಣಿವೆಯ ವಿಸ್ತಾರ ನದಿ ಪಾತ್ರಕ್ಕೆ ನದಿ ನೀರಿನ ಕೊಡುಗೆ ಅದರ ವ್ಯವಸಾಯಕ್ಕೆ ಯೋಗ್ಯವಾದ ಅಚ್ಚುಕಟ್ಟು ಪ್ರದೇಶ, ಜನಸಾಂದ್ರತೆ ಮತ್ತು ಬರಗಾಲಕ್ಕೆ ಈಡಾಗುವ ವಿಸ್ತೀರ್ಣ ಇವುಗಳನ್ನು ಆಧಾರವಾಗಿಟ್ಟುಕೊಂಡು ನೀರಿನ ಹಂಚಿಕೆಯಾಗ ಬೇಕಾಗುತ್ತದೆ. ಇದಕ್ಕೆ ವೈಜ್ಞಾನಿಕವಾದ ಮಾರ್ಗ ಹೆಚ್ಚು ನ್ಯಾಯವಾದ ಮಾರ್ಗವಾಗಿದೆ. ಈ ಹಿನ್ನೆಲೆಯಲ್ಲಿ ನಾವೇನಾದರೂ ನೀರಿನ ಸಮಸ್ಯೆ ಮತ್ತು ನದಿಯ ವಿವಾದ , ರಾಜ್ಯ ರಾಜ್ಯಗಳ ನಡುವೆ ಇರುವಂತಹ ವಿವಾದಗಳ ಪರಿಹಾರ ಮಾಡುವುದಕ್ಕೆ ಈ ಅಂಶಗಳನ್ನು ನಾವು ಏನಾದರೂ ಉಪಯೋಗಿಸಿದ್ದೇವೆಯೋ? ಖಂಡಿತವಾಗಿಯೂ ಇಲ್ಲ. ಕಾವೇರಿ ನದಿಯ ನೀರು ಕರ್ನಾಟಕದಲ್ಲಿ ಎಷ್ಟು ಹರಿಯುತ್ತದೆ. ತಮಿಳುನಾಡಿನಲ್ಲಿ ಎಷ್ಟು ಹರಿಯುತ್ತದೆ. ನಮಗೆ ಎಷ್ಟು ಬರಬೇಕು ಎಂಬುದನ್ನು ವೈಜ್ಞಾನಿಕವಾಗಿ ನಿಖರವಾಗಿ ನಾವು ಅಂದಾಜು ಹಾಕುವುದಕ್ಕೆ ಇವತ್ತಿಗೂ ಸಾಧ್ಯವಾಗಿಲ್ಲ. ಕಾವೇರಿನದಿಯ ಪ್ರಶ್ನೆ ಬಂದಾಗ ಕಾವೇರಿ ನದಿಗೆ ಅಣೆಕಟ್ಟು ಕಟ್ಟುವಂತಹ ಸಂದರ್ಭದಲ್ಲಿ ನೀರು ತುಂಬುವ ಕೆಪಾಸಿಟಿ ಎಷ್ಟಿತ್ತು. ಅದು ಈಗ ಕಡಿಮೆಯಾಗಿದೆ. ನೀರು ಶೇಖರಣೆಯಾಗುವುದೂ ಸಹ ಕಡಿಮೆಯಾಗಿದೆ. ಇವೆಲ್ಲವನ್ನೂ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುವಂತಹ ವಿಧಾನ ನಮ್ಮಲ್ಲಿ ಇವತ್ತಿಗೂ ಇಲ್ಲ. ಹಾಗಾಗಿ ಎಲ್ಲಾ ನದಿ ನೀರಿನ ವಿವಾದಗಳು ಇವತ್ತು ಕಗ್ಗಂಟಾಗಿ ಉಳಿದಿದೆ. ಹಲವಾರು ಸಂದರ್ಭಗಳಲ್ಲಿ ಒಂದು ರಾಜ್ಯದ ವಿರುದ್ಧ ಇನ್ನೊಂದು ರಾಜ್ಯವನ್ನು ಎತ್ತಿಕಟ್ಟುವಂತಹ ಸಂದರ್ಭವನ್ನು ನಾವು ನೋಡುತ್ತಿದ್ದೇವೆ. ಇದನ್ನು ತಪ್ಪಿಸಬೇಕಾದರೆ ವೈಜ್ಞಾನಿಕವಾದ ವಿಶ್ಲೇಷಣೆ ಅಗತ್ಯವಾಗಿದೆ. ನೀರಾವರಿಯ ಬಗ್ಗೆ ಚರ್ಚೆ ಮಾಡುವಂತಹ ಅಂಶ ಬಂದರೆ ನಾವೆಲ್ಲರೂ ದೊಡ್ಡ ನೀರಾವರಿಯ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತೇವೆ ಮತ್ತು ಹೆಚ್ಚು ಸಮಯವನ್ನು ಇದಕ್ಕೆ ಕೊಡುತ್ತೇವೆ. ನಮ್ಮ ಜಿಲ್ಲೆಯ ಉದಾಹರಣೆಯನ್ನು ಹೇಳುವಾಗ ನಮ್ಮ ಜಿಲ್ಲೆಯಲ್ಲಿ ಯಾವುದೇ ನದಿಗಳು ಇಲ್ಲ. ಅಲ್ಲಿ ಕೆರೆಗಳು ಇವೆ. ಅದೇ ರೀತಿಯಲ್ಲಿ ಹಲವಾರು ಜಿಲ್ಲೆಗಳು ಇವೆ. ಸಣ್ಣ ನೀರಾವರಿಗೆ ಪ್ರಾಶಸ್ತ್ಯವನ್ನು ಕೊಡದಿದ್ದರೆ ನಮಗೆ ಕಷ್ಟವಾಗುತ್ತದೆ. ಸಣ್ಣ ನೀರಾವರಿಗೆ ಪ್ರಾಶಸ್ತ್ಯವನ್ನು ಕೊಡುವುದಿಲ್ಲ ಇನ್ನೊಂದು ಕಡೆ ನಮಗೆ ಯಾವುದೇ ನದಿ ನೀರನ್ನು ಕೊಡುವಂತಹ ಯೋಜನೆಗಳನ್ನು ಸರ್ಕಾರ ಕಾರ್ಯಗತ ಮಾಡುವ ಪರಿಸ್ಥಿತಿಯಲ್ಲಿಲ್ಲ. ನಮ್ಮ ರಾಜ್ಯದಲ್ಲಿ ನೀರಿನಿಂದ ವಂಚಿತವಾದ ಹಲವಾರು ಜಿಲ್ಲೆಗಳು ಇವೆ. ಜಿಲ್ಲೆಗಳಿಗೆ ಅವಶ್ಯಕವಾದಂತಹ ಸಣ್ಣ ನೀರಾವರಿ ಮತ್ತು ಕೆರೆಗಳನ್ನು ಅಭಿವೃದ್ಧಿ ಮಾಡುವುದು ಮತ್ತು ಸಣ್ಣ ನೀರಾವರಿ ಯೋಜನೆಗೆ ಪ್ರೋತ್ಸಾಹ ಕೊಡುವುದು ಮುಖ್ಯವಾಗಿದೆ. ಆದರೆ ಸರ್ಕಾರ ಸಣ್ಣ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ದೊಡ್ಡ ನೀರಾವರಿಗೆ ಗಮನವನ್ನು ಕೊಟ್ಟಿದೆಯೋ ಎಂದರೆ ಎಲ್ಲಾ ಸರ್ಕಾರಗಳು ಅದರ ಬಗ್ಗೆ ಉದಾಸೀನತೆಯನ್ನು ತಾಳಿದೆ. ಮಾನ್ಯ ನಾಗೇಗೌಡರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದರು. ಕೇಂದ್ರದಲ್ಲಿ ಅಧಿಕಾರದಲ್ಲಿರುವಂತಹ ರಾಜಕೀಯ ಪಕ್ಷಗಳು, ಎಲ್ಲವೂ, ಈ ರಾಜ್ಯಗಳಲ್ಲಿ ಅಧಿಕಾರದಲ್ಲಿರುವಂತಹ ರಾಜಕೀಯ ಪಕ್ಷಗಳು ಎಲ್ಲವೂ ಸೇರಿ ಇಡೀ ನೀರಾವರಿಯ ಬಗ್ಗೆ ಅಸಡ್ಡೆಯ ಮನೋಭಾವನೆಯನ್ನು ತೋರಿರುವುದರಿಂದ ಎಲ್ಲಾ ನೀರಾವರಿ ಯೋಜನೆಗಳು ಕುಂಠಿತವಾಗಿವೆ. ಇದರಲ್ಲಿ

ಕೃಷ್ಣ ಮೇಲ್ದಂಡೆ ಯೋಜನೆಯನ್ನು ಉದಾಹರಣೆಗೆ ತೆಗೆದುಕೊಂಡರೆ ಸರ್ಕಾರದವರು 2000 ಇಸವಿಯ ಒಳಗೆ ಪೂರ್ಣಮಾಡುತ್ತೇವೆಂದು ಹೇಳಿದ್ದಾರೆ, ಮಾಡಿದರೆ ಬಹಳ ಸಂತೋಷ ಇದರಲ್ಲಿ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಕೆ.ಎನ್. ನಾಗೇಗೌಡರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನನ್ನ ಅಭಿಪ್ರಾಯದಲ್ಲಿ 2000 ಇಸವಿಯೊಳಗೆ ಕೃಷ್ಣ ಮೇಲ್ದಂಡೆಯ ಯೋಜನೆಯನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದಕ್ಕೆ 6000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಮಾತ್ರ ಪೂರ್ಣವಾಗುತ್ತದೆ. ಒಂದು ದಿವಸಕ್ಕೆ 6 ಕೋಟಿ ರೂ.ಗಳ ಖರ್ಚು ಮಾಡಬೇಕಾಗುತ್ತದೆ. ಸುಮಾರು 5-6 ಕೋಟಿ ರೂ.ಗಳ ಸಲಕರಣೆಗಳನ್ನು ಪಡೆಯಲು ಖರ್ಚು ಮಾಡಬೇಕಾಗುತ್ತದೆ. ಆ ಸಲಕರಣೆಗಳನ್ನು ಖರ್ಚು ಮಾಡಿ ಪಡೆಯುತ್ತೇವೆಂದರೆ ಖಂಡಿತವಾಗಿಯೂ ಸಾಧ್ಯವಿಲ್ಲ. ಇದು ಇವತ್ತು ಏಕೆ ನೆನೆಗುದಿಗೆ ಬಿದ್ದಿದೆ ಎಂದರೆ ಇದರ ಬಗ್ಗೆ ನಾನು ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಸಂಪೂರ್ಣವಾಗಿ. ಬ್ರಷ್ಟಚಾರ ತುಂಬಿದೆ. ನಾನು ಅದಕ್ಕೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ.

ಛೇರ್‌ಮನ್‌ರವರು : ಇವತ್ತು ಸದನ ಮುಕ್ತಾಯವಾಗಬೇಕಾಗುತ್ತದೆ.

(ಗೊಂದಲ)

ಛೇರ್‌ಮನ್‌ರವರು : ಬಿಸಿನೆಸ್ ಕಮಿಟಿ ಸೇರಿದೆ, ಇನ್ನೊಂದು ಅರ್ಧಗಂಟೆಯಲ್ಲಿ ಹೇಳುತ್ತೇನೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡತಕ್ಕಂಥ ಯಾವ ಅಧಿಕಾರಿಗಳು ಅಲ್ಲಿ ಎಷ್ಟು ಜೀಪುಗಳಿವೆ, ಎಷ್ಟು ಕಾರುಗಳಿವೆ, ಎಷ್ಟು ಟಿಪ್ಪರ್‌ಗಳಿವೆ. ಅದಕ್ಕೆ ಯಾರಾದರೂ ಸರಿಯಾದಂಥ ಲೆಕ್ಕ ಕೊಡುವವರು ಇದ್ದರೆ ದಯವಿಟ್ಟು ಸರ್ಕಾರ ನನಗೆ ತಿಳಿಸಬೇಕು. ನಿಜವಾಗಿಯೂ ಆ ಲೆಕ್ಕ ಸಿಗುವುದಿಲ್ಲ ಏಕೆಂದರೆ ಆ ಲೆಕ್ಕ ಹೇಳಿಬಿಟ್ಟರೆ ಅಧಿಕಾರಿಗಳು ಸಿಕ್ಕಿಹಾಕಿಕೊಂಡು ಬಿಡುತ್ತಾರೆ. ಅಲ್ಲಿ ಎಷ್ಟು ಖರ್ಚಾಗುತ್ತಿದೆ, ಏನಿದೆ ಎಂದು ಲೆಕ್ಕ ಹೇಳಿದರೆ ಅಧಿಕಾರಿಗಳು ಸಿಕ್ಕಿಹಾಕಿಕೊಂಡು ಬಿಡುತ್ತಾರೆ, ನಾನು ಇದು ಸರ್ಕಾರದ ತಪ್ಪು ಎಂದು ಹೇಳುತ್ತಿಲ್ಲ. ಆದರೆ ಅಲ್ಲಿರತಕ್ಕಂಥ ಅಧಿಕಾರಿಗಳು ಆ ಲೆಕ್ಕವನ್ನು ಖಂಡಿತ ನಿಮಗೆ ಕೊಡುವುದಿಲ್ಲ. ನೀವು ಎಷ್ಟೇ ಒತ್ತಾಯ ಮಾಡಿದರೂ ಆ ಲೆಕ್ಕ ಕೊಡುವುದಿಲ್ಲ, ಆ ರೀತಿ ಹೇಳಿಬಿಟ್ಟರೆ ಲೆಕ್ಕ ಸಿಕ್ಕಿಬಿಡುತ್ತದೆ ಎಂದು ಖಂಡಿತ ಹೇಳುವುದಿಲ್ಲ. ನಾನು ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ, ಅಪ್ಪರ್ ಕೃಷ್ಣಾದಲ್ಲಿ ಆರ್ಬಿಟ್ರೇಶನ್ ಸಿಸ್ಟಂ ಇತ್ತು. ಈಗ ಆರ್ಬಿಟ್ರೇಶನ್ ಸಿಸ್ಟಂ ಇಲ್ಲ, ಈಗ ಕಾಂಟ್ರಾಕ್ಟರ್ ಇದರಲ್ಲಿ ಕೋರ್ಟಿಗೆ ಹೋಗಬಹುದು ಎಂದು ಇದೆ. ಈ ಆರ್ಬಿಟ್ರೇಶನ್ ಸಿಸ್ಟಂನಲ್ಲಿ ಕಾಂಟ್ರಾಕ್ಟರುಗಳು, ಇವರೆಲ್ಲಾ ಒಂದಾ ಗುತ್ತಿದ್ದಾರೆ, ಆದರೆ ಇವತ್ತು ಆರ್ಬಿಟ್ರೇಶನ್ ಸಿಸ್ಟಂ ಹೋಗಿದೆ, ಕೋರ್ಟಿಗೆ ಹೋಗ ಬಹುದು, ಆದರೆ ಈ ಮಹಾನುಭಾವರು ಏನು ಮಾಡುತ್ತಿದ್ದಾರೆಂದರೆ, ಈ ಸರ್ಕಾರದ

ಅಧಿಕಾರಿಗಳು ಇವರೆಲ್ಲಾ ಒಂದಾಗಿ ಇವತ್ತು ಸರ್ಕಾರದ ಹಣ ಲೆಕ್ಕ ಇಲ್ಲದಷ್ಟು ಲೂಟಿ ಮಾಡುತ್ತಿದ್ದಾರೆ ಅದನ್ನು ತಡೆಯತಕ್ಕಂಥ ಕೆಲಸ ಇವತ್ತು ಆಗದೆ ಹೋದರೆ ಖಂಡಿತ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪರಿಣಾಮಕಾರಿಯಾಗಿ ನಾವು. ಖಂಡಿತ ಪೂರ್ತಿ ಮಾಡಲಿಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಹಾಗೆಯೇ ನಾನು ಅಪ್ಪರ್ ಭದ್ರ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ಇದು ನಮ್ಮ ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆ ಈ ಮೂರು ಜಿಲ್ಲೆಗಳಿಗೆ ಇವತ್ತು ಇರತಕ್ಕಂಥ ಒಂದೇ ಒಂದು ಆಶಾದಾಯಕವಾದಂಥ ಅಂಶ. ನಮ್ಮ ಕೋಲಾರ ಜಿಲ್ಲೆಯವರಿಗಂತೂ ವಿಮುಕ್ತಿಯೆ ಇಲ್ಲ, ಕನಿಷ್ಟ ಇದನ್ನೆನಾದರೂ ಮಾಡಿದರೆ ಕೋಲಾರ ಜಿಲ್ಲೆಯ ಅರ್ಧ ಭಾಗಕ್ಕಾದರೂ ನೀರು ಬರಲಿಕ್ಕೆ ಸಾಧ್ಯತೆ ಇದೆ, ಈ ಅಪ್ಪರ್ ಭದ್ರ ಪ್ರಾಜೆಕ್ಟ್‌ನಲ್ಲಿ ಎಂಟರಿಂದ, ಇಪ್ಪತ್ತು ಟಿ.ಎಂ.ಸಿ. ನೀರು ಇದೆ. ಇವತ್ತು ನಮ್ಮ ಯೋಜನೆಯನ್ನು ಜಾರಿ ಮಾಡಿದರೆ ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ಅರ್ಧ ಭಾಗಕ್ಕೆ ನೀರು ಬರಲಿಕ್ಕೆ ಸಾಧ್ಯತೆ ಇದೆ. ಆದರೆ ಈ ಸರ್ಕಾರ ಇದರ ಬಗ್ಗೆ ಏನು ಹೇಳುತ್ತಿದೆಯೆಂದರೆ, ಹಲವಾರು ತಾಂತ್ರಿಕ. ತೊಂದರೆಗಳಿಗೆ, ಮತ್ತೆ ಎನ್‌ವೈರ್ನಮೆಂಟ್ ಪ್ರಾಬ್ಲಂ ಇದೆ, ಈ ರೀತಿಯಾದಂಥ ವಿಷಯವನ್ನು ಹೇಳಿ ಸರ್ಕಾರ ಮುಂದೊಡುತ್ತಿದೆ. ಅದಕ್ಕೆ ಪರ್ಯಾಯವಾದಂಥ ಯೋಜನೆ ಕೂಡ ಸರ್ಕಾರದ ಮುಂದೆ ಇದೆ. ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರ ಅದಕ್ಕೆ ಒಂದು ಪರ್ಯಾಯ ಯೋಜನೆಯನ್ನು ತಯಾರುಮಾಡಿದೆ. ಅದರ ಜೊತೆಗೆ ಇನ್ನೊಂದು ಪರ್ಯಾಯ ಯೋಜನೆ ಕೂಡ ಹಿಂದಿನ ಸರ್ಕಾರದ ಮುಂದೆ ಇತ್ತು. ಆ ಪರ್ಯಾಯ ಯೋಜನೆಗಳ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಿದರೆ ಈ ಮೂರು ಜಿಲ್ಲೆಗಳಿಗೆ ಕನಿಷ್ಟ ಅರ್ಧರ್ಧ ಭಾಗಕ್ಕೆ ನೀರನ್ನು ಕೊಡಲಿಕ್ಕೆ ಸಾಧ್ಯತೆ ಇದೆ. ಇದು ಬಿಟ್ಟರೆ ನಮ್ಮ ಕೋಲಾರ ಜಿಲ್ಲೆಗೆ ಯಾವುದೇ ವಿಧದಲ್ಲಿ ಖಂಡಿತ ನೀರು ಬರಲಿಕ್ಕೆ ಸಾಧ್ಯತೆ ಇಲ್ಲ ನಾನು ಈ ಸರ್ಕಾರವನ್ನು ಒತ್ತಾಯಮಾಡುತ್ತಿದ್ದೇನೆ. ಜನತಾದಳ ಸರ್ಕಾರ, ರೈತರ ಪರವಾಗಿ ಇರತಕ್ಕಂಥ ಸರ್ಕಾರ ಬರಗಾಲದ ಜಿಲ್ಲೆಗಳಾಗಿರತಕ್ಕಂಥ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ಅನುಕೂಲವಾಗತಕ್ಕಂಥ ಈ ಯೋಜನೆಯನ್ನು ಎಷ್ಟೇ ಕಷ್ಟ ಬಂದರೂ ಕೂಡ ಆ ಯೋಜನೆಯನ್ನು ಕಾರ್ಯಗತಮಾಡಲೇಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಜಿಲ್ಲೆಯವರಾಗಿರತಕ್ಕ ಮಾನ್ಯ ಬೈರೇಗೌಡರು ಇದ್ದಾರೆ. ಅವರು ಮಂತ್ರಿಮಂಡಲದಲ್ಲಿ ಇರುವಂಥ ಕಾಲದಲ್ಲಿಯೇ ಅದನ್ನು ಪೂರ್ತಿಮಾಡಿಸಿದರೆ ಖಂಡಿತವಾಗಿ ಅವರಿಗೆ ಒಳ್ಳೆಯ ಕೀರ್ತಿ ನಮ್ಮ ಜಿಲ್ಲೆಯ ಪರವಾಗಿ ಸಿಗುತ್ತದೆ. ಅದನ್ನು ತಾವು ಜಾರಿ ಮಾಡಬೇಕು. ಸನ್ಮಾನ್ಯ ಅಧ್ಯಕ್ಷರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ಸರ್ಕಾರ ಮಾಡಲೇಬೇಕು ಎಂದು ನನ್ನ ಒತ್ತಾಯ ಇದೆ. ಮತ್ತೆ ಕಡೆಯದಾಗಿ ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಜಿಲ್ಲೆಯ ಕುಡಿಯುವ ನೀರಿನ ಬಗ್ಗೆ ಇನ್ನೊಂದು ಶಾಪ ವಿಮೋಚನೆ ಆಗಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರನ ಸಮಸ್ಯೆ ಬಹಳ ಇದೆ, ಒಂದು ಕಡೆ ಕುಡಿಯುವ ನೀರಿನಲ್ಲಿ ಲವಣದ ಅಂಶಗಳು ಹೆಚ್ಚಾಗಿ ಬಿಟ್ಟು ಅದು ಅಪಾಯಕಾರಿಯಾದಂಥ, ನಿಜವಾಗಿಯೂ ಕೂಡ ಸ್ಲೋ ಪಾಯ್‌ಸನ್ ಕುಡಿಯತಕ್ಕಂಥ ಪರಿಸ್ಥಿತಿಗೆ ನಾವು

ಬಂದಿದ್ದೇವೆ. ಅಂತರ್ಜಲ ಬಹಳ ಒಳಗಡೆ ಹೋಗಿಬಿಟ್ಟಿದೆ. ಅಂತರ್ಜಲ ಒಳಗಡೆ ಹೋದಷ್ಟು ಕೂಡ ಆ ಲವಣಗಳ ಅಂಶ ಜಾಸ್ತಿಯಾಗುತ್ತದೆ, ಫ್ಲೋರೈಡ್ ಮತ್ತು ನೈಟ್ರೇಟ್ ಅಂಶ ಹೆಚ್ಚಾದರೆ ಕುಡಿಯುವ ನೀರು ಬಹಳ ಅಪಾಯಕಾರಿಯಾದಂಥ ಪರಿಸ್ಥಿತಿಗೆ ಬರುತ್ತದೆ. ಈಗ ಅದರ ಬಗ್ಗೆ ಹಲವಾರು ಸರ್ವೆ ಮಾಡಿದ್ದಾರೆ Mines and Geology ಯವರು ಕೂಡ ಸರ್ವೆ ಮಾಡಿದ್ದಾರೆ, ಆ ಅಪಾಯಕಾರಿಯಾದಂಥ ಲವಣಗಳು ಇವೆ. ಆದರೆ ನಮಗೆ ಉಳಿದಿರತಕ್ಕಂಥ ಒಂದೇ ಒಂದು ಪರ್ಯಾಯ ಎಂದು ಹೇಳಿದರೆ,

(ಗೊಂದಲ)

ಛೇರ್‌ಮನ್‌ರವರು : ದಯವಿಟ್ಟು ಕುಳಿತುಕೊಳ್ಳಿ, ಸಭಾಧ್ಯಕ್ಷರು ಎದ್ದುನಿಂತಾಗ ಸದಸ್ಯರು ಎದ್ದುನಿಂತುಕೊಳ್ಳಬಾರದು. ಈಗ ತಾವೆಲ್ಲಾ ಒಪ್ಪಿದರೆ ಇವತ್ತು ಚರ್ಚೆ ಮುಗಿಸಿ ಬೆಳಿಗ್ಗೆ ಮತ್ತೆ ಸದನ ಸೇರೋಣ. ಆದರೆ ಚರ್ಚೆ ಮಾತ್ರ ಇವತ್ತು ಸಂಪೂರ್ಣವಾಗಿ ಮುಗಿಯಲೇಬೇಕು. ಆದ್ದರಿಂದ ರಾತ್ರಿ ಏಳು ಗಂಟೆಯಾಗಲೀ, ಎಂಟು ಗಂಟೆಯಾಗಲೀ ಎಲ್ಲರಿಗೂ ಅವಕಾಶ ಸಿಗುತ್ತದೆ. ನಾಳೆ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ, ಚರ್ಚೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲ. ನಾಳೆ ನೇರವಾಗಿ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ.

(ಗೊಂದಲ)

ಛೇರ್‌ಮನ್‌ರವರು : ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ, ಈಗ ಇಲ್ಲಿ ಒಂದು ಪಟ್ಟಿ ಇದೆ, ಎಲ್ಲರಿಗೂ 5-5 ನಿಮಿಷವನ್ನು ನಿಗಧಿ ಮಾಡುತ್ತೇವೆ ಐದು ನಿಮಿಷದಂತೆ ತಾವು ಮಾತನಾಡಬೇಕಾಗುತ್ತದೆ, ಎಷ್ಟೊತ್ತಾದರೂ ಕುಳಿತುಕೊಳ್ಳೋಣ, ದಯವಿಟ್ಟು ಯಾರೂ ಬೇಸರ ಮಾಡಿಕೊಳ್ಳಬೇಕಾಗಿಲ್ಲ, ದಯವಿಟ್ಟು ಎಲ್ಲರಿಗೂ ಅವಕಾಶ ಸಿಗುವಂಥ ಪ್ರಯತ್ನವನ್ನು ಅಧ್ಯಕ್ಷರು ಮಾಡಿದ್ದಾರೆ, ಸ್ವಲ್ಪ ಸಾವಧಾನದಿಂದ ಕೇಳಬೇಕು. ರೆಡ್ಡಿಯವರೆ ಐದು ನಿಮಿಷದ ಒಳಗಾಗಿ ಮುಗಿಸಿ.

ಶ್ರೀ ಜಿ.ವಿ. ರಾಮರೆಡ್ಡಿ : ಅಧ್ಯಕ್ಷರೆ ಮುಗಿಸಿಬಿಡುತ್ತೇನೆ, ಕಡೆಯದಾಗಿ ಹೇಳುತ್ತಿದ್ದೇನೆ ನಮಗೆ ಕುಡಿಯುವ ನೀರಿನ ಪ್ರಸ್ತಾಪ ಏಕೆ ಬಂತು ಎಂದು ಹೇಳಿದರೆ ನಮ್ಮ ಜಿಲ್ಲೆಯ ಮತ್ತು ದೇಶದ,

(ಗೊಂದಲ)

ಛೇರ್‌ಮನ್‌ರವರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು, ಎಲ್ಲರಿಗೂ ಅವಕಾಶವನ್ನು ಮಾಡಿಕೊಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಛೇರ್‌ಮನ್‌ರವರೆ, ನಮಗೆ ಆ ರೀತಿಯ ಬಹಳ ಭೀಕರವಾದಂಥ ಪರಿಸ್ಥಿತಿ ಇದೆ ; ನಾನು ಕೇಳತಕ್ಕಂಥದ್ದು ಇಷ್ಟೆ; ನಮ್ಮ ಜಿಲ್ಲೆಯವರೆ ಆದ ದೇಶದ ಪ್ರಖ್ಯಾತ ಇಂಜಿನಿಯರ್‌ರಾದ ವಿಶ್ವೇಶ್ವರಯ್ಯನವರು ಕಟ್ಟಿದಂಥ ಕನ್ನಂಬಾಡಿಯಿಂದ ನಮ್ಮ ಜಿಲ್ಲೆಗೆ ಕುಡಿಯುವುದಕ್ಕಾದರೂ ನೀರು ಕೊಡಿ. ನಾವು

ಕಾವೇರಿ ನೀರಿನಿಂದ ಎಂಭತ್ತು ಕಿಲೋಮೀಟರ್ ದೂರದಲ್ಲಿದ್ದೇವಷ್ಟೆ. ನಾನು ಸರ್ಕಾರವನ್ನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಕುಡಿಯುವುದಕ್ಕಾದರೂ ಕಾವೇರಿ ನೀರನ್ನು ಕೊಡಿ ಮತ್ತು ನಮ್ಮ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ಕೆರೆಗಳಲ್ಲಿನ ಹೂಳನ್ನು ತೆಗೆಯತಕ್ಕಂಥ ಕಾರ್ಯಕ್ರಮವನ್ನು ತಾವು ತಕ್ಷಣ ಹಾಕಿಕೊಳ್ಳಬೇಕು ಇಲ್ಲದಿದ್ದರೆ ನಮ್ಮ ಜಿಲ್ಲೆ ಸಂಪೂರ್ಣ ಬರಡಾಗಿಬಿಡುತ್ತದೆ, ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಇಡೀ ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚಿನ ಕೆರೆಗಳು ಇರತಕ್ಕಂಥದ್ದು ನಮ್ಮ ಜಿಲ್ಲೆಯಲ್ಲಿ, ಆ ಕೆರೆಗಳೆಲ್ಲಾ ಇವತ್ತು ಹಾಳಾಗುತ್ತಿವೆ. ಆ ಕೆರೆಗಳಲ್ಲಿನ ಹೂಳನ್ನು ಎತ್ತತಕ್ಕಂಥ ಕೆಲಸವನ್ನು ಸರ್ಕಾರ ತಕ್ಷಣ ತೆಗೆದುಕೊಳ್ಳಬೇಕು, ನಮಗೆ ಕಾವೇರಿಯಿಂದ ಕುಡಿಯುವ ನೀರನ್ನು ಕೊಡಬೇಕು ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಛೇರ್‌ಮನ್‌ರವರು : ಈಗ ಪ್ರತಿ ಸದಸ್ಯರು ಮಾತನಾಡತಕ್ಕಂಥ ಪಟ್ಟಿಯನ್ನು ಮಾನ್ಯ ಅಧ್ಯಕ್ಷರು ಪಟ್ಟಿ ಮಾಡಿ ಇಟ್ಟಿದ್ದಾರೆ, ಐದೈದು ನಿಮಿಷಗಳ ಕಾಲ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶವನ್ನು ಕೊಡುತ್ತೇವೆ, ಐದು ನಿಮಿಷದ ಮೇಲೆ ಯಾರು ಹೆಚ್ಚಿಗೆ ತೆಗೆದುಕೊಳ್ಳಬಾರದು.

ಶ್ರೀ ಕೆ. ವೆಂಕಟೇಶ್ : ಹೆಸರನ್ನು ಕೊಡದೆ ಇರತಕ್ಕಂಥವರು ಮಾತನಾಡಬೇಕೆಂದು ಬಹಳ ಅಪೇಕ್ಷೆ ಪಡುತ್ತಿದ್ದಾರೆ, ಇದು ಬಹಳ ಮುಖ್ಯವಾದ ವಿಚಾರವಾದ್ದರಿಂದ ದಯವಿಟ್ಟು ಎಲ್ಲರಿಗೂ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಸಭಾಧ್ಯಕ್ಷರೇ, ನಾನು ಪ್ರೈಮರಿ ಸ್ಕೂಲ್‌ನಲ್ಲಿ ನಮ್ಮ ಗುರುಗಳನ್ನು ಬಹಳ ಅಂಗಲಾಚಿ ಕೇಳಿ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೆ. ಇವತ್ತು ನನ್ನ ಧ್ವನಿಯನ್ನು ಇಲ್ಲಿ ಪ್ರಚಾರ ಮಾಡಲಿಕ್ಕೆ ಅವಕಾಶ ಮಾಡಿ ಕೊಟ್ಟಂತಹ ಸಭಾಧ್ಯಕ್ಷರಿಗೆ, ಈ ಸಭೆಗೆ ವಂದಿಸುತ್ತಾ ನಾನು ಕೆಲವು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಕಾವೇರಿ ಮತ್ತು ಕೃಷ್ಣಾ ಜಲಾನಯನ ವಿಚಾರದಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ ನಮ್ಮ ಅನೇಕ ಹಿರಿಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು, ಮೊಯಿಲಿಯವರು, ನಾಗೇಗೌಡರೂ ಎಲ್ಲರೂ ಕೂಡ ಮಾತನಾಡುತ್ತಾ ಆ ವಿಚಾರದಲ್ಲಿ ನಮಗೆ ಬಹಳ ಚೆನ್ನಾಗಿ ಅರಿವು ಮೂಡಿಸಿದ್ದಾರೆ. ನನಗೆ ಅವರಷ್ಟು ಪಾಂಡಿತ್ಯ ಇಲ್ಲದಿದ್ದರೂ ಕೂಡ ನನ್ನ ಕ್ಷೇತ್ರದಲ್ಲಿ 9. ಕಿ.ಮೀ.ನ ಒಂದು ಸುರಂಗವನ್ನು ತೋಡಿಸಿದ್ದಾರೆ. ದಿವಂಗತ ದೇವರಾಜ್ ಅರಸ್‌ರವರು ತುಮಕೂರು ವಿಭಾಗಕ್ಕೆ ಮತ್ತು ನಾಗಮಂಗಲದವರೆಗೆ ನೀರನ್ನು ಹರಿಸಬೇಕು, ಆ ಜನ ಬವಣೆಯಲ್ಲಿರಬಾರದೆಂದು ಈ ಒಂದು ಸುರಂಗವನ್ನು ತೋಡಿಸಿದರು. ಅದನ್ನು ಓಪನ್ ಮಾಡುವ ದಿವಸ ಮಾನ್ಯ ದೇವರಾಜ್‌ಅರಸ್‌ರವರು ಹೇಳಿದರು. ಇಲ್ಲಿರತಕ್ಕ ಈ ಭಾಗದ ಜನಕ್ಕೆ, ಆ ಭಾಗಕ್ಕೆ ನೀರು ಕೊಡುವುದಕ್ಕೋಸ್ಕರ ಈ ಭಾಗದ ಕೆರೆಕುಂಟೆಗಳಲ್ಲಿ ಪಕ್ಷಿಗಳಿಗೆ ಕೂಡ ನೀರು ಕುಡಿಯುವುದಕ್ಕೆ ಇರುವುದಿಲ್ಲ, ಚೆನ್ನಪಟ್ಟಣದ ಬಾಗೂರು ಮತ್ತು ನುಗ್ಗೆಹಳ್ಳಿ ಹೋಬಳಿ ಜನಕ್ಕೆ ನೀರು ಇಲ್ಲ ಎಂದು ಹೇಳುತ್ತಿದ್ದರು.

ಅದೇ ರೀತಿಯಾಗಿ ಇವತ್ತು ನಮ್ಮ ತಾಲ್ಲೂಕಿಗೆ ಅದು ಶಾಪವಾಗಿದೆ, ಆದರೂ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಈಗ ನಮ್ಮ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ದೇವೇಗೌಡರು ನೀರಾವರಿ ಸಚಿವರು ಆಗಿದ್ದಾಗ ಆ ಜನಕ್ಕೆ ಆಗಿರತಕ್ಕ ಅನಾಹುತವನ್ನು ತಪ್ಪಿಸುವುದಕ್ಕೋಸ್ಕರವಾಗಿ ಎರಡು ಲಿಫ್ಟ್ ಇರಿಗೇಷನ್‌ಗೆ ಕೂಡ ಮಂಜೂರಾತಿಯನ್ನು ನೀಡಿದ್ದು, ಅದೀಗ ಕಾರ್ಯರೂಪದಲ್ಲಿ ಇದೆ. ಅದು ವೇಗದಲ್ಲಿ ನಡೆಯಬೇಕು ಎನ್ನತಕ್ಕ ಮಾತನ್ನು ಈ ಸದನದಲ್ಲಿ ಹೇಳುತ್ತೇನೆ. ನಮ್ಮ ಹಲವಾರು ಜನ ಮುಖಂಡರುಗಳು ಅವರಲ್ಲೂ ಬಡ್ಜೆಟ್ ಮೇಲೆ ಮಾತನಾಡುವಾಗ ಎಲ್ಲರೂ ಈ ಬಗ್ಗೆ ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಖರ್ಚಾಗತಕ್ಕ ಹಣ ಎಷ್ಟಾಗುತ್ತದೆ. ಎನ್ನುವುದರ ಮೇಲೆ ಈ ರಾಜ್ಯದ ಪ್ರಗತಿಯಾಗುತ್ತದೆ ಎನ್ನುವುದು ಅಳೆಯುವುದಾದರೆ, ಖಂಡಿತ ಅದು ಶುದ್ಧಾಂಗ ತಪ್ಪು ಎನ್ನತಕ್ಕ ಮಾತನ್ನು ಈ ಸದನದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ನೀರಾವರಿಗೆ 10 ಸಾವಿರ ಕೋಟಿ ಖರ್ಚು ಮಾಡಿ ಬಿಟ್ಟರೆ ತುಮಕೂರು ಕ್ಯಾನಲ್ ಮುಗಿಯುತ್ತದೆಯೇ ? ಸ್ವಾಮಿ. ಈ ತುಮಕೂರು ಕ್ಯಾನಲ್‌ನಲ್ಲಿ ಏನು ನಡೆಯುತ್ತಿದೆ ಎಂದರೆ ಎನ್,ಬಿ.ಸಿ. ಮತ್ತು ಟಿ.ಬಿ.ಸಿ. ಎಂದು ಹೇಳಿ ಅಲ್ಲಿ ನೀರು ಹರಿಸುತ್ತಿಲ್ಲ, ದುಡ್ಡಿನ ಹೊಳೆಯನ್ನೇ ಹರಿಸುತ್ತಿದ್ದಾರೆ. ನಮ್ಮ ಮಾಜಿ ಮುಖ್ಯಮಂತ್ರಿಗಳಾವಂತಹ ಮೊಯಿಲಿಯವರು ಸದನದಲ್ಲಿ ಈಗ ಹಾಜರಿದ್ದರೆ, ಬಹಳ ಚೆನ್ನಾಗಿರುತ್ತಿತ್ತು. ಸ್ವಾಮಿ ನನ್ನ ಕ್ಷೇತ್ರದಲ್ಲಿ ಒಂದು ದಿವಸ, ಒಂದು ಸ್ಪಾಯಲ್ ಬ್ಯಾಂಕ್ ಅಂದರೆ ತುಮಕೂರಿಗೆ ನೀರು ಉಣಿಸುವುದಕ್ಕೋಸರ ಕ್ಯಾನಲ್ ಮಣ್ಣನ್ನು ತಂದು ಮೇಲೆ ಡಬರಿ ಹಾಕುತ್ತಾರೆ. ನ್ಯಾಚುರಲ್ ಅಗಿ ಅದೊಂದು ಬಂಡಾಗಿ ಹೊರಗಡೆಯಿಂದ ಬರುವ ನೀರಿಗೆ ಪ್ರೊಟೆಕ್ಷನ್ ಆಗಿರುತ್ತದೆ. ಅಂತಹ ಒಂದು ಬಂಡನ್ನು ತೆಗೆಯಲಿಕ್ಕೆ 5 ಸಾವಿರದಿಂದ 6 ಸಾವಿರದ ಒಳಗಡೆ ಅಂದರೆ 6ನೇ ಕಿ.ಮೀ. ನಲ್ಲಿ 3 1/4 ಲಕ್ಷ ರೂ ರೂಪಾಯಿಗಳನ್ನು ಖರ್ಚು ಮಾಡಿ ಆ ಬಂಡನ್ನು ಕಂಟ್ರಾಕ್ಟ್ ಹಿತಕ್ಕೋಸ್ಕರ ತೆಗೆಸಿಬಿಟ್ಟರು. ದಿನಾಂಕ 20.10.93ರ 15 ದಿವಸ ಮುಂಚೆ ಈ ರೀತಿ ಮಾಡಿದರು. ದಿನಾಂಕ 20.10.93ರಲ್ಲಿ ಮಳೆ ಬಿತ್ತು. ಯಾರೋ ನನ್ನಂತಹ ರಾಜಕಾರಣಿಗಳು ಹೇಳಿದರು ಎಂದು, ಬಂಡನ್ನು ತೆಗೆಯಲಿಕ್ಕೆ ಮೂರು ಕಾಲು ಲಕ್ಷ ರೂಪಾಯಿಗಳನ್ನು ಕಂಟ್ರಾಕ್ಟರ್ ಹಿತ ಕಾಪಾಡುವುದಕ್ಕೋಸ್ಕರ ಕೊಟ್ಟರು. ಆ ಒಂದು ಬಂಡು ತೆಗೆದ ಮೇಲೆ ಮಳೆ ಬಂದು ಇಡೀ ಸುರಂಗದಲ್ಲಿ ಮಳೆ ನೀರು ತುಂಬಿತ್ತು. ಆ ನೀರನ್ನು ತೆಗೆಸುವುದಕ್ಕೋಸ್ಕರ ಮತ್ತೆ ಸುಮಾರು 50 ಲಕ್ಷ ರೂಪಾಯಿಗಳು ಖರ್ಚು ಮಾಡಿದ್ದಾರೆ. ಡಿ-ವಾಟರಿಂಗ್ ಅನ್ನುವ ಪದ ಕ್ರಿಯೇಟ್ ಆಗಿದ್ದೇ ಆ ಸಂದರ್ಭದಲ್ಲಿ. ನಮ್ಮ ಮಾನ್ಯ ಮೊಯಿಲಿಯವರು ಒಂದು ಮಾತನ್ನು ಹೇಳಿದರು, ಧುಮ್‌ನ್ಯಾಳ್ ಎನ್ನುವ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹೊಳೆನರಸೀಪುರದಲ್ಲಿ ರಜಾ ಹಾಕಿಸಿದ್ದಾರೆ. ಪಾಪ ಅವರು ಹರಿಜನರು. ಒಂದು ಮಾತನ್ನು ಹೇಳುತ್ತೇನೆ. ಯಾವುದೇ ಒಂದು ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಿ ಈ ಮಾತನ್ನು ಹೇಳುವುದಿಲ್ಲ. ಮಲ್ಲಿಕಾರ್ಜುನಯ್ಯ ಎಂಬ ಚೀಫ್ ಇಂಜಿನಿಯರ್ ಒಬ್ಬರು ತುಮಕೂರಿನಲ್ಲಿದ್ದರು, ಅವರು ಇರುವವರೆಗೆ, ಹೇಮಾವತಿ ಕ್ಯಾನಲ್‌ನಲ್ಲಿ

ಇಷ್ಟು ಭ್ರಷ್ಟಾಚಾರ ಆಗಿದೆ ಎಂದು ಯಾರೂ ಹೇಳಿರಲಿಲ್ಲ. ಇಂತಹ ಒಂದು ಡಿಪಾರ್ಟ್‌ಮೆಂಟ್ ಮೂಲಕ ವರ್ಕ್ ಕೊಟ್ಟು ಈ ಕೇಸ್ ಪೀಟ್ ಮೂಲಕ ಭ್ರಷ್ಟಾಚಾರವನ್ನು ಮಾಡಿ, ಕ್ಯಾನಲ್‌ನ್ನು ಮಾಡಲಿಲ್ಲ. ಅವರು ಹರಿಜನ, ಚೀಫ್ ಇಂಜಿನಿಯರ್, ಪ್ರಾಮಾಣಿಕರು, ಯೋಗ್ಯರೂ ಆದ ಅಂತವರನ್ನು ರಾತ್ರೋರಾತ್ರಿ ವರ್ಗಾವಣೆ ಮಾಡಿ, ಶ್ರೀಮಾನ್ ರತ್ನಾನಾಯಕ್ ಎನ್ನುವವರನ್ನು ಅಲ್ಲಿಗೆ ವರ್ಗಾವಣೆ ಮಾಡಿಸಿದರು, ದಯಮಾಡಿ, ನೀವು ಅಂಕಿ ಸಂಖ್ಯೆಗಳನ್ನು ತೆಗೆಸಿ ನೋಡಬೇಕು. ಬಹುಶಃ ಚುನಾವಣೆ ಇರುವ ಎರಡು ತಿಂಗಳು ಮುಂಚೆ ಎಂದು ಕಾಣಿಸುತ್ತದೆ. 125 ರಿಂದ ಬಗಡನಹಳ್ಳಿ ಕೆರೆ ಅಂತ ಮಾನ್ಯ ಶಿವಣ್ಣನವರ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಒಂದು ಕೆರೆ ಇದೆ. ಅಲ್ಲಿಗೆ ನೀರು ಬಿಟ್ಟು ಅಲ್ಲಿಂದ ತುಮಕೂರಿಗೆ ನೀರನ್ನು ಕೊಡಬೇಕು. ಆ ಒಂದು ಬಗಡನಹಳ್ಳಿ ಕೆರೆಯನ್ನು ನೀರಾವರಿ ಮಾಡುತ್ತೇವೆ ಎಂದು ಹೇಳಿ ಕೆ.ಯು.ಡಬ್ಲ್ಯೂ.ಎಸ್. ಗೆ 60-70 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಯೋಜನೆ ನೀಡಿದ್ದಾರೆ, ಅದೊಂದು ಭ್ರಷ್ಟಾಚಾರದ ಹಗರಣವಾಗಿ ಬಹುಶಃ ಮೂರು ಕೋಟಿಗಿಂತಲೂ ಹೆಚ್ಚಿನ ಪೇಮೆಂಟ್ ಮಾಡಿದ್ದಾರೆ ಅಲ್ಲಿ. ಆದುದರಿಂದ ಬಗಡನಹಳ್ಳಿ ಕೆರೆ ಪ್ರಕರಣ ಇನ್‌ವೆಸ್ಟಿಗೇಷನ್ ಮಾಡಿ ಬಿಟ್ಟರೆ ಎಷ್ಟರಮಟ್ಟಿಗೆ ಈ ಸರ್ಕಾರ ನೀರಾವರಿಗೆ ಖರ್ಚು ಮಾಡಿದಂತಹ ದುಡ್ಡು ಸಾರ್ಥಕವಾಗಿದೆ ಎನ್ನತಕ್ಕದ್ದು ಬಹಳ ಚೆನ್ನಾಗಿ ತಿಳಿಯುತ್ತದೆ. ಮತ್ತೆ ನಮ್ಮ ನಾಗೇಗೌಡರು ಮಾತನಾಡುವಾಗ ಸಿಂಗರೀಗೌಡ ಎಂಬುವವರ ಹೆಸರನ್ನು ಪ್ರಸ್ತಾಪ ಮಾಡಿದರು. ಏಕೆ ಒಬ್ಬನೇ ಸಿಂಗರೀಗೌಡ, ಅಂತಹವರು ತುಂಬಾ ಜನರಿದ್ದಾರೆ. ನನ್ನದೇ ಕ್ಷೇತ್ರದಲ್ಲಿ ಎಸ್.ವಿ. ಇಂಜಿನಿಯರಿಂಗ್ ಕಂಪನಿಯಲ್ಲಿ ಸುಂದರಯ್ಯ ಎಂಬುವವರು ಇದ್ದಾರೆ. 'ವೈ' ಅಲೈನ್‌ಮೆಂಟ್ ಅಂದರೆ 5 ಕಿ.ಮೀ. ಕ್ಯಾನಲ್ ತೋಡಿಸುವುದು. ಅದಕ್ಕೆ ಮುಂಚೆ 'ವೈ' ಅಲೈನ್‌ಮೆಂಟ್‌ಗೆ ದುಡ್ಡು ತೆಗೆಯಬೇಕು, ವೈ ಅಲೇನ್‌ಮೆಂಟ್ ತೆಗೆಯಬೇಕೆಂದು ಹೇಳಿ ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ಆಗಿದೆ. ಮಣ್ಣು ತೆಗೆಯುವುದಕ್ಕೆ 50 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇದ್ದರೆ, ನೀರನ್ನು ಒಳಗಡೆಗೆ ಹರಿಸುವುದಕ್ಕೆ ಕೋಟ್ಯಾಂತರ ರೂಪಾಯಿ ಮಾಡಿದ್ದಾರೆ. 16-17-18ನೇ ಕಿ.ಮೀ. ನಲ್ಲಿ ಈ ರೀತಿ ಆಗಿದೆ. ಈ ಬಗ್ಗೆ ಪ್ರಾಮಾಣಿಕವಾದ ತನಿಖೆಯನ್ನು ನಡೆಸಿದಲ್ಲಿ ಸರ್ಕಾರ ರೈತರ ಪರವಾಗಿ ನೀರು ಬಿಡಲು ಖರ್ಚು ಮಾಡಿರುವಂತಹ ಹಣ ಹೇಗೆ ಪೋಲಾಗುತ್ತಿದೆ ಎಂಬುದನ್ನು ಕಂಡುಹಿಡಿಯಬಹುದು. ಮಾನ್ಯ ನಾಗೇಗೌಡರು ಮಾತನಾಡುವಾಗ ಇಂಜಿಯರ್ಸ್ ಮತ್ತು ಕಂಟ್ರಾಕ್ಟರ್‌ಗಳು ಭ್ರಷ್ಟಾಚಾರಿಗಳು ಎಂದು ಹೇಳಿದರು. ಏಕೆ, ರಾಜಕಾರಣಿಗಳು ಇದಕ್ಕೆ ಹೊರತಾಗಿದ್ದಾರೆಯೇ ? ಈ ದೇಶದಲ್ಲಿ ರಾಜಕಾರಣಿಗಳಿಗೂ ಕೂಡ ಇದರಲ್ಲಿ ಪಾಲಿದೆ ಎನ್ನತಕ್ಕ ಮಾತನ್ನು ಇಡೀ ರಾಜ್ಯದ ಜನ. ಆಡುತ್ತಿದ್ದಾರೆ. ಅವರು, ಇವರು ಎಂದು ನಾನು ಹೇಳುವುದಿಲ್ಲ. ವಿಧಾನ ಸೌಧದ ಮೆಟ್ಟಿಲನ್ನು ಹತ್ತಬೇಕಾದರೆ, ಚುನಾವಣಾ ಸಂದರ್ಭದಲ್ಲಿ ಶಾಸಕರಿಗೆ ದುಡ್ಡನ್ನು ಫೀಡ್ ಮಾಡಿದ್ದೇವೆ ಎಂದು ಇಂಜಿನಿಯರ್‌ಗಳು ಹೇಳಿಕೊಂಡು ತಿರುಗುತ್ತಿದ್ದಾರೆ. ಇಲ್ಲಿ ಏನಾದರೂ ಇಂತಹ ಒಂದು ನೀರಾವರಿ ಬಹಳ ವ್ಯವಸ್ಥಿತವಾಗಿ ನಡೆಯಬೇಕಾದರೆ ಈ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದಿರುವವರಿಂದ ಹಿಡಿದು,

ವಿರೋಧ ಪಕ್ಷದ ಸನ್ಮಿತ್ರರವರೆಗೆ ಪ್ರಾಮಾಣಿಕತೆ, ಶಿಸ್ತು ಮತ್ತು ಆ ಭಾಗದ ಶಾಸಕರ ಒಳ್ಳೆಯತನ ಮುಖ್ಯ ಮಾನ್ಯ ಮೊಯಿಲಿಯರು ಮಾತನಾಡುತ್ತಾ ಒಂದು ಮಾತು ಹೇಳಿದರು, ಇದರಲ್ಲಿ ನಾವು ರಾಜಕೀಯವನ್ನು ಬೆರೆಸಬಾರದು. ರಾಜಕೀಯ ಇಲ್ಲದಿದ್ದರೆ ಮಾತ್ರ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆ ಎಂಬುದು ಸತ್ಯವಾದ ವಿಚಾರ ಎನ್ನತಕ್ಕ ಒಂದು ಮಾತನ್ನು ನಾನು ಹೇಳುತ್ತೇನೆ. ನೀರಾವರಿಗೆ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳುತ್ತೀರಿ. ಒಂದು ವರ್ಷದಲ್ಲಿ ಎನ್.ಬಿ.ಸಿ. ನಲ್ಲಿ 7-8-9 ಡಿಸ್ಟ್ರಿಬ್ಯೂಟರೀಸ್‌ಗೆ ನೀವು 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ 40 ಲಕ್ಷ ಎಕರೆಯನ್ನು ಮಾತ್ರ ನೀರಾವರಿಗೆ ಒಳಪಡಿಸಬಹುದು. ಎಷ್ಟು ದಿವಸದಲ್ಲಿ ಒಂದು ವರ್ಷದಲ್ಲಿ ಅದರೆ ನೀವು ಅಲ್ಲಿ ಕ್ಯಾನಲ್‌ನ್ನು ಮಾಡಿಸುತ್ತಿಲ್ಲ. ಎಸ್.ವಿ. ಸುಂದರಯ್ಯ ಎನ್ನುವವನ ಹಿತವನ್ನು ಕಾಪಾಡುವುದಕ್ಕೋಸ್ಕರ 168-167ರಲ್ಲಿ ಸುರಂಗವನ್ನು ತೋಡಿಸುವುದಕ್ಕೋಸ್ಕರ ನೀವು ಅವನಿಗೆ ಕೆಲಸ ಕೊಡುವುದಾದರೆ ನೀವು ರೈತರ ಹಿತ ಕಾಪಾಡುತ್ತೀರ ಎಂಬುದನ್ನು ದಯಮಾಡಿ ಹೇಳಬೇಕು. ಈ ರೀತಿಯ ಹಲವಾರು ದೋಷಗಳಿವೆ ಈ ಪ್ರಾಜೆಕ್ಟ್‌ನಲ್ಲಿ. ಡಿ-ವಾಟರಿಂಗ್ ಎಂದು ಹೇಳಿ ಬಹುಶಃ 33 ರಿಂದ ಎನ್.ಬಿ.ಸಿ. ನಲ್ಲಿ 33-34-35ಕ್ಕೆ ಹಣ ನೀಡಿದ್ದೀರಿ. ಮಣ್ಣು ತೆಗೆಯುವುದಕ್ಕೆ 40 ಲಕ್ಷ ರೂಪಾಯಿಗಳು ಎಸ್ಟಿಮೇಟ್ ಆದರೆ ನೀರು ಬಿಡುವುದಕ್ಕೆ ಕ್ಯಾನಲ್ ತೆಗೆದ ಮೇಲೆ 25 ಲಕ್ಷ ರೂಪಾಯಿಗಳು ದುಡ್ಡು ಕೊಡುವುದು ಎಂದರೆ ಎನರ್ಥ ? ನಮ್ಮ ಊರಿಗೆ ಟಾರ್ ಹಾಕಿಸುತ್ತೇವೆ ಸ್ವಾಮಿ, 1 ಲಕ್ಷ ರೂಪಾಯಿಗಳನ್ನು ಕೊಡಿ ಎಂದರೆ ದುಡ್ಡಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ರೀತಿ ಹಣ ಪೋಲಾಗಬಾರದು. ನಮ್ಮ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಇದಕ್ಕೆ ಕಾರಣೀಭೂತರು ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ಜನರು ಯಾವ ಮಟ್ಟಕ್ಕೆ ಮಾತನಾಡಿಕೊಳ್ಳುತ್ತಿದ್ದರು ಎಂದರೆ ಇವತ್ತು ಒಂದು, ವರ್ಷದಿಂದೀಚೆಗೆ, ಒಬ್ಬ ಇರಿಗೇಷನ್ ಸಚಿವರು ಒಂದು ದಿನ ಅವರ ಕಾರು ಕ್ಯಾನಲ್‌ನಲ್ಲಿ ಉರುಳಿದರೆ, ಕನಿಷ್ಟ ಪಕ್ಷ 50 ಲಕ್ಷ ರೂಪಾಯಿಗಳಿಂದ 1 ಕೋಟಿ ರೂಪಾಯಿ, ಹಣ ಸೇವಿಂಗ್ ಆಗುತ್ತದೆ ಸರ್ಕಾರಕ್ಕೆ ಎನ್ನತಕ್ಕ ಮಾತನ್ನು ಜನ ಆಡುತ್ತಾರೆ. ಈ ರೀತಿ ಮಾತನಾಡತಕ್ಕವರು ತಾಂತ್ರಿಕ ತಜ್ಞರು ಅಲ್ಲ, ಅಥವಾ ಅರ್ಥ ಪರಿಣಿತರೂ ಅಲ್ಲ. ಸಾಮಾನ್ಯ ಜನ ಈ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಎಚ್ಚರಿಕೆಯಿಂದ ಇಲ್ಲದೇ ಇದ್ದರೆ ನಷ್ಟವಾಗುತ್ತದೆ. ನೀವು ಟೆಂಡರ್ ಮತ್ತು ಪೀಸ್ ವರ್ಕ್ ಎಂದು ವ್ಯತ್ಯಾಸ ಮಾಡಬೇಡಿ. ಪೀಸ್ ವರ್ಕ್ ಆದರೆ ದುಡ್ಡು ಹೊಡೆಯುವುದು ಒಂದು 2-3 ತಿಂಗಳು ಮಾತ್ರ. ಏಕೆಂದರೆ ಒಂದಿಷ್ಟು ಬಿಲ್ಲು, ಪಲ್ಲು ಹಾಗೂ ಸುಳ್ಳು ಲೆಕ್ಕ ಬರೆಯಬೇಕಾಗುತ್ತದೆ. ಟೆಂಡರ್ ಆದರೆ 2-3 ಗಂಟೆಯಲ್ಲಿ ಹೊಡೆಯುತ್ತಾರೆ. ನೀವು ಟೆಂಡರ್ ಹಾಕಬೇಕಾದರೆ ಒಂದೇ ಅಫೀಸ್‌ನಲ್ಲಿ ಏನಾದರೂ ಟೆಂಡರ್ ಫಾರ್ಮ್ ಕೊಡಿ ಎಂದು ಹೇಳಿದರೆ, ದಾದಾಗಿರಿ ಮಾಡುವವರಿಗೆ ಕರೆದುಕೊಂಡು ಬಂದು ನಿಲ್ಲಿಸಿಕೊಂಡು ಒಬ್ಬರಿಗೇ ಟೆಂಡರ್ ಕೊಡಿಸಿ ....

ಛೇರ್ಮನ್ : ಪುಟ್ಟೇಗೌಡರೇ ದಯವಿಟ್ಟು ತಮ್ಮ ಭಾಷಣ ಬೇಗ ಮುಗಿಸಿ. ತಮಗೆ ನಿಗದಿಪಡಿಸಿದ ಸಮಯ ಈಗಾಗಲೇ ಮೀರಿದೆ.

ಶ್ರೀ ಸಿ. ಎಸ್. ಪುಟ್ಟೇಗೌಡ : ಯಾರಿಗೆ ಬೇಕೋ ಅವರೊಬ್ಬರಿಗೇ ಟೆಂಡರ್ ಕೊಡಿಸಿ ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಇದಕ್ಕೆ ಬೇಕಾದಷ್ಟು ಸಾಕ್ಷಿ ಇದೆ. ಈಗ ಒಂದೆರಡು ತಿಂಗಳ ಹಿಂದೆ ನಮ್ಮ ಮುಖ್ಯಮಂತ್ರಿಯವರು ಬಂದ ಮೇಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2 ಕೋಟಿ ರೂಪಾಯಿಯ ಟೆಂಡರ್ ಕರೆದಿದ್ದರು. ಟೆಂಡರ್ ಫಾರ್ಮ್‌ಕೊಡುವ ಮೊದಲೇ ಅಲ್ಲಿ ದುಡ್ಡು ಹಂಚಿಕೊಂಡು ಬಿಡುತ್ತಾರೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಸೇರಿದಂತೆ ಎಲ್ಲರಿಗೂ ಹಣ ಕೊಡಬೇಕು. ಶೇಕಡ 10ರಷ್ಟು ಹಣ ಕೊಡಬೇಕು. ಯಾರು ಇಷ್ಟು ಹಣ ಕೊಡುತ್ತಾರೋ ಅವರಿಗೆ ಮಾತ್ರ ಟಂಡರ್ ಫಾರ್ಮ್ ಇಷ್ಯೂ ಮಾಡಲಾಗುತ್ತದೆ. ಒಂದು ದಿವಸ ಯಾರೋ ಕಂಟ್ರಾಕ್ಟರ್ ಬಂದರು, ಸ್ವಾಮಿ ಈ ರೀತಿ ದರೋಡೆಯಾಗುತ್ತಿದೆ, ಈ ಬಗ್ಗೆ ಫೋನ್ಸ್ ಮಾಡಬೇಕು ಎಂದು ಈ ಬಗ್ಗೆ ಡಿ.ವಿ.ಸಿ. ಗೆ ಫೋನ್ ಮಾಡಿ ಅವತ್ತು ಹೇಳಿದ್ದಕ್ಕೆ 20 ಲಕ್ಷ ರೂಪಾಯಿಗಳ ದುಡ್ಡು ಹಂಚಿ 2 ಕೋಟಿ ರೂಪಾಯಿಗಳ ದುಡ್ಡು ಹೊಡೆಯುವುದು ತಪ್ಪಿತು, ಹೀಗಿರುವಾಗ ಇನ್ನೂ ಎಷ್ಟು ದುರುಪಯೋಗವಾಗುತ್ತಿದೆ ಎನ್ನತಕ್ಕದ್ದನ್ನು ತಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಈಗ ಖರ್ಚು ಮಾಡಲು 100 ರೂ. ನಿಗಧಿ ಪಡಿಸಿದ್ದರೆ, ಅದರಲ್ಲಿ ಕೇವಲ 50 ರೂಪಾಯಿಯೂ ಖರ್ಚಾಗುತ್ತಿಲ್ಲ, ನನಗೆ ಗೊತ್ತಿರುವ ಮಟ್ಟಿಗೆ. ಅವರು ಒಂದು ಎಸ್ಟಿಮೇಟ್ ಮಾಡುತ್ತಾರೆ. ಆ ಎಸ್ಟಿಮೇಟ್‌ನಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಶೇಕಡ 5, ಜೂನಿಯರ್ ಇಂಜಿನಿಯರ್‌ಗೆ ಶೇಕಡ 10, ಏಕೆಂದರೆ ಅವನು ಸ್ವಲ್ಪ ಬಿಸಿಲಿನಲ್ಲಿ ಓಡಾಡುತ್ತಾನೆ. ಹೆಚ್ಚು ಕಡಿಮೆ 25-30 ಪರ್ಸೆಂಟ್ ಅನ್ನು ಎಸ್ಟಿಮೇಟ್‌ನೊಳಗೆ ಸೇರಿಸಿಕೊಂಡು ಎಸ್ಟಿಮೇಟ್ ಮಾಡುತ್ತಾರೆ. ಇದು ಸತ್ಯವಾದ್ದಂತಹ ಸಂಗತಿ. ಇದು ದೇಶದ ದುಡ್ಡು, ಬಡ ಬೋರೇಗೌಢನ ದುಡ್ಡು, ಇದನ್ನು ಖರ್ಚು ಮಾಡುವಾಗ ದಯಮಾಡಿ ರಾಜಕೀಯ ಮಾಡಬೇಡಿ. ನೀರನ್ನು ಬಿಡುವ ಕಾಳಜಿ ಎಲ್ಲರಿಗೂ ಇರಲಿ. ಆದರೆ ರಾಜಕೀಯ ಮಾಡುವುದು ಬೇಡ. ನಮ್ಮ ಸತ್ಯನಾರಾಯಣ ಅವರ ಕ್ಷೇತ್ರವಾದ ಶಿರಾದಲ್ಲೂ ನೀರು ಬಿಡಿಸುತ್ತೇವೆ ಎಂದು ಪ್ರಚಾರ ಮಾಡುತ್ತಾರೆ. ಇದೇನು ಆಗಿ ಬಿಟ್ಟಿದೆ ಎಂದರೆ ವಿಶ್ವೇಶ್ವರಯ್ಯನವರ ಹೆಸರನ್ನು ಅಥವಾ ಮಹಾತ್ಮ ಗಾಂಧೀಜಿಯವರ ಹೆಸರನ್ನು ಹಾಕಿಕೊಂಡು ನಾವು ಚಳುವಳಿ ಮಾಡಿದರೆ ನಮ್ಮನ್ನು ಹರಿಶ್ಚಂದ್ರರು ಎಂದು ತಿಳಿದುಕೊಳ್ಳುತ್ತಾರೆಂದು ಭಾವಿಸಿ ರಾಜಕೀಯ ದುರ್ಲಾಭ ಪಡೆಯುವುದಕ್ಕೆ ಇದೊಂದು ರೀತಿ ಪ್ರಚಾರವಾಗಿದೆ. ಈ ಪ್ರಚಾರಕ್ಕೆ ಯಾರೂ ಬಗ್ಗಬೇಡಿ. ಬಡವರ ದುಡ್ಡು ಎಲ್ಲರದ್ದು. ಅಧಿಕಾರ ಯಾರಿಗೂ ಶಾಶ್ವತ ಅಲ್ಲ. ನಾವು ಶಾಸನಸಭೆಗೆ ಆರಿಸಿ ಬರುತ್ತೇವೆಂದು ತಿಳಿದು ಕೊಂಡಿದ್ದವರಲ್ಲ. 10-15 ರೂಪಾಯಿಗೆ ಬೆಂಗಳೂರಿನಲ್ಲಿ ಕೆಲಸ ಹುಡುಕಿಕೊಂಡು ಇದ್ದವರು. ದೇವರು ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಾನೆ. ಈ ರಾಜ್ಯದ ಬೊಕ್ಕಸದಿಂದ ಖರ್ಚಾಗತಕ್ಕ ದುಡ್ಡು ಪ್ರಾಮಾಣಿಕವಾಗಿ ಆಗಲಿ. ಅದರಿಂದ ಅಧಿಕಾರದಲ್ಲಿರುವ ಪಕ್ಷಕ್ಕೆ ಮಾತ್ರ ಕೀರ್ತಿ ಬರುವುದಿಲ್ಲ. ಆ ಭಾಗದಲ್ಲಿ ಕುಳಿತಿರತಕ್ಕ ನಂಜೇಗೌಡರು, ಮೊಯಿಲಿಯವರು ಅಥವಾ ಇನ್ನಾರಿಗೆ ಆಗಲಿ ಆ ಕೀರ್ತಿ ಸಲ್ಲುತ್ತದೆ ಎನ್ನತಕ್ಕ ಮಾತನ್ನು ಹೇಳಿ, ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6.20 ಪಿ.ಎಂ.

ಶ್ರಿ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರೆ. ಕಾವೇರಿ, ಕೃಷ್ಣಾ ನೀರಿನ ಬಗ್ಗೆ ಸನ್ಮಾನ್ಯ ನಂಜೇಗೌಡರು ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದಾರೆ ಈಗಾಗಲೇ ಪತ್ರಿಕೆಗಳಲ್ಲಿ ಒಂದು ಸ್ಟೇಟ್‌ಮೆಂಟ್ ಬಂದಿದೆ. "State's demand on Cauvery water challenged" ತಮಿಳುನಾಡಿನವರು ಇದರ ಬಗ್ಗೆ ಶುರು ಮಾಡಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಎಂದರೆ ಅರು ಪಾಯಿಂಟ್ ಎಂಟು ಲಕ್ಷ ಎಕರೆ ಮಾತ್ರ ನೀರಾವರಿ ಇರುವುದು. 177 ಟಿ.ಎಂ. ಸಿಎಫ್‌ಡಿ ಮಾತ್ರ ಅವರು ಉಪಯೋಗ ಮಾಡಿಕೊಳ್ಳಬೇಕು. ಈಗಾಗಲೇ ಟೆಕ್ನೋ ಎಕಾನಾಮಿಕ್ಸ್ ಸ್ಟಡೀಸ್ ಎಂಬ ಯಾವುದು ಒಂದು ಮದ್ರಾಸ್‌ನಲ್ಲಿ ಇರುವ ಸಂಘ ಇದೆ, ಅದು ಈ ಕಾವೇರಿ ಬಗ್ಗೆ ಹೇಳಿಕೆಯನ್ನು ಸೋಮವಾರ ಕೊಟ್ಟಿದೆ. 1924ನೇ ಇಸವಿಯಲ್ಲಿ ಅಗ್ರಿಮೆಂಟ್ ಈ ದೇಶದಲ್ಲಿ ಬ್ರಿಟೀಷರು ಇದ್ದಾಗ ಮಾಡಿತ್ತು. ಈ ದೇಶವನ್ನು ಬ್ರಿಟೀಷರು ಬಿಟ್ಟು ಹೋದಾಗಲೇ ಆ ಅಗ್ರಿಮೆಂಟ್ ಏನು ಇತ್ತು ಅದು ಆಗಲೇ ಇಳಿಯಬೇಕಾಗಿತ್ತು. ಮೇಲ್ದಂಡೆ ರಾಜ್ಯಗಳು ಹಾಗೂ ಕೆಳದಂಡೆ ರಾಜ್ಯಗಳು ಎಂದು ಇಲ್ಲಿ ರಾಜಕೀಯ ಇತ್ತು ಶ್ರೀ ರಾಮರೆಡ್ಡಿಯವರು ಹೇಳಿದಹಾಗೆ ನಾವು ಯಾವಾಗಲೂ ರಾಜಕೀಯ ಮಾಡಿಕೊಂಡು ಬಂದಿದ್ದೇವೆ. ಈಗ ಈ ಸದನದಲ್ಲಿ ಬಹಳ ಗಂಭೀರವಾಗಿ ಈ ನೀರಿನ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಆ ನೀರನ್ನು ಉಪಯೋಗ ಮಾಡಿಕೊಳ್ಳದೇ ಇರುವುದರಿಂದ ನಾವು ಎಷ್ಟು ಅಪಾಯ ಸ್ಥಿತಿಯಲ್ಲಿ ಇದ್ದೇವೆ ಎನ್ನುವ ವಿಷಯದಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಅದು ಯಾವುದೇ ಸರ್ಕಾರ ಇರಬಹುದು. ಸ್ವಾತಂತ್ರ್ಯ ಬಂದ ನಂತರ ಆ ನಿರ್ಣಯದ ಬಗ್ಗೆ ಯಾವುದೇ ಸರ್ಕಾರದವರು ಗಂಭೀರವಾಗಿ ಅಲೋಚನೆ ಮಾಡಲಿಲ್ಲ. ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ನೀರನ್ನು ಒದಗಿಸಿಕೊಡುವ ಮೂಲಕ ಕೃಷಿ ಕ್ಷೇತ್ರದ ಅಭಿವೃದ್ಧಿ ಸಾಧಿಸಿದ್ದಾರೆ. ಉದಾಹರಣೆಗೆ ರಷ್ಯಾ, ಪ್ರಪಂಚದ ಒಂದು ದೊಡ್ಡ ರಾಷ್ಟ್ರ. ರಷ್ಯಾದಲ್ಲಿ ಕೇವಲ ಆಹಾರ ಸಮಸ್ಯೆಗೋಸ್ಕರ ಇಡೀ ರಾಷ್ಟ್ರವೇ ನಿರ್ನಾಮ ಆಗತಕ್ಕಂಥ ಪರಿಸ್ಥಿತಿ ಸೃಷ್ಟಿಯಾಯಿತು. ಕೇವಲ ಬ್ರೆಡ್ ಪೀಸ್‌ಗೋಸ್ಕರ ಕಚ್ಚಾಟ ನಡೆದ ಉದಾಹರಣೆಗಳನ್ನು ನಾವು ನೋಡಿದ್ದೇವೆ. ಸಣ್ಣ ನೀರಾವರಿ ಯೋಜನೆಗಳು ಹಾಗೂ ಕೆರೆಗಳ ಬಗ್ಗೆ ನಾವು ಆಲೋಚನೆ ಮಾಡಲಿಲ್ಲ. ಎಲ್ಲಿಯವರೆಗೆ ನಾವು ಇದರ ಬಗ್ಗೆ ಅಲೋಚನೆ ಮಾಡುವುದಿಲ್ಲ ಅಲ್ಲಿಯವರೆಗೆ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ. ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಗಳಾಗಿದ್ದಾಗ ಲಿಫ್ಟ್ ಇರ್ರಿಗೇಷನ್ ಕಾರ್ಪೋರೇಷನ್ ಎಂದು ಮಾಡಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಣ್ಣ ನೀರಾವರಿ ಮಂತ್ರಿಗಳೂ ಇಲ್ಲ, ದೊಡ್ಡ ನೀರಾವರಿ ಮಂತ್ರಿಗಳೂ ಇಲ್ಲ.

ಅಧ್ಯಕ್ಷರು : ಸಣ್ಣ ನೀರಾವರಿ ಮಂತ್ರಿಗಳು ಇದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದೇ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನ್ಯ ದೇವೇಗೌಡರು ಲಿಫ್ಟ್ ಇರ್ರಿಗೇಷನ್ ಕಾರ್ಪೋರೇಷನ್ ಎಂದು ಮಾಡಿ

ಕೃಷ್ಣ ಹಾಗೂ ಕಾವೇರಿ ಬೇಸಿನ್‌ಗೆ ಸುಮಾರು ನೂರಾರು ಲಿಫ್ಟ್ ಇರ್ರಿಗೇಷನ್‌ಗಳು ಮಾಡಿದರು ಆದರೆ, ಮುಂದೆ ಏನಾಯಿತು ಎಂದರೆ ಯಾವುದೇ ಕ್ರಮ ಇಲ್ಲದೇ ಶ್ರೀ ವೀರಪ್ಪ ಮೊಯಿಲಿಯವರ ಸರ್ಕಾರದಲ್ಲಿ ಅದನ್ನು ಮೈನರ್ ಇರ್ರಿಗೇಷನ್‌ಗೆ ಮರ್ಜಿ ಮಾಡಲಾಯಿತು. ಅಲ್ಲಿ ಹುಟ್ಟಿತು ಇಲ್ಲಿ ಸಾಯಿತು. ಅದು ಏನಾಯಿತ್ತು ನನಗೆ ಗೊತ್ತಿಲ್ಲ. ಏಳು-ಎಂಟು ಕೋಟಿ ರೂಪಾಯಿಗಳು ವೇಸ್ಟ್ ಆಯಿತು. ಆದರೆ ಯಾವುದೇ ಲಿಫ್ಟ್ ಇರ್ರಿಗೇಶನ್ ಆಗಲಿಲ್ಲ. ಆದ್ದರಿಂದ ಸಣ್ಣ ನೀರಾವರಿ ಬಗ್ಗೆ ನೀವು ಆಲೋಚನೆ ಮಾಡದಿದ್ದರೆ ಏನೂ ಪ್ರಯೋಜನ ಇಲ್ಲ. ಮೂವತ್ಮೂರೂ ಸಾವಿರ ಕೆರೆಗಳಲ್ಲಿ ಇವೊತ್ತು ನಾವು ಎಷ್ಟು ಉಳಿಸಿಕೊಂಡಿದ್ದೇವೆ ಎಂಬುದನ್ನು ಗಂಭೀರವಾಗಿ ಚಿಂತನೆ ಮಾಡಬೇಕು. ಕೆರೆಗಳನ್ನು ನಾವು ಉಳಿಸಿಕೊಳ್ಳದೇ ಹೋದರೆ ಯಾವ ಮಟ್ಟದಲ್ಲಿ, ಅಪಾಯವಾಗುತ್ತದೆ ಎಂದರೆ ಮೈಸೂರು ಗೆಜೆಟಿಯರ್ 1929ರ ಪುಟ 156ರಲ್ಲಿ ನೀರಾವರಿ ಯೋಜನೆಯ ಬಗ್ಗೆ ದಾಖಲೆ ಇದೆ. ಅದನ್ನು ಓದಬೇಕು. ನಮ್ಮ ಪೂರ್ವಜರು ಒಂದು ಹನಿ ನೀರು ಹಾಳಾಗದ ರೀತಿಯಲ್ಲಿ ಹಿಡಿದಿಟ್ಟುಕೊಳ್ಳುತ್ತಿದ್ದರು ಎಂದರೆ ಎತ್ತರದ ಬಯಲುಗಳನ್ನು ವಶಕ್ಕೆ ತೆಗೆದುಕೊಂಡ ಮೊಟ್ಟಮೊದಲು ನಾಗರೀಕ ನಿವಾಸಿಗಳು ಉಪನದಿಗಳ ಬದಿಯಲ್ಲಿ ಸಣ್ಣ ಕೆರೆಗಳನ್ನು ಅಥವಾ ಕುಂಟೆಗಳನ್ನು ಕಟ್ಟಿದರು ಮತ್ತು ಹಂತಹಂತವಾಗಿ ದೊಡ್ಡ ಹಳ್ಳಗಳವರೆಗೆ ಇದನ್ನು ಮುಂದುವರಿಸುತ್ತಾ ಕೊಳ್ಳದ ಗುಂಟ ಪ್ರತಿ ಅನುಕೂಲ ಸ್ಥಳಗಳಲ್ಲಿ ಮಣ್ಣಿನ ದಿನ್ನೆಗಳನ್ನು ಕಟ್ಟುತ್ತಾ ನೀರನ್ನು ತಡೆಯುವ ಹಾಗೂ ಸಂಗ್ರಹಿಸುವ ಕ್ರಮ ಕೈಗೊಂಡರು. ಈ ಯೋಜನೆಯಿಂದಾಗಿ ನಿಧಾನವಾಗಿ ಕೆಳಗಡೆ ಮುಂದುವರಿಯುತ್ತಾ ಸಾಗಲು ಸಾಧ್ಯವಾಯಿತು. ಇದರಿಂದಾಗಿ ನೂರಾರು, ಸಾವಿರಾರೂ ಜಲಾಶಾಯಗಳನ್ನು ಒಂದೇ ಸರವಳಿಗೆ ಜೋಡಿಸುವ ಮೂಲಕ ಬರಗಾಲದ ಸಂದರ್ಭಗಳಲ್ಲಿ ಹನಿ ನೀರು ಪೋಲಾಗದಂತೆ ನೋಡಿಕೊಳ್ಳಲು ಸಾಧ್ಯವಾಯಿತು ಈಗಾಗಲೇ 20,000 ಕೆರೆಗಳನ್ನು ಕಳೆದುಕೊಂಡಿದ್ದೇವೆ. ಇವೊತ್ತು ದೊಡ್ಡ ನೀರಾವರಿಗೆ ಹೆಚ್ಚು ಹಣ ಬೇಕು. ಒಂದೇ ಒಂದು ವರ್ಷ ದೊಡ್ಡ ನೀರಾವರಿ ಯೋಜನೆಗಳನ್ನು ನಿಲ್ಲಿಸಿದರೆ ಇಡೀ ರಾಜ್ಯದ ಸಣ್ಣ ನೀರಾವರಿ ಯೋಜನೆಗಳನ್ನೆಲ್ಲಾ ಪೂರ್ತಿ ಮಾಡಬಹುದು. ನಾವು ದೊಡ್ಡ ನೀರಾವರಿ ಯೋಜನೆಗಳ ಮೂಲಕ ಎಷ್ಟು ಬೇಸಾಯ ಕೃಷಿಗೆ ನೀರು ಒದಗಿಸುತ್ತಿವೆಯೋ ಅಷ್ಟೇ ನೀರನ್ನು ಕೇವಲ ಒಂದೇ ವರ್ಷದಲ್ಲಿ ಈ ಸಣ್ಣ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದರಿಂದ ಪಡೆದುಕೊಳ್ಳಬಹುದು. ಇಡೀ ರಾಜ್ಯದಲ್ಲಿ ಕೇವಲ 450 ರೂಪಾಯಿಗಳನ್ನು ಖರ್ಚು ಮಾಡಿದರೇ ಈ ಸಣ್ಣ ನೀರಾವರಿ ಯೋಜನೆಗಳ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಈಗ ನಾವು ದೊಡ್ಡ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೋಸ್ಕರ ಸಣ್ಣ ನೀರಾವರಿ ಯೋಜನೆಗಳನ್ನು ಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದೇವೆ. ಮತ್ತೊಂದು ಕಡೆ ಏನಾಗಿದೆ ಎಂದರೆ ಎಲ್ಲಿ ಕಾಲುವೆಗಳು ಹಾಳಾಗಿ ಹೋಗುತ್ತವೆ ಅಲ್ಲಿ ಹೊಸ ಕಾಲುವೆಗಳನ್ನು ತೆಗೆಯುವುದರಿಂದ ಏನಾಗಿದೆ ಎಂಬುದನ್ನು ಗಮನಿಸಬೇಕು. ನನ್ನ ಜಾಗದಲ್ಲಿ ಇರತಕ್ಕ ಸಿಡಿಎಸ್ ನಲ್ಲಿ 800 ಕ್ಯೂಸೆಕ್ಸ್ ನೀರು ಹೋಗತಕ್ಕ ನಾಲೆಯಲ್ಲಿ ಇವೊತ್ತು ಆರು ನೂರು ಕ್ಯೂಸೆಕ್ಸ್ ಮಾತ್ರ ಹೋಗುತ್ತಿದೆ. ಶ್ರೀ ಕೃಷ್ಣಪ್ಪನವರು ಇಲ್ಲಿದ್ದಾರೆ ಟೇಲ್ ಎಂಡನವರಿಗೆ ನೀರು ಹೋಗುವುದಿಲ್ಲ ಎಂದು

ಹೇಳುತ್ತಾರೆ. ಒಂದೆರಡು ವರ್ಷಗಳಲ್ಲಿ ಕಾಲುವೆಗಳು ಮುಚ್ಚಿ ಹೋಗುವಂಥ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಆದುದರಿಂದ ಈ ಸಣ್ಣ ನೀರಾವರಿ ಯೋಜನೆ ಬಗ್ಗೆ ಗಂಭೀರವಾಗಿ ಅಲೋಚನೆ ಮಾಡಬೇಕು. ಈ ಸರ್ಕಾರ ಇದೆ, ಆ ಸರ್ಕಾರ ಇದೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಇದನ್ನು ಪಕ್ಷಾತೀತವಾಗಿ ಯೋಚನೆ ಮಾಡಬೇಕು. ಈ ಸರ್ಕಾರ ಬಂದ ಮೇಲೆ ಶ್ರೀ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ನೀರಾವರಿ ಆದರೆ ಅವರಿಗೆ ಹೆಸರು ಬರುತ್ತದೆ. ವೀರಪ್ಪ ಮೊಯಿಲಿಯವರ ಕಾಲದಲ್ಲಿ ಆಗಲಿಲ್ಲ ಇವುಗಳನ್ನೆಲ್ಲಾ ಬಿಟ್ಟು ಪಕ್ಷಾತೀತವಾಗಿ ಇದರ ಬಗ್ಗೆ ಡಿಸಿಷನ್ ಮಾಡಿ ನಾವೆಲ್ಲರೂ ಚಿಂತನೆ ಮಾಡಬೇಕು. ಇದು ರಾಜ್ಯದ ಸಮಸ್ಯೆಯಾಗಿರುವುದರಿಂದ ಪ್ರತಿಯೊಬ್ಬರೂ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಯೋಚನೆ ಮಾಡಬೇಕು. ಎಲ್ಲಾ ಅನಾವಶ್ಯಕವಾದ ಹಾಗೂ ಚೀಪ್ ಪಾಪ್ಯೂಲ್ಯಾರಿಟೀಸ್ ಕಾರ್ಯಕ್ರಮಗಳನ್ನು ನಿಲ್ಲಿಸಿ, ನಾವೆಲ್ಲರೂ ಇದರ ಬಗ್ಗೆ ಹೆಚ್ಚಿನ ಗಮನ ನೀಡಬೇಕು? ನಾವೆಲ್ಲರೂ ಮಾಡಿಕೊಂಡಿರುವ ಓಟಿನ ಕಾರ್ಯಕ್ರಮವನ್ನು ನಿಲ್ಲಿಸಿ ಪೂರ್ಣ ಪ್ರಮಾಣದಲ್ಲಿ ರಾಜ್ಯದ ಅಭಿವೃದ್ಧಿಗೆ, ಪೂರ್ಣ ಉದ್ಯೋಗ ವ್ಯವಸ್ಥೆ, ಪೂರ್ಣ ನೀರಾವರಿ ವ್ಯವಸ್ಥೆ ಇದರ ಮೂಲಕ ಕೈಗಾರಿಕಾ ವ್ಯವಸ್ಥೆ ಆಗಿ, ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ.

ಇವೊತ್ತು 152 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಮ್ಮ ಸರ್ಕಾರ ಬಂದ ಮೇಲೆ ಇಪ್ಪತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇನ್ನು ಐವತ್ತು ಕೋಟಿ ಕೊಡಬಹುದು. ಆದರೆ ಪ್ರಯೋಜನ ಏನು ? ನೀವು ಬೋರ್ ತೆಗೆದು ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ಭೂಮಿಯಲ್ಲಿ ನೀರು ಇಲ್ಲದೇ ಹೋದರೆ ಬೋರ್ ಹೊಡೆದು ಪ್ರಯೋಜನವೇನು ? ಒಂದು ಕಡೆ ಮೂರು ಬೋರ್ ಕೊರೆಯುತ್ತೀರಿ, ಇನ್ನೊಂದು ಕಡೆ ನಾಲ್ಕು ಬೋರ್ ಕೊರೆಯುತ್ತೀರಿ ಆದರೆ ನೀರು ಸಿಗುವುದಿಲ್ಲ. ಆದುದರಿಂದ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡತಕ್ಕ ಕೆಲಸ ಮಾಡಬೇಕು. ಬಚಾವತ್ ಅಯೋಗದ ಬಗ್ಗೆ ನಂಜೇಗೌಡರು ಹೇಳಿದ ಹಾಗೆ ಬರೆಯಬಹುದು. ರಾಜ್ಯದ ಆರ್ಥಿಕ ಸ್ಥಿತಿಗೆ ಕಾನೂನು ಬರೆಯಲು ಆಗುವುದಿಲ್ಲ. ಪ್ರಕೃತಿಗೆ ಕಾನೂನು ಬರೆಯಲು ಸಾಧ್ಯವಿಲ್ಲ. ಇದರ ಬಗ್ಗೆ ವರ್ಲ್ಡ್ ಬಾರ್ ಕೌನ್ಸಿಲ್‌ನವರು ಈಗಾಗಲೇ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆ ಎಂದರೆ ಇದು ಆಡಳಿತಾತ್ಮಕವಾದ ಸಮಸ್ಯೆ ಇರುವುದು ಪ್ರಕೃತಿಗೆ ಸಂಬಂಧಪಟ್ಟ ವಿಷಯ. ಇದನ್ನು ಯಾವುದೇ ನ್ಯಾಯಾಲಯ ತೆಗೆದುಕೊಳ್ಳಬಾರದು ಎಂದು ವರ್ಲ್ಡ್ ಬಾರ್ ಕೌನ್ಸಿಲ್‌ರವರು ಹೇಳಿದ್ದಾರೆ. ಯಳಸಂಕಿನಲ್ಲೂ ಸಹ ಇದರ ಬಗ್ಗೆ ಹೇಳಿದ್ದಾರೆ. ಇಡೀ ಪ್ರಪಂಚವೇ ಇದನ್ನು ಒಪ್ಪಿಕೊಂಡಿದೆ. ಆದರೆ ನಮ್ಮ ದೇಶದಲ್ಲಿ ಒಪ್ಪಿಕೊಂಡಿಲ್ಲ. ಇದು ಕಾನೂನು ಮಾರ್ಗಸೂಚಿ ಇಲ್ಲದೇ ಇರತಕ್ಕ ವಿಚಾರ ಆದರೂ ಸಹ ಇಲ್ಲಿ ಗೊತ್ತಿಲ್ಲದೇ ಇರುವುದರಿಂದ ಅವರು ಇಲ್ಲಿ ಹೇಳಿದ್ದಾರೆ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಆದ್ದರಿಂದ ಸರ್ಕಾರ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಅತ್ಯಂತ ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕು ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರೇವು ನಾಯಕ್ (ಕಮಲಾಪುರ) : ಮಾನ್ಯ ಅಧ್ಯಕ್ಷರೆ ನೀರಾವರಿ ಯೋಜನೆಯ ಬಗ್ಗೆ ಹಲವಾರು ಹಿರಿಯ ನಾಯಕರುಗಳು ಈಗಾಗಲೇ ಮಾತನಾಡಿದ್ದಾರೆ. ನಮ್ಮ ಗುಲಬರ್ಗಾ ಜಿಲ್ಲೆಯಲ್ಲಿ ಕಮಲಾಪುರ ಮತಕ್ಷೇತ್ರದಲ್ಲಿ ಎರಡು-ಮೂರು ಪ್ರಾಜೆಕ್ಟ್‌ಗಳು ಇವೆ. ಅಳಂದ ತಾಲ್ಲೂಕಿನಲ್ಲಿ ಅಮರ್ಜಾ ಪ್ರಾಜೆಕ್ಟ್ ಇದೆ. ಅದು ಸಾಕಷ್ಟು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಅದನ್ನು ಬೇಗ ಮುಗಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಹಾಗೂ ಕಣಜೋರಿ ನಾಲಾ ಬೆಣ್ಣೆತೊರಾ ಪ್ರಾಜೆಕ್ಟ್ ಇದೆ. ಈ ಎಲ್ಲಾ ಪ್ರಾಜೆಕ್ಟ್‌ಗಳನ್ನು ಬೇಗ ಮುಗಿಸಲು ಕ್ರಮ ಕೈಗೊಳ್ಳಬೇಕು. ನಮ್ಮ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ನನ್ನ ಕಮಲಾಪೂರ ಮತ ಕ್ಷೇತ್ರದಲ್ಲಿ ಸಾಕಷ್ಟು ಪರ್‌ಕೊಲೇಕ್ಷನ್ ಟ್ಯಾಂಕ್ ಮತ್ತು ಸಣ್ಣ ಸಣ್ಣ ನೀರಾವರಿ ಯೋಜನೆಗಳ ಹಾಗೂ ಕೆರೆಗಳ ಕೆಲಸಗಳನ್ನು ಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಾನು ನನ್ನ ಕ್ಷೇತ್ರದ ಹಳ್ಳಿಗಳಿಗೆ ಪ್ರವಾಸಕ್ಕೆ ಹೋದಾಗ ನಾನು ಸ್ವತಃ ಈ ಕುಡಿಯುವ ನೀರಿನ ಸಮಸ್ಯೆಯನ್ನು ನೋಡಿದ್ದೇನೆ. ಅಲ್ಲಿ ಕೆರೆಗಳು ಇಲ್ಲ, ಪರ್‌ಕೋಲೇಶನ್ ಟ್ಯಾಂಕ್‌ಗಳು ಇಲ್ಲ, ಬಾವಿಗಳು ಇಲ್ಲ. ಇರತಕ್ಕ ಬಾವಿಗಳಲ್ಲಿ ನೀರು ಸಿಕ್ಕುತ್ತಿಲ್ಲ. ಇವೊತ್ತು ಅಲ್ಲಿನ ಜನರು ಎತ್ತಿನ ಬಂಡಿಗಳಲ್ಲಿ ಕುಡಿಯುವ ನೀರನ್ನು ತೆಗೆದುಕೊಂಡು ಹೋಗತಕ್ಕ ಪರಿಸ್ಥಿತಿ ಉಂಟಾಗಿದೆ. ಶ್ರೀಮಂತರ ಬಾವಿಗಳ ಬಳಿ ಹೋಗಿ ಬಡವರು ಅವರು ತುಂಬಿದ ಮೇಲೆ ನೀರನ್ನು ತೆಗೆದುಕೊಂಡು ಬರತಕ್ಕ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಕೂಡಲೇ ನನ್ನ ಮತಕ್ಷೇತ್ರದಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಹಾಗೂ ಸಣ್ಣ ನೀರಾವರಿ ಯೋಜನೆಗಳಿಗೂ ಸಹ ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಪಾರ್ಲಿಮೆಂಟ್ ರೂಲ್ಸ್ ಪ್ರಕಾರವೇ ಲಿಸ್ಟ್ ಮಾಡಿರುವುದು. ಇಲ್ಲಿ ಅಧ್ಯಕ್ಷರು ಲಿಸ್ಟ್ ಮಾಡಿ ಹೋಗಿದ್ದಾರೆ. ಆ ಲಿಸ್ಟ್ ಪ್ರಕಾರ ನಾನು ಕರೆಯುತ್ತೇನೆ. ದಯವಿಟ್ಟು ನೀವೆಲ್ಲಾ ಕುಳಿತುಕೊಳ್ಳಿ. ಅಧ್ಯಕ್ಷರು ಸೂಚಿಸಿರುವರು ಹೆಸರುಗಳ ನಂತರ ನಾಲ್ಕು ಹೆಸರುಗಳನ್ನು ಮತ್ತೆ ಹೊಸದಾಗಿ ಸೇರಿಸಿದ್ದೇನೆ.

* ಶ್ರೀ ಶಂಕರಗೌಡ (ಹೋಸಪೇಟೆ): ಮಾನ್ಯ ಅಧ್ಯಕ್ಷರೇ, ಅತಿ ಪ್ರಾಚೀನ ಕಾಲದ ಕಾಲುವೆಗಳಾದ ವಿಜಯನಗರ ಅರಸರ ಕಾಲದಲ್ಲಿ ತೊಡಗಿಸಿದಂಥ ಬಸವಣ್ಣ, ರಾಯ, ಕಾಲುವೆಗಳಲ್ಲಿ ನೀರನ್ನು ಕುಬ್ಬು, ಬಾಳೆ, ಭತ್ತದ ಬೆಳೆಗಳಿಗೆ ಸದಾ ಕಾಲದಲ್ಲೂ ಬಿಡಲಾಗುತ್ತಿತ್ತು. ಈ ಒಂದು ಕಾಲುವೆಯ ಕ್ಲೋಶರ್ ಆಗಿ, ಡಿಸೆಂಬರ್ 10 ರಿಂದ ಜನವರಿ 10ರವರೆಗೆ ಅದರ ರೀಪೇರಿಗಾಗಿ ಈ ಅವಧಿಯನ್ನು ನಿಗಧಿ ಮಾಡಲಾಗಿತ್ತು. ಈ ಅವಧಿಯ ಪ್ರಕಾರ ಕಳೆದ ಡಿಸೆಂಬರ್ 10-12-1994 ರಿಂದ 10-01-1995 ರವರೆಗೆ ರೀಪೇರಿ ಆಗಿ ಕಾಲುವೆಯ ನೀರಿನ ತಡೆ ಅವಧಿ ಮುಗಿದು ಹೋಗಿರುತ್ತದೆ. ಅದರೂ ಮೊನ್ನೆ ಮೊನ್ನೆ ನಡೆದಂಥ ತುಂಗಭದ್ರಾ ಮಂಡಳಿಯ ಒಂದು ಮೀಟಿಂಗ್‌ನಲ್ಲಿ ಕಾಲುವೆಗೆ ನೀರನ್ನು ಬಿಡಲು ತುಂಗಭದ್ರಾ ನೀರಿನ ಬಿಡುಗಡೆ

ಪಟ್ಟಿ ಕೊಡುವಾಗ ಸದರಿ ಕಾಲುವೆಗಳಿಗೆ ಏಪ್ರಿಲ್ 15ರವರೆಗೆ ಮಾತ್ರ ನೀರು ಬಿಡುಗಡೆ ಪಟ್ಟಿ ಕೊಟ್ಟಿದ್ದು, ನಂತರ ನಿಲ್ಲಿಸಲು ಆದೇಶವನ್ನು ಅಚಾತುರ್ಯವಾಗಿ ಇಲ್ಲಿ ಮಾಡಲಾಗಿದೆ. ಏಕೆಂದರೆ 15 ನೇ ತಾರೀಖು ನೀರನ್ನು ನಿಲ್ಲಿಸುತ್ತಾರೆ. ಎನ್ನುವ ಸುದ್ದಿಯನ್ನು ಕೇಳಿದ ಕೂಡಲೇ ಆ ಭಾಗದ ಜನರೆಲ್ಲ ಹಾಹಾಕಾರದಿಂದ ಗಲಾಟೆ ಮಾಡುವ ಸಂಭವವಿತ್ತು. ಅವರೂ ನಮ್ಮ ಹತ್ತಿರ ಬಂದಮೇಲೆ ನಾವು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿಯವರ ಹತ್ತಿರ ಹೋಗಿ ಈ ಒಂದು ಆರ್ಡರ್ ಏನಿದೆ ಅದು ಸಮಂಜಸವಲ್ಲ ಮತ್ತು ಈ ರೀತಿಯ ಅಸಮಂಜಸವಾದ ಆರ್ಡರ್ ಎಂದೂ ನಮಗೆ ಅನ್ವಯ ಆಗುವುದಿಲ್ಲ ಎಂದು ಹೇಳಿ ನಾವು ಪ್ರತಿಭಟನೆ ಮಾಡಿದಾಗ ಕಾರ್ಯದರ್ಶಿಯವರು ತಾತ್ಕಾಲಿಕವಾಗಿ ನೀರನ್ನು ಬಿಡಲು ಒಪ್ಪಿಕೊಂಡಿದ್ದಾರೆ. ಆದರೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಸಹಿತ ನಿನ್ನೆ ಒಂದು ಪತ್ರವನ್ನು ಅವರಿಗೆ ಕೊಡುವುದರ ಮುಖಾಂತರ ಅವರ ಅವಗಾಹನೆಗೆ ಇದನ್ನು ತಂದಿದ್ದೇನೆ. ಈ ಒಂದು ನೀರು ಬಿಡುವುದು ನಿಲುಗಡೆ ಆದರೆ ಅದರ ಕೆಳಗಡೆ ಬರತಕ್ಕಂಥ ಸುಮಾರು 30 ಸಾವಿರ ಎಕರೆ ಬೆಳೆಯತಕ್ಕಂಥ ಕಬ್ಬು, ಭತ್ತ, ಬಾಳೆ ಬೆಳೆಗಳು ಹಾಳಾಗುವುದರಿಂದ ಜನರಿಗೆ ಅನೇಕ ಕೋಟಿ ರೂಪಾಯಿಗಳ ನಷ್ಟವಾಗುವ ಸಂಭವಿರುತ್ತದೆ. ಇದನ್ನು ತಪ್ಪಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳುತ್ತೇನೆ. ಹಾಗೆಯೇ ಈ ಕಾಲುವೆಗಳಿಗೆ ಸದಾ ಕಾಲ 11 ತಿಂಗಳು ನೀರನ್ನು ಕೊಡತಕ್ಕಂಥ ವ್ಯವಸ್ಥೆ ಇರುವುದರಿಂದ ಯಾವುದೇ ಕಾರಣಕ್ಕೂ ಮತ್ತು ಕಾಲಕ್ಕೂ ಈ ಒಂದು ಪ್ರದೇಶಕ್ಕೆ ನೀರಿನ ತೊಂದರೆ ಆಗದಂತೆ ನಮಗೆ ಆ ಇಲಾಖೆಯಿಂದ ಒಂದು ವ್ಯವಸ್ಥೆಯನ್ನು ಮಾಡಿಸಿಕೊಡಬೇಕು ಎಂದು ಹೇಳಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಎನ್.ಶಿವಶಂಕರಪ್ಪ (ದಾವಣಗೆರೆ) : ಸಭಾಧ್ಯಕ್ಷರೇ, ನನ್ನ ಸ್ನೇಹಿತರೆಲ್ಲರೂ ಕೂಡ ಕೃಷ್ಣ ಮತ್ತು ಕಾವೇರಿ ಬಗ್ಗೆ ಹೆಚ್ಚಾಗಿ ಮಾತನಾಡಿದ್ದಾರೆ. ಆದ್ದರಿಂದ ನಾನು ಭದ್ರಾ ಜಲಾಶಯಗಳ ಬಗ್ಗೆ ಸಂಕ್ಷಿಪ್ತವಾಗಿ ಅದರ ಪರಿಚಯವನ್ನು ಮತ್ತು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಈ ಭದ್ರಾ ಜಲಾಶಯ ಕೇವಲ 9 ಕೋಟಿ ರೂಪಾಯಿಗಳ ಎಸ್ಟಿಮೇಟ್‌ನಲ್ಲಿ 1945-46ನೇ ಇಸವಿಯಲ್ಲಿ ಮಾಡಿ, ಅದನ್ನು 20 ವರ್ಷಗಳು ಆದಮೇಲೆ 1965 ನೇ ಇಸವಿಯಲ್ಲಿ ನೀರನ್ನು ಕೊಡತಕ್ಕಂಥ ಒಂದು ಕೆಲಸವನ್ನು 33 ಕೋಟಿ ರೂಪಾಯಿ ಖರ್ಚು ಮಾಡಿ, ಅಂದರೆ 500 ಪರ್ಸೆಂಟ್ ಹೆಚ್ಚಿನ ಹಣ ಖರ್ಚು ಮಾಡಿ ಜಲಾಶಯವನ್ನು 1965 ನೇ ಇಸವಿಯಲ್ಲಿ ಮುಗಿಸಿ ಅದರಿಂದ ನೀರನ್ನು ಕೊಡತಕ್ಕಂಥ ಕಾರ್ಯ ಕ್ರಮವನ್ನು ಹಾಕಿ ನೀರನ್ನು ಕೊಟ್ಟಿದ್ದಾರೆ. ಇದರ ನೀರನ್ನು ಶೇಖರಣೆ ಮಾಡತಕ್ಕಂಥ ಪ್ರದೇಶ 186 ಅಡಿ ಆಳದಲ್ಲಿ ನೀರು ನಿಂತಿರುತ್ತದೆ. ಅದರಲ್ಲಿ ಇವೊತ್ತಿನ ದಿವಸ ಈ 186 ಅಡಿ ಇದ್ದರೂ ಕೂಡ ಅದರ ತುಂಬಾ ನೀರು ತುಂಬಿದ್ದರು ಕೂಡ ನಮಗೆ 145 ಅಡಿಗಿಂತ ಕೆಳಗಡೆ ಹೋದರೆ ನೀರನ್ನು ತೆಗೆಯತಕ್ಕಂಥ ಪರಿಸ್ಥಿತಿ ಇಲ್ಲ. ಇದಕ್ಕೆ ಕಾರಣ ಈ ಜಲಾಶಯ ಈಗಾಗಲೇ ಎರಡು ಬಾರಿ ಒಡೆದು ಹೋಗಿರುವುದು ತಮಗೆ ಗೊತ್ತಿದೆ. ಮತ್ತು ಈ 33 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಬರೀ ಡ್ಯಾಮ್

ಮತ್ತು ಈ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಕೆಲವು ಪಿಕ್‌ಅಪ್‌ಗಳ ನಿರ್ಮಾಣ ಹಾಗೂ ನೀರಾವರಿ ರಸ್ತೆ ಮುಂತಾದವುಗಳಿಗೆ ಹಣ ಇದರಲ್ಲಿ ಸೇರಿಲ್ಲ. ಆದುದರಿಂದ ಇದುವರೆಗೆ ಕೂಡ ಆ ರಸ್ತೆಗಳು ಮತ್ತು ಪಿಕ್‌ಅಪ್‌ಗಳನ್ನು ಕಟ್ಟಿ ನೀರಿನ ಪ್ರಯೋಜನವನ್ನು ಸರಿಯಾಗಿ ಪಡೆದುಕೊಳ್ಳತಕ್ಕಂಥ ಒಂದು ಕಾರ್ಯವನ್ನು ಮಾಡಿಲ್ಲವೆಂದು ನಾನು ಬಹಳಷ್ಟು ವಿಷಾದಪಡುತ್ತೇನೆ. ಮತ್ತು ಈ ನೀರಾವರಿ ರಸ್ತೆ ಮತ್ತು ಸರ್ವೀಸ್ ರಸ್ತೆಗಳಿಗೆ 80 ಕೋಟಿ ರೂಪಾಯಿಗಳ ಅಂದಾಜನ್ನು ಸರ್ಕಾರಕ್ಕೆ ಈ ಹಿಂದೆ ಸಲ್ಲಿಸಿದ್ದಾರೆ. ಆದರೆ ಅದು ಇದುವರೆಗೂ ಕೂಡ ಸ್ಯಾಂಕ್ಷನ್ ಆಗಿಲ್ಲ, ಕಾರ್ಯಗತ ಆಗಿಲ್ಲ ಎಂದು ತಿಳಿದು ಬಂದಿದೆ. ಎರಡೂವರೆ ಲಕ್ಷ ಪ್ರದೇಶದಲ್ಲಿ ಒಂದು ಸೀಸನ್ ಭತ್ತದ ಬೆಳೆಯನ್ನು ಅಲ್ಲಿ ಬೆಳೆಯುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಸ್ಪೀಚ್‌ನ್ನು ಯಾರು ಬರೆದುಕೊಳ್ಳುತ್ತಿದ್ದಾರೆ. ಯಾರಾದರೂ ಅಟ್ಲೀಸ್ಟ್ ರೆಫರ್ ಮಾಡಿ ಇಂಥಿಂಥ ಸದಸ್ಯರು ಇಂಥ ಸಲಹೆ ಹೇಳಿದರು, ನಾವು ಅದಕ್ಕೆ ಎಷ್ಟು ಹಣ ಇಟ್ಟಿದ್ದೇವೆ, ಎಷ್ಟು ಬಿಡುಗಡೆ ಮಾಡುತ್ತೇವೆ. ಅಥವಾ ಕೆಲಸ ತೆಗೆದುಕೊಂಡಿದ್ದೇವೆ, ಅಥವಾ ಇಲ್ಲ ಎಂದು ಏನಾದರೂ ಒಂದು ಹೇಳಿದರೆ ಸಮಾಧಾನವಿರುತ್ತದೆ. ಯಾರಾದರೂ ಮಾತನಾಡಬಹುದು, ನಾಳೆ ನಾನೇ ಮಾತನಾಡಬಹುದು ಅಥವಾ ಮತ್ತೊಬ್ಬರು ಮಾತನಾಡಬಹುದು, ಆ ಪ್ರಶ್ನೆ ಬೇರೆ. ಯಾರಿಗಾದರೂ ಒಪ್ಪಿಸಬೇಕು, ನೀವೇ ಹೇಳಬೇಕು, ನೀವೇ ಬರೆದುಕೊಳ್ಳಬೇಕು ಎಂದು ನಾನು ಹೇಳುವುದಿಲ್ಲ, ಒಬ್ಬರು ಯಾರಾದರೂ ಜವಾಬ್ದಾರಿಯಿರುವವರು ಬರೆದುಕೊಂಡು ಮುಖ್ಯಮಂತ್ರಿಗಳು ಬಂದಾಗ ಅವರಿಗೆ ಕೊಟ್ಟು ಅದರ ಬಗ್ಗೆ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ ನಾವು ಬರೆದುಕೊಳ್ಳುತ್ತಿದ್ದೇವೆ.

ಗೊಂದಲ

ಶ್ರೀ ಹೆಚ್.ಎನ್ ನಂಜೇಗೌಡ : ಈ ಭದ್ರಾ ಬಲದಂಡೆ ಒಡೆದಿರುವುದನ್ನು ಅವರು ಹೇಳುತ್ತಿದ್ದಾರೆ. It is a serious matter, I am telling you ನಾನು ಅಬ್‌ಸರ್ವ್ ಮಾಡುತ್ತಿದ್ದೇನೆ. ಅಲ್ಲಿ 21 ಟಿ.ಎಂ.ಸಿ. ನೀರು ಇದ್ದರೂ ನೀರು ಕೊಡುವಂಥ ಪರಿಸ್ಥಿತಿ ಇಲ್ಲ. ಇದಕ್ಕೆ ಉತ್ತರ ಬೇಕಲ್ಲ. ನಾನಾದರೂ ನೋಡುತ್ತಿದ್ದೇನೆ. ಯಾರೂ ಬರೆದುಕೊಳ್ಳುತ್ತಿಲ್ಲ. ಇದು ಹೀಗಾದರೆ 21 ಟಿ.ಎಂ.ಸಿ. ನೀರು ಡೆಡ್ ವಾಟರ್ ಇಟ್ಟುಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ನಾವು ಕೊಟ್ಟ ವಿಚಾರಕ್ಕೆ ನಾವು ಉತ್ತರ ನಿರೀಕ್ಷಣೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಹಣಕಾಸು ಮಂತ್ರಿಗಳು ಬರೆದುಕೊಳ್ಳುತ್ತೇವೆ ಎಂದು ಹೇಳಿದರು. ಅದು ಸಮಜಾಯಿಷಿಯಾಯಿತು. ನಾವು ಬರೆದುಕೊಳ್ಳುತ್ತೇವೆ ಸ್ವಾಮಿ, ನೀವು ಹೇಳುವುದನ್ನೆಲ್ಲಾ ಹೇಳಿ ಎಂದು ಹೇಳಿದರೆ ನಾವು ಆಯಿತು ಅವರು ಬರೆದುಕೊಳ್ಳುತ್ತಾರೆ ಎಂದು ಕುಳಿತುಕೊಳ್ಳುವುದು. ಆದರೆ ಬರೆದುಕೊಳ್ಳುವವರಲ್ಲಿ ಒಂದು ಪ್ರಾಮಾಣಿಕತೆ ಬೇಕಲ್ಲ. ನಿಮಗೆ ಗೊತ್ತಿರಬೇಕು. ''ನನ್ನ ಮುಂದಿರುವ

ಕಾಗದ ಪತ್ರಗಳನ್ನು ಮಂಡಿಸುತ್ತೇನೆ, ಮಂಡಿಸುತ್ತೇನೆ '' ಎಂದು ಹೇಳುತ್ತಾರೆ. ಬೆಳಿಗ್ಗೆ ಎದ್ದು ಅಷ್ಟೋತ್ತರ ಮಾಡಿದ ಹಾಗೆ ಇರುತ್ತದೆ.

ಉಪಾಧ್ಯಕ್ಷರು : ಇವೊತ್ತು ಎಷ್ಟು ಹೊತ್ತು ಆದರೂ ಚರ್ಚೆ ಮುಗಿಸಲೇಬೇಕು. ಐದ್ಯೆದು ನಿಮಿಷ ಮಾತ್ರ ಟೈಮ್ ಕೊಡುವುದು. ತಾವು ಹೇಳಿದ್ದನ್ನು ಅವರು ಗಮನಿಸಿದ್ದಾರೆ. ಶಿವಶಂಕರಪ್ಪನವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ದಯವಿಟ್ಟು ತಾವು ಕುಳಿತುಕೊಂಡರೆ ಒಳ್ಳೆಯದು.

ಗೊಂದಲ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಈ ವಿಷಯದ ಮೇಲೆ ಯಾರಿಗಾದರೂ ಒಪ್ಪಿಸಿದರೆ ಅವರು ಬರೆದುಕೊಳ್ಳುತ್ತಾರೆ. ಇದು ಸೀರಿಯಸ್ ಮ್ಯಾಟರ್. ಈಗ ಮೈನರ್ ಇರಿಗೇಷನ್ ಬಗ್ಗೆ ಪುಟ್ಟಣ್ಣನವರು ಎತ್ತಿದರು. ಈ ಹಿಂದೆ ಇದ್ದಂಥ ಸರ್ಕಾರದವರು ಮತ್ತು ನಾವೆಲ್ಲರೂ ಇದರ ಬಗ್ಗೆ ಹೋರಾಟ ಮಾಡಿದವರೇ. ಆದರೂ ಕೂಡ ಕೆಲವು ಕಾರಣಗಳನ್ನು ಒಡ್ಡಿ ರಂಗನಾಥ್‌ರವರು ಅದನ್ನು ಮರ್ಜ್ ಮಾಡಿದರು. ಈ ಬೈಫರ್ಕೇಷನ್ ಮಾಡಿ ಅಂತ ಅಂದಿನಿಂದ ಹಿಡಿದು ಅಪ್ಲಿಕೇಶನ್ ಎಲ್ಲರದ್ದೂ ಇದೆ, ನಮ್ಮದೂ ಇದೆ. ನಾವು ಮಂತ್ರಿಯಾಗಿದ್ದಾಗ ಮಿನಿಟ್ ಹಾಕಿದ್ದೆವು, ಬೇರೆಯವರದ್ದೂ ಕೂಡ ಇದೆ. ಆದರೆ ಇದಕ್ಕೆ ಯಾರಾದರೂ ಬರೆದುಕೊಳ್ಳಬೇಕಲ್ಲ. ಈಗ ಪುಟ್ಟಣ್ಣನವರು ಮೈನರ್ ಇರಿಗೇಷನ್ ಬಗ್ಗೆ ಹೇಳುತ್ತಿರುವಾಗ ಮೈನರ್ ಇರಿಗೇಷನ್ ಮಂತ್ರಿಗಳು ಇಲ್ಲಿ ಕುಳಿತಿದ್ದರು. ನೀವು ಇಲ್ಲಿ ಏಕೆ ಕುಳಿತುಕೊಂಡಿರಿ ಎಂದು ನಾವು ಕೇಳುವುದಕ್ಕೆ ಆಗುತ್ತದೆಯೆ? ಇವರು ತಮ್ಮ ಜಾಗದಲ್ಲಿ ಇದ್ದು ವಿಷಯಗಳನ್ನು ಬರೆದುಕೊಳ್ಳಬೇಕು. ನಾವು ಇಂಥ ಒಂದೊಂದು ಸಣ್ಣಪುಟ್ಟ ವಿಚಾರಗಳನ್ನು ಹೇಳುವುದಕ್ಕೆ ಆಗುವುದಿಲ್ಲ.

ಈ ವಿಚಾರವನ್ನು ನಿಮಗೂ ಕೂಡ ಹೇಳಿದರೆ ಅದು ತಪ್ಪಾಗುತ್ತದೆ. ದಯವಿಟ್ಟು ಅಟ್ಲೀಸ್ಟ್ ಮುಖ್ಯವಾದ ವಿಷಯಗಳ ಬಗ್ಗೆ ಮಾತನಾಡುವಾಗ ಒಬಿಬ್ಬರು ಬರೆದುಕೊಂಡರೆ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಅನುಕೂಲವಾಗುತ್ತದೆ. ತಾವು ಸ್ವಲ್ಪ ಅವರಿಗೆ ಹೇಳಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ ನನ್ನ ಇಲಾಖೆಗೆ ಸಂಬಂಧಪಟ್ಟ ಎಲ್ಲಾವನ್ನೂ ಗುರುತು ಹಾಕಿಕೊಂಡಿದ್ದೇನೆ. ಮತ್ತು ಎಲ್ಲಾ ವಿಚಾರಗಳನ್ನು ಬರೆದುಕೊಂಡಿದ್ದೇನೆ.

ಶ್ರೀ. ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು): ಸಣ್ಣ ನೀರಾವರಿ ಮಂತ್ರಿಗಳಾದ ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್‌ರವರು ರೂಡ ಇಲ್ಲಿದ್ದಾರೆ, ಮುಖ್ಯಮಂತ್ರಿಗಳಿಗೆ ಅವರು ಉತ್ತರ ಹೇಳಿದಂತ ವಿಚಾರವನ್ನು ನಾನು ಕೂಡ ಕುಳಿತುಕೊಂಡು ಮುಖ್ಯಮಂತ್ರಿಗಳಿಗೆ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಅದನ್ನು ಕೊಡುತ್ತೇನೆ. ಅವರು ಅದಕ್ಕೆ ಉತ್ತರ ಕೊಡುತ್ತಾರೆ. ಯಾರು ಬರೆದುಕೊಳ್ಳುವುದಿಲ್ಲ, ಇದನ್ನು ಗಂಭೀರನಾಗಿ ವಿಚಾರ ಮಾಡುತ್ತಿಲ್ಲ ಎನ್ನುವುದು

ಸರಿಯಲ್ಲ. ಇದು ಅತ್ಯಂತ, ಬಹಳ ಗಂಭೀರವಾದಂತ ವಿಚಾರ ಪ್ರಮುಖವಾದ ವಿಚಾರ ಇದನ್ನು ನಾವು ಗಮನಿಸುತ್ತೇವೆ.

ಶ್ರೀ ಜಿ. ಶಂಕರಗೌಡ : 400-500 ಕೋಟಿ ರೂಪಾಯಿಗಳ ಏತಕ್ಕೆ ಲೂಟಿ ಆಯಿತು? ಉತ್ತರದಲ್ಲಿ ಅದಕ್ಕೆ ಒಂದು ಚಕಾರ ಶಬ್ದವನ್ನು ಹೇಳಿಲ್ಲ.

ವೈಸ್ ಛೇರ್ಮನ್ : ಸಮಯವನ್ನು ಏತಕ್ಕೆ ವ್ಯರ್ಥ ಮಾಡುತ್ತೀರಿ, ಈಗಾಗಲೇ ಗಂಟೆ 6.40 ಆಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜನ ಖರ್ಗೆ : ನೀವು ಕೇಳದೆ ಹೋದರೆ ಇದು ವ್ಯರ್ಥವಾದಂತೆ.

ವೈಸ್ ಛೇರ್ಮನ್ : ಖರ್ಗೆಯವರೆ ಈಗ ಅವರು ಕೇಳುತ್ತೇವೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಈಗ ಒಂದು ಪ್ರಶ್ನೆ, ತಮಗೂ ಅನುಭವ ಇದೆ. ಸದನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಅಥವಾ ಆಯವ್ಯಯದ ಮೇಲೆ ಭಾಷಣ ನಡೆಯುತ್ತಿರುತ್ತದೆಂದು ಇಟ್ಟುಕೊಳ್ಳಿ, ನಾವು ಅನೇಕರು ಅನೇಕ ಸಲಹೆಗಳನ್ನು ಕೊಡುತ್ತೇವೆ. ತಾವು ನೋಡಿರಬಹುದು, ಮುಖ್ಯಮಂತ್ರಿಗಳಾಗಲಿ, ಸಂಬಂಧಪಟ್ಟ ಸಚಿವರಾಗಲಿ ಉತ್ತರ ಕೊಡುವಾಗ, ಎಲ್ಲರೂ ಹೇಳಿದಂತೆ ಮಾತಿಗೆ ಉತ್ತರವನ್ನೆ ಕೊಡುವುದಿಲ್ಲ. ನಿನ್ನೆ ನಾನು ತಕರಾರು ಬಹಳ ಮಾಡಬಹುದಿತ್ತು. ನಾನು ಭಾಷಣ ಮಾಡಿದ ಬಗ್ಗೆ ಒಂದು ಅಕ್ಷರವಾಗಲಿ ಇಲ್ಲ, ಅದರ ಬಗ್ಗೆ ಉತ್ತರವೇ ಕೊಡಲಿಲ್ಲ. ಅಂದರೆ ಅವರು ಬರೆದುಕೊಂಡಿದ್ದಾರೆಂದು ಹೇಳಬೇಕೇ? ಅದಕ್ಕೆ ಅವರು ಏತಕ್ಕೆ ಉತ್ತರ ಕೊಡಲಿಲ್ಲವೆಂದು ನಾವು ಕೇಳಬೇಕೇ? ಇದು ಆಗುವುದಿಲ್ಲ. ಅನೇಕ ಸಂದರ್ಭದಲ್ಲಿ ನಾವು ಎದ್ದು ಕೇಳಿದಾಗ ಇವರೆಲ್ಲಾ ಬರೆದು, ಪ್ರತಿಯೊಂದು ಟಿಪ್ಪಣಿಯನ್ನು ಇಟ್ಟುಕೊಂಡು ಇವರು ಕೇಳಿದ್ದರೆ ಹೌದಪ್ಪ ಇಂತಿಂತವರು ಮಾತನಾಡಿದ್ದಾರೆಂದು ಹೇಳಬಹುದು. ಅದು ಇಲ್ಲವೇ ಇಲ್ಲ. ಈಗ ಇದೇನಾಗಿದೆ ಎಂದರೆ ಒಂದು ರೀತಿ ಸುಮ್ಮನೆ ಈ ಸಭೆಯಲ್ಲಿ ನೀವು ಕೇಳಿದಿರಿ ನಾವು ಕೇಳಿದೆವು, ಅದಕ್ಕೆ ಒಂದು ಸಮಜಾಯಿಷಿಯೇ ಹೊರತು ಇದು ಪ್ರಾಮಾಣಿಕತೆಯಲ್ಲ.

ವೈಸ್ ಛೇರ್ಮನ್ : ಇಲ್ಲ ಈಗ ಅವರು ಎಲ್ಲವನ್ನು ನೋಟ್ ಮಾಡಿ ಕೊಳ್ಳುತ್ತಿದ್ದಾರೆ.

ಶ್ರೀ ಶಿವಶಂಕರಪ್ಪ .ಎಸ್. : ಅಧ್ಯಕ್ಷರೆ ಹಿಂದೆ ಕರ್ನಾಟಕದಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳು ಮಾತ್ರ ಭತ್ತದ ಕಣಜ ಹೊಂದಿರತಕ್ಕಂತಹ ಪ್ರದೇಶವೆಂದು ಕರೆಯುತ್ತಿದ್ದರು. ಆದರೆ ಇವತ್ತಿನ ದಿವಸ ಈ ಭದ್ರಾ ಅಣೆಕಟ್ಟಿನ ಕೆಳಗಡೆ ಬರತಕ್ಕ ಶಿವಮೊಗ್ಗ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ರಾಯಚೂರು ಜಿಲ್ಲೆ ಹಾಗೂ ಬಳ್ಳಾರಿ ಜಿಲ್ಲೆ ಈ ಎಲ್ಲಾ ಜಿಲ್ಲೆಗಳು ಇವತ್ತು ಭತ್ತದ ಕಣಜವೆಂದು ಹೆಸರುವಾಸಿಯಾಗಿವೆ ಮತ್ತು ಭತ್ತವನ್ನು ಹೇರಳವಾಗಿ ಬೆಳೆಯತಕ್ಕ ಪ್ರದೇಶವೆಂದು ತಮಗೆ ಗೊತ್ತಿದೆ. ಈ ಭದ್ರಾ ಯೋಜನೆಯಲ್ಲಿ ನೀರು ಎಷ್ಟು ಪೋಲಾಗುತ್ತಿದೆ ಎನ್ನುವುದನ್ನು ನಮ್ಮ ಇಂಜಿನಿಯರ್‌ಗಳು ಅಳತೆ ಮಾಡಿ ನೋಡಿದರೆ ಅದು ಗೊತ್ತಾಗುತ್ತದೆ. ಸರ್ಕಾರ ಅದರ ಬಗ್ಗೆ ಗಮನ

ಹರಿಸಿ, ಈ ನೀರು ಪೋಲಾಗದಂತೆ ವ್ಯವಸ್ಥೆಯನ್ನು ಮಾಡಿ ಈ ಪಿಕ್‌ಅಪ್‌ಗಳನ್ನು ಮತ್ತು ಸೇತುವೆಗಳನ್ನು ಹಾಗೂ ಮುಖ್ಯವಾದ ಲೈನಿಂಗ್ ಎಂದು ಏನು ಹೇಳುತ್ತೇವೆ ಆ ಸಿಮೆಂಟ್ ಲೈನಿಂಗ್‌ಗಳನ್ನು ಈ ಕಾಲುವೆಗಳಲ್ಲಿ ಮಾಡಿದರೆ ಇವತ್ತಿನ ದಿವಸ ಶೇಕಡ 25ರಷ್ಟು ನೀರನ್ನು ನಾವು ಉಳಿಸಬಹುದು. ಹರಿದು ಉಳಿಯುವ ನೀರನ್ನು ನಾವು ಯಾವ ರೀತಿ ಖರ್ಚು ಮಾಡಬಹುದು, ಯಾರಿಗೆ ಕೊಡಬಹುದು ಎನ್ನುವುದನ್ನು ನಂತರ ಯೋಚನೆ ಮಾಡಬಹುದು. ಆದರೆ ಇವತ್ತಿನ ದಿವಸ, ರಾಯಚೂರು ಜಿಲ್ಲೆಯವರಿಗೂ ನೀರಿಲ್ಲ ನಮ್ಮ ಚಿತ್ರದುರ್ಗ ಜಿಲ್ಲೆಯವರಿಗೂ ನೀರಿಲ್ಲವೆನ್ನುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಕಾರಣ ಸರ್ಕಾರವೇ ಹೊರತು ಬೇರೆ ಯಾರೂ ಅಲ್ಲವೆನ್ನುವುದು ನನ್ನ ನಂಬಿಕೆ ಮತ್ತು ಈಗ ಕಾಡಾ (ಸಿವಿಡಿವಿ) ಮಾಡಿದ್ದಾರೆ, ಆದರೆ ಅದಕ್ಕೆ ಹಣವನ್ನು ಮಂಜೂರು ಮಾಡದೆ ಅದಕ್ಕೆ ಯಾವುದೇ ಕೆಲಸವಿಲ್ಲದಂತೆ ಸುಮ್ಮನೆ ಕುಳಿತುಕೊಂಡು ಖರ್ಚು ಮಾಡತಕ್ಕ ಒಂದು ಬಿಳಿ ಆನೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದೆನ್ನುವುದು ನನ್ನ ಅಭಿಪ್ರಾಯ. ಚಿಕ್ಕ ಚಿಕ್ಕ ಪ್ರಾಂತ್ಯಗಳಾದ ಪಂಜಾಬ್ ಮತ್ತು ಹರಿಯಾಣಗಳಲ್ಲಿ ಈ ಸಿಮೆಂಟ್ ಲೈನಿಂಗ್ ಮಾಡಿ ನೀರನ್ನು ಉಳಿಸುವುದನ್ನು ನಾವು ನೋಡುತ್ತಿದ್ದೇವೆ. ಇದೇ ರೀತಿ ಲೈನಿಂಗ್ ಮಾಡಿದರೆ ನಾವು ಶೇಕಡ 25 ರಷ್ಟು ಉಳಿಸಬಹುದು ಮತ್ತು ಈ ನಾಲೆ ಎರಡು ಸಾರಿ ಒಡೆದು ಹೋಗಿದೆ. 91ನೇ ಇಸವಿಯಲ್ಲಿ ಒಡೆದು ಹೋದಾಗ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ಅವರು ಅದೇ ಜಿಲ್ಲೆಯವರಾದ್ದರಿಂದ ತಕ್ಷಣ ಅದಕ್ಕೆ ತಮ್ಮ ಒಲವನ್ನು ಕೊಟ್ಟು, ಕೇವಲ 16 ದಿನಗಳಲ್ಲಿ ಒಂದು ಬೈಪಾಸ್ ವ್ಯವಸ್ಥೆಯನ್ನು ಮಾಡಿ ನೂರಾರು ಕೋಟಿ ಭತ್ತದ ಬೆಳೆ ನಾಶವಾಗುವುದನ್ನು ತಡೆಗಟ್ಟುವಂತ ಒಂದು ಒಳ್ಳೆಯ ಕೆಲಸವನ್ನು ಅವರು ಮಾಡಿದರು. ಆದಾದಮೇಲೆ ಕೇವಲ 58 ದಿನಗಳಲ್ಲಿ ಬೇರೆ ಪರ್ಯಾಯವಾಗಿ ನೀರನ್ನು ಕೊಡುವ ವ್ಯವಸ್ಥೆ ಮಾಡಿ ಇವತ್ತಿನ ದಿವಸ ರೈತರ ಜೀವ ಹೋಗದಿರುವಂತ ಪರಿಸ್ಥಿತಿಯಲ್ಲಿದೆ. ಕೇವಲ 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಈ ನಾಲೆ ರಿಪೇರಿಯಾಗುತ್ತಿತ್ತು. ಕೇವಲ ಮೂರು ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿ ಇನ್ನು ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡದೆ ಇವತ್ತಿನ ದಿವಸ ಅಣೆಕಟ್ಟಿನಲ್ಲಿ 186 ಅಡಿಯಷ್ಟು ನೀರು ಇದ್ದರು ಕೂಡ 150 ಅಡಿ ಕೆಳಗಡೆಯ ನೀರನ್ನು ಬಳಸಿಕೊಳ್ಳುವುದಕ್ಕೆ ಬರದಿರುವ ಪರಿಸ್ಥಿತಿ ನಮ್ಮಲ್ಲಿದೆ. ಏಕೆಂದರೆ ಆ ನಾಲೆಯನ್ನು ಬೇಗ ದುರಸ್ತಿ ಮಾಡಿದರೆ 125 ಅಡಿ ನೀರು ಇದ್ದರು ಕೂಡ ನೀರು ಸಿಗುತ್ತದೆ. ಆ ವ್ಯವಸ್ಥೆ ಆಗದಿದ್ದರೆ ಇವತ್ತು ರಾಯಚೂರಿನವರಿಗೂ ಗೋಳು ಬರುತ್ತಿರಲಿಲ್ಲ ಮತ್ತು ಚಿತ್ರದುರ್ಗದವರಿಗೂ ಗೋಳು ಬರುತ್ತಿರಲಿಲ್ಲ. ಆದುದರಿಂದ ಆದಷ್ಟು ಬೇಗ ಸರ್ಕಾರ ಈ ನಾಲೆಯನ್ನು ದುರಸ್ತಿ ಮಾಡುವ ಕಾರ್ಯವನ್ನು ತಕ್ಷಣ ಎತ್ತಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಹಾಗೂ ಆಗ್ರಹಪಡಿಸುತ್ತೇನೆ. ಮತ್ತು ತುಂಗಾ ಮೇಲ್ದಂಡೆ ಬಗ್ಗೆ ಭದ್ರಾ ಮೇಲ್ದಂಡೆ ಬಗ್ಗೆ ಹಾಗೂ ಸಾಕಷ್ಟು ಚರ್ಚೆ ಮಾಡಿದ್ದಾರೆ. ಆದರೆ ಒಂದು ವಿಚಾರವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಭದ್ರಾ ಮೇಲ್ದಂಡೆಗೆ, ಬಂಗಾರಪ್ಪನವರು 91ನೇ ಇಸವಿಯಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಅಡಿಗಲ್ಲನ್ನು ಹಾಕಿದರು. ಆದರೆ ಅಲ್ಲಿಗೆ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಇವತ್ತಿನದಿವಸ ನಿಗಧಿ ಮಾಡಿ ಬರೀ ಇಂಜಿನಿಯರ್‌ಗಳು ಇತರರ ಸಂಬಳ ಮುಂತಾದವಕ್ಕೆ ಖರ್ಚು ಮಾಡುವುದಕ್ಕೆ ವ್ಯವಸ್ಥೆಯಾಗಿದೆ. ಕನಿಷ್ಟ 50 ಕೋಟಿ ರೂಪಾಯಿಗಳನ್ನಾದರು ಅದಕ್ಕೆ ನಿಗದಿ ಮಾಡಿ ಕೆಲಸವನ್ನು ಪ್ರಾರಂಭ ಮಾಡಿದರೆ, ಇವತ್ತು ಧಾರವಾಡ ಜಿಲ್ಲೆಯ, ರಾಣೆಬೆನ್ನೂರು, ಹಾವೇರಿ, ಗದಗ ಮತ್ತು ಮುಂಡರಗಿಯವರೆವಿಗೂ ಕೂಡ ನೀರಾವರಿ ಪ್ರದೇಶವನ್ನಾಗಿ ಮಾಡಿ, ಅಲ್ಲೂ ಕೂಡ ಎರಡುವರೆ ಲಕ್ಷ ಎಕರೆ ಪ್ರದೇಶವನ್ನು ನೀರಾವರಿ ಪ್ರದೇಶವನ್ನಾಗಿ ಮಾಡಲಿಕ್ಕೆ ಅವಕಾಶವಿದೆ. ಆದುದರಿಂದ ಆದಷ್ಟು ಜಾಗ್ರತೆ ಆ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಇದೇ ರೀತಿಯಾಗಿ ಭದ್ರಾ ಮೇಲ್ದಂಡೆಗೆ ಇವತ್ತಿನ ದಿವಸ ಪ್ರಧಾನಮಂತ್ರಿಗಳಾದ ಮಾನ್ಯ ನರಸಿಂಹರಾವ್‌ರವರು ಕೇಂದ್ರದಿಂದ ಬಂದು ಚುನಾವಣೆ ಮುಂಚೆ ಹೇಳಿದರು ಅದಕ್ಕೆ ಮೊದಲು ರಾಜೀವ್‌ಗಾಂಧಿಯವರು ಹೇಳಿದ್ದರು ಮತ್ತು ಈಗಿನ ಜನತಾದಳದ ಮುಖ್ಯಮಂತ್ರಿಗಳಾದ ದೇವೇಗೌಡರು, ರಾಮಕೃಷ್ಣ ಹೆಗ್ಡೆಯವರು, ಬೊಮ್ಮಾಯಿಯವರು ಕೂಡ ಹಿರಿಯೂರಿನಲ್ಲಿ, ನಾವು ಭದ್ರಾ ಮೇಲ್ದಂಡೆಯನ್ನು ಮಾಡಿಯೇ ಮಾಡುತ್ತೇವೆಂದು ಹೇಳಿ, ಇವತ್ತು ಆ ಜನರಿಂದ ಓಟನ್ನು ತೆಗೆದುಕೊಂಡು ಬಂದು ಗೆದ್ದು ಸರ್ಕಾರ ನಡೆಸುತ್ತಿದ್ದಾರೆ. ಹೇಳಿದ ಮಾತಿಗೆ ಬೆಲೆ ಕೊಟ್ಟು ಅದು ಕಾರ್ಯಗತವಾಗತಕ್ಕಂತಹ ವ್ಯವಸ್ಥೆಯನ್ನು ನಮ್ಮ ಮುಖ್ಯಮಂತ್ರಿಗಳು ಮಾಡಬೇಕು. ಏತಕೆಂದರೆ ಈ ಲೈನಿಂಗ್ ಮಾಡಿದರೆ ನಾವು ಶೇಕಡ 25 ರಷ್ಟು ನೀರನ್ನು ಉಳಿಸಬಹುದು. ಆ ನೀರನ್ನು ಬೇರೆ ಕಡೆಗೆ ಕೊಡುವುದಕ್ಕೆ ಪ್ರಯತ್ನ ಮಾಡಬಹುದು. ಆದರೆ ನಾವು ಭದ್ರಾ ಕಾಲುವೆ ಕೆಳಗಡೆ ಬರತಕ್ಕಂತಹ ರೈತರಿಗೆ ಅನ್ಯಾಯ ಮಾಡದಿರುವ ರೀತಿಯಲ್ಲಿ ಅವರಿಗೆ ಬರತಕ್ಕ ನೀರಿನ ಭಾಗವನ್ನು ಪೂರ್ಣ ಕೊಟ್ಟು ಉಳಿದ ನೀರನ್ನು ಭದ್ರಾ ಮೇಲ್ದಂಡೆಗೆ ಕೊಡಬೇಕು. ಆ ಕಾರ್ಯವನ್ನು ಕೂಡ ತಕ್ಷಣ ಕೈಗೆತ್ತಿಕೊಳ್ಳಬೇಕೆಂದು ನಾನು ಈ ಸಂದಂರ್ಭದಲ್ಲಿ ಆಗ್ರಹಿಸುತ್ತೇನೆ.

ಛೇರ್ಮನ್ : ಶಿವಶಂಕರಪ್ಪನವರೇ ಬೇಗ ಮುಗಿಸಬೇಕು.

ಶ್ರೀ. ಶಿವಶಂಕರಪ್ಪ.ಎಸ್ : ಮೊನ್ನೆ ಯಾರೋ ಎರಡು ಮುಕ್ಕಾಲು ಕೋಟಿ ರೂಪಾಯಿಗಳಿಗೆ ಬಂದಂಥ ಎಲ್.ಓ.ಸಿ.ಯನ್ನು ವಾಪಸ್ ಕೊಟ್ಟಿದ್ದಾರೆಂದು ಹೇಳುತ್ತಿದ್ದರು. ಅನೇಕ ಜನರಿಗೆ ಎಲ್.ಓ.ಸಿ ಹಣವನ್ನು ಕೊಡದೆ ಇದ್ದರೆ, ಅವರು ಕಳಪೆ ಮಟ್ಟ ಕೆಲಸವನ್ನು ಮಾಡುವುದು ವಾಡಿಕೆ. ಆ ದಿಸೆಯಲ್ಲಿ ತಕ್ಷಣ ಈ ಅಧಿಕಾರಿಗಳನ್ನು ಸ್ವಲ್ಪ ಹದ್ದುಬಸ್ತಿನಲ್ಲಿ ಇಡಬೇಕು ಮತ್ತು ಕೆಲಸ ಯಾವ ರೀತಿಯಾಗಿದೆ ಎನ್ನುವುದನ್ನು ಮೇಲಾಧಿಕಾರಿಗಳು ಚೆಕ್ ಮಾಡಿ ಸರ್ಟಿಫೀಕೇಟ್ ಕೊಡುವವರೆವಿಗೂ ಹಣ ಸಂದಾಯವಾಗದ ರೀತಿಯಲ್ಲಿ ನೋಡಿಕೊಂಡು ತೃಪ್ತಿಕರವಾಗಿ ಕೆಲಸವನ್ನು ತೆಗೆದುಕೊಳ್ಳುವಂಥ ಕೆಲಸವನ್ನು ನಮ್ಮ ಜತನಾದಳದ ಸರ್ಕಾರ ಮಾಡಬೇಕೆಂದು

ವಿನಂತಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ. ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ (ಪರಸಗಡ) : ಸನ್ಮಾನ್ಯ ಅಧ್ಯಕ್ಷರೇ, ಮಲಪ್ರಭಾ ಯೋಜನೆಯಲ್ಲಿ 1970 ರಲ್ಲಿ ನೀರನ್ನು ಕೊಡುವ ವ್ಯವಸ್ಥೆಯಾಯಿತು. ಅದರಲ್ಲಿ 35 ವರ್ಷಗಳಲ್ಲಿ ನೀರು ಶೇಕರಣೆಯಾದದ್ದು ಕೇವಲ 5-6 ವರ್ಷಗಳು ಮಾತ್ರ. ಮಲಪ್ರಭಾದಲ್ಲಿ 36 ಟಿ.ಎಂ.ಸಿ. ನೀರು ನಿಲ್ಲತಕ್ಕಂತ ವ್ಯವಸ್ಥೆ ಇದೆ. ಪ್ರತಿ ವರ್ಷ ಸರಿಯಾಗಿ ಮಳೆಯಾಗದೆ, ಅದರಲ್ಲಿ ನೀರು ತುಂಬತಕ್ಕಂತಹ ಕೆಲಸ 5-6 ವರ್ಷ ಮಾತ್ರವಾಗಿ, ಇವತ್ತು ಯೋಜನೆಯಿಂದ ಐದುವರೆ ಲಕ್ಷ ಎಕರೆಗೆ ನೀರಾವರಿಯಾಗತಕ್ಕದ್ದು ಕೂಡ ಇದೆ. ಇದರ ಜೊತೆಗೆ 65 ಸಾವಿರ ಎಕರೆ ಏತನೀರಾವರಿ ಇವತ್ತು ನೀರಾವರಿಯಾಗುತ್ತಿದೆ. ಆದುದರಿಂದ ನಾವು ಪದೇ ಪದೇ ಮಾದಾಯಿ, ನೀರಾವರಿ ಯೋಜನೆಯನ್ನು ತಂದು, ಆ ನೀರನ್ನು ಮಲಪ್ರಭ ನದಿಯ ಜೊತೆಗೆ ಸೇರಿಸಿದರೆ ನಮಗೆ ಸವದತ್ತಿ ತಾಲ್ಲೂಕು ಅಲ್ಲದೆ ಬೆಳಗಾಂ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಯಲ್ಲಿ ಉಳಿದಿರತಕ್ಕ ಭೂಮಿಗೆ ಕೂಡ ಇವತ್ತು ನೀರು ಒದಗಿಸುವ ವ್ಯವಸ್ಥೆ ಕೂಡ ಆಗುವುದಿದೆ.

6.50 ಪಿ.ಎಂ

ಆದ್ದರಿಂದ ಮಾದಾಯಿ ಯೋಜನೆಯನ್ನು ಆದಷ್ಟು ಬೇಗ ಪ್ರಾರಂಭಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇವತ್ತು ಮಾದಾಯಿ ಯೋಜನೆ ಕಾರ್ಯಗತವಾಗದಿದ್ದರೆ ಐದೂವರೆ ಲಕ್ಷ ಏಕರೆ ನೀರಾವರಿ ಏನಿದೆ ಅದರಲ್ಲಿ ಅರ್ಥ ಕೂಡ ಆಗುವುದಿಲ್ಲ. ಆದ್ದರಿಂದ ಮಾದಾಯಿ ಯೋಜನೆಯನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಬೇಕು. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಗೋವಾ ರಾಜ್ಯದ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ, ಅಲ್ಲಿ ಸಮುದ್ರಕ್ಕೆ ಹೋಗುತ್ತಿದ್ದ 9 ಟಿ.ಎಂ.ಸಿ.ಎಫ್.ಟಿ ನೀರನ್ನು ಕೂಡಿಸಿ ಅದರಿಂದ ವಿದ್ಯುತ್‌ನ್ನು ಉತ್ಪಾದಿಸಿ ಅವರಿಗೆ ಕೊಡಬೇಕು ಮತ್ತು ಆ ನೀರನ್ನು ನಾವು ಉಪಯೋಗಿಸಿಕೊಳ್ಳುವ ಬಗ್ಗೆ ಮಾತುಕತೆ ಆಗಿದ್ದು ಅದು ಅಷ್ಟಕ್ಕೇ ನಿಂತುಹೋಗಿದೆ. ಆದ್ದರಿಂದ ಈ ಯೋಜನೆಗೆ ಹೆಚ್ಚು ಒತ್ತನ್ನು ಕೊಟ್ಟು ಮಾದಾಯಿ ಯೋಜನೆಯಲ್ಲಿ ಬರುವ ನೀರನ್ನು ಮಲಪ್ರಭಾ ಯೋಜನೆಯೊಳಗೆ ಕೂಡಿಸಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲೂಕಿನಲ್ಲಿ 5-6 ದೊಡ್ಡ ದೊಡ್ಡ ಕೆರೆಗಳು ಯೋಜನೆಯ ಅಡಿಯಲ್ಲಿ ಬಂದಿವೆ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಮುಗುಳಿಹಾಳ್ ಟ್ಯಾಂಕ್ ಎಂಬ ನೀರಾವರಿ ಟ್ಯಾಂಕ್ 46 ಲಕ್ಷ ರೂಗಳ ಅಂದಾಜು ಇದ್ದು ಬಜೆಟ್‌ನಲ್ಲಿ ಕಳೆದಸಾರಿ 14 ಲಕ್ಷ ರೂ. ಇಟ್ಟಿದ್ದರೂ ಅದು ಇನ್ನೂ ಪ್ರಾರಂಭವಾಗಿಲ್ಲ. ಅದನ್ನು ಬೇಗ ಪ್ರಾರಂಭ ಮಾಡಬೇಕು. ಸಣ್ಣಪುಟ್ಟ ಕೆರೆಗಳಿಗೆ ನೀರನ್ನು ತುಂಬಿಸಿದರೆ ಸುತ್ತಮುತ್ತಲು ಪ್ರದೇಶದ ಜನರಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೂ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಈ ಮಲಪ್ರಭಾ ಯೋಜನೆಯಿಂದ ಹುಬ್ಬಳ್ಳಿ - ಧಾರವಾಡ ಪಟ್ಟಣಗಳಿಗೆ ಕುಡಿಯುವ ನೀರಿಗಾಗಿ ಸರಬರಾಜು ಮಾಡುತ್ತಿದ್ದಾರೆ. 36 ಟಿಎಂಸಿ ನೀರಿನ ಪೈಕಿ ಸುಮಾರು 2 ಟಿಎಂಸಿ ನೀರು ಕೇವಲ ಕುಡಿಯುವ ನೀರಿನ ವ್ಯವಸ್ಥೆಗಾಗಿಯೇ ಹೋಗುತ್ತಿದೆ. ಆ ದಾರಿಯುದ್ದಕ್ಕೂ ಇರತಕ್ಕ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿಗಾಗಿ ಈ ನೀರನ್ನು ಉಪಯೋಗಿಸುತ್ತಿದ್ದಾರೆ. ಇನ್ನು 8-10 ವರ್ಷಗಳು ಕಳೆದನಂತರ ಮಲಪ್ರಭ ಯೋಜನೆ ಕುಡಿಯುವ ನೀರಿನ ಯೋಜನೆಯಾಗಿ ಪರಿವರ್ತನೆ ಆಗುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ನಾವು ಹೇಳಬೇಕಾಗಿದೆ. ಈ ಯೋಜನೆ ತಯಾರಾಗುವುದಕ್ಕೆ 23 ಹಳ್ಳಿಗಳ ಮುಳುಗಡೆಯಾಗಿದೆ. ಅಲ್ಲಿನ ರೈತರು ಸಾಕಷ್ಟು ತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಈ ರೀತಿ ಕಳೆದುಕೊಂಡಿರತಕ್ಕ ಜಮೀನು ಸುಮಾರು 56 ಸಾವಿರ ಎಕರೆ ಏನಿದೆ ಅದಕ್ಕೂ ಕೂಡ ಲಿಫ್ಟ್ ಇರಿಗೇಶನ್ ಆಗುತ್ತಿದೆ. ಆ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಪೂರೈಕೆಯಾಗದೇ ಇರುವುದರಿಂದ ನೀರಾವರಿ ಕಾರ್ಯ ಕೂಡ ಸರಿಯಾಗಿ ಆಗುತ್ತಿಲ್ಲ. ಪ್ರತಿದಿನ 5-6 ತಾಸು ಕಾಲ ವಿದ್ಯುತ್ ಇರುವುದಿಲ್ಲ. ವಿದ್ಯುತ್ ಪೂರೈಕೆ

ಸರಿಯಾಗಿ ಆಗದೇ ಇರುವುದರಿಂದ ಲಿಫ್ಟ್ ಇರಿಗೇಶನ್ ಸರಿಯಾಗಿ ಆಗುತ್ತಿಲ್ಲ. ಲಿಫ್ಟ್ ಇರಿಗೇಶನ್ ಸರಿಯಾಗಿ ಆಗಬೇಕಾದರೆ ವಿದ್ಯುತ್ ಪೂರೈಕೆಯನ್ನು ಸರಿಯಾಗಿ ಮಾಡಬೇಕು. ಈ ಕಾರಣದಿಂದ ಮಾದಾಯಿ ಯೋಜನೆಯನ್ನು ಆದಷ್ಟು ಬೇಗ ಪ್ರಾರಂಭಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಯೋಜನೆಗೆ ಈ ವರ್ಷದ ಬಜೆಟ್‌ನಲ್ಲಿ ಹಣವನ್ನು ಏನೂ ಇಟ್ಟಿಲ್ಲ. ಅದೇ ರೀತಿ ಬಳ್ಳಾರಿ ನಾಲಾ ಯೋಜನೆಗೂ ಹಣವನ್ನು ಈ ಬಜೆಟ್‌ನಲ್ಲಿ ಇಟ್ಟಿಲ್ಲ. ನಮಗೆ ಉಪಯೋಗವಾಗತಕ್ಕ ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಏನು ನೀರಾವರಿ ಯೋಜನೆಗಳು ಉಳಿದರೆ ಅದಕ್ಕೆ ಉಪಯೋಗವಾಗಬೇಕಾದರೆ ಮಾದಾಯಿ ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಒತ್ತು ಕೊಟ್ಟು ಕಾರ್ಯಗತ ಮಾಡಬೇಕೆಂದು ಮನವಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

* ಶ್ರೀ ಜಿ.ಬಿ. ಶಿವಕುಮಾರ್ (ಕೆರಗೋಡು) : ಮಾನ್ಯ ಅಧ್ಯಕ್ಷರೇ, ಇವತ್ತು ನೀರಾವರಿಯ ಬಗ್ಗೆ ಒಂದು ಪ್ರತ್ಯೇಕ ನಿರ್ಣಯವನ್ನು ಚರ್ಚೆಗೆ ತೆಗೆದುಕೊಂಡಿದ್ದಾರೆ ಅದನ್ನು ಸ್ವಾಗತಿಸುತ್ತಾ ಅದಕ್ಕೆ ನನ್ನ ಧ್ವನಿಗೂಡಿಸಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಮೊದಲನೆಯದಾಗಿ ಈ ನೀರಾವರಿ ವಿಚಾರದಲ್ಲಿ ಸವಿಸ್ತಾರವಾಗಿ ಹೊಸ ಸದಸ್ಯರಿಗೆ ಸಾಕಷ್ಟು ಬೆಳಕು ಚೆಲ್ಲುವಂಥ ಮಾನ್ಯ ನಂಜೇಗೌಡರಿಗೆ ಅಭಿನಂದಿಸುತ್ತೇನೆ. ಈಗಾಗಲೇ ನಮ್ಮ ಹಲವಾರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ, ನಮ್ಮ ಯೋಜನೆಗಳು ಯಾವ ವೇಳೆಗೆ ಮುಗಿಯಬೇಕಾಗಿತ್ತೋ, ಅದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅದನ್ನು ನಿಗದಿತ ವೇಳಯೊಳಗೆ ಪೂರೈಸದೇ ಹೋಗಿರುವುದರಿಂದ ನಮ್ಮ ಕರ್ನಾಟಕದಲ್ಲಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದರಲ್ಲಿ ನಾವು ವಂಚಿತರಾಗಿದ್ದೇವೆ ಎಂಬುದು ನಮ್ಮೆಲ್ಲರಿಗೂ ಸ್ಪಷ್ಟವಾಗಿ ಗೊತ್ತಿದೆ. ಬಹುಶಃ ಈ ನಿರ್ಣಯದ ಮೇಲೆ ನಡೆಯುತ್ತಿರುವ ಈ ಚರ್ಚೆ ಯಾವುದಕ್ಕೆ ದಾರಿ ಮಾಡಿಕೊಡುತ್ತದೆ ಎಂದರೆ ನಮ್ಮ ಸರ್ಕಾರ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತದೆಂದು ಹೇಳಿಕೊಂಡು ಜನತೆಯ ಮುಂದೆ ಹೋಗಿ ಅವರಿಂದ ಮತವನ್ನು ಪಡೆದುಕೊಂಡು ಬಂದಿದ್ದೇವೋ ಆ ನಮ್ಮೆಲ್ಲರ ಒಬ್ಬ ಸಮರ್ಥ, ಧಕ್ಷ, ನಾಯಕನ ಮುಂದಾಳತ್ವದಲ್ಲಿ ಕೆಲಸಮಾಡತಕ್ಕ ಎಲ್ಲಾ ಅಧಿಕಾರಿಗಳೂ ನಿಗದಿಪಡಿಸಿರತಕ್ಕ ಕಾಲದಲ್ಲಿ ಯೋಜನಾ ಕಾರ್ಯಗಳನ್ನು ಗುಣಮಟ್ಟದ ಜೊತೆಗೆ ತ್ವರಿತವಾಗಿ ಪೂರ್ಣಮಾಡತಕ್ಕ ಸಂಕಲ್ಪವನ್ನು ಬಹುಶ : ಮಾಡಿಕೊಳ್ಳುತ್ತಾರೆ ಎಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. ಇದಕ್ಕೆ ಕಾರಣ ಇಂದು ಇಲ್ಲಿ ನಡೆಯುತ್ತಿರುವಂಥ ಚರ್ಚೆಯ ಪರಿಣಾಮ. ಏಕೆಂದರೆ

ಇವತ್ತಿನ ಚರ್ಚೆಯಲ್ಲಿ ಭಾಗವಹಿಸಿರುವಂಥ ಎಲ್ಲಾ ಸದಸ್ಯರೂ ಕೂಡ ಇಲಾಖೆಯ ಲೋಪದೋಷಗಳೇನು? ನಾವು ಎಲ್ಲಿ ವಂಚಿತರಾಗಿದ್ದೇವೆ ಎಂಬುದನ್ನು ಮನದಟ್ಟುಮಾಡಿಕೊಂಡಿರುವುದರಿಂದ ಬಹುಶಃ ಮುಂದೆ ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಮುಂದೆ ಬಹಳ ಎಚ್ಚರಿಕೆಯಿಂದ ಕೆಲಸಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ನನಗೆ ಒಂದರಲ್ಲಿ ನಂಬಿಕೆ ಇದೆ. ಅದು ಎಂದರೆ ಬ್ಯಾಡ್ ಈಸ್ ಬೆಟರ್ ದ್ಯಾನ್ ವರ್ಸ್ಟ್ ಎಂಬುದು. ಅತ್ಯಂತ ಕಳಪೆ ಕೆಲಸಮಾಡಿ ನಮ್ಮ ಹಣವನ್ನು ಪೋಲುಮಾಡಿದಂಥ ವಿಚಾರವನ್ನು ನಮ್ಮ ಹಲವಾರು ಸಹ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನನ್ನ ಧ್ವನಿಗೂಡಿಸುತ್ತೇನೆ. ಇನ್ನುಮುಂದೆ ಇಂಥಾದ್ದು ಆಗಬಾರದು. ಯಾವುದೇ ಕೆಲಸಕ್ಕಾಗಲಿ ಏನು ಕಾಲವನ್ನು ನಿಗದಿ ಮಾಡುತ್ತಾರೆ ಆ ಅವಧಿಯಲ್ಲಿ ಒಳ್ಳೆಯ ಗುಣಮಟ್ಟದ ಕೆಲಸವನ್ನು ಇಲಾಖೆಯವರು ಮಾಡಬೇಕು. ಅದೇರೀತಿ ಮಾನ್ಯ ಸದಸ್ಯರಾದ ಪುಟ್ಟೇಗೌಡರು ಹೇಳಿದಂತೆ ಯಾವ ರಾಜಕಾರಣಿಗಳೂ ಕೂಡ ಅದರಲ್ಲಿ ಹಸ್ತಕ್ಷೇಪವನ್ನು ಮಾಡದೆ ಅಧಿಕಾರಿಗಳಿಗೆ ಮುಕ್ತ ಅವಕಾಶ ಮಾಡಿಕೊಟ್ಟು ಜವಾಬ್ದಾರಿಯನ್ನು ವಹಿಸಿದರೆ ಬಹುಶಃ ಆ ಕೆಲಸ ಉತ್ತಮವಾಗಿ ಆಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಬಹಳ ಮುಖ್ಯವಾಗಿ ಹೇಳಬೇಕಾದುದು ಎಂದರೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ವಿಶ್ವೇಶ್ವರಯ್ಯ ನಾಲೆ ಅಡಿಯಲ್ಲಿ ಬರತಕ್ಕ ಪ್ರದೇಶಕ್ಕೆ ಸೀಮಿತವಾಗಿ ಹೇಳುವುದಾದರೆ ಇವತ್ತು ಯಾರು ರಾಜ್ಯದ ಮುಖ್ಯ ಮಂತ್ರಿಯಾಗಿ, ರೈತರ ಕಣ್ಮಣಿಯಾಗಿದ್ದಾರೆ ಆ ಮಾನ್ಯ ದೇವೇಗೌಡರೇ ನಾಲೆಯ ಕೆಲಸವನ್ನು ಹುಟ್ಟು ಹಾಕಿದವರು. ಈ ನಾಲೆಯ ಕೆಲಸ ಇವತ್ತು ನಮ್ಮ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿದೆ. ಇದನ್ನು ಮಾಡಿದ ಮುಖ್ಯ ಉದ್ದೇಶವೆಂದರೆ 800 ಕ್ಯೂಸೆಕ್ಸ್ ನೀರನ್ನು ಹೆಚ್ಚಿಗೆ ಪಡೆಯುವ ದೃಷ್ಟಿಯಿಂದ ನಮ್ಮ ವಿಶ್ವೇಶ್ವರಯ್ಯ ನಾಲೆಯ ಕೊನೆಯ ಭಾಗಗಳಾದ ಮದ್ದೂರಿನ ಕೌಡ್ಲೆ ಬ್ರ್ಯಾಂಚ್ ಇರಬಹುದು, ಕೊಪ್ಪ ಬ್ರ್ಯಾಂಚ್ ಇರಬಹುದು, ಬನ್ನೂರು ತುರುಬು ನೂರು ಬ್ರ್ಯಾಂಚ್ ಇರಬಹುದು, ಮಾನ್ಯ ನಾಗೇಗೌಡರ ಮತ್ತು ಸೋಮಶೇಖರ್‌ರವರ ಕ್ಷೇತ್ರಗಳಾದ ಮದ್ದೂರು, ಬನ್ನೂರು ಕ್ಷೇತ್ರ ಇಲ್ಲೆಲ್ಲಾ ಕೆಲಸವಾಗಬೇಕಾದರೆ ಈಗ ಏನು ಸರ್ಕಾರ ಹಣವನ್ನು ಕೊಡುತ್ತಿದೆ ಇದು ಸಾಲದು. ಈ ಹಣವನ್ನು ಹೆಚ್ಚು ಮಾಡಬೇಕು, ನಿಗದಿತ ಅವಧಿಯಲ್ಲಿ ಕೆಲಸ ಮುಗಿಸಬೇಕಾದರೆ ಸುಮಾರು 1 ತಿಂಗಳ ಮಟ್ಟಿಗಾದರೂ ಅಲ್ಲಿ ನೀರನ್ನು ನಿಲ್ಲಿಸಿ ಕೆಲಸ ಮಾಡಿಸಬೇಕಾಗುತ್ತದೆ. ಆ ಸಂದರ್ಭಧಲ್ಲಿ ಅಲ್ಲಿನ ರೈತರಿಗೆ ಒಂದು ಕಟ್ಟುನಿಟ್ಟಾದ ಆದೇಶವನ್ನು ಕೊಡಬೇಕಾಗುತ್ತದೆ, 3-4 ಸಕ್ಕರೆ ಕಾರ್ಖಾನೆಗಳು ಈ ಪ್ರದೇಶದಲ್ಲಿ ಬರುತ್ತವೆ ಅವುಗಳನ್ನೂ ಕೂಡ ಮುಚ್ಚಬೇಕಾದ ಪರಿಸ್ಥಿತಿ ಬಂದರೂ ಬರಬಹುದು. ಏಕೆಂದರೆ, ಮುಂದೆ ಬರುವ ಜನವರಿಯಿಂದ ಆ ಭಾಗದ ಜಮೀನಿಗೆ ನೀರನ್ನು ಕೊಡುವುದಿಲ್ಲವೆಂಬ ಅಭಿಪ್ರಾಯವನ್ನೂ ಅವರು ವ್ಯಕ್ತಮಾಡಿದ್ದಾರೆ. ಈ ಕೆಲಸ

ಜನರಿಗೆ ನಮ್ಮ ತಪ್ಪು ಏನು ಎಂಬುದು ಗೊತ್ತಿದೆ. ಹಿಂದೆ ಮಾಡಿದ ತಪ್ಪು ಮಾಡಬಾರದು, ನಾವು ಇನ್ನೂ ಉತ್ತಮ ಗುಣಮಟ್ಟದ ಕೆಲಸ ಮಾಡಬೇಕು, ಯಶಸ್ವಿಯಾಗಿ ಫಂಕ್ಷನಿಂಗ್ ಮಾಡದಿದ್ದರೆ ನಮ್ಮ ಜನರು ಕೇರ್ ಮಾಡುವುದಿಲ್ಲ; ಸದಸ್ಯರು ಕೇರ್ ಮಾಡುವುದಿಲ್ಲ ಎಂಬ ಎಚ್ಚರಿಕೆ ಬಂದು, ಅವರು ಕೆಲಸ ನಿರ್ವಹಿಸುವುದಾದರೆ ನಮ್ಮ ಪ್ರಾಜೆಕ್ಟ್ ಪೂರ್ತಿಯಾಯಿತು ಎಂದು ನಾವು ಭಾವಿಸಬೇಕಾಗುತ್ತದೆ. ಅದೂ ಒಂದು ಮತ್ತೊಂದು ಏನೆಂದರೆ ದುರಾಸೆ ಇರತಕ್ಕದ್ದನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಬೇಕು. ನಮ್ಮ ಸ್ನೇಹಿತರು ಲಂಚ ಎಂದರು; ನಿಜ. ಇದರಿಂದ ಯಾರು ಹೊರತಾಗಿಲ್ಲ. ನಮ್ಮ ತಂದೆ ಕಾಲದಲ್ಲಿ ರಿಟೈರ್ಡ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೋಟಾರ್ ಸೈಕಲ್ಲಿನಲ್ಲಿ ಬರುತ್ತಿದ್ದರು. ಈಗ ಜೆ.ಇ.ಗೆ ಕೆನಟಿಕ್ ಹೋಂಡಾ ಬೇಕು. ಮುಂದಿನ ವರ್ಷಕ್ಕೆ ಮಾರುತಿ ಕಾರು ಬೇಕು. ಅವರಿಗೆ ಏನಾಗಿದೆ ಎಂದರೆ 15 ದಿನದ ಊಟ ಒಂದೇ ದಿವಸ ಮಾಡಬೇಕು ಎಂಬ ಘಾತಕತನ ಬಂದಿದೆ. ಯಥಾರಾಜ ತಥಾ ಪ್ರಜಾ ಅಂದಹಾಗೆ. ಆಳತಕ್ಕ ಅಧಿಕಾರಿಗಳು ಅರ್ಥಾತ್ ರಾಜಕಾರಣಿಗಳು. ಮೇಲಧಿಕಾರಿಗಳು ಸರಿಯಾಗಿದ್ದರೆ 10 ರೂಪಾಯಿ ಕಡಿಮೆ ಕಲೆಕ್ಷನ್ ಮಾಡಿದರೆ 10 ರೂಪಾಯಿ ಉಳಿಯಿತು ಎಂದು. ನಮ್ಮಲ್ಲಿ ಆಗುತ್ತಿರತಕ್ಕ ಕೆಲಸ ನೋಡಿದರೆ ಧೂಳಿಗೆ ಬಣ್ಣ ಹಚ್ಚಿ ಇಟ್ಟಿದ್ದಾರೆ, ಅದು ಒದ್ದರೆ ಬಿದ್ದುಹೋಗುತ್ತದೆ. ಏನು ಸ್ವಾಮಿ ಇದು? ಕಡಿಯುವುದಕ್ಕೂ ಆಸೆ ಇರಬೇಕು ಆದರೆ ದುರಾಸೆ ಇರಬಾರದು. ದಯವಿಟ್ಟು ತಾವು ಕಟ್ಟುನಿಟ್ಟಾಗಿ ಒಂದು ಕ್ರಮವನ್ನು ತಮ್ಮ ಕೆಲವರ್ಗದ ಸಿಬ್ಬಂದಿಗೆ ಕೊಟ್ಟು ಭ್ರಷ್ಟಾಚಾರವನ್ನು ಕಡಿಮೆ ಮಾಡಬೇಕು. ಒಳ್ಳೆಯ ಗುಣಮಟ್ಟದ ಕೆಲಸ ಮಾಡಬೇಕು ಎಂದು ಹೇಳಿ ಇನ್ನೊಂದು ಮುಖ್ಯವಾದ ಸಲಹೆ ಕೊಡ ಬಯಸುತ್ತೇನೆ. ಹಿಂದೆ ನೀರಾವರಿ ಪ್ರದೇಶದಲ್ಲಿ, ನಾಲಾ ಪ್ರದೇಶದಲ್ಲಿ ಇದ್ದ ರಸ್ತೆಯನ್ನು ಇಲಾಖೆಯವರೇ ನೋಡಿಕೊಳ್ಳುತ್ತಿದ್ದರು. ಇದೊಂದು ಬಹಳ ಪ್ರಮುಖವಾದ ವಿಚಾರ. ಹಿಂದೆ ಪುಟ್ಟಸ್ವಾಮಿಗೌಡರು ಮತ್ತಿತರ ಎಲ್ಲರೂ ಹೇಳಿದರು, ನಾವು ನೀರಾವರಿ ಇಲಾಖೆಗೆ ರಸ್ತೆ ವಹಿಸಿದ್ದೇವೆಂದು. ಈ ಜಿಲ್ಲಾ ಪರಿಷತ್ತು ಎಂದು ಬಂದಿದೆ. ಇವರನ್ನು ಕೇಳಿದರೆ ಬರೀ ತೂಬು ಹಾಕುವುದು ಅಷ್ಟೇ ಅವರ ಕೆಲಸ. ನಾಲೆ ದುರಸ್ತಿ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಈ ಮೂಲಕ ಸರ್ಕಾರಕ್ಕೆ ಸಲಹೆ ಮಾಡುವುದು ಏನೆಂದರೆ ನೀರಾವರಿ ಪ್ರದೇಶಗಳಲ್ಲಿ ಬರತಕ್ಕ ರಸ್ತೆಗಳ ನಿರ್ವಹಣೆ ಏನಿದೆ ಅದನ್ನು ದಯವಿಟ್ಟು ಸರ್ಕಾರವೇ ವಹಿಸಿಕೊಂಡರೇ ಒಳ್ಳೆಯದು. ಲೈನಿಂಗ್ ಮಾಡತಕ್ಕದ್ದು, ಕಂಟ್ರೋಲಿಂಗ್ ಸಿಸ್ಟಮ್ ಮಾಡುವಾಗ ಧೂಳು ಇದ್ದರೂ ಅದನ್ನು ತೆಗೆದು ರಸ್ತೆಗೆ ಹಾಕುತ್ತಿದ್ದರು. ಇವತ್ತು ಅಲ್ಲಿ ಕೇಳುವವರೇ ಇಲ್ಲ. ಮಾತೆತ್ತಿದರೆ ಜಿಲ್ಲಾ ಪರಿಷತ್ತು ಎಂದು ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂದು ಅಲ್ಲಿ ಏನೇನೂ ಇಲ್ಲ. ಆ ರೀತಿ ಆಗದಂತೆ ಸರ್ಕಾರ ಸಂಕಲ್ಪ ಮಾಡಿಕೊಂಡು ಕಾರ್ಯನಿರ್ವಹಣೆ ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಬಹಳಷ್ಟು ಮಾತನಾಡಬೇಕಾಗಿತ್ತು. ಆದರೆ ತಾವು ಅವಕಾಶ ಕಡಿಮೆ

ಕೊಟ್ಟಿದ್ದೀರಿ. ಅದರೆ ಎಲ್ಲವನ್ನೂ ತುಂಬತಕ್ಕ ಮಾರ್ಗದರ್ಶನವನ್ನು ಹಿರಿಯ ಸದಸ್ಯರಾದ ಮಾನ್ಯ ನಂಜೇಗೌಡರು ಕೊಟ್ಟಿದ್ದಾರೆ. ಸರ್ಕಾರ ಎಲ್ಲವನ್ನೂ ತೆಗೆದುಕೊಂಡು ಸಮರ್ಥವಾಗಿ ಕೆಲಸ ಮಾಡಿದರೆ ಅದು ನಮ್ಮ ಅದೃಷ್ಟ. ಇವತ್ತು ವಿರೋಧ ಪಕ್ಷದಿಂದ ಒಂದು ಘಟ, ಆಡಳಿತ ಪಕ್ಷದಿಂದ ಒಂದು ಘಟ ಇದೆ. ಇವತ್ತು ವಿರೋಧ ಪಕ್ಷದಿಂದ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಎಲ್ಲವನ್ನೂ ತಿಳಿದು ನಮ್ಮ ಸಭಾನಾಯಕರು ಸಮರ್ಥವಾದ ರೀತಿಯಲ್ಲಿ ನಾವು ಏನು ಜನತೆಯ ಮುಂದೆ ಹೋಗಿ ನೀರಾವರಿಗೆ ಆದ್ಯತೆ ಕೊಡುತ್ತೇವೆ ಎಂದು ಹೇಳಿ, ಮತ ಯಾಚನೆ ಮಾಡಿ ಬಂದಿದ್ದೇವೆ, ಅದೇ ರೀತಿಯಲ್ಲಿ ಯೋಜನೆಗಳನ್ನು ಪ್ರಕಟಿಸಬೇಕು. ಜನತೆಯ ವಿಶ್ವಾಸಕ್ಕೆ ತಕ್ಕಂತೆ ಸ್ಪಂದಿಸಬೇಕು. ಅದೇ ರೀತಿ ಮಾಡುತ್ತೀರಿ ಎಂದು ಭಾವನೆ ಮಾಡಿಕೊಂಡು ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ(ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರದ ಗಮನಕ್ಕೆ ತರುವುದೇನೆಂದರೆ ಏತ ನೀರಾವರಿ ಬಗ್ಗೆ ಎರಡು ಮಾತುಗಳನ್ನು ಆಡುವುದಕ್ಕೆ ಬಯಸುತ್ತೇನೆ. ರಾಯಚೂರು ಜಿಲ್ಲೆ ತಮಗೆ ಗೊತ್ತಿದ್ದ ಹಾಗೆ ನೀರಾವರಿ ಪ್ರದೇಶವೆಂದು ತಾವು ಭಾವಿಸಿರಬಹುದು, ಆದರೆ ಅದರಲ್ಲಿ ಬರತಕ್ಕ ಅನೇಕ ತಾಲ್ಲೂಕುಗಳು ಅಂದರೆ ಯಲಬುರ್ಗ, ಕೊಪ್ಪಳ ಮತ್ತು ಕುಷ್ಟಗಿ. ಈ ಸಂದರ್ಭದಲ್ಲಿ ಕೊಪ್ಪಳ ತಾಲ್ಲೂಕಿನಲ್ಲಿ ತುಂಗಭದ್ರ ಅಣೆಕಟ್ಟು ಇದೆ. ಆದರೆ ಆ ನೀರು ಮಾತ್ರ ನಾವು ಉಪಯೋಗಿಸುತ್ತಿಲ್ಲ. ಇದರ ಅರ್ಥವನ್ನು ಅತ್ಯಂತ ನೋವಿನಿಂದ ಹೇಳುತ್ತೇನೆ. ಈ ಒಂದು ಅಣೆಕಟ್ಟು ಕಟ್ಟಲಿಕ್ಕೆ ನಮ್ಮ ರೈತಾಪಿ ಜನ ಜಮೀನನ್ನು ಕಳೆದುಕೊಂಡಿದ್ದಾರೆ ಮತ್ತು ಮನೆಗಳನ್ನು ಕಳೆದುಕೊಂಡು ಇವತ್ತು ಅಣೆಕಟ್ಟು ಕಟ್ಟುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಆದರೆ ತುಂಗಭದ್ರಾ ಬ್ಯಾಕ್ ವಾಟರ್ ಏನಿದೆ ಆ ನೀರನ್ನು ಇವತ್ತು ಉಪಯೋಗ ಮಾಡಬೇಕಾದರೆ ಏತ ನೀರಾವರಿ ಅತಿ ಅವಶ್ಯ ಎಂದು ನನ್ನ ಭಾವನೆ. ಆದರೆ ಈ ಬಾರಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕೆ ಹಣ ಇಟ್ಟಿಲ್ಲವೆಂದು ಶ್ರೀಮತಿ ಲೀಲಾವತಿದೇವಿ ಪ್ರಸಾದ್ ಅವರು ಖೇದನೆಯ ಮಾತನ್ನು ಹೇಳಿದರು. ನಮ್ಮ ತಾಲ್ಲೂಕು ಬಹಳಷ್ಟು ಬರಪೀಡಿತ ಪ್ರದೇಶ. ಇವತ್ತು ನಮಗೆ ಬೇರೆ ದಾರಿಯೇ ಇಲ್ಲ. ನಮ್ಮ ಜನ ಏನು ಹೇಳುತ್ತಿದ್ದಾರೆಂದರೆ ನೀವು ಏನೇನು ಮಾಡುವುದು ಬೇಡ; ನಮಗೆ ಏತ ನೀರಾವರಿ ಯೋಜನೆ ಮಾಡಿಕೊಟ್ಟರೆ ಸಾಕು. ನಮಗೆ ದೊಡ್ಡ ದೊಡ್ಡ ಯೋಜನೆಗಳೇನೂ ಬೇಕಾಗಿಲ್ಲ. ಕನಿಷ್ಟ ಪಕ್ಷ ಒಂದೊಂದು ಯೋಜನೆಗೆ ಐವತ್ತು ಲಕ್ಷ ಆದರೆ ಈ ಯೋಜನೆ ಸಫಲವಾಗುತ್ತದೆ ಇಂಥದ್ದು ನಾವು ಈ ಸಾಲಿನಲ್ಲಿ ಹತ್ತು ಯೋಜನೆಗಳನ್ನು...........

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ದಯವಿಟ್ಟು ತಪ್ಪು ತಿಳುವಳಿಕೆ ಕೊಡುವುದು ನ್ಯಾಯವಲ್ಲ. ನಾನು ಏತ ನೀರಾವರಿಗೆ ಹಣ ಇಟ್ಟಿಲ್ಲವೆಂದು ಹೇಳಿಲ್ಲ.

ಏತ ನೀರಾವರಿಗೆ ಇಟ್ಟಿರತಕ್ಕ ಹಣ ಬಹಳ ಕಡಿಮೆ ಎಂದು ಹೇಳಿದ್ದೇನೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ: ಬಹಳ ಕಡಿಮೆ ಎಂದು ಅಲ್ಲ ತಮ್ಮನ್ನು ಸಂಪರ್ಕಿಸಿದಾಗ ಹೊಸ ಏತ ನೀರಾವರಿಗೆ ಹಣ ಕೊಡುತ್ತಿಲ್ಲ ಎಂಬ ಮಾತು ಹೇಳಿದಿರಿ. ಆದರೆ ಇದು ಬಹಳಷ್ಟು ನೀರಾವರಿಗೆ ಆದ್ಯತೆ ಕೊಡುತ್ತೇವೆಂದು ಹೇಳಿದಾಗ, ಅದಕ್ಕೆ ನಾವು ಹಣ ಇಡಲಿಲ್ಲ ಅಂದರೆ, ಅದರ ಅರ್ಥ ಏನು ಎಂಬುದನ್ನೂ ಕೂಡ ತಾವು ಗಮನಿಸಬೇಕು ಎನ್ನುವ ಮಾತನ್ನು ಹೇಳುತ್ತಾ, ಈ ಯೋಜನೆಗೆ 50-50 ಲಕ್ಷ ನಾವು ಖರ್ಚು ಮಾಡಿದರೆ ಶಾಶ್ವತವಾದಂತಹ ಪರಿಹಾರವನ್ನು ನಮ್ಮ ರೈತರಿಗೆ ನಾವು ಕೊಟ್ಟ ಹಾಗೆ ಆಗುತ್ತದೆ. ಆದರಿಂದ ಏನು ಲಾಭ ಎಂದರೆ, ಇವತ್ತು ರೈತ ಮತ್ತು ರೈತ ಕಾರ್ಮಿಕರು ಮತ್ತು ಅವರ ಆರ್ಥಿಕ ಮಟ್ಟವನ್ನು ನಾವು ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ತಮಗೆ ಗೊತ್ತಿದ್ದ ಹಾಗೆ, ಹಳ್ಳಿಯನ್ನು ಕಾಣದಂತಹ ತಾಲ್ಲೂಕುಗಳು ಇದರ ಬಗ್ಗೆ ತಾವು ಚಿಂತನೆ ಮಾಡಿ ನಮ್ಮ ಭಾಗದಲ್ಲಿ 10 ಯೋಜನೆಗಳನ್ನು ಪ್ರಸ್ತಾವನೆ ಮೂಲಕ ನಾನು ತಮಗೆ ಕಳುಹಿಸಿದ್ದೇನೆ. ಅದರಲ್ಲಿ ಮೂರನೆಯ ಒಂದು ಭಾಗದಷ್ಟು ಹಣವನ್ನು ಇಟ್ಟರೆ, ಅವುಗಳನ್ನೂ ಸಹ ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ವ್ಯಕ್ತಪಡಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಹೀರೆಹಳ್ಳಿ ಯೋಜನೆ ಎರಡು ರೀತಿಯಲ್ಲಿ ಅನುಕೂಲಕರವಾದ ಯೋಜನೆಯಾಗಿದೆ. ಅದು ತುಂಗಭದ್ರ ಶಿಲ್ಪನ್ನು ತಡೆಹಿಡಿಯುವುದು ಒಂದು. ಇನ್ನೊಂದು ನೀರಾವರಿ ಅಂಗವಾಗಿ ಇಂತಹ ಒಂದು ಮುಖ್ಯವಾದ ಯೋಜನೆ ಇವತ್ತು ತ್ವರಿತಗತಿಯಲ್ಲಿ ಆಗುತ್ತಿಲ್ಲ. ಅದಕ್ಕೆ ಈಗಾಗಲೇ ಅಂದಾಜು 90 ಕೋಟಿ ಅದರ ಎಸ್ಟಿಮೇಟ್‌ನಲ್ಲಿದೆ. 37 ಕೋಟಿ ಇದುವರೆಗೆ ಖರ್ಚಾಗಿದೆ. ಮತ್ತು ಈ ವರ್ಷ ಬರೀ 8 ಕೋಟಿ ಹಣವನ್ನು ಕೊಟ್ಟಿದ್ದೀರಿ. ಇದರ ಕೆಲಸವನ್ನು ಕನ್ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿಕೊಟ್ಟಿದ್ದೀರಿ. ಬಹಳ ತ್ವರಿತಗತಿಯಲ್ಲಿ ಕೆಲಸ ಆಗಿದೆ. ಆದರೆ, ಕನ್ಸ್ಟ್ರಕ್ಷನ್ ಕಾರ್ಪೊರೇಷನ್‌ನ್ನು ದೂಷಿಸತಕ್ಕಂತಹ ಮಾತಲ್ಲ. ಈಗ ಮುಗಿಯುವ ಹಂತದಲ್ಲಿದ್ದಂತಹ ಯೋಜನೆಗಳಿಗೆ ಸರ್ಕಾರ ಹೆಚ್ಚು ಆದ್ಯತೆಯನ್ನು ಕೊಟ್ಟರೆ ಅಲ್ಲಿಯ ರೈತರಿಗೆ ತೀವ್ರ ಗತಿಯಲ್ಲಿ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿ ಈ ವರ್ಷ ಇದಕ್ಕೆ ಕನಿಷ್ಠಪಕ್ಷ ಇನ್ನೂ 12 ಕೋಟಿ ಹಣ ಕೊಟ್ಟರೆ ಇದು ಕೆಲಸ ಸರಳವಾಗುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಇನ್ನೂ ಮೊದಲೇ ತೆಗೆದುಕೊಂಡ ಏತ ನೀರಾವರಿ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಾವು ಒಂದು ಕ್ರಾಪ್‌ಗೆ ನೀರನ್ನು ಉಪಯೋಗ ಮಾಡತಕ್ಕಂತಹ ರೈತರಿಗೆ ಎರಡು ಕ್ರಾಪ್ ಅಸೆಸ್‌ನ್ನು ಅಲ್ಲಿನ ಅಧಿಕಾರಿಗಳು ಹಾಕುತ್ತಿದ್ದಾರೆ. ಬರಿ 4 ತಿಂಗಳು ನೀರನ್ನು ಉಪಯೋಗ ಮಾಡಿ ರೈತರು ಕಬ್ಬು ಮತ್ತು ಹತ್ತಿಯನ್ನು ಬೆಳೆಯುತ್ತಾರೆ. ಆದರೆ ಈ ಒಂದು ಕಬ್ಬು ಮತ್ತು ಹತ್ತಿಯನ್ನು ಯಾವ ಮೂಲದಿಂದ

ಬೆಳೆಯುತ್ತಾರೆಂದರೆ, ಸಬ್‌ಮರ್ಸಿಬಲ್ ಬೋರಗಳನ್ನು ಹಾಕಿಸಿಕೊಂಡು ಬೆಳೆದಿದ್ದಕ್ಕೆ ಇವರು ಎರಡು ಬೆಳೆಯ ಟ್ಯಾಕ್ಸನ್ನು ಹಾಕುವುದು ಬಹಳ ಅನ್ಯಾಯವಾಗುತ್ತದೆ. ಬಹಳಷ್ಟು ಅವರಿಗೆ ತೊಂದರೆ ಕೂಡ ಆಗುತ್ತದೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದನ್ನು ಗಮನಿಸಬೇಕೆಂದು ನಾನು ಕೋರುತ್ತೇನೆ. ನಾವು ಮುಖ್ಯವಾಗಿ ರೈತರ ಚಿಂತನೆಯನ್ನು ಮಾಡಬೇಕಾದರೆ, ನೀರಾವರಿಗೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಇವತ್ತು ಬಸ್ ಸ್ಟಾಂಡ್ ಅಂತ ಕಟ್ಟಿಸುತ್ತೇವೆ. ಮಹಿಳಾ ಮಂಡಳ ಎಂದು ಕಟ್ಟಿಸುತ್ತೇವೆ. ಯುವಕ ಮಂಡಳ ಅಂತ ಕಟ್ಟಿಸುತ್ತೇವೆ. ಇವೆಲ್ಲದರ ಬಗ್ಗೆ ನಮ್ಮ ಹಿರಿಯ ಸದಸ್ಯರು ಚಿಂತನೆಯನ್ನು ಮಾಡಬೇಕು. ಇಂತಹ ಕನ್ಸ್ಟ್ರಕ್ಷನ್‌ನ್ನು ಬಿಟ್ಟು ಇವತ್ತು ನೀರಾವರಿಗೆ ಆದ್ಯತೆಯನ್ನು ಕೊಟ್ಟರೆ, ನಮ್ಮ ರೈತರು ಹಾಗೂ ನಾವು ಬದುಕುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳಿ, ಈ ಸಂದರ್ಭದಲ್ಲಿ ಸಭಾಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ.ವಿ.ಎನ್. ಕರ್ಜಗಿ : ಸನ್ಮಾನ್ಯ ಸದಸ್ಯರಾದ ಕರಡಿಯವರು ಹೇಳಿದಹಾಗೆ, ನೀರಾವರಿ ಇಲಾಖೆಯ ಅಧಿಕಾರಿಗಳು ನೀರಿನ ಕರವನ್ನು ನೀರು ಕೊಡದೇ ಇದ್ದರು ಕೂಡಾ ವಸೂಲು ಮಾಡುತ್ತಿದ್ದಾರೆಂಬುದು ಬಹಳ ನಿಜವಾದ ಸಂಗತಿ. ಟೇಲ್ ಎಂಡ್‌ನಲ್ಲಿರತಕ್ಕ ಈ ರೈತರಿಗೆ ನೀರೇ ಬರುವುದಿಲ್ಲ. ಆದಾರೂ ಕೂಡ ಅವರಿಂದ ನೀರಾವರಿ ಕರವನ್ನು ವಸೂಲಿ ಮಾಡುವುದಕ್ಕೆ ನೋಟೀಸ್ ಜಾರಿ ಮಾಡಿದ್ದಾರೆ. ಅಷ್ಟೇ ಅಲ್ಲ, ಕಂದಾಯ ಅಧಿಕಾರಿಗಳಿಗೆ ಬರೆದು ತಹಸೀಲ್ದಾರ್‌ಗೆ ಬರೆದು ಅವರ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ಒಂದು ಪ್ರಯತ್ನವನ್ನೂ ಮಾಡಿದ್ದಾರೆ. ಎಷ್ಟೋ ಜನ ರೈತರ ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಸರ್ಕಾರ ಅಂತ ಮಾಡಿಬಿಟ್ಟಿದ್ದಾರೆ. ಏಕೆಂದರೆ ನೀರಿನ ಕರ ಕೊಟ್ಟಿಲ್ಲ ಅಂತ ಹೇಳಿ ಇದು ಬಹಳ ಸತ್ಯವಾದ ಮಾತು ಇದೆ. ಅದಕ್ಕೆ ಸರ್ಕಾರ ನೀರಾವರಿ ಇಲಾಖೆಯ ಅಧಿಕಾರಿಗಳ ಮುಖಾಂತರವಾಗಿಯಾಗಲಿ, ಅಥವಾ ಕೃಷಿ ಇಲಾಖೆಯ ಅಧಿಕಾರಿಗಳ ಮುಕಾಂತ ರವಾಗಿಯಾಗಲಿ ಯಾರ ಜಮೀನಿಗೆ ನೀರು ಬರುವುದಿಲ್ಲ ಅಂತಹವರಿಂದ ನೀರಿನ ಕರವನ್ನು ವಸೂಲು ಮಾಡಬಾರದು ಅಂತ ಹೇಳಿ ಆದೇಶ ಮಾಡಬೇಕು ಅಂತ ಹೇಳಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

* ಶ್ರೀ ವಿರೂಪಾಕ್ಷಪ್ಪ ಕೆ. (ಸಿಂಧನೂರು) ಮಾನ್ಯ ಅಧ್ಯಕ್ಷರೇ, ಈಗಾಗಲೇ ಸದನದಲ್ಲಿ ಎಲ್ಲಾ ಹಿರಿಯ ಸದಸ್ಯರು ರಾಜ್ಯದ ನೀರಾವರಿಯನ್ನು ಕುರಿತು ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ನಾವೆಲ್ಲರೂ ಕೂಡ ಇವತ್ತು ಬಚಾವತ್ ಆಯೋಗದ ಪ್ರಕಾರ 2000ನೇ ಇಸವಿಯೊಳಗಾಗಿ ನಮ್ಮ ನೀರಿನ ಹಕ್ಕನ್ನು ನಾವು ಉಪಯೋಗಿಸಿಕೊಳ್ಳುವುದು. ಬಹಳ ಮಹತ್ವವಿದೆ ಎನ್ನತಕ್ಕಂತಹ ವಿಚಾರವನ್ನು ನಾನೂ ಕೂಡ ಒಪ್ಪುತ್ತಾ ಮುಖ್ಯವಾಗಿ ನಾನು ಈ ತುಂಗಭದ್ರ ಜಲಾಶಯದ ಬಗ್ಗೆ ಒಂದೆರಡು

ಮಾತಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ತುಂಗ ಭದ್ರ ಜಲಾಶಯ ನಮ್ಮ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯ ಒಂದು ಜೀವಾಳ. ಆ ಜಲಾಶಯದ ಪರಿಸ್ಥಿತಿ ಏನಾಗುತ್ತಿದೆ ಎಂದರೆ, ಪ್ರತಿ ವರ್ಷ ಒಂದರಿಂದ ಒಂದೂವರೆ ಟಿ.ಎಂ.ಸಿ. ದೂಳು ತುಂಬುವುದರಿಂದ, ನಾವು ಇನ್ನೊಂದು 15-20 ವರ್ಷಗಳಲ್ಲಿ ಆ ನೀರಿನಿಂದ ವಂಚಿತರಾಗುತ್ತೇವೇನೋ ಎಂಬ ಭಯ ನಮ್ಮ ಭಾಗದ ರೈತರಿಗೆ ಬರುತ್ತಾ ಇದೆ.. ಆ ಕಾರಣ ತಮ್ಮ ಮೂಲಕ ಸರ್ಕಾರವನ್ನು ವಿನಂತಿಮಾಡಿಕೊಳ್ಳುವುದು ಇಷ್ಟೆ, ಆ ದೂಳನ್ನು ತೆಗೆಸುವಂತಹ ಒಂದು ಕಾರ್ಯವನ್ನು ಸರ್ಕಾರ ವಿಚಾರ ಮಾಡಿ ಕೈಗೆತ್ತಿಕೊಳ್ಳಬೇಕು. ಮತ್ತೊಂದು ವಿಚಾರ. ಈಗ ಒಂದು ತುಂಗಭದ್ರ ಜಲಾಶಯದಿಂದ ಏನು ಬಳ್ಳಾರಿ ಮತ್ತು ರಾಯಚೂರು ಭಾಗದಲ್ಲಿ ನೀರಾವರಿಯಾಗತಕ್ಕಂತಹ ಪ್ರದೇಶ ಇದೆ, ಅದರಲ್ಲಿ ನಮ್ಮ ಎಡದಂಡೆ ಮೂಲಕ ನೀರಾವರಿಯಾಗತಕ್ಕಂತಹದ್ದು 6 ಲಕ್ಷ ಚಿಲ್ಲರೆ. ಅದರಲ್ಲಿ ಬೆಳೆ ಆಗತಕ್ಕಂತಹದ್ದು 4 ಲಕ್ಷ ಮಾತ್ರ. ಇನ್ನು ಉಳಿದ 2 ಲಕ್ಷ ನೀರು ಸಿಗಲಾರದೆ ಟೇಲ್ ಎಂಡಾಗಿ ಕೊನೆ ಭಾಗದ ರೈತರಿಗೆ ನೀರು ಸಿಗದಿಂತಾಗಿ 2 ಲಕ್ಷ ಎಕರೆ ಅಂದಾಜು ಬೆಳೆಯನ್ನು ಬೆಳೆಯ ತಕ್ಕಂತಹದ್ದು ಇಲ್ಲ. ಆ ಒಂದು ಟೇಲ್ ಎಂಡ್‌ನಲ್ಲಿರತಕ್ಕ, ನೀರಿನಿಂದ ವಂಚಿತರಾಗಿರತಕ್ಕಂತಹ ರೈತರಿಗೆ ಏತ ನೀರಾವರಿ ಮೂಲಕವಾಗಲಿ, ಅಥವಾ ಈ ನೀರಾವರಿ ಬೆಳೆ ಪದ್ಧತಿಯನ್ನು ಬದಲಾಯಿಸಿ ಯಾವುದೇ ಮೂಲದಿಂದ ಆ ರೈತರಿಗೆ ನೀರನ್ನು ಕೊಡತಕ್ಕಂತಹ ಒಂದು ವ್ಯವಸ್ಥೆಯನ್ನು ಈ ಸರ್ಕಾರ ವಿಚಾರ ಮಾಡಿ ಅದನ್ನು ಪರಿಹರಿಸಬೇಕು ಅನ್ನತಕ್ಕಂತಹ ಮನವಿಯನ್ನು ನಾನು ಈ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ತುಂಗಭದ್ರ ಜಲಾಶಯದ ಎಡ ಮತ್ತು ಬಲಭಾಗದ ಉಪಕಾಲುವೆಗಳು ಏನು ಇವೆ, ಆ ಉಪ ಕಾಲುವೆಗಳಲ್ಲಿ ಈಗಾಗಲೇ ನಮ್ಮ ಅನೇಕ ಸದಸ್ಯರು ಹೇಳಿದಂತೆ ನೀರು ಸೋರಿಹೋಗತಕ್ಕಂತಹದ್ದು. ಇವತ್ತು 20-25 ಪರ್ಸೆಂಟ್ ಭಾಗ ನೀರು ಸೋರಿ ಹೋಗುತ್ತಿದೆ. ಈ ರೀತಿ ಸೋರಿಹೋಗುವ ನೀರನ್ನು ನಿಲ್ಲಿಸಿದರೆ ನಮಗೆ ಇನ್ನೂ ಹೆಚ್ಚಿನ ಭೂಮಿಗೆ ನೀರನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ಆದ ಕಾರಣ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ಈಗಾಗಲೇ ಹಿಂದಿನ ಸರ್ಕಾರ ಕಾರ್ಯ ಕ್ರಮವನ್ನು ರೂಪಿಸಿ ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದರೆ ಈ ಒಂದು ಹೊಸ ಸರ್ಕಾರ ಈ ಒಂದು ಬಜೆಟ್ಟಿನಲ್ಲಿ ಅದಕ್ಕೆ ಯಾವುದೇ ಒಂದು ಪ್ರಾವಿಜನ್ ಮಾಡಲಾರದೆ ಇರುವುದರಿಂದ ಇವತ್ತು ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಗೆ ಈ ಒಂದು ಮಂಜೂರಾತಿ ನೀಡಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಕಾರಣ ಸರ್ಕಾರ ಆ ಒಂದು ದಿಸೆಯಲ್ಲಿ ಗಮನ ಹರಿಸಿ ಆ ಒಂದು ಜಲ ನಿರ್ವಹಣಾ ಯೋಜನೆಯಲ್ಲಿ ನಮ್ಮ ಉಪ ಕಾಲುವೆಗಳ ಕೆಲಸಗಳನ್ನು ಸೋರಿ ಹೋಗತಕ್ಕಂತಹ 20-25 ಪರ್ಸೆಂಟ್ ನೀರನ್ನು ಉಳಿಸುವಂತಹ ಒಂದು ಕೆಲಸವನ್ನು ಈ ಸರ್ಕಾರ ಮಾಡಬೇಕು ಅನ್ನತಕ್ಕಂತಹ ಮನವಿಯನ್ನು ನಾನು ಮಾಡಿಕೊಂಡು ಈ ಒಂದು ಸಮಯದಲ್ಲಿ ತಾವು ನನಗೆ

ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಬಿ.ಆರ್. ಪಾಟೀಲ್ : (ಬಿಜಾಪುರ) ಸನ್ಮಾನ್ಯ ಅಧ್ಯಕ್ಷರೇ, ಈ ಕೃಷ್ಣಾ ನೀರಾವರಿ ಯೋಜನೆ ಅಡಿಯಲ್ಲಿ ವಿಶೇಷವಾಗಿ ವಿಜಾಪುರ ಜಿಲ್ಲೆ ಬರುತ್ತಿದ್ದೆ ಇದು ಬಹಳ ಹಿಂದುಳಿದಂಥ ಪ್ರದೇಶ. ಏಕೆಂದರೆ ಕರ್ನಾಟಕದ ಪಂಜಾಬ್ ಎನಿಸಿಕೊಂಡಂಥ ವಿಜಾಪುರ ಜಿಲ್ಲೆಗೆ ನಿಜವಾಗಿಯೂ ಬಹಳ ಅನ್ಯಾಯವಾಗಿದೆ. ಅದರಲ್ಲೂ ವಿಶೇಷವಾಗಿ ಮುಳುವಾಡ ನೀರಾವರಿ ಯೋಜನೆಯನ್ನು ನಾವು ಮಾಡುತ್ತೇವೆ ಎಂದು ಅನೇಕ ರಾಜಕೀಯ ಪಕ್ಷಗಳು ಕೇವಲ ಚುನಾವಣೆ ಸಮಯದಲ್ಲಿ ಮುಳುವಾಡ ನೀರಾವರಿ ಯೋಜನೆ ಹೆಸರನ್ನು ತೆಗೆದುಕೊಂಡು ಮತವನ್ನು ತೆಗೆದುಕೊಳ್ಳುವಂಥ ಒಂದು ಓಟ್ ಬ್ಯಾಂಕ್ ಮಾಡಿದಂಥ ಈ ಪರಿಸ್ಥಿತಿಯಲ್ಲಿ ಸುಮಾರು 2800 ಕೋಟಿ ರೂಪಾಯಿಗಿಂತ ಹೆಚ್ಚು ಹಣ ಈ ಒಂದು ಯೋಜನೆಗೆ ಬೇಕಾಗುತ್ತದೆ. ಸುಮಾರು ಮೂರು ತಾಲ್ಲೂಕುಗಳು ಅಂದರೆ ಬಸವನ ಬಾಗೇವಾಡಿ, ಜಮಖಂಡಿ, ಬಿಜಾಪುರ ಈ ಒಂದು ನೀರಾವರಿ ಯೋಜನೆಯಿಂದ ಉಪಯೋಗವಾಗುವಂಥ ಪ್ರದೇಶಗಳಿದ್ದರೂ ಸಹ ಲಕ್ಷಾಂತರ ಹೆಕ್ಟೇರುಗಳ ಪ್ರದೇಶದಲ್ಲಿ ಈ ಒಂದು ಯೋಜನೆ ಉಪಯೋಗವಾಗುತ್ತದೆ. ನಾವು ಪ್ರಾಮಾಣಿಕವಾಗಿ ಇವತ್ತು ವಿಚಾರ ಮಾಡಿದರೆ, ಯಾವ ಕೃಷ್ಣಾ ಯೋಜನೆಗೆ 6620 ಕೋಟಿ ರೂಪಾಯಿಯನ್ನು ಕೊಟ್ಟು, ಸರ್ಕಾರ ನಿರ್ದಿಷ್ಟವಾಗಿ 2000 ಇಸವಿಗೆ ಈ ಯೋಜನೆ ಕೆಲಸ ಮುಗಿಸುವುದಕ್ಕೆ ಆಗುತ್ತದೆಯೋ ಎನ್ನುವಂಥ ಗಂಭೀರ ವಿಚಾರ ಇದ್ದರೂ ಸಹ, ಎಲ್ಲಾ ರಾಜಕೀಯ ಪಕ್ಷದ ಧುರೀಣರು ಈ ಒಂದು ಯೋಜನೆಯ ಹೆಸರಿನಲ್ಲಿ ಚುನಾವಣೆ ಮಾಡುತ್ತಾ, ಮತ್ತೆ ಅದೇ ಒಂದು ಆಶ್ವಾಸನೆ ಮುಂದುವರೆಯುತ್ತಾ ನಡೆಯುತ್ತಿದೆ. ಈಗಾಗಲೇ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಅನೇಕ ತಮ್ಮ ಭಾಷಣಗಳಲ್ಲಿ ಸನ್ಮಾನ್ಯ ಕಾರ್ಯಕ್ರಮಗಳಲ್ಲಿ ಈ ಯೋಜನೆಯನ್ನು ಈ ಅವಧಿಯಲ್ಲಿ ಪೂರ್ತಿ ಮಾಡುತ್ತೇವೆ ಎಂದು ಆಶ್ವಾಸನೆ, ಯನ್ನು ಕೊಡುತ್ತಿದ್ದಾರೆ. ಈ ಯೋಜನೆಗೆ ಪ್ರತಿವರ್ಷ 600 ಕೋಟಿ ರೂಪಾಯಿ ಖರ್ಚು ಮಾಡಿದಾಗ ಮಾತ್ರ ಈ ಯೋಜನೆ ಮುಗಿಯುತ್ತದೆ. ಆದರೆ ಅಧ್ಯಕ್ಷರೇ, 1994 -95ರ ಬಜೆಟ್‌ನಲ್ಲಿ ಈ ಒಂದು ಯೋಜನೆಗೆ 275 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದರು. ಕೇವಲ ಅದರಲ್ಲಿ 1.24 ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ. ಕೇವಲ ಕೆಲವು ಡಂಪರ್‌ಗಳನ್ನು ಹಚ್ಚಿ ಮಣ್ಣನ್ನು ತೆಗೆಯುತ್ತಾ ಕೇವಲ ಒಂದು ನಾಟಕೀಯವಾದಂಥ ಕಾರ್ಯ ಅಲ್ಲಿ ಆಗಿದೆ. ನಿಜವಾಗಿ ಈ ಯೋಜನೆ ಮುಗಿಯುವಂಥ ಯಾವುದೇ ವಿಶ್ವಾಸ ಜನರಿಗೆ ಇಲ್ಲ. ಆದಕಾರಣ ಮುಳುವಾಡ ನೀರಾವರಿ ಯೋಜನೆ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ಧೋರಣೆಯನ್ನು ತಿಳಿಸಬೇಕು. ಕೇವಲ ಇದೊಂದು ಜೀವಂತವಾದ ಯೋಜನೆಗೆ ಮೋಸ ಮಾಡುವಂಥ ಕೆಲಸ ಮಾಡಬಾರದು.

7.20 ಪಿ.ಎಂ

ನಿಜವಾಗಿಯೂ ಈ ನೀರಾವರಿ ಯೋಜನೆಗಳನ್ನು ಪ್ರಾಮಾಣಿಕವಾಗಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಧಿಕಾರಿಗಳು ಅನೇಕ ವರ್ಷಗಳಿಂದ ಭ್ರಷ್ಟಾಚಾರ ಮಾಡಿರುವುದನ್ನು ನಮ್ಮ ಭಾಗದಲ್ಲಿ ನಾವು ನೋಡಿದ್ದೇವೆ. ಸಿಮೆಂಟನ್ನು ಕಬ್ಬಿಣವನ್ನೂ ಸಹ ರಾತ್ರೋರಾತ್ರಿ ಮಾರಿಕೊಂಡು, ಈ ಯೋಜನೆಗೆ ಬಂದಂತಹದ್ದು, ಕೆಲವೊಂದು ಅಧಿಕಾರಿಗಳ ಮನೆಗೆ ಬಂದಂತಹ, ಸಿಮೆಂಟ್‌ನ್ನು ನಮ್ಮ ಅಲ್‌ಮಟ್ಟಿಯಲ್ಲಿ ನಾವು ನೋಡಿದ್ದೇವೆ. ನಮ್ಮ ಆಲ್‌ಮಟ್ಟಿ ಯೋಜನೆಗೆ ಬರುವಂತಹ ಸಿಮೆಂಟ್ ಮಹಾರಾಷ್ಟ್ರಕ್ಕೆ ಕಳೆದ ಹತ್ತಾರು ವರ್ಷಗಳಿಂದ ಹೋಗುತ್ತಿರುವ ಒಂದು ಪರಿಸ್ಥಿತಿಯಲ್ಲಿ, ಕೇವಲ ಸರ್ಕಾರ ತನ್ನ ಖರ್ಚಿನಲ್ಲಿ ತೋರಿಸುತ್ತಿದೆ. ಇಷ್ಟು ಸಾವಿರಕೋಟಿ ರೂಪಾಯಿಗಳನ್ನು ಕೃಷ್ಣಾ ನೀರಾವರಿ ಯೋಜನೆಗೆ ನಾವು ಖರ್ಚು ಮಾಡಿದ್ದೇವೆ ಎಂದು. ಆದರೆ ಯಾವ ಅಧಿಕಾರಿಗಳು, ಮುಖ್ಯ ಅಭಿಯಂತರರು, ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮನೆಗಳನ್ನು ನೋಡಿದಾಗ ನಮಗೆ ಗೊತ್ತಾಗುತ್ತದೆ. ಇವರು ಎಷ್ಟು ಪ್ರಾಮಾಣಿಕರಾಗಿ ಕೆಲಸ ಮಾಡಿದ್ದಾರೆ ಅನ್ನುವುದು. ಗ್ರಾನೈಟ್‌ಗಳನ್ನು ಪರ್ಸಿಗಳನ್ನು ಕಾಂಪೌಂಡಿನಲ್ಲಿ ಹಾಕಿ ಐಶಾರಾಮಿಯಾದ ಜೀವನವನ್ನು ಈ ಅಭಿಯಂತರರು ಮಾಡುತ್ತಿದ್ದಾರೆ. ನಿಜವಾಗಿಯೂ ರೈತರು ತನ್ನ ಭೂಮಿಯನ್ನು ಕಳೆದುಕೊಂಡ ರೈತರು ಅತ್ಯಂತ ದೈನ್ಯತೆಯ ಪರಿಸ್ಥಿತಿಯಲ್ಲಿದ್ದಾರೆ. ಆದರೆ ಸರ್ಕಾರ ಗಮನ ಕೊಡಬೇಕು. ಅಭಿಯಂತರರ ಮನೆಯನ್ನು ನೋಡಿ ನೀವು. ಅವರು ಯಾವ ರೀತಿಯಾಗಿ ಐಶಾರಾಮಿಯಾದ ಜೀವನವನ್ನು ಕೋಟ್ಯಂತರ ರೂಪಾಯಿಗಳ ಹಣದ ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದಾರೆ. ಜ್ಯೂನಿಯರ್ ಇಂಜಿನೀಯರ್‌ಗಳು ಮಾರುತಿ ಕಾರುಗಳನ್ನು ಇಟ್ಟುಕೊಂಡು ಮೇಟ್ನೈನ್ ಮಾಡುವ ಪರಿಸ್ಥಿತಿ ನಮ್ಮಲ್ಲಿ ನಿರ್ಮಾಣವಾಗಿದೆ. ಕೇವಲ ಅಂಕಿ ಸಂಖ್ಯೆಗಳ ಮುಖಾಂತರ ಕೃಷ್ಣಾ ಯೋಜನೆಯಲ್ಲಿ ಮೋಸವಾಗಿದೆ. ದಯಮಾಡಿ ಸರ್ಕಾರ ಇಂತಹ ಅಧಿಕಾರಿಗಳು ಎಷ್ಟು ಆಸ್ತಿ- ಪಾಸ್ತಿ ಗಳಿಸಿದ್ದಾರೆ. ಅದನ್ನು ಸಂಪೂರ್ಣ ಮುಟ್ಟುಗೋಲು ಹಾಕಿಕೊಂಡು ಈ ಯೋಜನೆಯನ್ನು ಪೂರ್ತಿ ಮುಗಿಸಬೇಕು. ನಮ್ಮ ರಾಜ್ಯದ ಖಜಾನೆಯನ್ನು ಲೂಟಿ ಮಾಡಿದಂತಹ ಅಧಿಕಾರಿಗಳನ್ನು ಸಂಪೂರ್ಣ ತನಿಖೆಗೆ ಒಳಪಡಿಸಬೇಕು. ಏಕೆಂದರೆ ಯಾವಾಗಲೋ ಒಬ್ಬ ಮುಖ್ಯ ಅಭ್ಯಂತರರ ಮನೆಗೆ ಹೋದಾಗ ನಮ್ಮ ಕಾರ್ಯನಿರ್ವಾಹಕ ಮನೆಗೆ ಹೋದಾಗ, ಸುಮಾರು 60-70 ಲಕ್ಷ ರೂಪಾಯಿಗಳ ಮನೆ ಇರಬಹುದು ಅವರದ್ದು. ಇಂತಹ ಅನೇಕ ಪರಿಸ್ಥಿತಿಯನ್ನು ನಮ್ಮ ಜಿಲ್ಲೆಯಲ್ಲೇ ಇರುವಂತಹ ಅನೇಕರನ್ನು ನಾವು ನೋಡುತ್ತಿದ್ದೇವೆ. ಪ್ರಾಮಾಣಿಕವಾಗಿ ಇದರ ಕೆಲಸವಾಗಬೇಕಾಗಿದೆಯೇ ಹೊರತು, ಕೇವಲ ರಾಜಕೀಯವನ್ನು ಇದರಲ್ಲಿ ಮಾಡುವುದು ಬೇಡ. ಪ್ರಾಮಾಣಿಕವಾಗಿ ಜನರ ಒಂದು ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಅದೇ ರೀತಿ ಮುಳುವಾಡ ಏತ ನೀರಾವರಿ ನಮ್ಮ ಜಿಲ್ಲೆಯಲ್ಲಿ ಆಗುವುದಿಲ್ಲ, ಎನ್ನುವಂತಹ

ಸಂಪೂರ್ಣ ನಿರ್ಣಯಕ್ಕೆ ನಾವು ಬಂದಿದ್ದೇವೆ. ದಯವಿಟ್ಟು ಸರ್ಕಾರ ಸಣ್ಣ ಸಣ್ಣ ಕೆರೆಗಳನ್ನು ನಿರ್ಮಾಣ ಮಾಡಬೇಕು. ಅದೇ ರೀತಿ ನಮ್ಮ ಭಾಗದಲ್ಲಿ ವಿಶೇಷವಾಗಿ ಬಿಜಾಪುರ ತೋಟಗಾರಿಕೆಯಲ್ಲಿ ಬಹಳ ಹೆಸರಾದ ಜಿಲ್ಲೆ. ಹನಿ ನೀರಾವರಿ ಪದ್ಧತಿ ಏನು ಇದೆ. ಅದಕ್ಕೆ 100ಕ್ಕೆ 100 ರಷ್ಟು ಸಬ್ಸಿಡಿಯನ್ನು ಕೊಡುವುದರ ಮುಖಾಂತರ ನಮ್ಮ ನೀರಾವರಿಗೆ ಪ್ರೋತ್ಸಾಹ ಕೊಡಬೇಕೆ ಹೊರತು ಬೇರೆ ಮಾರ್ಗ ಇಲ್ಲ. ನಮ್ಮಲ್ಲಿ ಕೆರೆಗಳ ಹೂಳನ್ನು ತೆಗೆಸಲು ಖರ್ಚನ್ನು ಹಾಕುತ್ತಾರೆ. ಯಾವ ಸಂದರ್ಭದಲ್ಲಿ ಅಂದರೆ, ಮೇ ತಿಂಗಳಲ್ಲಿ ಅಥವಾ ಜೂನ್ ತಿಂಗಳಲ್ಲಿ ಈ ಒಂದು ಕಾರ್ಯವನ್ನು ಪ್ರಾರಂಭ ಮಾಡುತ್ತಾರೆ. ಜೂನ್ - ಜುಲೈ ತಿಂಗಳಲ್ಲಿ ಮಳೆ ಬಂದು ತುಂಬಿಕೊಂಡು ಹೋಗುತ್ತದೆ. ಅದರ ಹೆಸರಿನಲ್ಲಿ ಸಂಪೂರ್ಣ ಅದಕ್ಕೆ ಇಟ್ಟಂತಹ ಬಜೆಟ್ ಹಣವನ್ನು ಖರ್ಚು ಮಾಡಿದ್ದೇವೆಂದು ತೋರಿಸುತ್ತಾರೆಯೇ ಹೊರತು, 2-3 ಲಕ್ಷ ರೂ. ಗಳನ್ನು ಖರ್ಚು ಮಾಡಿ, ನಮ್ಮ ಬಿಜಾಪುರದಲ್ಲಿ ಬೇಗಂ ಶಾ ಕೆರೆ ಒಂದು ಅದರ ಹೂಳನ್ನು ತೆಗೆಯುವ ಯೋಜನೆಯನ್ನು ವೀರಪ್ಪಮೊಯಿಲಿಯವರ ಸರ್ಕಾರ ಮಾಡಿತು. ಕೇವಲ ಮಳೆ ಬರುವುದಕ್ಕಿಂತ ಮುಂಚಿತವಾಗಿ 15 ದಿವಸ ತೆಗೆದು 50 ಲಕ್ಷ ರೂಪಾಯಿಗಳ ಹಣವನ್ನು ಅದರ ಮೇಲೆ ಖರ್ಚು ಹಾಕಿದ್ದನ್ನು ನಾವು ನೋಡಿದ್ದೇವೆ. ಇಂತಹ ಅನೇಕ ಪ್ರಸಂಗಗಳು ಇವೆ.

ಇನ್ನೊಂದು ವಿಷಯ ಪ್ರಮುಖವಾಗಿ ಹೇಳಬೇಕಾದರೆ, ಬಿಜಾಪುರ ಜಿಲ್ಲೆ ಮಹರಾಷ್ಟ್ರದ ರಾಜ್ಯದಲ್ಲಿದ್ದರೆ, ಬಹಳ ಅಭಿವೃದ್ಧಿ ಪಡುತ್ತಿತ್ತು ಎಂದು ಅನೇಕ ಪತ್ರಿಕೆಗಳಲ್ಲಿ ಪ್ರಜಾವಾಣಿಯಲ್ಲೊಮ್ಮೆ ಲೇಖನ ಬಂದಿತ್ತು. ಮಹಾರಾಷ್ಟ್ರದಲ್ಲಿ ನಮ್ಮ ಜಿಲ್ಲೆ ಇದ್ದಿದ್ದರೆ ಬಹಳಷ್ಟು ನೀರಾವರಿಯಲ್ಲಿ ಮುಂದೆ ಹೋಗುವ ಪರಿಸ್ಥಿತಿ ಇತ್ತು. ದುರ್ದೈವ ಕರ್ನಾಟಕದಲ್ಲಿ ನಾವು ಸೇರಿರುವುದರಿಂದ ನಮ್ಮ ಪರಿಸ್ಥಿತಿ ಇವತ್ತು ಅತ್ಯಂತ ದೈನ್ಯತೆಯ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಯಾವಾಗಲೂ ನಮ್ಮ ಜಿಲ್ಲೆಯನ್ನು ಕಡೆಗಾಣಿಸಿದ್ದೀರಿ. ಹೈದರಾಬಾದ್ ಕರ್ನಾಟಕ ಎಂದು ಅಭಿವೃದ್ಧಿ ಸಂಸ್ಥೆಯನ್ನು ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ತಮ್ಮ ಅಭಿವೃದ್ಧಿಯನ್ನು ಮಾಡಿಕೊಂಡಿದ್ದಾರೆ. ಆದರೆ ಮುಂಬೈ ಕರ್ನಾಟಕದ ಬಿಜಾಪುರ ಅತ್ಯಂತ ಹಿಂದುಳಿದ ಜಿಲ್ಲೆಯಾಗಿರುವುದರಿಂದ ಸರ್ಕಾರ ಕೆರೆಗಳ ನಿರ್ಮಾಣದ ಮುಖಾಂತರ, ಅನೇಕ ಯೋಜನೆಗಳನ್ನು ಹಾಕಿಕೊಂಡು, ಆ ಭಾಗದ ಜನರಿಗೆ ಪ್ರಾಮಾಣಿಕವಾದ ಒಂದು ಸೇವೆಯನ್ನು ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಂಡು, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಕೆ. ವೆಂಕಟೇಶ್ (ಪಿರಿಯಾಪಟ್ಟಣ ಕ್ಷೇತ್ರ) ಮಾನ್ಯ ಅಧ್ಯಕ್ಷರೇ, ಈಗ ಹಲವಾರು ಹಿರಿಯ ಸದಸ್ಯರು ನೀರಾವರಿ ಬಗ್ಗೆ ಅವರ ಅಭಿಪ್ರಾಯಗಳನ್ನು ಸೂಚನೆಗಳನ್ನು, ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ ನಮ್ಮ ಎಲ್ಲಾ

ಸದಸ್ಯರುಗಳು ಅವರ ಕ್ಷೇತ್ರಕ್ಕೆ ಮತ್ತು ನೀರಾವರಿಗೆ ಸಂಬಂಧಪಟ್ಟಹಾಗೆ ಹಲವಾರು ಸಮಸ್ಯೆಗಳನ್ನು ತೊಂದರೆಗಳನ್ನು ತಮ್ಮ ಮುಂದೆ ನಿವೇದನೆ ಮಾಡಿದ್ದಾರೆ. ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ನೀರಾವರಿ ಲಿಫ್ಟ್ ಇರಿಗೇಷನ್ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಚೆಪಡುತ್ತೇನೆ. 1987ರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಇದೇ ನಮ್ಮ ಮುಖ್ಯಮಂತ್ರಿಗಳು ನೀರಾವರಿ ಸಚಿವರಾಗಿದ್ದಾಗ ಅದಕ್ಕೆ ನಾವು ಫೌಂಡೇಷನ್ ಹಾಕಿ, ಲಿಫ್ಟ್ ಇರಿಗೇಶನ್ ಯೋಜನೆಯನ್ನು ಪ್ರಾರಂಭ ಮಾಡಿದೆವು. ಅದಕ್ಕೆ ಎರಡು ಹೆಸರು ಕರೆಯುತ್ತಾರೆ. ಒಂದನೆಯದು ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆ ಅಂತ ಕರೆಯುತ್ತಾರೆ. ಎರಡನೆಯದು ಪಿರಿಯಾಪಟ್ಟಣ ಲಿಫ್ಟ್ ಇರಿಗೇಷನ್ ಅಂತ ಕರೆಯುತ್ತಾರೆ. ನಿಜವಾಗಿ ಇದಕ್ಕೆ ಹೆಸರು ಇರುವುದೇ ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆ ಅಂತ. ಅದು ಈ ಏಷ್ಯಾ ಭಾಗದಲ್ಲೇ ಬಹಳ ದೊಡ್ಡ ಲಿಫ್ಟ್ ಇರಿಗೇಷನ್ ಕರಡಿಲಕ್ಕನಕೆರೆ ಲಿಫ್ಟ್ ಇರಿಗೇಶನ್ ಯೋಜನೆ ಏನು ಇದೆ, ಇದು ಮೂಲತಃ ಹಾರಂಗಿ ಯೋಜನೆ ಮೊದಲು ತಯಾರಾಯಿತಲ್ಲ, ಅದರಲ್ಲೇ ಸೇರಿದೆ. ಲಿಫ್ಟ್ ಇರಿಗೇಷನ್ ಅಂತ. ಶ್ರೀಮಾನ್ ಚನ್ನಬಸಪ್ಪನವರು ನೀರಾವರಿ ಸಚಿವರಾಗಿದ್ದಾಗ ಈ ಯೋಜನೆಯನ್ನು ತಯಾರು ಮಾಡಿಸಿದ್ದರು. ಶ್ರೀಮಾನ್ ವೀರೇಂದ್ರಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಆ ಕಾರ್ಯವನ್ನು ಪ್ರಾರಂಭ ಮಾಡಿದರು, ಈ ಹಾರಂಗಿ ಯೋಜನೆಯನ್ನು ಆ ಯೋಜನೆಯಲ್ಲೇ ಈ ಲಿಫ್ಟ್ ಇರಿಗೇಷನ್ ಯೋಜನೆ ಸಹ ಸೇರಿದೆ. ಆದರೆ ದುರ್ದೈವ ಅದು ಬಹಳಷ್ಟು ಕಾಲ ಆ ಲಿಫ್ಟ್ ಇರಿಗೇಷನ್ ಯೋಜನೆ ಪ್ರಾರಂಭವಾಗಲೇ ಇಲ್ಲ. 1987 ರಲ್ಲಿ ನಾವು ಆ ಕಾರ್ಯಕ್ಕೆ ಫೌಂಡೇಷನ್ ಹಾಕಿಸಿ, ಒಂದು ಕೆಲಸವನ್ನು 1987 ರಲ್ಲಿ ಪ್ರಾರಂಭಿಸಲಾಯಿತು. ಈ ಗ ಕೆಲಸಗಳು ಪ್ರಾರಂಭವಾಗಿ, ಹಲವಾರು ಘಟ್ಟದಲ್ಲಿ ನಿಂತು ಮತ್ತೆ ಪ್ರಾರಂಭವಾಗಿ, ಈಗ 6-7 ವರ್ಷದಿಂದ ಅದು ನಿಂತು ನಡೆಯುತ್ತಿದೆ. ನಾನು ಬಹಳ ಪ್ರಮುಖ್ಯವಾಗಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಏಷ್ಯಾ ಭಾಗದಲ್ಲೇ ಬಹಳ ದೊಡ್ಡ ಲಿಫ್ಟ್ ಇರಿಗೇಷನ್ ಇದು. 12 ಸಾವಿರ ಹೆಕ್ಟೇರ್ಸ್ ಅಂದರೆ ಸುಮಾರು 30 ಸಾವಿರ ಏಕರೆ ಈ ನೀರಾವರಿ ಯೋಜನಗೆ ಒಳಪಡುತ್ತದೆ. 30 ಸಾವಿರ ಎಕರೆ ಈ ಲಿಫ್ಟ್ ಇರಿಗೇಷನ್‌ನಿಂದ ನೀರಾವರಿಯಾಗುತ್ತದೆ. ಈ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಾಡುವುದರಿಂದ ಬಹುಶಃ ನಮ್ಮ ಪಿರಿಯಾಪಟ್ಟಣ ತಾಲ್ಲೂಕು, ಹುಣಸೂರು ತಾಲ್ಲೂಕಿನ ಕೆಲವು ಭಾಗದ ರೈತರಿಗೆ ಇದರಿಂದ ಅನುಕೂಲವಾಗುತ್ತದೆ. ಅದಕ್ಕಾಗಿ ಸುಮಾರು ಹಣ ಖರ್ಚಾಗಿದೆ. ಬೇರೆ ಬೇರೆ ಹಂತದಲ್ಲಿ ಏನೇನು ಕೆಲಸಗಳಾಗಬೇಕು ಎನ್ನತಕ್ಕ ವಿಚಾರದಲ್ಲಿ ಟೆಂಡರ್ ಕರೆಯತಕ್ಕಂತಹದ್ದು, ಎಲ್ಲ ಕೆಲಸ ಪ್ರಾರಂಭವಾಗಿದೆ. ನಾನು ಇದನ್ನು ಏಕೆ ಒತ್ತಾಯ ಮಾಡುತ್ತಿದ್ದೇನೆಂದರೆ ಕಾವೇರಿ ಮತ್ತು ಕೃಷ್ಣಾ ಯೋಜನೆಗಳ ಬಗ್ಗೆ ನಮ್ಮಲ್ಲಿ ಸಾಕಷ್ಟು ವಾದ ವಿವಾದಗಳು ಇವೆ. ಮತ್ತೆ ಟ್ರಿಬ್ಯೂನಲ್ ಇವೆ. ಹೀಗೆ ಹಲವಾರು ಕಟ್ಟಲೆಗಳಲ್ಲಿ

ನಾವು ನಿಂತಿದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಇಂತಹ ದೊಡ್ಡ ಯೋಜನೆಗಳನ್ನು ಸುಮಾರು 30 ಸಾವಿರ ಎಕರೆಗೆ ನೀರು ಕೊಡತಕ್ಕಂತಹ ಇಂತಹ ಯೋಜನೆಗಳನ್ನು ಬಹಳ ತ್ವರಿತವಾಗಿ ಕೆಲಸವನ್ನು ಮಾಡದಿದ್ದರೆ, ಬಹುಶಃ ಮುಂದೇನಾದರೂ ಅನಾಹುತವಾದಾಗ ಮತ್ತೆ ಸರ್ಕಾರದ ಹಣವನ್ನೂ ನಾವು ಖರ್ಚು ಮಾಡಿದ್ದೇವೆ, ರೈತರಿಗೆ ಅನ್ಯಾಯಮಾಡಿದ ಹಾಗೆ ಆಗುತ್ತದೆ. ಈ ದೃಷ್ಟಿಯಿಂದ ನಾನು ತಮ್ಮ ಮುಖಾಂತರ, ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ದಯಮಾಡಿ ಈ ಯೋಜನೆಯನ್ನು ಬಹಳ ತ್ವರಿತವಾಗಿ, ಬಹಳ ಶೀಘ್ರವಾಗಿ ಮಾಡಿಸಬೇಕು. ಮತ್ತೆ ಈ ಯೋಜನೆಯನ್ನು ಮುಗಿಸಿದರೆ ನಮ್ಮ ಆ ಭಾಗದ ರೈತರಿಗೆ ಬಹಳ ಅನುಕೂಲ ವಾಗುತ್ತದೆ, ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮುಖ್ಯಮಂತ್ರಿಗಳು ಆಗಲೇ ನನ್ನ ಹತ್ತಿರ ಹೇಳಿದ್ದಾರಾ. ಇದನ್ನು ಬಹಳ ಬೇಗನೆ ಮಾಡಿಸಬೇಕು ಅಂತ. ಅವರೂ ಸಹ ಮುಖ್ಯಮಂತ್ರಿಗಳಾದ ಮೇಲೆ ಈ ಲಿಫ್ಟ್ ಇರಿಗೇಷನ್‌ನ ಸ್ಥಳ ಪರಿಶೀಲನೆ ಮಾಡಿದ್ದಾರೆ. ವಿಚಾರ ಗೊತ್ತಿದೆ ಅವರಿಗೆ. ಕಳೆದ ವಾರದಲ್ಲಿ ನಾನು ಮಾತನಾಡುವಾಗ ಆದಷ್ಟು ಶೀಘ್ರವಾಗಿ ಆ ಕೆಲಸವನ್ನು ಮಾಡಿಸಬೇಕು ಎಂದು ಹೇಳಿದ್ದಾರೆ. ಆದರೂ ನಾನು ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಶ್ರೀಮಾನ್ ನಾಗೇಗೌಡರು ಭಾಷಣ ಮಾಡುವಾಗ ಹೇಳಿದರು. ಲಿಫ್ಟ್ ಇರಿಗೇಷನ್‌ನ್ನು ಬೇಕಾದರೆ ನಿಲ್ಲಿಸಿಬಿಟ್ಟು, ಫ್ಲೋ ಇರಿಗೇಷನ್ ಬೇಗ ಮಾಡಿ ಅಂತ ಹೇಳಿದರು. ಅವರು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದರು ಎಂಬುದು ನನಗೆ ಅರ್ಥವಾಗಲಿಲ್ಲ. ನಾನು ತಿಳಿದುಕೊಂಡಿದ್ದು ಅಂದರೆ, ಲಿಫ್ಟ್ ಇರಿಗೇಷನ್‌ನನ್ನು ನಿಲ್ಲಿಸಬೇಕು ಅಂದರೆ ಹೊಸದಾಗಿ ಪ್ರಾರಂಭ ಮಾಡುವುದರ ಬಗ್ಗೆ ಬೇಕಾದರೆ ನೀವು ಯೋಚನೆ ಮಾಡಿ. ಆದರೆ ಹಲವಾರು ಕಾರಣಗಳಿಂದ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಪ್ರಾರಂಭ ಮಾಡಿರತಕ್ಕಂತಹದ್ದು. ಅರ್ಧ ಭಾಗದಲ್ಲಿರತಕ್ಕಂತಹದ್ದು, ಮುಕ್ಕಾಲು ಭಾಗದಲ್ಲಿರತಕ್ಕಂತಹದ್ದು, ಅಷ್ಟು ಕೆಲಸಗಳಾಗಿರುವುದನ್ನು ಬಹಳ ತ್ವರಿತವಾಗಿ ಆದರಲ್ಲೂ ಡಿಸ್‌ಪ್ಯೂಟ್ ಇರತಕ್ಕ ಅಂದರೆ ನಮ್ಮ ಕಾವೇರಿ ಬಗ್ಗೆ ತಮಿಳುನಾಡಿಗೂ, ನಮಗೂ ಡಿಸ್‌ಪ್ಯೂಟ್ ಇದೆ. ಇವುಗಳನ್ನು ಬಹಳಷ್ಟು ಶೀಘ್ರವಾಗಿ ನಾವು ಮುಗಿಸಿದರೆ ಆ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಕಾರ್ಯಕ್ರಮಗಳನ್ನು ಹಾಗೇ ನಿಲ್ಲಿಸಿ ಬಿಟ್ಟು, ಡಿಸ್‌ಪ್ಯೂಟ್ ಜೊತೆಗೆ ಇದನ್ನೂ ಮುಂದುವರಿಸಿಕೊಂಡು ಹೋದರೆ, ನಮಗೆ ಅನ್ಯಾಯವಾಗಬಹುದು ಅನ್ನತಕ್ಕಂತಹ ಅರ್ಥದಿಂದ ನಾನು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ತಾವು ಅಧ್ಯಕ್ಷರಾದ ಮೇಲೆ ಈ ಸದನದಲ್ಲಿ ಬಹಳ ಜನಕ್ಕೆ ಸಹಾಯ ಮಾಡಿದ್ದೀರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರ ಮತ್ತು ವಿರೋಧ ಪಕ್ಷವೆಂದು ಇದ್ದೇ ಇರುತ್ತದೆ. ಆದರೆ ಬಹಳಷ್ಟು ಸಮಯದಲ್ಲಿ ತಾವು ವಿರೋಧ ಪಕ್ಷದ ಸಹಾಯಕ್ಕೆ ಹೋಗಿದ್ದೀರಿ. ಈ ವಿಚಾರದಲ್ಲೂ ನಮ್ಮ ಸಹಾಯಕ್ಕೆ ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ನಾನು ಮಾನ್ಯ ಮುಖ್ಯ

ಮಂತ್ರಿಗಳಿಗೂ ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಇದರ ಬಗ್ಗೆ ಕಾಳಜಿ ಇದೆ, ಲಿಫ್ಟ್ ಇರಿಗೇಶನ್ ಬಹಳ ಶೀಘ್ರವಾಗಿ ಮಾಡಬೇಕೆಂದು ಆಸಕ್ತಿ ಇದೆ. ಎರಡು-ಮೂರು ದಿವಸಗಳಲ್ಲಿ ನೀರು ಕೊಡತಕ್ಕಂಥ ವ್ಯವಸ್ಥೆ ಮಾಡ ಬೇಕು ಮತ್ತು ಈ ಬಗ್ಗೆ ಸದನದಲ್ಲಿ ಉತ್ತರವನ್ನು ತಾವು ಒದಗಿಸಿಕೊಡಬೇಕೆಂದು ಹೇಳಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಹೆಚ್.ಬಿ.ನಂಜೇಗೌಡ : (ತುರುವೇಕೆರೆ) : ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಪ್ರಪ್ರಥಮವಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ತುರುವೇಕೆರೆ ತಾಲ್ಲೂಕಿಗೆ ಹೇಮಾವತಿ ನೀರು 16 ಕಿಲೋ ಮೀಟರ್ ಕ್ಯಾನಲ್ ದಾಟಿ ತಿಪಟೂರು ಮೂಲಕ ನಮ್ಮ ತಾಲ್ಲೂಕಿಗೆ ಬರುತ್ತದೆ. ಹಿಂದೆ ಇದ್ದಂಥ ಸರ್ಕಾರ ಎನ್‌ಬಿಸಿ ಮತ್ತು ಟಿಬಿಸಿ ನಾಲೆಗಳನ್ನು ಪೂರ್ಣಗೊಳಿಸತಕ್ಕಂಥ ಪ್ರಯತ್ನಮಾಡಿ, ಅದಕ್ಕಿಂತ ಹೆಚ್ಚಿನದಾಗಿ ಆಗಿದ್ದಂಥ ಚೀಫ್ ಇಂಜಿನೀಯರ್ ರತ್ನನಾಯಕ್ ರವರು ನೀರು ಬಿಡುವ ದಿಕ್ಕಿನಲ್ಲಿ ಹೋರಾಟ ಮಾಡಿದಮೇಲೇ ಯಾವ್ಯಾವ ಹಂತಕ್ಕೆ ಹೋಗಿ ನೀರುಬಿಟ್ಟರೆ ಜನರಿಗೆ ಸೌಕರ್ಯ ಆಗುತ್ತದೆ, ಬರತಕ್ಕಂಥ ನೀರು ಬಳಕೆಯಾಗುತ್ತದೆ ಎಂದು ಈ ನಿಟ್ಟಿನಲ್ಲಿ ಹೋರಾಟ ಮಾಡಿದಮೇಲೆ ಎಲ್ಲೆಲ್ಲಿ ಬೇಕು ಮೇನ್ ಚ್ಯಾನಲ್‌ಗಿಂತ ಡಿಸ್ಟ್ರಿಬ್ಯುಶನ್ ಮತ್ತು ಸಿ.ಡಿ.ವರ್ಕ್ ಜಾಸ್ತಿ ಮಾಡಿ, ಆ ಪ್ರಾಂತ್ಯದಲ್ಲಿ ನೀರು ಬರುವುದಕ್ಕೆ ಹೋರಾಟ ಮಾಡಿದಮೇಲೆ, ರೈತರ ಬಗ್ಗೆ ಕಾಳಜಿ ವಹಿಸದೆ ಹೆಚ್ಚಿಗೆ ನೀರು ದುರ್ಬಳಕೆಯಾಗಿದೆ.

ಇದರ ಬಗ್ಗೆ ಮಾನ್ಯ ಮಿತ್ರರಾದ ಸಿ.ಎಸ್.ಪುಟ್ಟೇಗೌಡರು ಸಹಿತ ಸದನದಲ್ಲಿ ಮಾತನಾಡಿದ್ದಾರೆ. ಈಗಾಗಲೇ ಹೇಮಾವತಿ ನೀರನ್ನು ತುಮಕೂರು ಜಿಲ್ಲೆಗೆ ಹರಿಸಬೇಕೆಂದು ಹೇಳಿ ಎಲ್ಲ ವಿರೋಧಿ ನಾಯಕರು ಹೋರಾಟ ಮಾಡಿಲ್ಲ ಎನ್ನುವಂಥ ಪ್ರವೃತ್ತಿಯನ್ನು ಬಳಸಿಕೊಂಡು ಮಣ್ಣಿನಮಗನಾದ ಸನ್ಮಾನ್ಯ ಮುಖ್ಯಮಂತ್ರಿಗಳು ಏನಿದ್ದಾರೆ, ಅವರ ಹೋರಾಟ ಪ್ರವೃತ್ತಿಯನ್ನು ತಿಳಿಯದೇನೆ, ಅವರ ಅಧಿಕಾರ ಅವಧಿಯಲ್ಲಿ ಕೆಲಸ ಶುರುಮಾಡದೇನೇ ಬೇರೆ ರೀತಿಯಲ್ಲಿ ಬಳಸಿ, ಈಗ ನಮ್ಮ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಕೆಟ್ಟ ಹೆಸರು ತರುವ ಹೋರಾಟ ಮಾಡುತ್ತಿದ್ದಾರೆ. ಇದು ಯಾವುದೇ ವಿಧವಾದಂಥ ಕೆಲಸ ಸ್ಥಗಿತವಾಗುವುದಕ್ಕೆ ಹಿಂದೆ ಇದ್ದ ಸರ್ಕಾರ, ಹಿಂದೆ ಇದ್ದ ಅಧಿಕಾರಿಗಳು ಕಾರಣವೆಂದು ಈ ಸಂದರ್ಭದಲ್ಲಿ ಸದನಕ್ಕೆ ಜ್ಞಾಪಕ ಮಾಡುತ್ತಾ, ಇನ್ನು ಮುಂದಾದರೂ ಸಹ ಈ ಹೇಮಾವತಿ ಟಿಬಿಸಿ ಮತ್ತು ಎನ್‌ಬಿಸಿ ನಾಲೆಗಳು ಏನಿವೆ, ಈಗಾಗಲೇ, ಮುಖ್ಯಮಂತ್ರಿಗಳು ಹೇಳಿದ್ದಾರೆ. 40-125 ಕಿಲೋಮೀಟರ್‌ದಲ್ಲಿ ನೀರನ್ನು ಹರಿಸುತ್ತೇನೆ, ಜೂನ್ ಮತ್ತು ಜುಲೈನಲ್ಲಿ ನೀರು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತಾ ದಯಮಾಡಿ ಎನ್‌ಬಿಸಿ 40 ಕಿಲೋಮೀಟರ್‌ಗೆ ಮತ್ತು ಟಿಬಿಸಿ 120 ಕಿಲೋಮೀಟರ್‌ಗೆ ನೀರನ್ನು ಹರಿಸಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾ,

ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೆನೆ.

* ಶ್ರೀ ಎಚ್.ಡಿ.ರೇವಣ್ಣ (ಹೊಳೆನರಸೀಪುರ): ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ಈ ದಿನ ಚರ್ಚೆ ಸಮಯದಲ್ಲಿ ಮಾನ್ಯ ಹಿರಿಯ ನಾಯಕರಾದಂಥ ಮತ್ತು ಸನ್ಮಾನ್ಯ ಹಿರಿಯ ಸದಸ್ಯರಾದಂಥ ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೊಳೆನರಸೀಪುರ ತಾಲ್ಲೂಕಿನ ಒಂದೆರಡು ಏತನೀರಾವರಿ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಅದಕ್ಕಾಗಿ ಮೊದಲನೆಯದಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮ್ಮ ಏತನೀರಾವರಿ ಬಗ್ಗೆ ಅವರ ಜೊತೆಗೆ ಹೊಳೆನರಸೀಪುರ ಕಾರ್ಯಪಾಲಕ ಅಭಿಯಂತರರನ್ನು ರಜೆ ಹಾಕಿಸಿದ್ದಾರೆ ಎನ್ನುವ ಅಂಶವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಅದಕ್ಕೆ ನಾವ್ಯಾರಾದರು ರಜೆ ಹಾಕಿಸಿದ್ದರೆ ನಮ್ಮ ಒತ್ತಡ ಅಥವಾ ಸರ್ಕಾರದ ಒತ್ತಡದಿಂದ ಆಗಲಿ, ಇದ್ಯಾವುದಾದರೂ ರೀತಿಯಿಂದ ಆಗಿದ್ದರೆ ಬೇಕಾದರೆ ನಾನು ಸಭಾನಾಯಕರನ್ನು ಕೇಳುತ್ತೇನೆ. ಅವರ ನೇತೃತ್ವದಲ್ಲಿ ಯಾರು ರಜೆ ಹಾಕಿದ್ದಾರೆ ಎಂದು ಒಂದು ತನಿಖೆ ಮಾಡಿಸಿ. ಮತ್ತು ಈ ಡಿವಿಜನ್‌ನೊಳಗೆ ಕಳೆದ ವರ್ಷ ಏನು ನಡೆದಿದೆ ಎಂದು ಇದರ ಬಗ್ಗೆ ಅವರ ನೇತೃತ್ವದಲ್ಲಿ ಒಂದು ಸದನ ಸಮಿತಿಯನ್ನು ಬೇಕಾದರೆ ಮಾಡಿ ಆ ಡಿವಿಜನ್ ಒಳಗೆ ಏನೇನು ವ್ಯವಹಾರ ನಡೆದಿದೆ ಎಂದು ಆಗಲಿ. ಏಕೆಂದರೆ ರಾಜಕೀಯವಾಗಿ ಯಾರ ಮೇಲಾದರೂ ವೈಯಕ್ತಿಕವಾಗಿ ಸೇಡುತೀರಿಸಿಕೊಂಡ ಎನ್ನುವಂಥ ಅಭಿಪ್ರಾಯ ಬರುತ್ತದೆ ಎಂದು ನಾನು ಇಲ್ಲಿಯವರೆಗೆ ಆ ಅಧಿಕಾರಿಗಳ ಬಗ್ಗೆ ಸಹ ಮಾತನಾಡಿಲ್ಲ. ಆದರೆ ಅಧಿಕಾರಿಗಳು ಅವರಾಗಿಯೇ ರಜ ಹಾಕಿದ್ದಾರೋ ಅಥವಾ ಬಿಟ್ಟಿದ್ದಾರೋ ಎಂಬುದು ನಮಗೆ ಗೊತ್ತಿಲ್ಲ. ಸನ್ಮಾನ್ಯ ಹಿರಿಯ ಸದಸ್ಯರಿಗೆ ಯಾವ ತರಹದ ಮಾಹಿತಿ ಬಂದಿದೆಯೋ ಅದು ನನಗೆ ಗೊತ್ತಿಲ್ಲ. ಏಕೆಂದರೆ ನನ್ನ ತಾಲ್ಲೂಕಿನ ಬಗ್ಗೆ ಅವರು ಒಂದೆರಡು ಮಾತನಾಡುವಾಗ ನಾನು ಅದರ ಬಗ್ಗೆ ಹೇಳುವುದು ನನ್ನ ಕರ್ತವ್ಯ. ನಾನು ಆ ತಾಲ್ಲೂಕಿನ, ಆ ಭಾಗದ ಜನರ ಪ್ರತಿನಿಧಿಯಾಗಿ ಮಾತನಾಡುವುದು ನನ್ನ ಕರ್ತವ್ಯ. ಏಕೆಂದರೆ ಅಲ್ಲಿ ಕೆಲವು ಏತನೀರಾವರಿ ಬಗ್ಗೆ ಕೆಲಸ ಮತ್ತು ಕಾಮಗಾರಿಗಳು ಸ್ಥಗಿತವಾಗಿವೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ ಕಾಚೇನಹಳ್ಳಿ ಏತನೀರಾವರಿ ಅಂತ ಹೇಳಿ ಮೊನ್ನೆ ಲೋಕಸಭೆ ಚುನಾವಣೆಗೆ ಒಂದು ತಿಂಗಳು ಮುಂಚೆ ಈ ಒಂದು ಏತನೀರಾವರಿಗೆ ಗುದ್ದಲಿ ಪೂಜೆಯನ್ನು ಮಾಡಿದರು. ನನಗೆ ಸಂತೋಷ. ಏಕೆಂದರೆ ಕಳೆದ ಸುಮಾರು ವರ್ಷಗಳಿಂದ ಅದು ಬರಗಾಲಪೀಡಿತ ಪ್ರದೇಶ. ಅಲ್ಲಿ ನೀರು ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಮೊದಲನೆಯದಾಗಿ ನಾನು ಹಿಂದಿನ ಸರ್ಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಆದರೆ ಇದು ಬರೀ ರಾಜಕೀಯ ಏತನೀರಾವರಿ-

ಆಗಬಾರದು. ಏಕೆಂದರೆ ಏತನೀರಾವರಿ ಮಾಡಬೇಕಾದರೆ ಸರ್ಕಾರದ ನಿಯಮಾವಳಿ ಪ್ರಕಾರ ಮೊದಲು ಜಾಕ್‌ವೆಲ್ ಮಾಡಬೇಕಾಗುತ್ತದೆ. ಆಮೇಲೆ ರೇಸಿಂಗ್‌ಮೈನ್ ಮಾಡಬೇಕಾಗುತ್ತದೆ. ಆಮೇಲೆ ಡೆಲಿವರಿ ತೊಟ್ಟಿಯನ್ನು ಕಟ್ಟಬೇಕಾಗುತ್ತದೆ. ಅದಾದಮೇಲೆ ಐ.ಸಿ.ಸೆಟ್. ಅದಾದಮೇಲೆ ಡಿಸ್ಟ್ರಿಬ್ಯುಟರಿ ಮಾಡಬೇಕಾಗುತ್ತದೆ. ಈ ಏತನೀರಾವರಿಯಲ್ಲಿ ಸರ್ಕಾರದ ಕಾನೂನು ಏನಿದೆ ಅದನ್ನು ಗಾಳಿಗೆ ತೂರಿ ಮೊದಲೇ ಡಿಸ್ಟ್ರಿಬ್ಯೂಟರಿ ಎಂದು ಮಾಡಿದ್ದಾರೆ. ಏಕೆಂದರೆ ಚುನಾವಣೆ ಬರುತ್ತಿರುವುದರಿಂದ ಇದು ಮಾಡಿರುವುದು ಪ್ರಚಾರಕ್ಕಾಗಿ. ಎರಡನೇಯದು ಮೋಟಾರು, ಅದಾದಮೇಲೆ ಪೈಪ್ ಹಾಕುವುದು ಇದು ಬೇಕು. ಏಕೆಂದರೆ ಕಂಟ್ರಾಕ್ಟರುಗಳನ್ನು ಹುಟ್ಟುಹಾಕಬೇಕು, ಮತ್ತು ಚುನಾವಣೆಗಾಗಿ ಮಾಡಿರುವಂಥಾದ್ದು. ಇವತ್ತಿನವರೆಗೂ ಜಾಕ್‌ವೆಲ್ ಪಾಯಿಂಟ್‌ನ್ನು ಪತ್ತೆಹಚ್ಚಿಲ್ಲ. ಜಾಕ್‌ವೆಲ್ ಎಲ್ಲಿಹಾಕಬೇಕು, ಅಥವಾ ಟೆಕ್ನಿಕಲ್ ಕಮಿಟಿ ಅಪ್ರೂವಲ್ ಆಗಿದೆಯಾ ಅಥವಾ ಇಲ್ಲವೇ ಇದು ಗೊತ್ತಿಲ್ಲ. ಏಕೆಂದರೆ ನಾನು ಇನ್ನೊಬ್ಬರ ಬಗ್ಗೆ ವೈಯಕ್ತಿಕವಾಗಿ ಮಾತನಾಡುವುದಿಲ್ಲ. ಇದು ಇಲಾಖೆಯಿಂದಲೇ ಕೆಲಸ ತೆಗೆದುಕೊಳ್ಳುವುದು. ತಿಮ್ಮೇಗೌಡ, ರಂಗೇಗೌಡ ಎಂದು ಹೆಸರು ಬರೆಯುವುದು, ಹೆಬ್ಬೆಟ್ಟು ಒತ್ತಿ ಬಿಲ್ ತೆಗೆದುಕೊಳ್ಳುವುದು. ಹತ್ತು ರೂಪಾಯಿ ಇದ್ದರೆ ನೂರು ರೂಪಾಯಿ ಬಿಲ್ ಮಾಡುವುದು. ಇದರ ಬಗ್ಗೆ ಬೇಕಾದರೆ ಮಾನ್ಯ ಸಭಾಧ್ಯಕ್ಷರು, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಒಂದು ಸದನ ಸಮಿತಿಯನ್ನು ಮಾಡಿ ಹೇಮಾವತಿ ಚಾನಲ್ ಬಗ್ಗೆ ಇದುವರೆಗೆ ಲಿಫ್ಟ್ ಇರಿಗೇಶನ್ ಕಳೆದ ಐದು ವರ್ಷಗಳಲ್ಲಿ ಎಲ್ಲ ರೆಡಿಯಾಗಿ ನೀರಾವರಿ ಕೊಡಬೇಕೆನ್ನುವ ಸನ್ನಿವೇಶ ಇದ್ದರೆ ಹೇಳಲಿ. ಇದು ವಿರೋಧ ಪಕ್ಷದವರು ಎನ್ನುವ ಒಂದೇ ಕಾರಣಕ್ಕೋಸ್ಕರ ಇವತ್ತಿನವರೆಗೂ ಏತನೀರಾವರಿಗೆ ಕನೆಕ್ಷನ್ ಕೊಟ್ಟಿಲ್ಲ. ಇದಕ್ಕೆ ಕಾರಣ ಏನು ಅಂತ ಹೇಳಿ ಇದರ ಬಗ್ಗೆ ಈ ಸಭೆಯ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅದು ಅಲ್ಲದೆ ಈ ಡಿವಿಜನ್ ಭಾಗದಲ್ಲಿ ನಾವು ಏನಾದರೂ ತಪ್ಪು ಮಾಡಿದ್ದರೆ ಯಾವ ಅಧಿಕಾರಿಗಳ ಬಗ್ಗೆಯೇ ಆಗಲಿ ಅಥವಾ ನಾನು ತಪ್ಪು ಮಾಡಿದ್ದರೆ ನನ್ನ ಮೇಲೆ ತನಿಖೆ ನಡೆಸಿದರೆ ಆ ಆಪಾದನೆಗೆ ನಾನು ಸಿದ್ಧನಿದ್ದೇನೆ ಎಂದು ಹೇಳಿ ನನಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತಾ, ನಾನು ಕೃಷ್ಣಾ ಜಲಾನಯನ, ಕಾವೇರಿ ಜಲಾನಯನ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಅದರ ಮಾನ್ಯ ಹಿರಿಯ ಶಾಸಕರು ಮಾತನಾಡಿದ್ದಾರೆ. ಅದರೆ ನಮ್ಮ ಜಿಲ್ಲೆಯಲ್ಲಿರುವಂಥ ಹೆಸರುವಾಸಿಯಾದಂಥ ತುಂಗಭದ್ರಾ ಜಲಾನಯನ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಈಗಾಗಲೇ ನಮ್ಮ

ಸ್ನೇಹಿತರಾದ ಮಾನ್ಯ ವಿರೂಪಾಕ್ಷಪ್ಪನವರು ಹೇಳಿದಂತೆ, ಈ ಜಲಾಶಯದಲ್ಲಿ ಸಿಲ್ಟ್ ಅಕ್ಯುಮಲೇಶನ್ ಆಗಿದೆ. ಅದು ಎಷ್ಟು ಎಂದರೆ ಸುಮಾರು 20 ರಿಂದ 25 ಟಿ.ಎಂ.ಸಿ.ಯಷ್ಟು ಸ್ಟೋರೇಜ್ ಕೆಪಾಸಿಟಿ ಇದರಿಂದ ಕಡಿಮೆಯಾಗಿದೆ. ಈ ದೃಷ್ಟಿಯಿಂದ ನಮ್ಮ ಜಿಲ್ಲೆಯೊಳಗೆ ಬರಬೇಕಾದಂಥ ನೀರಿನ ಕೋಟಾ ಸರಿಯಾಗಿ ಬರುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮಗೆ ತಿಳಿದಿರುವಂತೆ ಇದು ಪ್ರಕೃತಿಗೆ ಬಿಟ್ಟಿರತಕ್ಕಂಥಾದ್ದು. ಜಲಾಶಯದಲ್ಲಿ ನೀರು ಎಷ್ಟರಮಟ್ಟಿಗೆ ಫುಲ್ ಆಗುತ್ತದೆ ಎಂಬುದು ಪ್ರಕೃತಿಗೆ ಬಿಟ್ಟಿದ್ದು. ಆದರೆ ಈ ಟೆಕ್ನಿಕಲ್ ಪಾಯಿಂಟ್‌ನಿಂದಾಗಿ ಇದು ಹೇಗೆ ಸಂಗ್ರಹಿಸಬೇಕು ಎಂಬುದು ಸರ್ಕಾರದ ಮತ್ತು ಇಂಜಿನಿಯರುಗಳ ಕರ್ತವ್ಯವಾಗಿದೆ. ಇವತ್ತು ಮಳೆಗಾಲದಲ್ಲಿ ಸುಮಾರು ಮೂವತ್ತು ದಿವಸ ಸತತವಾಗಿ ಓವರ್‌ಫ್ಲೋ ಆಗುತ್ತದೆ.

ಎಷ್ಟರಮಟ್ಟಿಗೆ ಓವರ್‌ಫ್ಲೋ ಆಗುತ್ತದೆಂದರೆ ಸುಮಾರು 30 ಟಿ.ಎಂ.ಸಿ. ನೀರು ಆಂಧ್ರ ಪ್ರದೇಶಕ್ಕೆ ಸರ್ಪ್ಲಸ್ ಆಗಿ ಸ್ಟೋರೇಜ್ ಕೆಪಾಸಿಟಿ ಕಡಿಮೆ ಆಗುವುದರಿಂದ ಇದು ಅನಾವಶ್ಯಕವಾಗಿ ಆಂಧ್ರಪ್ರದೇಶಕ್ಕೆ ಹೋಗತಕ್ಕ ಸ್ಥಿತಿಯಲ್ಲಿ ತುಂಗಭದ್ರಾ ಜಲಾಶಯ ಇದೆ. ಇವತ್ತು ಸಿಲ್ಟ್ ತೆಗೆಯಬೇಕಾದರೆ, ಸಾಮಾನ್ಯವಾಗಿ ಬಹಳಷ್ಟು ಸುಲಭವಾದ ಕೆಲಸವಲ್ಲ. ಅದರ ಬಗ್ಗೆ ಬಹಳಷ್ಟು ಜನರನ್ನು ಕೇಳಿದಾಗ, ಮತ್ತು ಅದಕ್ಕೆ ಆಗತಕ್ಕ ಆರ್ಥಿಕ ವ್ಯವಸ್ಥೆ ನೋಡಿದರೆ, ಎರಡು ಡ್ಯಾಮ್ ಕಟ್ಟಬಹುದು, ಅದಕ್ಕಾಗಿ ಇದು ಆಗುವುದಿಲ್ಲವೆಂದು ಹೇಳಿದ್ದಾರೆ. ಬೇರೆ ಆಲ್ಟರ್‌ನೇಟಿವ್ ಎಂದರೆ, ಮಳೆಗಾಲದಲ್ಲಿ ಹೆಚ್ಚಾಗಿ ಹೋಗತಕ್ಕ ಈ ಸರ್ಪ್‌ಲಸ್ ನೀರನ್ನು ಸಂಗ್ರಹಿಸಿ, ಎಂದರೆ, ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡಬೇಕೆಂದು ಆಗಿದೆ. ಇವತ್ತು ನಿಮಗೆಲ್ಲರಿಗೂ ತಿಳಿದಂತೆ, ಫುಡ್ ಕೆಪಾಸಿಟಿ, ಮತ್ತು ಫುಡ್ ಸಮಸ್ಯೆ ಬಗ್ಗೆ ನಮ್ಮ ಪುಟ್ಟಣ್ಣನವರು ಬಹಳ ಚೆನ್ನಾಗಿ ಹೇಳಿದ್ದಾರೆ. ರಷ್ಯಾದಲ್ಲಿ ಎಂತಹ ಸಮಸ್ಯೆ ಇದೆ, ಬೇರೆ ಬೇರೆ ದೇಶಗಳಲ್ಲಿ ಅಂದರೆ, ನಾವು ಚೈನಾಕ್ಕೆ ರೈಸ್ ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಬೇರೆ ದೇಶಗಳಲ್ಲಿ ಆಹಾರದ ಕೊರತೆ ಎಷ್ಟರಮಟ್ಟಿಗೆ ಇದೆಯೆಂದರೆ, ಒಂದು ಜೋಕ್ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾರೋ ಒಬ್ಬ ಅಮೇರಿಕಾದ ಅಪರಿಚಿತ, ರಷ್ಯಾಕ್ಕೆ ಹೋಗಿ ಒಬ್ಬ ಹುಡುಗನನ್ನು ಕೇಳಿದನಂತೆ. ನಿಮ್ಮ ಡ್ಯಾಡಿ ಎಲ್ಲಿದ್ದಾರೆ ಎಂದು ಕೇಳಿದರೆ, ಆತ ಟಕ್ ಟಕ್ ಎಂದು ಮಾತನಾಡಿ, ಮೂನ್‌ನಲ್ಲಿದ್ದಾರೆಂದು ಹೇಳಿನಂತೆ. ನಿಮ್ಮ ಡ್ಯಾಡಿ ಯಾವಾಗ ಬರುತ್ತಾರೆಂದು ಕೇಳಿದರೆ, 5 ನಿಮಿಷ 5 ಸೆಕೆಂಡ್‌ನಲ್ಲಿ ಬರುತ್ತಾರೆ ಅಂದರೆ, 5 ನಿಮಿಷ 5 ಸೆಕೆಂಡ್‌ನಲ್ಲಿ ಮೂನ್‌ನಿಂದ ಬಂದನಂತೆ. ನಿಮ್ಮ ಅಮ್ಮ ಎಲ್ಲಿ ಹೋಗಿದ್ದಾರೆಂದು ಕೇಳಿದರೆ, ಬ್ರೆಡ್ ತರುವುದಕ್ಕೆ ಹೋಗಿದ್ದಾರೆ, ಕ್ಯೂನಲ್ಲಿದ್ದಾರೆಂದು ಹೇಳಿದನಂತೆ. ಅಂದರೆ, ರಷ್ಯಾ ದೇಶದಲ್ಲಿ ಆಹಾರದ ಪರಿಸ್ಥಿತಿ ಈ ರೀತಿ ಹದಗೆಟ್ಟಿದೆ. ಇವತ್ತು ದೇವರ ದಯೆಯಿಂದ, ಪ್ರಕೃತಿಯ ಕೃಪೆಯಿಂದ ನಮ್ಮ ದೇಶದಲ್ಲಿ, ನಮ್ಮ ರಾಜ್ಯಕ್ಕೆ ಬೇಕಾದಷ್ಟು ಆಹಾರ ಇದೆ. ಸರ್ಕಾರದ ವ್ಯವಸ್ಥೆಯಿಂದ ನಮಗೆ ಬೇಕಾದಷ್ಟು ಆಹಾರ ಸಿಗುತ್ತಾ ಇಲ್ಲ. ಇವತ್ತು ರೈತನ

ಸರ್‌ವೈವಲ್ ಪಾಯಿಂಟ್ ಆಗಿದೆ. ಇವತ್ತು ಬೆಳೆ ಪ್ಯಾಟ್ರನ್ ಬೇಕೆಂದರೆ, ಮೊದಲು ಹೆಚ್.ಎಲ್.ಸಿ.ಯಲ್ಲಿ ಜೂನ್‌ನಿಂದ ಡಿಸೆಂಬರ್‌ವರೆಗೆ ನೀರು ಕೊಡುತ್ತೇವೆಂದು ಹೇಳುತ್ತಿದ್ದರು. ಮೆಕ್ಕೇಜೋಳ ಮತ್ತು ಬೇರೆ ಬೇರೆ ಬೆಳೆ ಬೆಳೆಯುತ್ತಿದ್ದರು. ಆದರೆ ಇದರಿಂದ ಸರಿಯಾದ ಅನುಕೂಲತೆ ದೊರಕದೇ ಇದ್ದುದರಿಂದ, ಹತ್ತಿ ಬೆಳೆಯಲು ಪ್ರಾರಂಭ ಮಾಡಿದರು. ಹತ್ತಿ ಬೆಳೆ ಪ್ರಾರಂಭ ಮಾಡಿದಮೇಲೆ ಸುಧಾರಣೆಯಾಯಿತು. ಇದಕ್ಕಾಗಿ ಕೃಷಿ ಇಲಾಖೆಯವರಿಗೆ ನಿಜವಾಗಿಯೂ ಕೃತಜ್ಞತೆಯನ್ನು ಹೇಳಬೇಕು. ಹೊಸ ಹೊಸ ಹೈಬ್ರಿಡ್ ವೆರೈಟಿ ತಯಾರು ಮಾಡಿ, ಹೆಚ್ಚಿನ ಬೆಳೆಯನ್ನು ಬೆಳೆಯುವಂಥ ಹತ್ತಿಯನ್ನು ಬೆಳೆಯುತ್ತಿದ್ದರು. ಹೆಚ್ ಹೈಬ್ರೀಡ್ ವೆರೈಟಿ ತಯಾರು ಮಾಡಿ, ಇವತ್ತು ಇನ್ನೂರು ದಿವಸದಲ್ಲಿ ಬೆಳೆ ಬಂದಿದೆ. ನಾವೇನು ಡಿಸೆಂಬರ್‌ವರೆಗೆ ನೀರು ಕೊಡಬೇಕೆಂದು ಇದ್ದೆವು, ಇವತ್ತು ಜನವರಿ ಮತ್ತು ಫೆಬ್ರವರಿಯವರೆಗೆ ನೀರು ಕೊಟ್ಟರೆ ಮಾತ್ರ ಬೆಳೆಗಳಿಗೆ ಅನುಕೂಲವಾಗುತ್ತದೆ. ಇನ್ನೊಂದು ವಿಚಾರ ಹೇಳಬೇಕೆಂದರೆ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬಹಳಷ್ಟು ಸೀಡ್ ಪ್ರೊಡಕ್ಷನ್ ನಡೆಯುತ್ತಾ ಇದೆ. ಈ ಸೀಡ್ ಪ್ರೊಡಕ್ಷನ್ ಮಾಮೂಲಾಗಿ, ಅಕ್ಟೋಬರ್ ತಿಂಗಳಲ್ಲಿ ಹಾಕಿದರೆ ಮಾತ್ರ ಜನವರಿ, ಫೆಬ್ರವರಿಯವರೆಗೆ ನೀರು ಬೇಕಾಗುತ್ತದೆ. ನಿಜವಾಗಿಯೂ ಇದು ಬಹಳ ಸೀರಿಯಸ್ಸಾದ ವಿಚಾರ. ಏಕೆಂದರೆ, ನಮ್ಮ ಭಾರತ ದೇಶದಲ್ಲಿ ಯಾವ ರಾಜ್ಯವೂ, ಯಾವ ಹವಾಮಾನಕ್ಕೂ ಹೊಂದಿಕೊಂಡಿಲ್ಲ. ನಮ್ಮ ಕರ್ನಾಟಕದಲ್ಲಿ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಿಗೆ ಹೊಂದಿಕೆಯಾಗಿರತಕ್ಕಂಥ ಹವಾಗುಣ ಇಡೀ ಭಾರತ ದೇಶದಲ್ಲಿ ಎಲ್ಲಿಯೂ ಇಲ್ಲ. ಆದ ಕಾರಣ ಎಲ್ಲಾ ಕಂಪನಿಗಳು,

ಎಲ್ಲಾ ಸೀಡ್ ಪ್ರೊಡಕ್ಷನ್ಸ್ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಿಗೆ ಮಹತ್ವ ಕೊಡುತ್ತಿದ್ದಾರೆ. ಈ ದೃಷ್ಟಿಯಿಂದ ನಾನು ಹೇಳುವುದಾದರೆ, ಇವತ್ತು ಇದೆಲ್ಲಕೂ ಕಾರಣ, ಕೃಷಿ ಅಧಿಕಾರಿಗಳು, ಇರಿಗೇಷನ್ ಡಿಪಾರ್ಟ್‌ಮೆಂಟ್, ಸರ್ಕಾರ ಆಮೇಲೆ ರೈತರು. ರೈತರು ಒಳ್ಳೆಯ ಬೆಳೆ ಬೆಳೆದು, ಹೆಚ್ಚು ಆರ್ಥಿಕ ಸಂಪನ್ಮೂಲಗಳು ಬಂದಾಗ ಮಾತ್ರ, ಅವನು ಸರ್‌ವೈವಲ್ ಆಗುತ್ತಾನೆ. ಅವನು ಲಾಭ ಪಡೆಯುವುದೇ ಅಲ್ಲ. ಈ ದೃಷಿಯಿಂದ, ಹತ್ತಿ, ಕಬ್ಬು, ನೆಲ್ಲು (ಭತ್ತ) ಬೆಳೆಗಳನ್ನು ಬೆಳೆಯಬೇಕಾದರೆ, ಅವನಿಗೆ ಇವತ್ತು ಹೆಚ್ಚು ನೀರು ಬೇಕಾಗುತ್ತದೆ. ಅದಕ್ಕೆ ಮುಖ್ಯವಾಗಿ ಬ್ಯಾಲೆನ್ಸಿಂಗ್ ರಿಸರ್ ವಾಯರ್ ಮಾಡಬೇಕಾಗಿದೆ. ಅತಿ ಮುಖ್ಯವಾಗಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಆಗಬೇಕು, ಅದಕ್ಕೆ ಜಾಗ ಕೂಡ ಇದೆ. ನಾನು ಕಳೆದ 5 ವರ್ಷಗಳಿಂದ ಶಾಸಕನಾಗಿ, ಸರ್ಕಾರದಿಂದ ಜನವರಿಯಿಂದ ಮೇ ತಿಂಗಳವರೆಗೆ ನೀರು, ನೀರು ಎಂದು ಹೋರಾಟ ಮಾಡಿಕೊಂಡು ಬಂದಿದ್ದೇನೆ. ಇವತ್ತು ಪ್ರಕೃತಿ ಅನುಕೂಲ ಇದ್ದರೆ ಸರಿ, ಪ್ರಕೃತಿ ಅನುಕೂಲ ಇಲ್ಲದಿದ್ದರೆ, ಯಾವ ಸರ್ಕಾರವೂ ರೈತನಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡಬೇಕು. ಕೊನೆಯದಾಗಿ ಹೇಳಬೇಕೆಂದರೆ, ನಾನು ಲಿಖಿತ

ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ನೋಡುವ ಕಾಲಕ್ಕೆ, ಎಸ್ಟಿಮೇಷನ್ ನೋಡುವ ಕಾಲಕ್ಕೆ 10 ಸಾವಿರ ಎಕರೆಯವರೆಗೆ 30-40 ಕೋಟಿ ಆಗುತ್ತದೆ. ಇವತ್ತು ನನ್ನ ಕ್ಷೇತ್ರದಲ್ಲಿ ಆಗತಕ್ಕ ಲಿಫ್ಟ್ ಇರಿಗೇಷನ್ ಸರ್ಕಾರದ ಮುಂದೆ ಇದೆ. 8 ಸಾವಿರ ಎಕರೆ, ಕೇವಲ 10 ಕೋಟಿ ರೂಪಾಯಿಗಳಿಗೆ ಎಸ್ಟಿಮೇಷನ್ ಆಗಿದೆ. ಎಕನಾಮಿಕಲ್ ಆಗಿ ಬಹಳ ಸೂಟಬಲ್ ಆಗಿದೆ. ಸರ್ಕಾರ ಇದಕ್ಕೆ ಗಮನ ಕೊಡಬೇಕು. ಸುಮಾರು 20 ಹಳ್ಳಿಗಳಲ್ಲಿ ನಿರುದ್ಯೋಗಿಗಳಿದ್ದಾರೆ, ಅವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರವನ್ನು ಮತ್ತೊಮ್ಮೆ ತಮ್ಮ ಮೂಲಕ ಕೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಅರ್ಪಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ.ಕೆ.ವಿರೂಪಾಕ್ಷಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಸೂಕ್ತವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈಗ ಬ್ಯಾಲೆನ್ಸಿಂಗ್ ರಿಸರ್‌ವಾಯರ್‌ಗೆ ಆದ್ಯತೆಯನ್ನು ಕೊಡಬೇಕು. ಏಕೆಂದರೆ, ರಾಯಚೂರು ಜಿಲ್ಲೆಯಲ್ಲಿ ರೈತರಿಗೆ ಒಂದುನೂರು ಕೋಟಿ ರೂಪಾಯಿ ಬೆಳೆಯ ಹಾನಿಯಾಗಿದೆ. ಈ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡುವುದರಿಂದ, ಮುಂದಿನ ಸಾರಿಯಾದರೂ, ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ.

* ಶ್ರೀ. ಎನ್.ಪಿ. ಮುದ್ದಹನುಮೇಗೌಡ(ಕುಣಿಗಲ್) : ಮಾನ್ಯ ಸಭಾಧ್ಯಕ್ಷರೇ, ನೀರಾವರಿ ಬಹಳ ಪ್ರಮುಖವಾದ ವಿಷಯ. ಇದರ ಬಗ್ಗೆ ಇನ್ನೂ ಒಂದೆರಡು ದಿವಸ ಚರ್ಚೆ ಮಾಡಿದ್ದರೆ ಚೆನ್ನಾಗಿತ್ತು. ಹಿರಿಯ ಸದಸ್ಯರಾದ ಹಾಗೂ ನಾಯಕರಾದ ಸನ್ಮಾನ್ಯ ನಂಜೇಗೌಡರು ಮೇಧಾವಿಗಳು. ಈ ನೀರಾವರಿ ಬಗ್ಗೆ ಅವರು ಮಾತನಾಡಿದಾಗ, ನಿಜವಾಗಿಯೂ ಹಿಂದುಗಡೆ ಕುಳಿತಿರತಕ್ಕ ಸದಸ್ಯರಾದ ನಾವುಗಳು, ಈ ವಿಷಯದಲ್ಲಿ ಬಹಳಷ್ಟು ತಿಳಿದುಕೊಳ್ಳಬೇಕಾಗಿದೆ ಎನ್ನುವ ತೀರ್ಮಾನಕ್ಕೆ ಬಂದೆವು. ಇವತ್ತು ನನ್ನ ಮಟ್ಟಿಗೆ, ನೇರವಾಗಿ ತುಮಕೂರು ಜಿಲ್ಲೆಯ ಹೇಮಾವತಿ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಹೇಮಾವತಿ ಯೋಜನೆಯಿಂದ ತುಮಕೂರು ಜಿಲ್ಲೆಗೆ 3 ಲಕ್ಷದ 21 ಸಾವಿರ ಎಕರೆ ನೀರಾವರಿಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಭಾಗದ ಜನರಿಗೆ ತಿಳುವಳಿಕೆ ಕೊಟ್ಟಿದ್ದಾರೆ. ಆದರೆ, ವಸ್ತು ಸ್ಥಿತಿಯಲ್ಲಿ ಇವತ್ತು ಅಷ್ಟು ಭಾಗದ ಜಮೀನು ನೀರಾವರಿಯಾಗುತ್ತದೆಯೇ, ನೀರಾವರಿ ಸೌಲಭ್ಯ ಕೊಡುವುದಕ್ಕಾಗುತ್ತದೆಯೇ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ತುಮಕೂರು ಜಿಲ್ಲೆಯಲ್ಲಿ ಸುಮಾರು ಕೆಲಸ ಈಗಾಗಲೇ ನಡೆದಿದೆ. ಕೆಲವು ಕಾರ್ಯಕ್ರಮಗಳು ಸ್ಥಗಿತಗೊಂಡಿದ್ದರೂ ಕೂಡ, ಕೆಲಸ ನಡೆದಿದೆ. ಇಲ್ಲಿ 3 ಲಕ್ಷದ 21 ಸಾವಿರ ಎಕರೆಗೆ ನೀರು ಕೊಡುತ್ತೇವೆಂದು ನಾಲೆಗಳನ್ನು ತೆಗೆಯುತ್ತಿದ್ದಾರೆ. ಅಲ್ಲಿ ಮೇಲುಗಡೆ ಏತನೀರಾವರಿ ಮಂಜೂರಾತಿ ನಡೆಯುತ್ತಾ ಇದೆ. ಇಲ್ಲಿಗೆ ಎಷ್ಟು ನೀರು ಕೊಡಬಹುದು. ಈ ನೀರಿನಲ್ಲಿ ಏತನೀರಾವರಿಗೆ ನೀರು ಉಪಯೋಗಿಸಬಹುದೇ ಇಲ್ಲವೇ ಎನ್ನುವ ಚಿಂತನೆ ಮಾಡಬೇಕಾಗಿತ್ತು. ಆದರೆ ಈ ಚಿಂತನೆಯನ್ನು ಮಾಡದೇ

ಇಲ್ಲಿ ಕಾಲುವೆ ಕೆಲಸ ನಡೆಸುತ್ತಾ ಇರುವುದು, ಅಲ್ಲಿ ಮೇಲುಗಡೆ ಏತನೀರಾವರಿ ಕೆಲಸ ಮಾಡಿದರೆ ಇವತ್ತು ತುಮಕೂರು ಜಿಲ್ಲೆಯಲ್ಲಿ ನೀರು ಬರುತ್ತದೆಂದು ನಂಬಿಕೊಂಡು, ಜಮೀನಿನಲ್ಲಿ ಕಾಲುವೆ ತೆಗೆಸಿಕೊಂಡು, ಸುಮ್ಮನೆ ನೋಡಿಕೊಂಡು, ಬಕಪಕ್ಷಿಗಳ ಹಾಗೆ ಕಾಯುತ್ತಾ ಇರಬೇಕಾಗುತ್ತಿದೆ. ಆದ್ದರಿಂದ ನನ್ನ ಸಲಹೆ ಇಷ್ಟೇ. ದಯಮಾಡಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ನೀರನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ, ಅಷ್ಟು ನೀರನ್ನು ರಿಸರ್ವ್ ಮಾಡಿ. ಉಳಿದುದನ್ನು ಏತನೀರಾವರಿಗಾದರೂ ಕೊಡಿ ಅಥವಾ ಬೇರೆ ಕಡೆಗಾದರೂ ಡೀವೈಟ್ ಮಾಡಿ. ಆದರೆ , at the cost of Tumkur District don't utilise any water by way of Life Irrigation. ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ಯೋಜನೆಯ ಕೆಲಸಕಾರ್ಯಗಳು ತುಮಕೂರು ಜಿಲ್ಲೆಯಲ್ಲಿ ಸ್ಥಗಿತಗೊಂಡಿವೆ. ಬೇರೆ ಕಡೆಯೂ ಸ್ಥಗಿತವಾಗಿರಬಹುದು. ಆದರೆ, ನಮ್ಮ ಜಿಲ್ಲೆಯ ಮಟ್ಟಿಗೆ ನೋಡಿದಾಗ, ಸಂಪೂರ್ಣ ಕೆಲಸ ನಿಂತುಹೋಗಿದೆ. ಏತಕ್ಕೆ ನಿಂತುಹೋಗಿದೆ ಎನ್ನುವ ಬಗ್ಗೆ ಸರ್ಕಾರ ಅನೇಕಕಾರಣ ಗಳನ್ನು ಒಡ್ಡುತ್ತಿದೆ. ಪೀಸ್ ವರ್ಕ್ಸ್‌ನಲ್ಲಿ ಅನ್ಯಾಯವಾಗಿದೆ ಎಂದು ಹೇಳುತ್ತಾರೆ, ಮತ್ತೆ ಕಂಟ್ರಾಕ್ಟರುಗಳು ದುಡ್ಡು ಹೊಡೆದಿದ್ದಾರೆಂದು ಹೇಳಿದ್ದಾರೆ. ಇಂಜಿನಿಯರು ದುಡ್ಡು ಹೊಡೆದಿದ್ದಾರೆಂದು ಹೇಳುತ್ತಾರೆ, ರಾಜಕಾರಣಿಗಳು ಮಧ್ಯೆಪ್ರವೇಶ ಮಾಡಿದ್ದಾರೆಂದು ಹೇಳುತ್ತಾರೆ. ಹೀಗೆ, ನಾನಾ ವಿಧವಾದ ಕಾರಣಗಳನ್ನು ಕೊಡಬಹುದು. ಆದರೆ, ಈ ಕಾರಣಗಳನ್ನು ನಾವು ರೈತರಿಗೆ ಕೊಡುವುದಕ್ಕಾಗುತ್ತದೆಯೇ? ರೈತರಿಗೆ ಬೇಕಾಗಿರುವುದು ಕಾಲುವೆ ಕೆಲಸ ನಡೆಯಬೇಕು, ನೀರು ಬರಬೇಕು, ಜಮೀನುಗಳಿಗೆ ನೀರು ಹೋಗಬೇಕು. ಯಾವುದೋ ಒಂದು ಅವ್ಯವಹಾರದ ಬಗ್ಗೆ, ಅದೇ ಕಾರಣವನ್ನು ಮುಂದೊಡ್ಡಿ ಕಾರ್ಯಕ್ರಮಗಳು ಸ್ಥಗಿತಗೊಂಡಿದೆ. ಇವತ್ತು ಏನಾಗಿದೆ, ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು, ರಾಜಕೀಯವನ್ನು ಮಾಡತಕ್ಕ ಪರಿಸ್ಥಿತಿಯಲ್ಲಿದ್ದೇವೆ. ನಮಗೆ ಅದು ಬೇಕಾಗಿಲ್ಲ. ಈ ಹೇಮಾವತಿ ನಾಲಾ ಕಾರ್ಯಕ್ರಮಗಳೇನು ಸ್ಥಗಿತಗೊಂಡಿವೆ, ಇದನ್ನು ದುರುಪಯೋಗದ ಮೂಲಕ, ಜನಗಳಿಗೆ ಪ್ರಚಾರಕ್ಕೋಸ್ಕರ ಕೊಟ್ಟು, ನಾವು ನೀವು ದೊಡ್ಡ ಮನುಷ್ಯರಾಗುವಂಥ ಪರಿಸ್ಥಿತಿ ನಿರ್ಮಾಣವಾಗುವುದು ಬೇಡ. ಆದ್ದರಿಂದ, ಈ ಸದನದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೇ. ದಯಮಾಡಿ, ಈ ನಾಲಾ ಕಾಮಗಾರಿಗಳೇನು ನಿಂತಿವೆ, ಈ ಕೆಲಸಗಳನ್ನು ತಕ್ಷಣ ಪ್ರಾರಂಭಮಾಡಿ, ಇಲ್ಲದೇಹೋದರೆ, ಯಾವ ಕಾರಣದಿಂದ ಪ್ರಾರಂಭ ಮಾಡುವುದಕ್ಕಾಗುತ್ತಾ ಇಲ್ಲ, ನಿಮ್ಮ ಸ್ಪಷ್ಟವಾದ ನಿಲುವನ್ನು ಜನತೆಗೆ ನೀಡಿ. ಇವತ್ತು ಜನತೆ ಬಹಳ ಗೊಂದಲದಲ್ಲಿದ್ದಾರೆ, ಅವರಿಗೆ ಯಾವುದೂ ಅರ್ಥವಾಗುತ್ತಾ ಇಲ್ಲ. ನಾಲಾ ಕೆಲಸ ನಡೆಯುತ್ತಿದೆಯೇ, ಇಲ್ಲವೇ, ನಮಗೆ ನೀರು ಬರುತ್ತೆದೆಯೋ ಇಲ್ಲವೋ, ನಮ್ಮ ಜಮೀನು ಕಳೆದುಕೊಂಡಿದ್ದೇವೆ, ಸರ್ಕಾರ ನೀರು ಕೊಡುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ಆತಂಕದಿಂದ ಇದ್ದಾರೆ. ಏಕೆಂದರೆ, ಸರ್ಕಾರ ಯಾವುದನ್ನೂ ಸ್ಪಷ್ಟವಾಗಿ ಜನತೆಗೆ

ತಿಳಿಹೇಳದೇಹೋದರೆ, ಅವರು ಏನು ತಿಳಿದುಕೊಳ್ಳಬೇಕು. ಕೆಲಸ ನಡೆಯುತ್ತಿದೆಯೋ ಇಲ್ಲವೋ, ಒಂದೊಂದು ದಿವಸಕ್ಕೆ ಒಂದೊಂದು ಹೇಳಿಕೆ ಆಗುತ್ತಿದೆ. ಇದನ್ನು ಒಬ್ಬೊಬ್ಬರು ಒಂದೊಂದು ರೀತಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ನಾನಾದರೂ ಕೂಡ ಸದನದ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೆ. ಈಗ ಸ್ಥಗಿತ ಗೊಂಡಿರತಕ್ಕ ಕಾಮಗಾರಿಗಳನ್ನು ಪ್ರಾರಂಭಿಸಲು ಸ್ಪಷ್ಟವಾಗಿ, ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡು ಇಂತಹ ದಿವಸದಲ್ಲಿ ಪ್ರಾರಂಭಮಾಡುತ್ತೇವೆ ಎನ್ನುವುದನ್ನು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ಯಾವ ಕಾರಣದಿಂದ ಕಾಮಗಾರಿಗಳನ್ನು ಸ್ಥಗಿತ ಮಾಡಿದ್ದೀರಿ. ಇದಕ್ಕೂ ರೈತರ ಬೇಡಿಕೆಗೂ ಸಂಬಂಧ ಇಲ್ಲ. ಈ ಯೋಜನೆಯಲ್ಲಿ, ಪೀಸ್ ವರ್ಕ್‌ನಲ್ಲಿ ಅವ್ಯವಹಾರ ನಡೆದಿದೆ, ದುರಪಯೋಗವಾಗಿದೆ ಎಂದರೆ, ಅದರ ಬಗ್ಗೆ ವಿಚಾರಣೆ ಮಾಡಿ, ಯಾರು ತಪ್ಪಿತಸ್ಥರು ಇದ್ದಾರೆ, ಅವರಿಗೆ ಶಿಕ್ಷೆ ಆಗಲಿ, ದಯಮಾಡಿ ಈ ಕಾರಣವನ್ನು ಮುಂದೊಡ್ಡಿ ಕಾಮಗಾರಿಕೆಗಳನ್ನು ನಿಲ್ಲಿಸಿದರೆ, ಖಂಡಿತವಾಗಿಯೂ ರೈತರ ಶಾಪ ತಟ್ಟುತ್ತದೆ. ಆದ್ದರಿಂದ ದಯಮಾಡಿ, ಇಂತಹ ಸಂದರ್ಭ ಮತ್ತು ಹಂತಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವುದನ್ನು ಈ ಸದನದಲ್ಲಿ ಕೇಳುತ್ತೇನೆ.

7.50 ಪಿ.ಎಂ

ಸನ್ಮಾನ್ಯ ಅಧ್ಯಕ್ಷರೇ ಸಣ್ಣ ನೀರಾವರಿ ಬಗ್ಗೆ ಒಂದು ವಿಷಯವನ್ನು ನಾನು ಹೇಳಬೇಕೆಂದು ಇದ್ದೇನೆ ಅದರ ಜೊತೆಗೆ ಅನೇಕ ಜಿಲ್ಲೆಗಳಲ್ಲಿ, ಕೋಲಾರ ತುಮಕೂರಿನ ಕೆಲವು ಭಾಗಗಳು ಬೇಕಾದಷ್ಟು ಕಡೆ ಸಣ್ಣಪುಟ್ಟ ಕೆರೆಗಳ ಮೂಲಕ ಅವರು ನೀರಾವರಿ ಮಾಡುತ್ತಾರೆ. ಕೆಲವು ಕೆರೆಗಳು ಹೆಚ್ಚು ಕಡಿಮೆ 90 ಭಾಗ ಎಲ್ಲಾ ಮುಚ್ಚಿ ಹೋಗಿವೆ. ಆ ಹೂಳು ತೆಗೆಯತಕ್ಕಂಥ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಮಾಡಿದಾಗ ಮಾತ್ರ, ಆ ರೈತರಿಗೆ ನ್ಯಾಯ ಕೊಟ್ಟಂತೆ ಆಗುತ್ತದೆ ಇಲ್ಲದಿದ್ದರೆ ಏನಾಗುತ್ತದೆ ಒಂದು ಸಾರಿ ಕೆರೆ ತುಂಬಿದರೆ ಬೆಳೆ ಆಗುತ್ತದೆ ಎನ್ನುವ ಖಾತರಿ ಇಲ್ಲವೇ ಇಲ್ಲ. 3-4 ಸಾರಿ ನೀರು ತುಂಬಬೇಕು. ಇವತ್ತು ಮಳೆ ಸೃಷ್ಟೀ ವಿಕೋಪಕ್ಕೆ ಹೋಗಿದೆ. ನಾವು ಏನು ನಿರೀಕ್ಷೆ ಮಾಡಿರುತ್ತೇವೆಯೋ ಆ ರೀತಿ ಮಳೆ ಆಗುತ್ತಿಲ್ಲ ಈ ಒಂದು ಕೆರೆಗಳಲ್ಲಿರತಕ್ಕಂಥ ಹೂಳು ತೆಗೆದು ಈ ಕೆರಗಳಲ್ಲಿ ನೀರನ್ನು ಶೇಖರಣೆ ಮಾಡತಕ್ಕಂಥ ಕೆಲಸದ ಬಗ್ಗೆ ಸರ್ಕಾರದ ಚಿಂತನೆ ಮಾಡಬೇಕು. ಇನ್ನು ಕೊನೆಯದಾಗಿ ನಾನು ಕುಣಿಗಲ್‌ಕ್ಷೇತ್ರದ ಶಾಸಕನಾಗಿ ಒಂದು ವಿಷಯವನ್ನು ಹೇಳಲೇಬೇಕಾಗಿದೆ. ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಕುಣಿಗಲ್ ಕ್ಷೇತ್ರದ್ದು ನನ್ನ ಕ್ಷೇತ್ರದಲ್ಲಿ ಸುಮಾರು 60 ಕಿಲೋಮೀಟರ್ ಕ್ಯಾನಲ್ ಹೋಗುತ್ತದೆ. ಸುಮಾರು 70-80 ಅಡಿ ಕೆಳಗಡೆ. ಸುಮಾರು ಎರಡೂ ಎರಡೂವರೆ ಸಾವಿರ ಎಕರೆ ಜಮೀನನ್ನು ಕ್ಯಾನಲ್‌ಗೋಸ್ಕರ ನಮ್ಮ ಕ್ಷೇತ್ರದ ರೈತರು ಕಳೆದುಕೊಂಡಿದ್ದಾರೆ. ಕೇವಲ ಒಂದು ಸಾವಿರ ಎಕರೆ ಮಾತ್ರ ನಮಗೆ ನೀರಾವರಿ. ಏನು ಅನ್ಯಾಯ ಇದು. ಎರಡು ಸಾವಿರ ಎಕರೆ ಜಮೀನನ್ನು ನಾವು ಕ್ಯಾನಲ್‌ಗೋಸ್ಕರ

ಕಳೆದುಕೊಂಡು ಒಂದು ಸಾವಿರ ಎಕರೆ ಮಾತ್ರ ನಮಗೆ ನೀರಾವರಿ ಆಗುತ್ತದೆ ಅಂದರೆ ಇದಕ್ಕಿಂತ ಅನ್ಯಾಯ ಇನ್ನೊಂದು ಇಲ್ಲ. ಕುಣಿಗಲ್ ಕ್ಷೇತ್ರದ ಬಗ್ಗೆ ಯಾರೂ ಕೂಡ ಚಿಂತನೆ ಮಾಡಲಿಲ್ಲ. ಕುಣಿಗಲ್ ಕ್ಷೇತ್ರದಲ್ಲಿ ನಮ್ಮದ್ದು ಕೊನೆಯ ಭಾಗ. ಹೇಮಾವತಿಯಲ್ಲಿ ಕೊನೆಯ ಭಾಗ ನಮ್ಮದು. ಅಲ್ಲಿ ಏನಾಗಿದೆ ಇಲ್ಲಿ ನೀರು ಕೊಡುತ್ತೇವೆಂದು ಹೇಳುತ್ತಿದ್ದರು ಅಲ್ಲಿ ಲಿಫ್ ಇರಿಗೇಶನ್‌ಗಳಿಗೆ ಮಂಜೂರಾತಿ ಕೊಡುತ್ತಾರೆ. ಈ ಬಗ್ಗೆ ಯಾರೂ ಕೂಡ ಚಕಾರ ಎತ್ತಲಿಲ್ಲ. ಇವತ್ತು ಅದರ ಬಗ್ಗೆ ಯಾರೂ ಕೂಡ ಚಿಂತನೆ ಮಾಡಲಿಲ್ಲ. ಅಲ್ಲಿ ಲಿಫ್ಟ್ ಇರಿಗೇಶನ್ ಮಾಡಿದರೆ ಅನ್ಯಾಯವಾಗುವುದು ಯಾರಿಗೆ? ಹೇಮಾವತಿ ಕೊನೆಯ ಭಾಗದಲ್ಲಿರತಕ್ಕಂಥ ಕುಣಿಗಲ್ ಕ್ಷೇತ್ರಕ್ಕೆ ಇವತ್ತು ಈ ನಿಟ್ಟಿನಲ್ಲಿ ಯೋಚನೆ ಮಾಡದೇ ಲಿಫ್ಟ್ ಇರಿಗೇಶನ್ ಕೊಡುವಾಗ ಚಕಾರ ಎತ್ತದೆ ಇವತ್ತು ನಾವು ಏನಾದರೂ ಹೇಮಾವತಿ ಹೇಮಾವತಿ ಅಂತ ಬಾಯಿ ಬಡಿದುಕೊಂಡರೆ ನಾವು ಖಂಡಿತವಾಗಿಯೂ ಕೂಡ ರೈತರಿಗೆ ಅನ್ಯಾಯ ಮಾಡುತ್ತಿದ್ದೇವೆ. ಎನ್ನುವ ಭಾವನೆ ಆ ಜನಗಳಲ್ಲಿ ಬರುತ್ತದೆ. ಖಂಡಿತವಾಗಿಯೂ ಕೂಡ ಜನ ಇದನ್ನು ಕ್ಷಮಿಸುವುದಿಲ್ಲ. ಆದ್ದರಿಂದ ನಾನು ಕೊನೆಯದಾಗಿ ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇನೆ ಕುಣಿಗಲ್ ಕ್ಷೇತ್ರದಲ್ಲಿ ನಾವು ಬರೀ ಕ್ಯಾನಲ್ ನೋಡಿಕೊಂಡು ಇರುವುದಕ್ಕೆ ಆಗುವುದಿಲ್ಲ ನಮ್ಮಲ್ಲಿ ಮೂರು ದೊಡ್ಡ ಕೆರೆಗಳು ಇವೆ ಈ ಮೂರು ದೊಡ್ಡ ಕೆರೆಗಳಿಗೆ ನೀರನ್ನು ಲಿಫ್ಟ್ ಮಾಡಿ ಆ ಕೆರೆಗಳಲ್ಲಿ ತುಂಬಿಸಿ ಹೇಮಾವತಿ ನೀರನ್ನು ನಮ್ಮ ಜನ ಕುಡಿಯುವುದಕ್ಕೋಸ್ಕರವಾದರೂ ಸ್ವಲ್ಪ ಮಟ್ಟಿಗೆ ಆದರೂ ಕೂಡ ನಮ್ಮ ನೀರಾವರಿಗೆ ಉಪಯೋಗಿಸಿಕೊಳ್ಳಲು ಅನುಕೂಲ ಮಾಡಿಕೊಡಬೇಕು. ಗೂಳೂರಿನ ಕೆರೆ ಮತ್ತು ಹೆಬ್ಬೂರಿನ ಕೆರೆ ಹಾಗೂ ನಾಗೂರಿನ ಕೆರೆ ಈ ಮೂರು ಕೆರೆಗಳಿಗೆ ಹೇಮಾವತಿ ನಾಲೆಯಿಂದ ನೀರನ್ನು ಲಿಫ್ಟ್ ಮಾಡಿ ಆ ಕೆರೆಗಳನ್ನು ತುಂಬಿಸತಕ್ಕಂಥ ಒಂದು ಕೆಲಸವನ್ನು ಮಾಡಬೇಕು ಮತ್ತು ಕುಣಿಗಲ್ ಕೆರೆಯಲ್ಲಿ ಇರತಕ್ಕಂಥ ನೀರನ್ನು ಅಲ್ಲಿರತಕ್ಕಂಥ ನಿವಾಸಿಗರಿಗೆ ಕುಡಿಯುವ ನೀರನ್ನು ಕೊಡುವ ಸಲುವಾಗಿ ಸರ್ಕಾರ ದಯಮಾಡಿ ಚಿಂತನೆಯನ್ನು ಕುಣಿಗಲ್ ಕ್ಷೇತ್ರಕ್ಕೆ ಸಹಾಯ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಕೆ. ಶ್ರೀನಿವಾಸಗೌಡ : (ಕೋಲಾರ) ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ನಂಜೇಗೌಡರು ಮಾತನಾಡುವಾಗ ದೊಡ್ಡನೀರಾವರಿ ವಿಷಯದಲ್ಲಿ ಬಹಳ ವಿಷದವಾಗಿ ಎಲ್ಲಾ ಹೇಳಿದರು. ಅವರು ಅದನ್ನು ಹೇಳುತ್ತಾ ಕಣ್ಣೀರಿನ ಹೊಳೆಯನ್ನೇ ಹರಿಸಿದರು. ಆದರೆ ಸಣ್ಣ ನೀರಾವರಿ ವಿಷಯದಲ್ಲಿ ನಾನು ಹೇಳಬೇಕಾದರೆ ನನ್ನ ಕಣ್ಣಲ್ಲಿ ರಕ್ತವೇ ಹರಿಯಬೇಕಾಗುತ್ತದೆ. ಇವತ್ತು ಮೊದಲಿನಿಂದಲೂ ಕೂಡ ದೊಡ್ಡ ನೀರಾವರಿಗೂ ಸಣ್ಣ ನೀರಾವರಿಗೂ ಮಲತಾಯಿ ಧೋರಣೆಯನ್ನು ಮಾಡಿಕೊಂಡೇ ಬಂದಿದ್ದಾರೆ. ಇಂದಿನ ಸರ್ಕಾರ ಮತ್ತು ಹಿಂದಿನ ಸರ್ಕಾರಗಳು ಕೂಡ ಮಲತಾಯಿ

ಧೋರಣೆ ಮಾಡಿವೆ ಅಂದರೆ ತಪ್ಪಾಗುವುದಿಲ್ಲ. ಈಗ ಇಲ್ಲಿರುವ ಅಂಕಿಅಂಶಗಳ ಪ್ರಕಾರ ದೊಡ್ಡ ನೀರಾವರಿಗೆ 760.50 ಕೋಟಿಯನ್ನು ಇಟ್ಟಿದ್ದಾರೆ ನಿಗಮಕ್ಕೆ 300 ಕೋಟಿಯನ್ನು ಇಟ್ಟಿದ್ದಾರೆ. ಸಣ್ಣ ನೀರಾವರಿಗೆ ಕೇವಲ 75 ಕೋಟಿಯನ್ನು ಮಾತ್ರ ಇಟ್ಟಿದ್ದಾರೆ. ಇದು ಮಲತಾಯಿ ಧೋರಣೆ ಅಲ್ಲವೇ ಅಥವಾ ನಾವು ಬಯಲುಸೀಮೆ ಪ್ರದೇಶದಲ್ಲಿ ಹುಟ್ಟಿದ್ದೇ ತಪ್ಪೇ ಎನ್ನುವಂತಹ ಮಾತನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಯಾವುದೇ ಸರ್ಕಾರ ಇರಲಿ.

ಶ್ರೀ ವಾಟಾಳ್ ನಾಗರಾಜ್ : ಯಾವುದೇ ಸರ್ಕಾರ ಅಂದರೆ ಇಲ್ಲಿ ನಡೆಯುವುದಿಲ್ಲ ನಮ್ಮ ಸರ್ಕಾರ ಎಂದು ಸ್ಪಷ್ಟವಾಗಿ ಹೇಳಬೇಕು. ಹಣ ಇಟ್ಟಿರುವುದು ಯಾವ ಸರ್ಕಾರ.

ಅಧ್ಯಕ್ಷರು : ಅವರು ಹೇಳಿದ್ದುದು ಮೊದಲಿನಿಂದಲೂ ಇದೇ ಪದ್ಧತಿ ಬಂದಿದೆ ಎಂದು.

ಶ್ರೀ ವಾಟಾಳ್ ನಾಗರಾಜ್ : ನೀವು ನಿಮ್ಮ ಜಿಲ್ಲೆಯವರು ಅಂತ ಹೇಳಿ ತೀರಾ ನೀವು ಇಲ್ಲೇ ತಾರತಮ್ಯ ಮಾಡುವುದು ಸರಿಯಲ್ಲ ಆದರೂ ತಮ್ಮ ಬಗ್ಗೆ ನಮಗೆ ಗೌರವ ಇದೆ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೇ ಈಗ ಕೋಲಾರದಲ್ಲಿ ಸುಮಾರು 4282 ಕೆರೆಗಳು ಇವೆ. ಬೆಂಗಳೂರು ಗ್ರಾಮಾಂತರದಲ್ಲಿ 1526 ಕೆರೆಗಳು ಇವೆ. ತುಮಕೂರಿನಲ್ಲಿ 2007 ಕೆರೆಗಳು ಇವೆ. ಚಿತ್ರದುರ್ಗದಲ್ಲಿ ಸುಮಾರು 372 ಕೆರೆಗಳು ಇವೆ. ಇಲ್ಲಿ ಒಟ್ಟಾರೆ ಸುಮಾರು 1 ಲಕ್ಷ 99 ಸಾವಿರದ 799 ಹೆಕ್ಟೇರ್ ನೀರಾವರಿ ಪ್ರದೇಶ ಇವೆ. ಇವತ್ತು ಈ ಪ್ರದೇಶಕ್ಕೆ ನೀರು ಕೊಡುತ್ತಿದ್ದೇವೆಯೇ ಇಲ್ಲವೇ ಎನ್ನುವಂತಹ ಮಾತನ್ನು ಹೇಳಬಹುದು. ದೊಡ್ಡ ನೀರಾವರಿಯಲ್ಲಿ ಕೃಷ್ಣಾ ಬೇಸಿಸ್ ಇರಬಹುದು ಗೋದಾವರಿ ಬೇಸಿಸ್ ಇರಬಹುದು ಇಲ್ಲಿ ಸುಮಾರು 22 ಲಕ್ಷ 5 ಸಾವಿರದ 022 ಹೆಕ್ಟೇರ್ ಪ್ರದೇಶಕ್ಕೆ ನೀವು ನೀರನ್ನು ಕೊಡುತ್ತಿದ್ದೀರಿ. ಇವತ್ತು ನೀವು ಏನು ಹಣವನ್ನು ಇಟ್ಟಿದ್ದೀರಿ ಇದು ಏನೇನೂ ಸಾಲದು. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ ಈ ಹಿಂದೆ ಕೋಲಾರ ಜಿಲ್ಲೆಯಲ್ಲಿ ಸುಮಾರು 25-30 ಅಡಿಗಳಿಗೆ ನೀರು ಸಿಗುತ್ತಿತ್ತು. ಸುಮಾರು 30 ಅಡಿಗಳಿಗೆ ಬಹಳ ಯತೇಚ್ಛವಾಗಿ ನೀರು ಸಿಗುತ್ತಿತ್ತು. ಅದಾದ ಮೇಲೆ ನಮ್ಮ ಸರ್ಕಾರ ಬಂದ ಮೇಲೆ ಹಿಂದೆ ನಜೀರ್‌ಸಾಬ್‌ರವರು ಬೋರ್‌ವೆಲ್‌ಗಳನ್ನು ತೋಡಲು ಶುರು ಮಾಡಿದ ಮೇಲೆ 120-150 ಅಡಿಗಳಲ್ಲಿ ನೀರು ಸಿಗುತ್ತಿತ್ತು. ಇವತ್ತು ಅಲ್ಲಿನ ಪರಿಸ್ಥಿತಿ ಏನಾಗಿದೆ ಅಂದರೆ ಸುಮಾರು 500 ಅಡಿ ಹಾಳದಲ್ಲಿ ನೀರನ್ನು ನೋಡಬೇಕಾಗಿದೆ. ಕುಡಿಯುವ ನೀರಿಗೂ ಸಹ ದಿನೇ ದಿನೇ ಬಹಳ ಕಷ್ಟವಾಗುತ್ತಿದೆ. ತಮಗೆ ಗೊತ್ತಿರುವ ಹಾಗೆ ಬಾಗೇಪಲ್ಲಿ ಮತ್ತು ಗುಡಿಬಂಡೆ ಜನ ವಲಸೆ ಹೋಗುವಂತಹ ಪರಿಸ್ಥಿತಿ ಇದೆ. ಸಣ್ಣ ನೀರಾವರಿಗೆ ತಾವು ಕೊಟ್ಟಿರುವ ಅಧ್ಯತೆ ಏನೇನೂ ಸಾಲದು. ಇದರ ಜೊತೆಗೆ ಇರುವಂತಹ

ಕೆರೆಗಳಲ್ಲಿ ಹೂಳು ತೆಗೆಯದೇ ಹೋದರೆ ಮುಂದೆ ಬರುವಂತಹ 10 ವರ್ಷಗಳಲ್ಲಿ ನಾವು ಸಾವಿರ ಅಡಿಗಳನ್ನು ತಲುಪಬೇಕಾಗುತ್ತದೆ. ಕುಡಿಯುವ ನೀರಿಗೂ ಸಹ ನಮಗೆ ಬಹಳ ತೊಂದರೆ ಆಗಿದೆ. ಪ್ರತಿ ವರ್ಷ ಕೂಡ ಬೋರ್‌ವೆಲ್ ಹಾಕುವಾಗ 70-80 ಅಡಿ ಕೆಳಗೆ ಹೋಗುತ್ತಿದೆ. ಈ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕು ಈ ಬಗ್ಗೆ ಸರ್ಕಾರ ಏನಾದರೂ ಒಂದು ಪರಿಹಾರ ಹುಡಕಬೇಕು. ಪರಿಹಾರ ಇಷ್ಟೇ ತಾವು ಕೆರೆಗಳಲ್ಲಿರುವ ಹೂಳನ್ನು ತೆಗೆದು ಅಲ್ಲಿ ನೀರನ್ನು ಶೇಖರಣೆ ಮಾಡಿದ್ದೇ ಆದರೆ ನಮ್ಮ ನಾಲ್ಕು ಜಿಲ್ಲೆಗಳಾದ ಕೋಲಾರ ತುಮಕೂರು ಚಿತ್ರದುರ್ಗ ಜಿಲ್ಲೆಗಳಿಗೆ ಹಾಗೂ ಬೆಂಗಳೂರು ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ ಕೆರೆಗಳಲ್ಲಿ ನೀರು ತುಂಬಿಸಿ ಕೆರೆಯ ತೂಬುಗಳನ್ನು ಮುಚ್ಚಿದ್ದರೆ ಕನಿಷ್ಟ ಪಕ್ಷ ಬೋರ್‌ವೆಲ್ ಹಾಕಿದಾಗ ನಮಗೆ ಕುಡಿಯುವ ನೀರು ಅದರೂ ಬೋರ್‌ವೆಲ್‌ಗಳಲ್ಲಿ ಸಿಗುತ್ತದೆ. ನಮಗೆ ಇರುವ ಸ್ವಲ್ಪ ನೀರಿನಲ್ಲಿ ರೇಷ್ಮೆ ಹಾಲು ತರಕಾರಿಯನ್ನು ಬೆಂಗಳೂರಿಗೆ ಕೊಡುತ್ತಿದ್ದೇವೆ. ಆದರೂ ಸಹ ನಮಗೆ ನೀರಿನ ಭವಣೆ ಹೆಚ್ಚು ಇದೆ. ಆದ್ದರಿಂದ ತಾವು ಸಣ್ಣ ನೀರಾವರಿಗೆ ಹೆಚ್ಚು ಅಧ್ಯತೆ ಕೊಡಬೇಕು ಅಷ್ಟೇ ಅಲ್ಲದೆ ತಾವು ನಿನ್ನೆ ಪತ್ರಿಕೆಯಲ್ಲಿ ನೋಡಿರಬಹುದು ಕೆ.ಜಿ.ಎಫ್. ನಲ್ಲಿ ಕುಡಿಯುವ ನೀರು ಇಲ್ಲ. ಕನಿಷ್ಟ ನಮ್ಮ ಸರ್ಕಾರವನ್ನು ಹಿಂದಿನ ಸರ್ಕಾರದವನ್ನು ಮೊದಲಿನಿಂದಲೂ ಕೇಳುತ್ತಿದ್ದಾರೆ ಕಾವೇರಿ ನದಿ ನೀರನ್ನು ಕುಡಿಯಲಿಕ್ಕೆ ಆದರೂ ಕೋಲಾರ ಕೆ.ಜಿ.ಎಫ್. ಬಂಗಾರಪೇಟೆಗೆ ಕೊಡಿ ಎಂದು ಕೇಳುತ್ತಾ ಬಂದಿದ್ದರೂ ಕೂಡ ಇದುವರೆಗೂ ಕೂಡ ಸರ್ಕಾರ ಆ ದಿಕ್ಕಿನಲ್ಲಿ ಚಿಂತನೆ ಮಾಡಿಲ್ಲ. ಆ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತಾ ಸಣ್ಣ ನೀರಾವರಿಗೆ ತಾವು ಅಧ್ಯತೆ ಕೊಡದಿದ್ದರೆ, ಮುಂದೆ ಈ ನಾಲ್ಕು ಜಿಲ್ಲೆಗಳು ಬಹಳ ಕಷ್ಟಕ್ಕೆ ಸಿಲುಕುತ್ತಾರೆ. ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಇವತ್ತು ವಾಟರ್ ಮ್ಯಾನೇಜ್‌ಮೆಂಟ್ ಬಹಳ ಮುಖ್ಯ. ಇವತ್ತು ವಾಟರ್ ಮ್ಯಾನೇಜ್‌ಮೆಂಟ್‌ಗೆ ಟಿ.ವಿ.ಯಲ್ಲಿ ನೋಡಿದೆ ಹೆಣ್ಣು ಮಕ್ಕಳಿಗೆ ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದ ಹೆಣ್ಣುಮಕ್ಕಳಿಗೆ 75 ಪರ್ಸೆಂಟ್ ಸಬ್ಸೀಡಿ ಕೊಡುತ್ತಿದ್ದಾರೆ. ಬೇರೆ ರೈತರಿಗೆ 50 ಪರ್ಸೆಂಟ್‌ಸಬ್ಸೀಡಿ ಕೊಡುತ್ತಿದ್ದಾರೆ. ಇದು ಬಹಳ ಒಳ್ಳೆಯ ಕೆಲಸ. ವಾಟರ್ ಮ್ಯಾನೇಜ್‌ಮೆಂಟ್ ಮಾಡಲು ನಮ್ಮ ಬಯಲು ಸೀಮೆ ಪ್ರದೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಸುಮಾರು 2000 ವರ್ಷಗಳ ಅಂದಾಜು ಇಟ್ಟುಕೊಂಡು ಸುಮಾರು 9 ಸಾವಿರ ಕೋಟಿ ರೂಪಾಯಿಗಳನ್ನು ದೊಡ್ಡ ನೀರಾವರಿಗೆ ಅದ್ಯತೆ ಕೊಟ್ಟಿದ್ದೀರಿ, ದೊಡ್ಡ ನೀರಾವರಿಗೆ ಯಾವ ರೀತಿ ಅಧ್ಯತೆ ಕೊಟ್ಟಿದ್ದೀರೋ ಅದೇ ರೀತಿಯಲ್ಲಿ ಸಣ್ಣ ನೀರಾವರಿಗೂ ಅದ್ಯತೆ ಕೊಡಬೇಕು. ಈ ಅಧ್ಯತೆಯನ್ನು ಕೊಡದಿದ್ದರೆ 4 ಜಿಲ್ಲೆಗಳ ರೈತರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಸರ್.ಎಂ.ವಿಶ್ವೇಶ್ವರಯ್ಯನವರು ಕೋಲಾರ ಜಿಲ್ಲೆಯಲ್ಲಿ ಹುಟ್ಟಿ ಮಂಡ್ಯ ಜಿಲ್ಲೆಯಂತಹ

ಜಿಲ್ಲೆಗಳಿಗೆ ನೀರು ಕೊಟ್ಟರು. ನಮ್ಮ ಸರ್ಕಾರದ ಮಣ್ಣಿನ ಮಗನಾದ ದೇವೇಗೌಡರು ಹೊಳೇನರಸೀಪುರದಲ್ಲಿ ಹುಟ್ಟಿ ಕನಿಷ್ಟ ಕೋಲಾರಕ್ಕೆ ಕುಡಿಯುವ ನೀರು ಕೊಡುವಂತಹ ವ್ಯವಸ್ಥೆಯನ್ನಾದರೂ ಮಾಡಲಿ ಅಂತ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇವತ್ತು ಭ್ರಷ್ಟಾಚಾರದ ವಿಷಯದಲ್ಲಿ ಅಷ್ಟು ಇಷ್ಟು ಇಲ್ಲ. ನಾನು ಮೊನ್ನೆ ಚುನಾವಣೆ ಆದ ಮೇಲೆ ರಸ್ತೆಗಳನ್ನು ನೋಡಿದೆ ಟಾರ್ ಹಾಕಿದ್ದರು ಟಾರ್ ಅಲ್ಲ ಹಾಕಿದ್ದುದು ಪೇಯಿಂಟ್ ಹಾಕಿದ್ದರು ಅಲ್ಲಿ ರಸ್ತೆಗೆ ಟಾರ್ ಹಾಕಿದ್ದಾರೆ, ಅದು ಟಾರ್ ಅಲ್ಲ, ಕಪ್ಪು ಪೇಯಿಂಟ್‌ನ್ನು ಹಾಕಿದ್ದರು. ರಸ್ತೆಗಳಿಗೆ ಟಾರ್ ಹಾಕುವ ಬದಲು ಕಪ್ಪು ಪೇಂಯಿಟ್‌ನ್ನು ಹಾಕಿ ಭ್ರಷ್ಟಾಚಾರವನ್ನು ಮಾಡುತ್ತಿದ್ದಾರೆ. ಮನುಷ್ಯರಿಗೆ ಯಾವುದೇ ಕ್ರಿಮಿ ಕಚ್ಚಿದರೆ ಅದು ಹುಣ್ಣಾಗುತ್ತದೆ ಮತ್ತು ಅಲ್ಲಿ ರಕ್ತ ಬರುತ್ತದೆ. ಆದರೆ ತಿಗಣೆ ಕಚ್ಚಿದರೆ ಹುಣ್ಣು ಆಗುವುದಿಲ್ಲ ರಕ್ತವೂ ಕಾಣುವುದಿಲ್ಲ. ಹಾಗೆ ಅಧಿಕಾರಿಗಳು ಭ್ರಷ್ಟರಾದರೆ ತಿಗಣೆಗಳ ರೀತಿ, ಕಚ್ಚಿದ ಕಡೆ ಹುಣ್ಣು ಕಾಣದೆ ರಕ್ತ ಹೀರಿದ ರೀತಿಯಲ್ಲಿ ಅಧಿಕಾರಿಗಳು ಮಾಡುತ್ತಾರೆ. ಇದರ ಕಡೆ ದಿಟ್ಟವಾದ ಮತ್ತು ದೃಢವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಕೇಳುತ್ತಾ ಇವತ್ತು ಸಣ್ಣ ನೀರಾವರಿಗೆ ಕೊಟ್ಟಿರುವ ಆಧ್ಯತೆ ಏನೇನೂ ಸಾಲದು, ಅದಕ್ಕಾಗಿ ಸಣ್ಣ ನೀರಾವರಿ ಯೋಜನೆಗೆ ಕನಿಷ್ಟ 200 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿ, ಇವತ್ತು ನನಗೆ ಎರಡು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಹೆಚ್. ಕೆ. ಕುಮಾರ ಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಕಡೆ ಇರುವ ಯಗಚಿ ಜಲಾಶಯದ ಬಗ್ಗೆ ಒಂದೆರಡು ಮಾತನಾಡಲು ಇಷ್ಟಪಡುತ್ತೇನೆ. ರಾಜ್ಯದಲ್ಲಿ ನೀರಾವರಿ ಜಾಸ್ತಿಯಾಗಬೇಕು, ರೈತರ ಬಾಳು ಹಸನಾಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದುವರೆಗೂ ರಾಜ್ಯದಲ್ಲಿ ಇದ್ದಂಥ ಯಾವುದೇ ಸರ್ಕಾರಗಳು ಇರುವ ನೀರನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲವೆಂಬುದು ಬಹಳ ದುಃಖಕರವಾದ ಸಂಗತಿ. ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ಬೇಸಿನ್‌ನಲ್ಲಿ 7 ಸಾವಿರ ಕೋಟಿ ರೂಪಾಯಿಗಳು ಹಾಗೂ ಕಾವೇರಿ ಬೇಸಿನ್‌ನಲ್ಲಿ 3 ಸಾವಿರ ಕೋಟಿ ರೂಪಾಯಿಗಳ ಹಣವನ್ನು ಕ್ರೋಢೀಕರಿಸಿ ಈ ಜಲಾಶಯಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಕೆಲಸಗಳನ್ನು ಮುಗಿಸತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾಗಿದೆ. ಇವತ್ತು ಸರ್ಕಾರದ ನಾಯಕತ್ವವನ್ನು ನಮ್ಮ ನಾಯಕರು ಹೊತ್ತು ಮುಖ್ಯ ಮಂತ್ರಿಗಳಾಗಿದ್ದಾರೆ. ನೀರಾವರಿಗೆ ಆಧ್ಯತೆಯನ್ನು ಕೊಡುತ್ತೇವೆಂದು ಅವರು ಹೇಳಿಕೊಂಡು ಬಂದಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ನಮ್ಮ ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಇದೆ. ನಾವು ಯಾವುದೇ ರೀತಿಯಲ್ಲಾಗಲೀ ಹಣವನ್ನು ಕ್ರೋಢೀಕರಿಸಿ ಆ ಕೆಲಸಗಳನ್ನು ಮಾಡಿ ನಮ್ಮ ರೈತರ ಬಾಳನ್ನು ಹಸನು

ಮಾಡುವುದರ ಬಗ್ಗೆ ನಾವು ಹಿಂದೆ ಹೋಗುವುದಿಲ್ಲವೆಂದು ತಮಗೆ ಹೇಳಬಯಸುತ್ತೇನೆ. ಎಷ್ಟೋ ಅನುತ್ಪಾದಕ ಕೆಲಸಗಳಿಗೆ ಹಣ ಖರ್ಚು ಮಾಡಲಾಗುತ್ತಿದೆ. ಸರ್ಕಾರದ ಮೇಲೆ ಎಷ್ಟೇ ಆರೋಪಗಳು ಬಂದರೂ ಪರವಾಗಿಲ್ಲ, ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿ ಈ ಅನುತ್ಪಾದಕ ಕೆಲಸಗಳಿಗೆ ಖರ್ಚು ಮಾಡುವುದನ್ನು ನಿಲ್ಲಿಸಿ ಆ ಹಣವನ್ನು ನೀರಾವರಿಗೆ ಕೊಟ್ಟು ನೀರಾವರಿ ಕೆಲಸಗಳನ್ನು ಮುಗಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಯಗಚಿ ಜಲಾಶಯದ ಕೆಲಸಕ್ಕಾಗಿ 35 ಕೋಟಿ ರೂಪಾಯಿಗಳ ಒಂದು ಅಂದಾಜನ್ನು 1983 ನೇ ಇಸವಿಯಲ್ಲಿ ಮಾಡಲಾಗಿದ್ದು, ಈ ಯೋಜನೆಯಿಂದ ನಮ್ಮ ಕ್ಷೇತ್ರದ 53 ಸಾವಿರ ಎಕರೆಗೆ ನೀರಾವರಿ ಆಗುತ್ತದೆಂದು ಅಂದಾಜು ಮಾಡಲಾಗಿತ್ತು. ಆ ಕೆಲಸ ಇನ್ನೂ ಮುಗಿಯದೆ ಈಗ ಆ ಯೋಜನೆಯ ಅಂದಾಜು ವೆಚ್ಚ 180-200 ಕೋಟಿ ರೂಪಾಯಿಗಳಿಗೆ ಏರುವ ಸಂಭವವಿದೆ ಅದರ ಜೊತೆಗೆ ಆ ಕೆಲಸ ಇನ್ನೂ ನಾಲ್ಕೈದು ವರ್ಷಗಳಾದರೂ ಮುಗಿಯುವ ಸೂಚನೆಗಳು ಕಾಣುತ್ತಿಲ್ಲ. ಆದುದರಿಂದ ಈ ಕೆಲಸವನ್ನು ತುರ್ತಾಗಿ ಮಾಡಬೇಕೆಂದು ಸರ್ಕಾರದಲ್ಲಿ ಕೇಳುತ್ತೇನೆ. ಮೊದಲು 53 ಸಾವಿರ ಎಕರೆಗೆ ನೀರಾವರಿ ಸಿಗುತ್ತದೆ ಎಂದು ಅಂದಾಜು ಮಾಡಿದ್ದು ಈಗ ಅದು ಕೇವಲ 6 ಸಾವಿರ ಎಕರೆಗೆ ಮಾತ್ರ ನೀರಾವರಿ ಆಗುತ್ತದೆಂದು ತಿಳಿದು ಬಂದಿದೆ. ಬೇಲೂರು ತಾಲ್ಲೂಕು ಇವತ್ತು ಬರಪೀಡಿತ ಪ್ರದೇಶವಾಗಿದೆ, ಅದರಲ್ಲೂ ಮಾದೇಹಳ್ಳಿ ಮತ್ತು ಹಳೇಬೀಡು ಹೋಬಳಿಗಳು ಬರದ ದವಡೆಯಲ್ಲಿ ಇವೆ. ಈ ನಮ್ಮ ಬೇಲೂರು ತಾಲ್ಲೂಕಿಗೆ ನೀರು ಕೊಡಬೇಕೆಂದು ನಾವು ಮೊದಲಿನಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ, ಮಾನ್ಯ ನಾಯಕರಿಗೂ ಈ ವಿಷಯ ಚೆನ್ನಾಗಿ ಗೊತ್ತಿದೆ. ರೈತರ ಅಳಲನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಆದ್ದರಿಂದ ಆ ಎರಡು ಹೋಬಳಿಗಳಿಗೆ ಹೆಚ್ಚು ನೀರನ್ನು ಒದಗಿಸುವ ಹಾಗೆ ನಕ್ಷೆಯನ್ನು ಮಾರ್ಪಾಡು ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳುತ್ತಿದ್ದೇನೆ. ಹಿಂದೆ ನಮ್ಮ ಸರ್ಕಾರ ಇದ್ದಾಗ ಈ ಹೋಬಳಿಗಳಲ್ಲಿ ಸುಮಾರು 23 ಸಾವಿರ ಎಕರೆಗೆ ನೀರಾವರಿ ಮಾಡುವ ಬಗ್ಗೆ ನಕ್ಷೆಯನ್ನು ತಯಾರು ಮಾಡಲಾಗಿತ್ತು ಆದರೆ ಹಿಂದಿನ ಕಾಂಗ್ರೆಸ್ ಸರ್ಕಾರ ಇದನ್ನು ಮಾರ್ಪಡಿಸಿ 14 ಸಾವಿರ ಎಕರೆಗೆ ಮಾತ್ರ ನೀರಾವರಿ ಮಾಡಲು ನಕ್ಷೆಯನ್ನು ತಯಾರಿಸಲಾಗಿದೆ ಎಂದು ಕೇಳಿ ಬಂತು, ಆದ್ದರಿಂದ ಈ ಎರಡು ಹೋಬಳಿಗಳಿಗೆ ಹೆಚ್ಚು ನೀರನ್ನು ಒದಗಿಕೊಡುವುದರ ಮೂಲಕ ರೈತರ ಬಾಳನ್ನು ಹಸನು ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ಸಣ್ಣ ನೀರಾವರಿ ಮಂತ್ರಿಗಳೂ ಸದನದಲ್ಲಿ ಇದ್ದಾರೆ. ಅವರು ಬಹಳ ಉತ್ಸಾಹದಿಂದ ಸಣ್ಣ ನೀರಾವರಿ ವಿಭಾಗಗಳನ್ನು ಪುನಃ ಅವರ ಇಲಾಖೆಗೆ ತೆಗೆದುಕೊಳ್ಳುವಂಥ ವ್ಯವಸ್ಥೆ ಮಾಡಿದ್ದಾರೆ. ಇದಕ್ಕೆ ನನ್ನ ಸೂಚನ ಏನೆಂದರೆ ಪ್ರತಿ ತಾಲ್ಲೂಕಿನಲ್ಲಿ ಅದು ಸಣ್ಣ ನೀರಾವರಿ ಉಪ ವಿಭಾಗವಿರಲಿ, ಅಥವಾ ಲೋಕೋಪಯೋಗಿ ಉಪ ವಿಭಾಗವಿರಲಿ, ಇವರೆಡರಲ್ಲಿ ಯಾವುದಾದರೂ

ಒಂದನ್ನು ಆಯಾ ತಾಲ್ಲೂಕಿನಲ್ಲಿ ಇರುವ ಹಾಗೆ ನೋಡಿಕೊಳ್ಳಬೇಕು. ಲೋಕೋಪಯೋಗಿ ಉಪವಿಭಾಗವಿದ್ದರೆ ಅದಕ್ಕೆ ಸಣ್ಣ ನೀರಾವರಿ ಕೆಲಸವನ್ನು ಹಾಕಬೇಕು, ಸಣ್ಣ ನೀರಾವರಿ ಇಲಾಖೆ ಉಪವಿಭಾಗ ಇದ್ದರೆ, ಅದಕ್ಕೆ ಲೋಕೋಪಯೋಗಿ ಕೆಲಸವನ್ನು ಅದಕ್ಕೆ ಹಾಕಬೇಕು. ಈ ಎರಡು ಉಪವಿಭಾಗಗಳು ಇಲ್ಲದೆ ಇರುವ ಜಾಗದಲ್ಲಿ ಯಾವುದೇ ಕೆಲಸಗಳು ಸರಿಯಾಗಿ ಆಗುವುದಿಲ್ಲವೆಂದು ಸರ್ಕಾರ ಮನಗಾಣಬೇಕು, ಇದನ್ನು ಸರ್ಕಾರ ಪರಿಗಣಿಸಿ ಸಹಾಯ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಬಿ.ಆರ್.ಯಾವಗಲ್ :(ನರಗುಂದ) : ಮಾನ್ಯ ಅಧ್ಯಕ್ಷರೆ, ಈ ದೇಶದ ಆರ್ಥಿಕ ಪರಿಸ್ಥಿತಿ ಬಹುತೇಕ ಮಳೆ ಮೇಲೆ ಅವಲಂಬಿತವಾಗಿದೆಯೆಂದರೆ ತಪ್ಪಾಗಲಿಲ್ಲ. ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಈ ಪರಿಸ್ಥಿತಿ ಇನ್ನೂ ಇದೆ. ಈ ಮಾನ್‌ಸೂನ್ ಮೇಲೆ, ನಮ್ಮ ರಾಷ್ಟ್ರದ ವರ್ಷದ ಆದಯ ನಿರ್ಧಾರ ಮಾಡತಕ್ಕಂಥಾದ್ದು, ಕೊರತೆ ಬಜೆಟ್ ಅಳೆಯುವಂತಾದ್ದು, ನಮ್ಮ ಅಭಿವೃದ್ಧಿ ಎಷ್ಟು ಮುಂದೆ ಹೋಯಿತು ಎನ್ನುವುದರ ಬಗ್ಗೆ ನಮ್ಮ ಇನ್‌ಫ್ಲೇಷನ್ ಎಷ್ಟು ಎತ್ತರಕ್ಕೆ ಹೋಯಿತು ಎನ್ನುವುದರ ಬಗ್ಗೆ ಅಳತೆ ಮಾಡುವಂಥ ಪರಿಸ್ಥಿತಿ ಇನ್ನೂ ಇದೆ. ಇದನ್ನು ಬಹಳಷ್ಟು ರೀತಿಯಿಂದ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ನೀರಾವರಿ ಯೋಜನೆಗಳನ್ನು ಮೊದಲನೆ ಪಂಚವಾರ್ಷಿಕ ಯೋಜನೆಯಿಂದಲೇ ಪ್ರಾರಂಭ ಮಾಡಿದರು. ಇದರಲ್ಲಿ ಬಹಳ ಖೇದದ ವಿಷಯವೆಂದರೆ, ಅವತ್ತು ಪ್ರಾರಂಭ ಮಾಡಿದಂಥ ಅನೇಕ ಯೋಜನೆಗಳು ಇನ್ನೂ ಮುಗಿಯದ ಹಂತದಲ್ಲಿ ಇವೆ. ಅಷ್ಟೇ ಅಲ್ಲ, ಇವತ್ತು ನಾವು ಎಂಟನೆ ಪಂಚವಾರ್ಷಿಕ ಯೋಜನೆಯಲ್ಲಿದ್ದರೂ ಅವು ಮುಗಿಯುವ ಸೂಚನೆಗಳು ಇಲ್ಲ ಹಾಗೂ ಇನ್ನೂ 10-20 ವರ್ಷಗಳು ಕಳೆದರೂ ಆ ಯೋಜನೆಗಳು ಮುಗಿಯುವುದಿಲ್ಲವೆಂದು ತಾವೂ ಭಾವನೆ ಮಾಡುತ್ತೀರಿ. ಹಳೆ ಯೋಜನೆಗಳನ್ನು ಮುಗಿಸದೆ ಇರುವುದರಿಂದ ಹೊಸ ಯೋಜನೆಗಳನ್ನು ಇನ್ನುವರೆಗೆ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲವೆಂದು ಎಲ್ಲರಿಗೂ ಗೊತ್ತಿಗೆ. ಅಂಥಾ ಪರಿಸ್ಥಿತಿ ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಇದೆ. ದೇಶದ ಆದಾಯದಲ್ಲಿ ನೀರಾವರಿ ಮಾಡಲಿಕ್ಕೆ ಎಷ್ಟು ಖರ್ಚಾಗುತ್ತಿತ್ತೋ ಅದು ಕಡಿಮೆಯಾಗಿ ಇವತ್ತು ಸಿಗಂಲ್ ಡಿಜಿಟ್ ಅಂದರೆ 7 ಪರ್‌ಸೆಂಟ್ ಇನ್‌ವೆಸ್ಟ್‌ಮೆಂಟಿಗೆ ಬಂದು ನಿಂತಿದೆ. ಇದರಿಂದಾಗಿ ಯೋಜನೆಗಳನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. 60-70ನೇ ದಶಕದಲ್ಲಿ ನೀರಾವರಿಗೆ ಇದ್ದಂಥ ಪ್ರಾಶಸ್ತ್ಯ ಇವತ್ತು ಇಲ್ಲದೇ ಇರುವುದರಿಂದ ಅಪ್ಪರ್ ತುಂಗಾ ಇರಬಹುದು, ಮಾದಾಯಿ ಇರಬಹುದು, ಅಪ್ಪರ್ ಕೃಷ್ಣಾ ಇರಬಹುದು ಈ ಯೋಜನೆಗಳನ್ನು ಮುಗಿಸಲಿಕ್ಕೆ ಸಾಧ್ಯವಾಗಿಲ್ಲ, ಆಗುವುದೂ ಇಲ್ಲ. ಕೇಂದ್ರದ ನೀತಿಯಿಂದಾಗಿ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯಿಂದಾಗಿ ಈ ಪರಿಸ್ಥಿತಿ ನಿರ್ಮಾಣವಾಗಿದೆ. ವಾಸ್ತವಿಕವಾಗಿ ನಮ್ಮ ಕರ್ನಾಟಕ

ರಾಜ್ಯದಲ್ಲಿ ಇಷ್ಟು ವರ್ಷಗಳಿಂದಲೂ ನೀರಾವರಿ ವಿಷಯವನ್ನು ಬಹಳ ಹಗುರವಾಗಿ ಕಂಡಿದ್ದೇವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ಭಾವಿಸುತ್ತೇನೆ. ಕಾವೇರಿ ಮತ್ತು ತುಂಗಭದ್ರ ಯೋಜನೆಗಳೆರಡನ್ನು ಬಿಟ್ಟರೆ ಉಳಿದ, ಯೋಜನೆಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರಲಿಕ್ಕೆ ನಮಗಾಗಲಿಲ್ಲ. ಈ ವಾಸ್ತವಿಕ ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ನಾವು ಇನ್ನೂ ತಯಾರಾಗಿಲ್ಲ. ಇದು ಇವತ್ತಿನ ಪರಿಸ್ಥಿತಿ. ಯಾವ ಸರ್ಕಾರವೇ ಬರಲಿ, ರಾಜ್ಯದ ಈ ನೀರಾವರಿ ಯೋಜನೆಗಳನ್ನು ಮುಗಿಸುತ್ತೇವೆ ಎನ್ನುವಂಥ ದೃಢ ಸಂಕಲ್ಪವನ್ನು ಮಾಡಲಿಕ್ಕೆ ಯಾರೂ ತಯಾರಾಗಿರಲಿಲ್ಲ. ಅದು ಅಪ್ಪರ್ ಕೃಷ್ಣಾ ಯೋಜನೆ ಆಗಿರಬಹುದು, ಕಾವೇರಿ ಜಲಾನಯನ ಪ್ರದೇಶವಾಗಿರಬಹುದು, 1970 ರ ನಂತರ ಪ್ರಾರಂಭವಾದ ಯಾವ ಯೋಜನೆಗಳನ್ನು ಮುಗಿಸಲಿಕ್ಕೆ ಸಾಧ್ಯವಾಗಿದೆ ಎಂಬುದನ್ನು ಕೇಳಲಿಕ್ಕೆ ಬಯಸುತ್ತೇನೆ. ನಾವು 80ರ ದಶಕದಲ್ಲಿ ಕೇಳುತ್ತಿದ್ದೆವು, ಸಾವಿರ ಕೋಟಿಯಲ್ಲಿ 600, 700 ಕೋಟಿಯನ್ನೋ ಅಪರ್ ಕೃಷ್ಣ ಮುಗಿಸುವುದಕ್ಕೆ ಬೇಕಾಗಬಹುದೆಂಬ ಅಂದಾಜು, ಇವತ್ತು ನೂರು ಕೋಟಿ ಹೋಗಿ ಮುಗಿಸುವುದಕ್ಕೆ 10 ಸಾವಿರ ಕೋಟಿ ಬೇಕೆಂಬ ಪರಿಸ್ಥಿತಿ ಬಂದಿದೆ. ನಾವು ಆ ಸಂಖ್ಯೆಯನ್ನು ಎದುರಿಗಿಟ್ಟು ಕೊಂಡು ನಮ್ಮ ರಿಸೋರ್ಸ್‌ನ್ನು ನೋಡಿದರೆ ಈ ಕಾರ್ಯ ಸಾಧ್ಯವೇ ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಮಾನ್ಯ ದೇವೇಗೌಡರು ಇದರ ಬಗ್ಗೆ ಬಹಳ ಗಂಭೀರವಾಗಿ ವಿಚಾರ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳಾಗಿದ್ದಾರೆ. ನೀರಾವರಿ ಬಗ್ಗೆ ರೈತರ ಬಗ್ಗೆ ಅವರಿಗೆ ವಿಶೇಷ ಕಾಳಜಿ ಇದೆ, ಹಿಂದೆ ಇತ್ತೋ ಇಲ್ಲವೋ, ಅದರೆ ನನಗೆ ತಿಳಿದಂತ ಅವರಿಗಿರುವ ಕಳಕಳಿ ಇವತ್ತಿನ ಸಂದರ್ಭಕ್ಕೆ ಬಹಳ ಅನುಕೂಲವಾಗಿದೆ. ಅನೇಕ ರೀತಿಯಿಂದ ನಾವು ಮೊಬಿಲೈಸ್ ಮಾಡುತ್ತೇವೆನ್ನುತ್ತೇವೆ. 800 ಕೋಟಿ ಕೃಷ್ಣ ನಿಗಮದಿಂದ, ಅದರ ಮುಂದೆ ಏನಾಗುತ್ತದೆಂದು ನನ್ನ ಬಳಿ ಇಲ್ಲ. ಅದಷ್ಟೇ ಅಲ್ಲ. 800 ಕೋಟಿಯನ್ನು ಬರೀ ಅಪ್ಪರ್‌ಕೃಷ್ಣ ಮೇಲೆ ಹಾಕುತ್ತಿದ್ದೀರಿ. ಉಳಿದ ಉಪಯೋಚನೆಗಳು ಅದು ಮಲಪ್ರಭಾ ಇರಬಹುದು. ಘಟ್ಟಪ್ರಭಾಯಿರಬಹುದು ಬೇರೆ ಸ್ಕೀಮ್ ಇರಬಹುದು ಇವುಗಳಿಗೆ ಅಗತ್ಯವಾದ ಹಣ ಒದಗಿಸಲು ಸಾಧ್ಯವಾಗಿದೆಯೋ ಎಂದು ಗಂಭೀರವಾಗಿ ಯೋಚಿಸಬೇಕು. ಕೃಷ್ಣ ನೀರಿನ 700 ಟಿಎಂಸಿಯನ್ನು ಉಪಯೋಗಮಾಡಬೇಕಾದರೆ ಇದಕ್ಕೂ ಸಹ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಅದಕ್ಕಾಗಿ ಇವತ್ತು ಸಂಕ್ಷಿಪ್ತವಾಗಿ ಈ ಬಗ್ಗೆ ನಾನು ಪ್ರಸ್ತಾಪ ಮಾಡುತ್ತ ಮುಖ್ಯವಾಗಿ ನನ್ನ ನಾಡಿಗೆ ಸಂಬಂಧಪಟ್ಟ ಯೋಜನೆ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. 87-88 ರಲ್ಲಿ ಮಲಪ್ರಭಾ ಯೋಜನೆ ಒಟ್ಟು ಅಂದಾಜು ವೆಚ್ಚ 168 ಕೋಟಿ, ಇವತ್ತು ಅದು 500 ಕೋಟಿ ಮೇಲೆ ಸುಮಾರು 329 ಕೋಟಿ ಅದಕ್ಕಾಗಿ ಖರ್ಚುಮಾಡಿದ್ದೇವೆ. ಇನ್ನೂ 200 ಕೋಟಿ ಹಣ ಬೇಕು. ಸುಮಾರು 5 ಲಕ್ಷ ಎಕರೆ ಸುಮಾರು 1.31 ಲಕ್ಷ ಹೆಕ್ಟೇರ್‌ಗೆ ಏತ ನೀರಾವರಿಗೆ ವ್ಯವಸ್ಥೆಗೊಳಪಟ್ಟು

ಒದಗಿಸುವ ಈ ಯೋಜನೆ ಇನ್ನೂ ಮುಗಿಯಬೇಕಾದರೆ ಒಟ್ಟು 160 ಕಿಮೀ ಒಯುರೋಣ ಅಥವಾ ಬಾದಾಮಿಗಳ ಹಿಂದಿರುವ ಬರಗಾಲ ಪ್ರದೇಶಗಳಿಗೆ ನೀರೊದಗಿಸಲು ಇನ್ನೂ ಕನಿಷ್ಠ 20 ವರ್ಷ ಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಎಷ್ಟು ನಿಧಾನಗತಿಯಲ್ಲಿ ನಡೆಯುತ್ತಿದೆ ಎಂದರೆ 84ರಲ್ಲಿ ಒಂದು aqueduct ಅಂತ ಇತ್ತು, ಎಂದು 93ನೇ ಕಿಮೀನಲ್ಲಿ, ಅದು 86ರಲ್ಲಿ 87ರಲ್ಲಿ ಫೈನಲ್ ಮಾಡಿದರು, ಅದು ಇನ್ನೂವರೆಗೂ ಮುಗಿದಿಲ್ಲ. ಬರೀ 3 ಕೋಟಿ ವೆಚ್ಚದ ಈ ಯೋಜನೆ ಮುಗಿಸಲು ಕಳೆದ 5 ವರ್ಷದಲ್ಲಿ ಸಾಧ್ಯವಾಗಿಲ್ಲ. ಇನ್ನೂ ಬರೀ ಲಿಂಗರಿಂಗ್ ಪ್ರಾಜೆಕ್ಟಾಗಿ ನಡೆಯುತ್ತಿದೆ. ಇಲ್ಲಿಯವರೆಗೆ ತಾಂತ್ರಿಕ ವಿಷಯ ಇದೆ ಎಂದರೆ ಇವತ್ತು ಬೇಕು ಅಂದರೆ 93ನೇ ಕಿಮೀವರೆಗೆ ನೀರು ಒಯ್ಯಲು ಬೇಕಾದಂತಹ Driving Head ಅಲ್ಲಿ ಬರುತ್ತದೆ ಎನ್ನುವ ಬಗ್ಗೆ ಸಂಶಯ ಇದೆ ಆ ಬಲ ದಂಡೆ ಕಾಲುವೆಯಲ್ಲಿ. ಎಡದಂಡೆ ಕಾಲುವೆ ಮುಗಿಸಲೂ ಸಾಧ್ಯವಾಗಿಲ್ಲ 168 ಕಿಮೀ ದೂರ ಹೋಗಿ ಅದು ಸೇರಬೇಕು. 138 ಕಿಮೀ ಹೋಗುವಂತಹ ಕಾಲುವೆಯನ್ನೂ ಮುಗಿಸಲು ಸಾಧ್ಯವಾಗಿಲ್ಲ. ಕೊನೇ ಊರು ರೋಣದಲ್ಲಿ ಬರಗಾಲದಿಂದ ಏನು ಸತತವಾಗಿ ಸಾಯುತ್ತಿದ್ದಾರೆ ಅವರಿಗೆ ನೀರು ಮುಟ್ಟಲು ಇನ್ನೂವರೆಗೆ ಸಾಧ್ಯವಾಗಿಲ್ಲ. ಇವತ್ತೇನು ಈ ಯೋಜನೆ ಎಷ್ಟು ಅವಾಸ್ತವಿಕವಾಗಿದೆ ಎಂದು ತಮ್ಮ ಗಮನಕ್ಕೆ ತರುವುದರ ಇದರ ವಾಟರ್ ಯಿಲ್ಡನ್ನು ಅಂದಾಜು ಮಾಡಿ 40 ಟಿಎಂಸಿಯನ್ನು ಎಲ್ಲ ಸೇರಿ 48 ಟಿಎಂಸಿ ನೀರಾಗಬಹುದೆಂದು ಅಂದಾಜು ಮಾಡಿದ್ದಾರೆ. ಆದರೆ ಮಾನ್ಯ ಸ್ನೇಹಿತ ಮಾಮನಿಯವರು ಹೇಳಿದರು. ಇಷ್ಟು ವರ್ಷಗಳಲ್ಲಿ ನಾಲ್ಕಾರು ಸಾರಿ ಬಿಟ್ಟರೆ, ಆ ಜಲಾಶಯ ಎಂದೂ ತುಂಬ ಹರಿಯಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಅದರ ಕೊರತೆ 13 ಟಿಎಂಸಿಯನ್ನು ನೀರು ಕೊರತೆಯಾಗುತ್ತದಂತೆ. ಎಲ್ಲಿಂದ ಎಲ್ಲಿ ಅಂತರ? 40 ಟಿಎಂಸಿ ಎಲ್ಲಿ 13 ಟಿಎಂಸಿ ನೀರು ಕೊರತೆಯಾಗುವುದಾದರೆ, ಸುಮಾರು 500 ಕೋಟಿ ಖರ್ಚುಮಾಡಿ ಮಾಡಿದ ಯೋಜನೆಯನ್ನು ಇಷ್ಟು ದೊಡ್ಡ ಅಂತರ ಉಂಟು ಮಾಡಿದರೆ ಯಾವ ಯಶಸ್ಸನ್ನು ಇದು ಪಡೆಯಲಿಕ್ಕೆ ಸಾಧ್ಯವಿದೆ. ನನಗೆ ಗೊತ್ತು ಇವೆಲ್ಲ ಅಂತರರಾಜ್ಯ ನದಿಗಳಾದುದರಿಂದ ಸಾಕಷ್ಟು ಸ್ಟಡಿ ಮಾಡಬೇಕಾದ್ದರಿಂದ ಹಿಂದಿನ ಸರ್ಕಾರ ಹೆಚ್ಚಿನ ಆಸಕ್ತಿ ತೆಗೆದುಕೊಳ್ಳದೇ ಇದ್ದುದರಿಂದ ಇನ್ನೂ ಪ್ರಾರಂಭಿಕ ಹಂತದಲ್ಲಿದೆ. ಸುಮಾರು 9 ಟಿಎಂಸಿ ನೀರು ಅಲ್ಲಿಂದ ಬರದೇ ಇದ್ದರೆ ಇನ್ನೂ ನಾಲ್ಕೆಂಟು ವರ್ಷಗಳಲ್ಲಿ ಈಗೇನು ತುಂಗಭದ್ರ ಯಾವರೀತಿ ಸಿಲ್ಟಾ ಗುತ್ತಿದೆ ಹಾಗೆ ಆಗಿ 40 ಟಿಎಂಸಿ ಕೆಪ್ಯಾಸಿಟಿ ಇರಬೇಕಾದ್ದು 20 ಟಿಎಂಸಿ ಸಹ ಆಗುವುದಿಲ್ಲವೆಂಬ ಒಂದು ಭಯ ನಮಗಿದೆ. ಅದಕ್ಕಾಗಿ ಈ ಯೋಜನೆಗಳನ್ನು ಆದಷ್ಟು ಬೇಗ ಕೈಗೆತ್ತಿಕೊಂಡು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಬಹಳಷ್ಟು ಯೋಜನೆಗಳನ್ನು ಉಪರೀಕರಣದ ಹಿನ್ನೆಲೆಯಲ್ಲಿ ವಿಚಾರ ಮಾಡುತ್ತಿದ್ದೇವೆ. ಕೈಗಾರಿಕೆ ಇರಬಹುದು ವಿದ್ಯುತ್ ಇರಬಹುದು, ಹೈಡಲ್ ಪ್ರಾಜೆಕ್ಟ್ ಬಗ್ಗೆ ಒಳಗಡೆ ಹೊರಗಡೆಯಿಂದ

ಬಂಡವಾಳ ಹೂಡಿಸುವ ಪ್ರಯತ್ನ ನಡೆಯುತ್ತಿದೆ. ಅದು ಇದಕ್ಕೆ ಯಾಕೆ ಅನ್ವಯವಾಗಬಾರದೆಂಬ ಭಾವನೆ ನನ್ನಲ್ಲಿದೆ. 2000 ಇಸವಿಯೊಳಗೆ ಅನೇಕ ಯೋಜನೆಗಳು ಮುಗಿಯಬೇಕು ಅಷ್ಟೇ ಅಲ್ಲ ನಮ್ಮ ಸರ್ಕಾರದ ಮೇಲೆ ಒಂದು ನೈತಿಕ ಜವಾಬ್ದಾರಿ ಇದೆ., ಇಲ್ಲ ಕೂತ ಜನಗಳ ಮೇಲೆ. ಇನ್ನು ಎಷ್ಟು ವರ್ಷದವರೆಗೆ ರೈತರಿಗೆ ನೀರು ಕೊಡುವುದಿಲ್ಲ ಮಳೆ ಪ್ರಮಾಣ ಕಡಿಮೆಯಾಗಿದೆ. ಮಳೆಯಾಧಾರಿತ ಪ್ರದೇಶ ರೈತರೆಲ್ಲ ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಅವರಿಗೆ ನೀರು ಕೊಡುವ ವ್ಯವಸ್ಥೆ ಮಾಡದಿದ್ದರೆ ಇನ್ಯಾವುದೇ ರೀತಿಯಲ್ಲೂ ಅವರಿಗೆ ಸಹಾಯ ಮಾಡಲು ಸಾಧ್ಯವಿಲ್ಲ ಎಂದು ತಮಗೂ ಅನಿಸಿರಬಹುದು. ಆ ಜನರಿಗೆ ಒಂದು ದುಡಿಯುವ ಮೂಲವನ್ನು ಕಲ್ಪಿಸಿಕೊಡಬೇಕು. ಅಥ್‌ವಾ ಆರ್ಥಿಕ ಸ್ಥಿತಿ ಮೇಲಮ್ಮಟ್ಟದ್ದಾಗಬೇಕಾದರೆ ನೀರನ್ನು ಕೊಡುವುದು ಬಹಳ ಅಗತ್ಯವೆಂದು ಹೇಳುತ್ತ, ಈ ಖಾಸಗಿ ಬಂಡವಾಳನ್ನು ಈ ಕಡೆ ಆಕರ್ಷಿಸುವುದಕ್ಕೆ ಏಕೆ ಪ್ರಯತ್ನ ನಡೆಯುತ್ತಿಲ್ಲವೆಂದು ತಮ್ಮ ಗಮನಕ್ಕೆ ತರುತ್ತ ಅದರ ಬಗ್ಗೆಯೂ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸುತ್ತಾರೆಂದು ಹೇಳಿ, ಇನ್ನು ಕೊನೆಯ ಮಾತು, ನಾನು ಬಹಳ ವರ್ಷಗಳಿಂದ ಕೇಳುತ್ತಿದ್ದೇನೆ ಈ ಇಲಾಖೆಯನ್ನು ಬೈಫರ್ಕೆಟ್ ಮಾಡಬೇಕು, ಅಲ್ಲಿಯವರು ಇಲ್ಲಿ ಬರಬಾರದು ಇಲ್ಲಿಯವರು ಅಲ್ಲಿ ಬರಬಾರದು. ಈ ಕೆಲಸವನ್ನು ಆದಷ್ಟು ಬೇಗನ ಮಾಡಿದರೆ ಒಳ್ಳೆಯದು. ಕಾರಣ ನೀರಾವರಿಗೆ ಕೊನೇ ಪ್ರಾಶಸ್ತ್ಯ, ದೇಶದಲ್ಲಿ ಕಡೆ ಪ್ರಾಶಸ್ತ್ಯ, ರಾಜ್ಯದಲ್ಲಿ ಕಡೇ ಪ್ರಾಶಸ್ತ್ಯ, ಅಧಿಕಾರಿಗಳಿಗೂ ಕಡೇ ಪ್ರಾಶಸ್ತ್ಯ. ಯಾರಿಗೆ ಪೆಟ್ರನೈಜ್ ಇಲ್ಲ ಅವರನ್ನು ಕಡೆಗೆ ಅಪರ್‌ಕೃಷ್ಣ ಕಡೆ ಹಾಕುವಂತಹ ಪರಿಸ್ಥಿತಿ ಇದೆ. ಅದನ್ನು ತಡೆಗಟ್ಟಲು ಒಂದೇ ದಾರಿ ಬೈಫರ್ಕೆಟ್ ಮಾಡಿ, ಇದು ಬಹಳ ವರ್ಷದಿಂದ ಪೆಂಡಿಂಗ್ ಇದೆ ಅದನ್ನು ಮಾಡಲಿಕ್ಕೆ ಸಾಧ್ಯವಾದೀತು ಎಂದು ಭಾವಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಹೆಚ್.ಡಿ. ಬಸವರಾಜ್ : (ಹೊಸದುರ್ಗ) ಚಿತ್ರದುರ್ಗ ಜಿಲ್ಲೆಯಲ್ಲಿ ತುಂಗಭದ್ರಾ ಮತ್ತು ವೇದಾವತಿ ಎಂದು ಎರಡು ನದಿ ಹರಿಯುತ್ತವೆ. ಈ ವೇದಾವತಿ ನದಿಗೆ ಬಾಗಿಶೆಟ್ಟಹಳ್ಳಿ ಮತ್ತು ಕೊರಟಗೆರೆ ಹತ್ತಿರ ಏತ ನೀರಾವರಿ ನಿರ್ಮಿಸಿದ್ದಾರೆ 10 ವರ್ಷಗಳಿಂದ ಕೆಲಸ ನಡೆಯುತ್ತಿದರೂ ರೈತರಿಗೆ ಯಾವುದೇ ಪ್ರಯೋಜನವಾಗಿಲ್ಲ. ಮೇಲಾಗಿ ವೇದಾವತಿ ನದಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವ ಅಬ್ಬೆ ಜಲಪಾತವನ್ನು ಹಿಂದಿನ ಸರ್ಕಾರ ಕೂಡ ಹರಿಸುವಂತಹ ಕಾರ್ಯಕ್ರಮ ಹಾಕಿಕೊಂಡಿದ್ದರು. ಆ ಜಲಪಾತವನ್ನು ವೇದಾವತಿ ನದಿಗೆ ಸೇರಿಸಿದರೆ ಈಗಿರುವ ವಿವಿ ಸಾಗರಕ್ಕೆ ಹೆಚ್ಚು ನೀರು ಬರುತ್ತದೆ, ಈ ಸರ್ಕಾರವಾದರೂ, ಅಬ್ಬೆ ಜಲಪಾತವನ್ನು ಕದೂರು ತಾಲ್ಲೂಕಿನಲ್ಲಿರುವ ಅಯ್ಯನ ಕೆರೆ ಎಂದು ಒಂದು ಕೆರೆ ಇದೆ ಆದರಿಂದ ಉಗಮವಾಗುವುದೇ ವೇದಾವತಿ ನದಿ, ಅಲ್ಲಿಂದ ನೀರು ಸರಾಗವಾಗಿ ವಿವಿ ಸಾಗರಕ್ಕೆ

ಖರ್ಚಿಲ್ಲದೆ ಹರಿಯುವ ಕಾರ್ಯಕ್ರಮ ಇದೆ. ಸುಲಭ ಖರ್ಚಿನಲ್ಲಿ ಹೆಚ್ಚು ಪ್ರಯೋಜನವಾಗುವಂತಹ ವೇದಾವತಿ ನದಿ ಹರಿಯುವುದರಿಂದ ಹಿರಿಯೂರು ತಾಲೂಕು ಹೊಸದುರ್ಗ ತಾಲೂಕು ಮತ್ತು ಚಿತ್ರದುರ್ಗ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಮತ್ತೊಂದು ಸಲಹೆ ಎಂದರೆ ಭದ್ರಾ ಜಲಾಶಯ ಪ್ರತಿ ಸಾರಿ ತುಂಬಿ ಹರಿಯುತ್ತದೆ. ಹೆಚ್ಚುವರಿ ನೀರನ್ನು ಕೊಡುವುದಕ್ಕೂ ಅಚ್ಚುಕಟ್ಟುದಾರರು ಅಡ್ಡಿ ಉಂಟು ಮಾಡುತ್ತಾರೆ, ಆ ದೃಷ್ಟಿಯಿಂದ ಹೆಚ್ಚುವರಿ ನೀರನ್ನು ವೇದಾವತಿ ನದಿಗೆ ತಿರುಗಿಸಿದರೆ ಬಹಳ ಪ್ರಯೋಜನವಾಗುತ್ತದೆ. ಆದ್ದರಿಂದ ಅಬ್ಬೆ ಜಲಪಾತ ಮತ್ತು ಭದ್ರಾ ನದಿಯಿಂದ ಬರುವ ಹೆಚ್ಚುವರಿ ನೀರನ್ನು ವೇದಾವತಿ ನದಿಗೆ ತಿರುಗಿಸಿದರೆ ವಿವಿ ಸಾಗರ ಯಾವತ್ತಿಗೂ ತುಂಬುತ್ತದೆ ಅದರಿಂದ ಹೊಸದುರ್ಗ ತಾಲೂಕು ಚಳ್ಳಕೆರೆ ತಾಲೂಕು ಚಿತ್ರದುರ್ಗ ಜಿಲ್ಲೆಗೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಜೆ.ಟಿ. ಪಾಟೇಲ್ (ಬೀಳಗಿ) ಅಧ್ಯಕ್ಷರೇ, ಕಳೆದ ಹಲವಾರು ವರ್ಷಗಳಿಂದ ಸದನದ ಹೊರಗೆ ಮತ್ತು ಒಳಗೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳು ಶಾಸಕರಾದಿಯಾಗಿ ಕೃಷ್ಣ ಯೋಜನೆಯನ್ನು 2 ಸಾವಿರ ಇಸವಿಯೊಳಗೆ ಮುಗಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಮಾಡುತ್ತಿದ್ದಾರೆ. ಆದರೆ ದುರ್ದೈವದ ಸಂಗತಿ, ಕೃಷ್ಣ ಯೋಜನೆಯಡಿಯಲ್ಲಿ ಒಟ್ಟು 740 ಹಳ್ಳಿಗಳು ಮುಳುಗಡೆಯಾಗುತ್ತದೆ, 2.10 ಲಕ್ಷ ಎಕರೆ ಜಮೀನು ಮುಳುಗಡೆಯಾಗುತ್ತದೆ ಅದರಲ್ಲಿ ವಿಶೇಷವಾಗಿ ಬೀಳಗಿ ತಾಲೂಕಿನಲ್ಲಿ ಒಟ್ಟು ಇರುವ ಹಳ್ಳಿಗಳ ಸಂಖ್ಯೆ 65, ಅದರಲ್ಲಿ 53 ಹಳ್ಳಿಗಳು ಮುಳುಗಡೆಯ ಗಂಭೀರ ಸಮಸ್ಯೆ ಎದುರಿಸುತ್ತಿದ್ದೇವೆ. 1995 ರ ಜೂನ್‌ನಲ್ಲಿ 6 ಹಳ್ಳಿಗಳು, 96ರ ಜೂನ್‌ನಲ್ಲಿ 28 ಹಳ್ಳಿಗಳನ್ನು ಪುನರ್‌ವಸತಿ ಕೇಂದ್ರಗಳಿಗೆ ವರ್ಗಾಯಿಸಬೇಕಾಗಿದೆ. ಅಧ್ಯಕ್ಷರೇ, ತಮಗೆ ಹೇಳಬೇಕಾದರೆ 50 ಪರ್ಸೆಂಟ್‌ಗಿಂತ ಯಾವುದೇ ಪುನರ್‌ವಸತಿ ಹಳ್ಳಿಗಳ ಕೇಂದ್ರ ಯಾವುದೆಂದು ಗುರ್ತಿಸಿಲ್ಲ. ಎರಡನೆಯದಾಗಿ 25 ಪರ್ಸೆಂಟ್ ಪುನರ್‌ವಸತಿ ಕೇಂದ್ರ ಏನು ನಿರ್ಮಿಸಿದ್ದಾರೆ ಅದರಲ್ಲಿ ಫೋಟೋಕಾಪಿಗಳನ್ನು ನಾನು ತಂದಿದ್ದೇನೆ. ಪುನರ್‌ವಸತಿ ಕೇಂದ್ರವೆಂದರೆ ಕನಿಷ್ಠ ಸೌಲಭ್ಯ ಏನಿರಬೇಕೆಂದರೆ ಪಂಚಾಯ್ತಿ ಕಟ್ಟಡ ಇರಬೇಕು, ಶಾಲಾ ಕಟ್ಟಡ ಇರಬೇಕು, ಉಗ್ರಾಣ ಇರಬೇಕು, ಪೂಜಾ ಮಂದಿರ ಇರಬೇಕು, ಸಮಾಜ ಮಂದಿರ ಇರಬೇಕು, ದಮಾಖಾನ ಇರಬೇಕು, ದನ ದವಾಖಾನೆ ಇರಬೇಕು, ಸರಿಯಾದ ರಸ್ತೆ ಪರಿಮಾಣ ಇರಬೇಕು. ವಿದ್ಯುತ್‌ಪೂರೈಕೆ ಇರಬೇಕು. ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಒಂದು ಕೇಂದ್ರದಲ್ಲಿ ಅರ್ಧ ಕಟ್ಟಿರುವ ಶಾಲಾಕಟ್ಟಡ ಇದೆ, ಇನ್ನೊಂದರಲ್ಲಿ ಅರ್ಧ ಕಟ್ಟಿರುವ ಪಂಚಾಯಿತಿ ಕಟ್ಟಡ ಇದೆ. ಯಾವುದೇ ನೀರಿನ ಸೌಲಭ್ಯ ಇಲ್ಲ. ರಸ್ತೆ ನಿರ್ಮಾಣ, ವಿದ್ಯುತ್‌ಪೂರೈಕೆ ಇಲ್ಲ. ಇಂತಹ ಪರಿಸ್ಥಿತಿ ಇದೆ. ಸ್ವಾತಂತ್ರ್ಯ ಸಿಕ್ಕಿ 45 ವರ್ಷವಾದರೂ ಈ ಕನಿಷ್ಠ ಸೌಲಭ್ಯ ಇಲ್ಲದೆ ಬವಣೆ ಪಡುವಂತಹ ಪರಿಸ್ಥಿತಿ ಇದೆ. ಯಾವುದೇ ಸೌಕರ್ಯ ಇಲ್ಲದೆ

ಪುನರ್ವಸತಿ ಕೇಂದ್ರಕ್ಕೆ ನಮ್ಮನ್ನು ಕಳುಹಿಸಿದರೆ ಮತ್ತು ಮುಂದಿನ 50 ವರ್ಷ ಜನಾಂಗಕ್ಕೆ ಕನಿಷ್ಠ ಸೌಜನ್ಯ ಕೇಳಿ ಪಡೆಯುವ ಹೋರಾಟ ಮಾಡುವಂತಹ ಪ್ರಸಂಗ ಬರುತ್ತದೆ. ಅದರ ಸಲುವಾಗಿ ಜಮೀನುಗಳಿಗೆ ಮನೆಗಳಿಗೆ ಸರಿಯಾಗಿ ಪರಿಹಾರ ಕೊಟ್ಟಿಲ್ಲ, ಅವೈಜ್ಞಾನಿಕವಾಗಿ ಪರಿಹಾರಧನ ಕೊಡುತ್ತಿದ್ದಾರೆ ಮನೆಗಳಿಗೆ ಪರಿಹಾರ ಕೊಡುವುದರಲ್ಲಿ ಸವಕಳಿ ಮುರಿಯುತ್ತಾರೆ, ಟ್ಯಾಕ್ಸ್ ಮುರಿಯುತ್ತಾರೆ ನಮಗೇನು ಪುನರ್ವಸತಿ ಕೇಂದ್ರ ತೋರಿಸಿದ್ದಾರೆ ಅಲ್ಲಿ ಹೋಗುವ ಜನಗಳಿಗೆ ಮುಂದಿನ ಉಪಜೀವನಕ್ಕೆ ಒಂದು ಮಾರ್ಗ ತೋರಿಸಬೇಕಾಗಿದೆ.

ನಮ್ಮ ಸ್ಪಷ್ಟ ಬೇಡಿಕೆ ಎಂದರೆ ಸರ್ಕಾರದ ಸಿ ಅಂಡ್ ಆರ್ ರೂಲ್‌ನಲ್ಲಿ ಪ್ರಾವಿಜನ್ ಮಾಡಿ ಪ್ರತಿ ಕುಟುಂಬಕ್ಕೂ ಅವರವರ ಯೋಗ್ಯತೆಗನುಸಾರವಾಗಿ ಹುದ್ದೆ ಕೊಡಬೇಕಾಗಿದೆ. ಎರಡನೆಯದಾಗಿ 2 ಸಾವಿರ ಇಸವಿಯಲ್ಲಿ ಡ್ಯಾಂ ಕಟ್ಟಬೇಕೆಂದು ಕಲ್ಪನೆ ಮಾಡುತ್ತಿದ್ದೀರಿ, ಅದು ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ ಏಕೆಂದರೆ ಜನ ಇವತ್ತು ಎಚ್ಚೆತ್ತಿದ್ದಾರೆ. ಇನ್ನೆರಡು ತಿಂಗಳ ಗಡಿಯಲ್ಲಿ 6 ಹಳ್ಳಿಗಳಲ್ಲಿ ಒದಗಿಸಬೇಕಾದ ಸವಲತ್ತನ್ನು ಸರ್ಕಾರ ಒದಗಿಸದಿದ್ದರೆ ಅವರು ಕೆಲಸ ಸ್ಥಗಿತ ಮಾಡುವ ಯೋಜನೆ ಹಾಕಿಕೊಳ್ಳುವವರಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುವುದೇನೆಂದರೆ ಕೊನೇ ಪಕ್ಷ 95ರ ಜೂನ್ ಒಳಗಾಗಿ 6 ಹಳ್ಳಿಗಳಲ್ಲಿ ಸೌಲಭ್ಯ ಒದಗಿಸಿ ಜನರಿಗೆ ಸಮಾಧಾನ ಹೇಳಿದರೆ ಈ ಕೆಲಸ ಮುಂದುವರೆಯಬಹುದು ಇಲ್ಲದಿದ್ದರೆ ಸ್ಪಷ್ಟವಾಗಿ ಹೇಳುತ್ತೇನೆ, ಎಲ್ಲಾ ರೈತಜನರು ತಿರಸ್ಕರಿಸುವ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ತಾವು ಅವಕಾಶ ಮಾಡಬಾರದೆಂದು ವಿನಂತಿಸುತ್ತೇನೆ. ಇನ್ನೊಂದು ವಿಷಯ, ನನ್ನ ಬೀಳಗಿ ಮತಕ್ಷೇತ್ರದಲ್ಲಿ ಲಿಂಗಾಪುರ ಏತನೀರಾವರಿ ಹಾಗೂ ಯಾದ್ಗೀರ್ ಏತನೀರಾವರಿ ಒಟ್ಟು ಎರಡು ನೀರಾವರಿ ಯೋಜನೆ ಸರ್ಕಾರ ಕೈಗೊಂಡಿತ್ತು, ಒಂದು ಮೂರುವರೆ ಕೋಟಿಯದು ಇನ್ನೊಂದು ಒಂದು ಕೋಟಿಯದು. ಈ ವರ್ಷದ ಬಜೆಟ್‌ನಲ್ಲಿ ಮೂರುವರೆ ಕೋಟಿ ಯೋಜನೆಗೆ 1 ಲಕ್ಷ ಇಟ್ಟಿದ್ದಾರೆ, ಲಿಂಗಾಪುರ್, ಯಾದ್ಗೀರ್ ಯೋಜನೆಗೆ ಕೇವಲ 10 ಸಾವಿರ ಇಟ್ಟಿದ್ದಾರೆ ಇದರಿಂದ ಸರ್ಕಾರಕ್ಕೆ ಯಾವರೀತಿಯ ಕಳಕಳಿ ಇದೆ ಎಂದು ಸ್ಪಷ್ಟಭಾವನೆ ನಮ್ಮಲ್ಲಿ ಬರುತ್ತಿದೆ. ಏಕೆಂದರೆ ಈ ಯೋಜನೆಗಳಿಗಾಗಿ ಕೋಟಿಗಟ್ಟಲೆ ಖರ್ಚು ಮಾಡಿ ಅರ್ಧಕ್ಕೆ ನಿಂತಿವೆ. ಅದರ ಮುಂದಿನ ಪರಿಸ್ಥಿತಿಯೇನು ಎಂದು ಸರ್ಕಾರ ಯೋಚಿಸಬೇಕಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟ ನಿಲುವು ನಮಗೆ ತಿಳಿಸಬೇಕೆಂದು ಕೇಳಿಕೊಂಡು ಈ ದಿವಸ ನನಗೆ ಮಾತನಾಡಲೂ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದ ಹೇಳಿ ನನ್ನ ಮಾತು ಮುಗಿಸುತ್ತೇನೆ.

* ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್): ಅಧ್ಯಕ್ಷರೇ, ನೀರಾವರಿ ವಿಷಯದ ಬಗ್ಗೆ ತಾವು ವಿಶೇಷ ಚರ್ಚೆ ಇಟ್ಟಿದ್ದಕ್ಕೆ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಕೇವಲ ಒಂದೇ ಒಂದು ವಿಷಯದ ಬಗ್ಗೆ ಪ್ರಸ್ತಾಪಿಸಲು ಇಷ್ಟಪಡುತ್ತಿದ್ದೇನೆ. ಈ ಬಗ್ಗೆ ಹಲವಾರು ಮಾಹಿತಿಗಳಿವೆ. ಅದನ್ನು ಸದನದ ಗಮನಕ್ಕೆ ಅನೇಕ ಹಿರಿಯರು

ತಂದಿದ್ದಾರೆ, ನಾನೂ ಕೂಡ ಕೊಡಬೇಕಾಗಿದೆ. ಇವತ್ತು ನಮ್ಮ ಉದ್ದೇಶ ಇಷ್ಟೆ ಎರಡು ಸಾವಿರ ಇಸವಿಯೊಳಗಾಗಿ ಬಚಾವತ್ ಅವಾರ್ಡ್ ಪ್ರಕಾರ ಕೃಷ್ಣದಲ್ಲಿ ನಮ್ಮ ರಾಜ್ಯದ ಹಕ್ಕು ಏನಿದೆ ಅದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಹಿಂದಿನ ಸರ್ಕಾರಗಳು ಬಹಳ ಲಘುವಾಗಿ ಈ ವಿಷಯನ್ನು ಪರಿಗಣಿಸಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಇವತ್ತು ಆಂಧ್ರ ಮಹಾರಾಷ್ಟ್ರ ಬೇರೆ ರಾಜ್ಯಗಳವರು ಸಾಕಷ್ಟು ಪ್ರಾಮುಖ್ಯತೆ ಕೊಟ್ಟು ಅವರ ನೀರಿನ ಹಕ್ಕನ್ನು ಸಂಪೂರ್ಣ ಉಪಯೋಗಿಸಿಕೊಂಡು ಇನ್ನೂ ಹೆಚ್ಚು ಉಪಯೋಗ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಅವರಿದ್ದಾರೆ, ಹೀಗಾಗಿ ನಮ್ಮ ಪಾಲನ್ನು ನಿರ್ದಿಷ್ಟವಾದ ಅವಧಿಯಲ್ಲಿ ಯಾವುದೇ ಮೂಲದಿಂದ ರಾಜ್ಯದಲ್ಲಿ ವಿವಿಧ ಇಲಾಖೆಗೆ ಒದಗಿಸುವ ಹಣವನ್ನು ಕಡಿಮೆ ಮಾಡಿಯಾದರು ಕೂಡ, ಇವತ್ತು ಮಹರಾಷ್ಟ್ರದಲ್ಲಿ ನೀರಾವರಿ ಬಗ್ಗೆ ಕೇಳಿದಾಗ ಅಲ್ಲಿರುವ ಹಳ್ಳಗಳಿಗೆ ಹೊಳೆಗಳಿಗೆ ವಿವಿಧ ಯೋಜನೆಗಳ ಮೂಲಕ ಬ್ಯಾರೇಜ್ ಕಟ್ಟಿದ್ದಾರೆ. ನೀರು ಉಪಯೋಗ ಮಾಡಿಕೊಂಡಿದ್ದಾರೆ. ರಸ್ತೆ ಕಟ್ಟಡ ಇನ್ನಿತರ ಯಾವುದೇ ಅಭಿವೃದ್ಧಿಗೆ ಬಾಂದ್ ಮಾಡಿ ಹೆಚ್ಚು ಹಣ ತೊಡಗಿಸಿ ನೀರಾವರಿ ಹಕ್ಕನ್ನು ಉಪಯೋಗ ಮಾಡಿಕೊಂಡಿದ್ದಾರೆ ಎಂದು ನಾವು ಕೇಳಿದ್ದೇವೆ. ಆ ಮಾದರಿಯಲ್ಲಿ ನಮ್ಮ ರಾಜ್ಯದವರೂ ವಿಶೇಷ ಗಮನಹರಿಸಿ ಹೆಚ್ಚು ಹಣ ತೊಡಗಿಸಿ ಈ ಯೋಜನೆ ಮುಗಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇನ್ನು ತುಂಗ ಮೇಲ್ದಂಡೆ ಯೋಜನೆ ಬಗ್ಗೆ ನಾನು ಪ್ರಾಮುಖ್ಯವಾಗಿ ಎದ್ದು ನಿಂತಿದ್ದೇನೆ. ಆ ಯೋಜನೆಯನ್ನು ಎರಡು ಮೂರು ವರ್ಷಗಳ ಹಿಂದೆ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅಡಿಗಲ್ಲು ಇಟ್ಟಿದ್ದಾರೆ ಆ ಯೋಜನೆ ಈಗ ಮುಂದುವರೆಯಬೇಕು. ಮತ್ತು ಆ ಯೋಜನೆಗೆ ಮಂಜೂರಾತಿ ನೀಡಿದಾಗ ಮಾಲತಿ ರಿಸರ್ವಾಯರ್ ಮಾಡದೆ ಆ ಯೋಜನೆ ಮಂಜೂರಾತಿ ಮಾಡಿದ್ದಾರೆಂಬ ವಿಚಾರ ಇದೆ. ಆ ಕಾರಣ ಮಾಲತಿ ರಿಸರ್ವಾಯರನ್ನು ನಿರ್ಮಾಣ ಮಾಡಿ, ಈ ಯೋಜನೆ ಜಾರಿಗೆ ತರುವ ಅವಶ್ಯಕತೆ ಇದೆ. ಅನೇಕ ವರ್ಷಗಳಿಂದ ತಜ್ಞರು ಈ ಬಗ್ಗೆ ಅಭಿಪ್ರಾಯ ಮಂಡನೆ ಮಾಡಿದ್ದಾರೆ. ತುಂಗ ಮೇಲ್ದಂಡೆ ಯೋಜನೆಯನ್ನು ಮಾಲತಿ ರಿಸಾರ್ವಾಯರ್ ಕಟ್ಟಿಸಿ ಜಾರಿಗೆ ತರುವುದರಿಂದ ಧಾರವಾಡ ಜಿಲ್ಲೆಯ 10 ತಾಲೂಕುಗಳು ಹಿರೇಕೆರೂರಿನಿಂದ ಹಿಡಿದು ಶಿಗ್ಗಾವಿ, ಸವಣೂರು, ಬ್ಯಾಡಗಿ, ಶಿರಹಟ್ಟಿ, ಮುಂಡರ್ಗಿ, ಕೊಪ್ಪಳದವರೆಗೆ ಈ ಯೋಜನೆ ಇದೆ. ಆ ಕಾರಣ ಲಕ್ಷಾಂತರ ಎಕರೆ ನೀರಾವರಿಯಾಗುವುದರಿಂದ ಸುಮಾರು 72 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಗ್ರಾಸವಾಗುತ್ತದೆಂದು ತಜ್ಞರು ಅಭಿಪ್ರಾಯ ಕೇಳಿದ್ದೇವೆ. ಈ ಬಗ್ಗೆ ಹಿಂದೆ 1987ನೇ ವಿಧಾನಸಭೆ ಚರ್ಚೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅವರು ಹಿಂದೆ ನೀರಾವರಿ ಸಚಿವರಿದ್ದಾಗ ಉತ್ತರ ಕೊಟ್ಟಿದ್ದಾರೆ. ಅದಕೋಸ್ಕರ ಇವತ್ತು ತೀರ್ಮಾನ ಮಾಡಿದ್ದೇವೆ ಅಪರ್‌ತುಂಗ ಅಪರ್ ಭದ್ರಾ ಬಗ್ಗೆ ಏನು ಚಾಲನೆ ಕೊಡಬೇಕೆಂದು ಮಾನ್ಯ ನಿಜಲಿಂಗಪ್ಪನವರು ಹಲವಾರು ಸಲ ಹೇಳಿದ್ದಾರೆ. ಅವರ

ಫೀಲಿಂಗ್ಸನ್ನು ಅರ್ಥ ಮಾಡಿಕೊಳ್ಳಬೇಕು ಅಂದರೆ ಈ ಕೆಲಸ ಮಾಡುತ್ತೇವೆಂದಿದ್ದಾರೆ ಇವತ್ತು ನಮಗೆ ಮಣ್ಣಿನ ಮಗ ಎಂದು ಕರೆಯುವ ಧಾಟಿಯ ಮುಖ್ಯ ಮಂತ್ರಿಗಳು ಸಿಕ್ಕಿದ್ದಾರೆ ನಾವು ಆಶಾಭಾವನೆಯನ್ನು ಹೊಂದಿದ್ದೇವೆ. ಧಾರವಾಡ ಜಿಲ್ಲೆಯ ದಕ್ಷಿಣ ಭಾಗದ ಎಲ್ಲಾ ತಾಲ್ಲೂಕುಗಳವರು ಕೂಡ ಅವರಿಗೆ ಯಾವತ್ತು ಚಿರಋಣಿಯಾಗಿರುತ್ತಾರೆ. ಈ ಒಂದು ಯೋಜನೆಯನ್ನು ಜಾರಿಗೆ ಅವರು ತರಬೇಕು ಎಂದು ಒಂದು ವಿನಂತಿಯನ್ನು ಮಾಡಿಕೊಂಡು ಈ ಸಂದರ್ಭದಲ್ಲಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸಭೆಯನ್ನು ಮುಂದೂಡಿದ್ದೇನೆ. ನಾಳೆ ಬೆಳಿಗ್ಗೆ ಸಭೆಯು 9-30ಕ್ಕೆ ಸೇರುವುದು.

(ಸದನವು 8-31ಕ್ಕೆ ಮುಕ್ತಾಯಗೊಂಡಿತು. ಮತ್ತೆ ಸಭೆಯು ನಾಳೆ ಅಂದರೆ ದಿನಾಂಕ: 19-4-95 ರಂದು ಬುಧವಾರ ಬೆಳಿಗ್ಗೆ 9-30-ಕ್ಕೆ ಸೇರುವುದು.)

(* ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು – ೫೩೦೦೫೯